ಬುಧವಾರ, ಫೆಬ್ರುವರಿ 15, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 46 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಇತ್ತೀಚೆಗಷ್ಟೆ ಇಸ್ರೊ ಎಸ್‌ಎಸ್‌ಎಲ್‌ವಿ ರಾಕೆಟ್ ಉಡಾವಣೆಯ ಯಶಸ್ಸನ್ನು ಸಾಧಿಸಿದೆ

ಆಳ-ಅಗಲ
ಇ.ಡಿ, ಐ.ಟಿ, ಸಿಬಿಐ ಸದಾ 'ಸಕ್ರಿಯ'
ಜನವರಿಯಲ್ಲಿ ತಗ್ಗಿದ ಸಗಟು ಹಣದುಬ್ಬರ 14
ಆರ್‌ಎಸ್‌ಎಸ್ ಶೈಲಿಯ ಸಾಂಸ್ಥಿಕ ರಚನೆ ಅಗತ್ಯ: ದೇವನೂರ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)
61,032 ▲	17,929 ▲	₹58,700 (ಬೆಂಗಳೂರು) ▼	₹68,300 (ಬೆಂಗಳೂರು) ▼

'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರ ಪ್ರಸಾರವಾದ ವಾರಗಳ ಬಳಿಕ ಕಾರ್ಯಾಚರಣೆ

ಬಿಬಿಸಿಗೆ ಐ.ಟಿ ಪರಿಶೀಲನೆ ಬಿಸಿ

ನವದೆಹಲಿ (ಪಿಟಿಐ): ಆದಾಯ ತೆರಿಗೆ (ಐ.ಟಿ) ಇಲಾಖೆಯು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್‌ನ (ಬಿಬಿಸಿ) ದೆಹಲಿ ಮತ್ತು ಮುಂಬೈ ಕಚೇರಿಗಳಲ್ಲಿ ಮಂಗಳವಾರ 'ಪರಿಶೀಲನೆ' ನಡೆಸಿದೆ. ತೆರಿಗೆ ವಂಚನೆಯ ಆರೋಪದಲ್ಲಿ ಈ ಕಾರ್ಯಾಚರಣೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಐ.ಟಿ ಇಲಾಖೆಯ ಈ ಕಾರ್ಯಾಚರಣೆಯು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷಗಳ ನಡುವೆ ತೀವ್ರ ವಾಗ್ವಾದಕ್ಕೆ ಕಾರಣವಾಗಿದೆ. ಬಿಬಿಸಿಯು ಭಾರತದ ಬಗ್ಗೆ 'ವಿಷಪೂರಿತ ವರದಿಗಾರಿಕೆ' ಮಾಡಿದೆ ಎಂದು ಬಿಜೆಪಿ ಆರೋಪಿಸಿದೆ. ಜಗತ್ತಿನ ಅತ್ಯಂತ ಭ್ರಷ್ಟ ಸಂಸ್ಥೆ ಎಂದಿದೆ. 'ಪರಿಶೀಲನೆ'ಯ ಸಂದರ್ಭವನ್ನು ವಿರೋಧ ಪಕ್ಷಗಳು ಪ್ರಶ್ನಿಸಿವೆ. ಮಾಧ್ಯಮ ಸ್ವಾತಂತ್ರ್ಯದ ದಮನ ಎಂದು ಹೇಳಿವೆ.

2002ರ ಗುಜರಾತ್ ಗಲಭೆ ಮತ್ತು ಆಗ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಪಾತ್ರದ ಕುರಿತ ಸಾಕ್ಷ್ಯಚಿತ್ರವನ್ನು ಬಿಬಿಸಿ ಇತ್ತೀಚೆಗೆ ಪ್ರಸಾರ ಮಾಡಿತ್ತು. ಅದಾಗಿ ಕೆಲವೇ ವಾರಗಳಲ್ಲಿ ಐ.ಟಿ ಕಾರ್ಯಾಚರಣೆ ನಡೆದಿದೆ.

ಅಧಿಕಾರಿಗಳ ಜೊತೆಗೆ ಸಂಪೂರ್ಣ ಸಹಕರಿಸುವುದಾಗಿ ಬಿಬಿಸಿ ಹೇಳಿದೆ. ಈಗ ಸೃಷ್ಟಿಯಾಗಿರುವ ಸಮಸ್ಯೆಯು ಆದಷ್ಟು ಬೇಗನೆ ಪರಿಹಾರವಾಗುವ ಭರವಸೆ ಇದೆ ಎಂದೂ ಹೇಳಿದೆ.

8ನೇ ಪುಟ ನೋಡಿ
ಮತ್ತೊಂದು ಸುದ್ದಿ 3B

ಬಿಬಿಸಿ ಕಚೇರಿಯಲ್ಲಿ ಐಟಿ ಪರಿಶೀಲನೆ ನಡೆಯುತ್ತಿದ್ದ ಸಂದರ್ಭದಲ್ಲಿ ಕಟ್ಟಡದ ಆವರಣದ ಹೊರಗಡೆ ಮಾಧ್ಯಮದವರು ಜಮಾಯಿಸಿದ್ದರು –ಪಿಟಿಐ ಚಿತ್ರ

ಆರೋಪಗಳೇನು?

ಅಂತರರಾಷ್ಟ್ರೀಯ ತೆರಿಗೆ ಪಾವತಿ, ಬಿಬಿಸಿಯ ಅಂಗ ಸಂಸ್ಥೆಗಳಿಗೆ ಸರಕು, ಸೇವೆ ಅಥವಾ ಸಿಬ್ಬಂದಿ 'ವರ್ಗಾವಣೆ ವೆಚ್ಚ' ಕುರಿತಂತೆ ಅಕ್ರಮ ನಡೆದಿದೆಯೇ ಎಂಬುದನ್ನು ಪರಿಶೀಲಿಸುವುದು ಆದಾಯ ತೆರಿಗೆ ಇಲಾಖೆಯ ಉದ್ದೇಶವಾಗಿತ್ತು.

ಲಂಡನ್ ಕೇಂದ್ರ ಸ್ಥಾನವಾಗಿರುವ ಬಿಬಿಸಿ ಮತ್ತು ಅದರ ಭಾರತೀಯ ಅಂಗ ಸಂಸ್ಥೆಯ ವಹಿವಾಟುಗಳಿಗೆ ಸಂಬಂಧಿಸಿ ಐ.ಟಿ ಇಲಾಖೆಯು ಪರಿಶೀಲನೆ ನಡೆಸಿದೆ.

ವಿರೋಧ ಪಕ್ಷಗಳು ಮತ್ತು ಮಾಧ್ಯಮದ ಮೇಲೆ ದಾಳಿ ನಡೆಸಲು ಸಂಸ್ಥೆಗಳನ್ನು ಬಳಸಿಕೊಂಡರೆ ಪ್ರಜಾಪ್ರಭುತ್ವ ಉಳಿಯದು. ಜನರು ಇದನ್ನು ಪ್ರತಿರೋಧಿಸಲಿದ್ದಾರೆ
ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ಮೊದಲಿಗೆ ಬಿಬಿಸಿ ಸಾಕ್ಷ್ಯಚಿತ್ರದ ಮೇಲೆ ನಿರ್ಬಂಧ. ಅದಾನಿ ಪ್ರಕರಣದಲ್ಲಿ ಜೆಪಿಸಿ ಇಲ್ಲ, ಈಗ ಬಿಬಿಸಿ ಮೇಲೆ ಐ.ಟಿ ದಾಳಿ. ಭಾರತ: ಪ್ರಜಾಪ್ರಭುತ್ವದ ತಾಯಿಯೇ?
ಸೀತಾರಾಮ್ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಆಘಾತವಾಗಿದೆ. ಪರಿಶೀಲನೆ ಎಂಬ ಹೆಸರಿನಲ್ಲಿ ಯಾರನ್ನೂ ಮೂರ್ಖರನ್ನಾಗಿ ಮಾಡಲಾಗದು. ಬಿಬಿಸಿ ಸಾಕ್ಷ್ಯಚಿತ್ರಕ್ಕೆ ಇದು ಪ್ರತೀಕಾರ
ಡಾ. ಮುಕುಲಿಕಾ ಬ್ಯಾನರ್ಜಿ, ಪ್ರಾಧ್ಯಾಪಕಿ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್

ಬಿಬಿಸಿಯ ಅಪಪ್ರಚಾರ ಮತ್ತು ಕಾಂಗ್ರೆಸ್‌ನ ಕಾರ್ಯಸೂಚಿ ಒಟ್ಟಾಗಿ ಸಾಗುತ್ತವೆ. ಕಾಂಗ್ರೆಸ್ ನಾಯಕಿಯಾಗಿದ್ದ ಇಂದಿರಾ ಗಾಂಧಿಯೇ ಬಿಬಿಸಿ ಮೇಲೆ ನಿಷೇಧ ಹೇರಿದ್ದನ್ನು ಕಾಂಗ್ರೆಸ್ ಮರೆಯಬಾರದು
ಗೌರವ್ ಭಾಟಿಯಾ, ಬಿಜೆಪಿ ವಕ್ತಾರ

ಮೊದಲಿಗೆ ನಿರ್ಬಂಧ, ಈಗ ಪರಿಶೀಲನೆ. ಮೋದಿ ಅವರೇ, ಹಿಟ್ಲರ್‌ನ ಸರ್ವಾಧಿಕಾರವೂ ಕೊನೆಗೊಂಡಿತ್ತು. ನಿಮ್ಮದೂ ಕೊನೆ ಆಗಲಿದೆ ಎಂಬುದನ್ನು ಮರೆಯದಿರಿ
ಸಂಜಯ್ ಸಿಂಗ್, ಎಎಪಿ ರಾಜ್ಯಸಭಾ ಸದಸ್ಯ

ತಾ.ಪಂ, ಜಿ.ಪಂ ಕ್ಷೇತ್ರ ಪುನರ್ ವಿಂಗಡಣೆಗೆ 10 ದಿನ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಇಂದಿನಿಂದ ಹತ್ತು ದಿನಗಳಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಅಧಿಸೂಚನೆ ಪ್ರಕಟಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಗಡುವು ನೀಡಿದೆ.

ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆಗೆ ತಿದ್ದುಪಡಿ ತಂದಿರುವುದನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್.ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅಡ್ವೊಕೇಟ್ ಜನರಲ್ ಪ್ರಭುಲಿಂಗ ನಾವದಗಿ, 'ಈಗಾಗಲೇ ಕ್ಷೇತ್ರ ಪುನರ್ವಿಂಗಡಣೆ ಪೂರ್ಣಗೊಳಿಸಲಾಗಿದೆ. 2023ರ ಜನವರಿ 30ರಂದು ಸೀಮಾ ನಿರ್ಣಯ ಆಯೋಗವು ಕ್ಷೇತ್ರ ಪುನರ್ ವಿಂಗಡಣಾ ಅಧಿಸೂಚನೆ ಪ್ರಕಟಿಸಿದ್ದು, ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

'ವಾರ್ಡ್ ಮೀಸಲಾತಿಗೆ ಸಂಬಂಧಿಸಿದಂತೆ ಆಯೋಗ ರಚನೆ ಮಾಡಲಾಗಿದ್ದು, ರಾಜಕೀಯ ಪ್ರಾತಿನಿಧ್ಯ ಪರಿಗಣಿಸಿ ಮೀಸಲಾತಿ ಕಲ್ಪಿಸಲು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ. ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದ ಪ್ರಕರಣವು ಸುಪ್ರೀಂ ಕೋರ್ಟ್‌ನಲ್ಲಿದ್ದು ಹಿಂದುಳಿದ ವರ್ಗಗಳಿಗೆ ರಾಜಕೀಯ ಮೀಸಲಾತಿ ನಿಗದಿಗೊಳಿಸಲು 2023ರ ಏಪ್ರಿಲ್ 1ರವರೆಗೆ ಕಾಲಾವಕಾಶ ನೀಡಿದೆ' ಎಂದು ವಿವರಿಸಿದರು.

'ಒಂದು ವಾರದಲ್ಲಿ ಅಧಿಸೂಚನೆ ಪ್ರಕಟಿಸಲಾಗುವುದು. ಈ ದಿಸೆಯಲ್ಲಿ ಔಪಚಾರಿಕ ಪ್ರಕ್ರಿಯೆ ಮಾತ್ರವೇ ಬಾಕಿ ಇದೆ. ಬಿಬಿಎಂಪಿ ಪ್ರಕರಣದಲ್ಲಿ ರಾಜಕೀಯ ಮೀಸಲಾತಿ ನಿಗದಿಪಡಿಸಲು ಏಪ್ರಿಲ್ 1ರವರೆಗೆ ಸುಪ್ರೀಂ ಕೋರ್ಟ್ ಕಾಲಾವಕಾಶ ನೀಡಿದೆ. ಈ ಮಿತಿಯೊಳಗೆ ನಾವು ಮೀಸಲಾತಿ ಸಿದ್ಧಪಡಿಸಿ ಚುನಾವಣಾ ಆಯೋಗಕ್ಕೆ ನೀಡುತ್ತೇವೆ. ಇಂದಿನಿಂದ ಒಂದು ವಾರದಲ್ಲಿ ಅಧಿಸೂಚನೆ ಪ್ರಕಟಿಸುತ್ತೇವೆ' ಎಂದು ತಿಳಿಸಿದರು.

ಗ್ರಾ.ಪಂ ಸಿಬ್ಬಂದಿಗೆ 'ಡಿ' ದರ್ಜೆ ಸ್ಥಾನವೂ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಪಂಚಾಯತಿ ಸಿಬ್ಬಂದಿಗೆ 'ಡಿ' ಗ್ರೂಪ್ ನೌಕರರ ಸ್ಥಾನ ನೀಡಲು ಅವಕಾಶವಿಲ್ಲ. ಸರ್ಕಾರಿ ನೌಕರರಂತೆ ವೇತನ ಶ್ರೇಣಿ ನಿಗದಿಪಡಿಸಲು ಆಡಳಿತಾತ್ಮಕವಾಗಿ ಸಾಧ್ಯವಾಗದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ ಲಿಖಿತ ಹೇಳಿಕೆಯನ್ನು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಅವರು ಮಂಗಳವಾರ ವಿಧಾನ ಪರಿಷತ್‌ನಲ್ಲಿ ಓದಿದರು.

ಕಾಂಗ್ರೆಸ್‌ನ ಮಂಜುನಾಥ ಭಂಡಾರಿ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು, ಕರ ಸಂಗ್ರಹಕಾರ, ನೀರುಗಂಟಿ, ಸ್ವಚ್ಛತಾ ಕಾರ್ಮಿಕರು, ಅಟೆಂಡರ್, ಡೇಟಾ ಎಂಟ್ರಿ ಆಪರೇಟರ್‌ಗಳು ಸರ್ಕಾರಿ ನೌಕರರಲ್ಲ ಎಂದು ವಿವರಿಸಿದರು.

8ನೇ ಪುಟ ನೋಡಿ

ಅಡಿಕೆ ಹಾನಿಕರವಲ್ಲ; ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ವರದಿ

ಬೆಂಗಳೂರು: ಅಡಿಕೆ ಹಾನಿಕರವಲ್ಲ, ಔಷಧೀಯ ಗುಣವಿರುವ ಸಾಂಪ್ರದಾಯಿಕ ಬೆಳೆ ಎಂದು ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್‌ನ ವಿಜ್ಞಾನಿಗಳು ಸಂಶೋಧನಾ ವರದಿ ನೀಡಿದ್ದಾರೆ.

ವರದಿಯನ್ನು ಶೀಘ್ರವೇ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಅಡಿಕೆ ಕಾರ್ಯಪಡೆ ಅಧ್ಯಕ್ಷರೂ ಆಗಿರುವ ಗೃಹ ಸಚಿವ ಆರಗ ಜ್ಞಾನೇಂದ್ರ ಮಂಗಳವಾರ ವಿಧಾನ ಪರಿಷತ್‌ಗೆ ಮಾಹಿತಿ ನೀಡಿದರು.

8ನೇ ಪುಟ ನೋಡಿ

ಒಳ ಪುಟಗಳು

ಸಂಚಾರ ನಿಯಮ ಉಲ್ಲಂಘನೆ: ರಿಯಾಯತಿ ಅವಧಿ ವಿಸ್ತರಣೆಗೆ ಕೋರಿಕೆ 2
'ಏನನ್ನೂ ಮುಚ್ಚಿಡುತ್ತಿಲ್ಲವಾದರೆ ಜೆಪಿಸಿ ತನಿಖೆಗೆ ಏಕೆ ಹಿಂದೇಟು?' 8
ಭೂಕಂಪ: 70 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ತೊಂದರೆ 13

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಾಗರಹೊಳೆ: 2 ಹೆಣ್ಣು ಹುಲಿ ಸೆರೆ

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು/ಎಚ್.ಡಿ.ಕೋಟೆ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಮಂಗಳವಾರ ಎರಡು ಹೆಣ್ಣು ಹುಲಿಗಳನ್ನು ಅರಣ್ಯ ಇಲಾಖೆ ಸಿಬ್ಬಂದಿ ಸೆರೆ ಹಿಡಿದಿದ್ದಾರೆ.

ಕೊಡಗು ಜಿಲ್ಲೆಯ ಕೆ.ಬಾಡಗ ಗ್ರಾಮದ ಚೂರಿಕಾಡುವಿನಲ್ಲಿ ಇಬ್ಬರನ್ನು ಕೊಂದು ಆತಂಕ ಸೃಷ್ಟಿಸಿದ್ದ ಹುಲಿ ಹಾಗೂ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಡಿ.ಬಿ.ಕುಪ್ಪೆ ಅರಣ್ಯ ವ್ಯಾಪ್ತಿಯ ಬಳ್ಳೆ ಹಾಡಿಯ ಯುವಕ ಮಂಜು (17) ಅವರನ್ನು ಜ.22ರಂದು ಕೊಂದಿದ್ದ 'ಬ್ಯಾಕ್ ವಾಟರ್ ಫೀಮೇಲ್' ಹೆಸರಿನ ಮತ್ತೊಂದು ಹುಲಿ ಸೆರೆಯಾಗಿದೆ. ಹುಲಿಗಳನ್ನು ಮೈಸೂರಿನ ಕೂರ್ಗಳ್ಳಿಯ ವನ್ಯಜೀವಿ ಚಿಕಿತ್ಸಾ ಕೇಂದ್ರಕ್ಕೆ ರವಾನಿಸಲಾಗಿದೆ.

'ಕೊಡಗು ಜಿಲ್ಲೆಯಲ್ಲಿ ಸೆರೆಯಾದ ಸುಮಾರು 12 ವರ್ಷ ವಯಸ್ಸಿನ ಹುಲಿಯು, ಇಬ್ಬರ ಮೇಲೆ ದಾಳಿ ನಡೆಸಿದ್ದ ಸ್ಥಳದ ಸಮೀಪದ ನಾಣಚ್ಚಿ ಬಳಿಯ ಕಾಫಿ ತೋಟದಲ್ಲಿ ಅಡಗಿತ್ತು. ದೇಹದ ಮೇಲೆ ಗಾಯಗಳಾಗಿದ್ದು, ಅನಾರೋಗ್ಯದಿಂದ ಬಳಲುತ್ತಿತ್ತು ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಕೊಡಗು ಜಿಲ್ಲೆಯ ಸಿಸಿಎಫ್ ಬಿ.ಎನ್. ಮೂರ್ತಿ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾರ್ಯಾಚರಣೆ ತಂಡದಲ್ಲಿ 6 ಪಶುವೈದ್ಯರಿದ್ದರು. ಹುಲಿಯು ಕಾಣಿಸಿಕೊಂಡ ಕೂಡಲೇ ಉಪವಲಯ ಅರಣ್ಯಾಧಿಕಾರಿ ರಂಜನ್ ಅರಿವಳಿಕೆ ಚುಚ್ಚುಮದ್ದು ಪ್ರಯೋಗಿಸಿದರು. ಸ್ವಲ್ಪ ದೂರ ಸಾಗಿದ ಹುಲಿ ಪ್ರಜ್ಞೆ ತಪ್ಪಿ ಬಿದ್ದಿತು. ವಯಸ್ಸಾಗಿರುವ ಕಾರಣಕ್ಕೆ ಕಾಡಿನಿಂದ ಹೊರಬಂದು ಜನ- ಜಾನುವಾರುಗಳ ಮೇಲೆ ಆಕ್ರಮಣ ಮಾಡುತ್ತಿತ್ತು. ಒಟ್ಟು 6 ಸಾಕಾನೆಗಳನ್ನು ಕರೆಸಿದ್ದರೂ ನಾಲ್ಕನ್ನಷ್ಟೇ ಕಾರ್ಯಾಚರಣೆಗೆ ಬಳಸಲಾಯಿತು' ಎಂದು ವಲಯ ಅರಣ್ಯಾಧಿಕಾರಿ ಅಶೋಕ್ ಹುನಗುಂದ ತಿಳಿಸಿದರು.

ಹುಲಿ ಯೋಜನೆಯ ಪಿಸಿಸಿಎಫ್ ಜಗತ್‌ರಾಮನ್, ವನ್ಯಜೀವಿ ವಿಭಾಗದ ಎಪಿಸಿಸಿಎಫ್ ಕುಮಾರ್ ಪುಷ್ಕರ್ ಕಾರ್ಯಾಚರಣೆ ಸ್ಥಳದಲ್ಲಿದ್ದರು.

7ನೇ ಪುಟ ನೋಡಿ

ಕೊಡಗು ಜಿಲ್ಲೆಯ ಕೇರಳ ಗಡಿಭಾಗ ಕೆ.ಬಾಡಗ ಸಮೀಪ ಮಂಗಳವಾರ ಸೆರೆ ಹಿಡಿಯಲಾದ ಹೆಣ್ಣು ಹುಲಿ

ಗುಬ್ಬಿ ಬಳಿ ಹುಲಿ ಕಳೇಬರ ಪತ್ತೆ

ತುಮಕೂರು: ಗುಬ್ಬಿ ತಾಲ್ಲೂಕಿನ ಮಂಚಲದೊರೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಕುಂಟ ರಾಮನಹಳ್ಳಿ- ಚಿಕ್ಕಹೆಡಿಗೆ ಹಳ್ಳಿ ಮಾರ್ಗ ಮಧ್ಯದ ರಸ್ತೆ ಸೇತುವೆಯ ಅಡಿಯಲ್ಲಿರುವ ಸಿಮೆಂಟ್ ಪೈಪಿನಲ್ಲಿ 6ರಿಂದ7 ವರ್ಷ ವಯಸ್ಸಿನ ಗಂಡು ಹುಲಿಯ ಕಳೇಬರ ಮಂಗಳವಾರ ಪತ್ತೆಯಾಗಿದೆ.

ಜಿಲ್ಲೆಯಲ್ಲಿ ಹುಲಿ ಆವಾಸಕ್ಕೆ ಪ್ರಶಸ್ತವಾದ ಅರಣ್ಯ ಪ್ರದೇಶ ಇಲ್ಲ.

ಕಳೇಬರ ಪತ್ತೆಯಾಗಿರುವ ಸುತ್ತಮುತ್ತ ಅರಣ್ಯ ಪ್ರದೇಶ ವಿದ್ದರೂ ದಟ್ಟವಾದ ಕಾಡು ಇಲ್ಲ. ಈವರೆಗೂ ಜಿಲ್ಲೆಯಲ್ಲಿ ಹುಲಿ ಇರುವ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

7ನೇ ಪುಟ ನೋಡಿ

ಕಾಡುಗೊಲ್ಲ, ಕೋಲಿ ಸಮುದಾಯ ಪರಿಶಿಷ್ಟ ಪಂಗಡಕ್ಕೆ

ತೀರ್ಮಾನ ಕೈಗೊಳ್ಳದ ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಕಾಡುಗೊಲ್ಲ (ಅಡವಿಗೊಲ್ಲ) ಹಾಗೂ ಕೋಲಿ ಸಮುದಾಯಗಳನ್ನು ಪರಿಶಿಷ್ಟ ಪಂಗಡದ (ಎಸ್‌ಟಿ) ಪಟ್ಟಿಗೆ ಇಲ್ಲಿಯವರೆಗೆ ಸೇರ್ಪಡೆ ಮಾಡಿಲ್ಲ ಎಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ.

ಹಾಸನದ ಸಂಸದ ಪ್ರಜ್ವಲ್ ರೇವಣ್ಣ ಲೋಕಸಭೆಯಲ್ಲಿ ಕೇಳಿರುವ ಪ್ರಶ್ನೆಗೆ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಲಿಖಿತ ಉತ್ತರ ನೀಡಿದ್ದಾರೆ.

ಕಾಡುಗೊಲ್ಲರು ಹಾಗೂ ಹಟ್ಟಿಗೊಲ್ಲರನ್ನು ಪರಿಶಿಷ್ಟ ಪಂಗಡಕ್ಕೆ ಸೇರ್ಪಡೆ ಮಾಡುವಂತೆ ಕರ್ನಾಟಕ ಸರ್ಕಾರ 2015ರ ಆಗಸ್ಟ್ 17ರಂದು ಶಿಫಾರಸು ಮಾಡಿತ್ತು. ಅದೇ ರೀತಿ, ಗಂಗಾಮತ, ಕೋಲಿ ಸಮುದಾಯವನ್ನು ಪಟ್ಟಿಗೆ ಸೇರಿಸುವಂತೆ 2018ರ ಜುಲೈ 23ರಂದು ಶಿಫಾರಸು ಮಾಡಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ.

ಮುಖ್ಯಾಂಶಗಳು

- ಪ್ರಜ್ವಲ್ ರೇವಣ್ಣ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಎ. ನಾರಾಯಣ ಸ್ವಾಮಿ
- ಕೇಂದ್ರ ಕೇಳಿದ್ದ ಸ್ಪಷ್ಟನೆಗೆ ಉತ್ತರ ನೀಡಿದ್ದ ರಾಜ್ಯ ಸರ್ಕಾರ

ಯಾವುದೇ ಸಮುದಾಯವನ್ನು ಪರಿಶಿಷ್ಟ ಪಂಗಡ ಅಥವಾ ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡುವುದಕ್ಕೆ, ಕೈ ಬಿಡುವುದಕ್ಕೆ ಹಾಗೂ ಇತರ ಪರಿಷ್ಕರಣೆಗೆ ಕೇಂದ್ರ ಸರ್ಕಾರ 1999ರಲ್ಲೇ ಕಾರ್ಯವಿಧಾನ ರೂಪಿಸಿದೆ. ಇದರ ಪ್ರಕಾರ, ಯಾವುದೇ ಪ್ರಸ್ತಾವನೆಯನ್ನು ಸಂಬಂಧಿಸಿದ ರಾಜ್ಯ ಸರ್ಕಾರ ಸಲ್ಲಿಸಬೇಕು. ಇದಕ್ಕೆ ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ ಹಾಗೂ ರಾಷ್ಟ್ರೀಯ ಪರಿಶಿಷ್ಟ ಪಂಗಡಗಳ ಆಯೋಗ ಸಹಮತ ವ್ಯಕ್ತಪಡಿಸಬೇಕು. ಬಳಿಕ ಸರ್ಕಾರ ತೀರ್ಮಾನ ಕೈಗೊಳ್ಳುತ್ತದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರ ಈ ಹಿಂದೆ ಕೆಲವು ಸ್ಪಷ್ಟನೆಗಳನ್ನು ಕೇಳಿತ್ತು.

ಅದಕ್ಕೆ ಕರ್ನಾಟಕ ಸರ್ಕಾರ ಉತ್ತರ ನೀಡಿತ್ತು.

10, 12ನೇ ತರಗತಿ ಪರೀಕ್ಷೆ: ಚಾಟ್‌ಜಿಪಿಟಿ ಬಳಕೆ ನಿಷೇಧ

ನವದೆಹಲಿ (ಪಿಟಿಐ): 10 ಹಾಗೂ 12ನೇ ತರಗತಿ ಪರೀಕ್ಷೆಗಳಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ 'ಚಾಟ್‌ಜಿಪಿಟಿ' ತಂತ್ರಾಂಶದ ಬಳಕೆಯನ್ನು ನಿಷೇಧಿಸಲಾಗಿದೆ ಎಂದು ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

'ಮೊಬೈಲ್, ಚಾಟ್‌ಜಿಪಿಟಿ ಹಾಗೂ ಇತರ ಎಲೆಕ್ಟ್ರಾನಿಕ್ ಸಾಧನಗಳನ್ನು ಪರೀಕ್ಷಾ ಕೊಠಡಿಗೆ ತರಲು ಅನುಮತಿ ಇಲ್ಲ' ಎಂದು ಮಂಡಳಿಯು ವಿದ್ಯಾರ್ಥಿಗಳಿಗೆ ಸೂಚನೆ ನೀಡಿದೆ.

15ರಿಂದ ಪರೀಕ್ಷೆ: 10, 12ನೇ ತರಗತಿಯ ಬೋರ್ಡ್ ಪರೀಕ್ಷೆಗಳು ಬುಧವಾರ (ಫೆ.15) ಆರಂಭವಾಗಲಿವೆ 10ನೇ ತರಗತಿ ಪರೀಕ್ಷೆ ಮಾರ್ಚ್ 21ಕ್ಕೆ, 12ನೇ ತರಗತಿ ಪರೀಕ್ಷೆ ಏಪ್ರಿಲ್ 5ಕ್ಕೆ ಮುಕ್ತಾಯವಾಗಲಿದೆ.

ಸಂಚಾರ ನಿಯಮ ಉಲ್ಲಂಘನೆ: ರಿಯಾಯಿತಿ ಅವಧಿ ವಿಸ್ತರಣೆಗೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ನಿಯಮ ಉಲ್ಲಂಘನೆಗಾಗಿ ವಾಹನ ಸವಾರರಿಗೆ ವಿಧಿಸಲಾಗಿದ್ದ ದಂಡದ ಮೊತ್ತದಲ್ಲಿ ಶೇ50ರಷ್ಟು ರಿಯಾಯಿತಿ ನೀಡುವುದನ್ನು 15 ದಿನಗಳ ಕಾಲ ವಿಸ್ತರಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ನಿರ್ಧರಿಸಿದೆ.

ಹೈಕೋರ್ಟ್‌ನ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯಲ್ಲಿ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರೂ ಆದ ನ್ಯಾಯಮೂರ್ತಿ ಬಿ.ವೀರಪ್ಪ ಅವರ ನೇತೃತ್ವದಲ್ಲಿ ನಡೆದ ರಾಜ್ಯ ಸಾರಿಗೆ ಮತ್ತು ಪೊಲೀಸ್ ಇಲಾಖೆಯ ಉನ್ನತ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ನಗರದ ವಿಶೇಷ ಪೊಲೀಸ್ ಆಯುಕ್ತ (ಸಂಚಾರ) ಡಾ.ಎಂ.ಎ. ಸಲೀಂ, "ಟ್ರಾಫಿಕ್ ಫೈನ್ ಪಾವತಿ ಮೊತ್ತದಲ್ಲಿ ಶೇ 50ರಷ್ಟು ರಿಯಾಯಿತಿ ನೀಡುವುದನ್ನು ಇನ್ನೂ 15 ದಿನಗಳ ಕಾಲ ವಿಸ್ತರಿಸಬೇಕು. ಈ ಕುರಿತು ಸಾರ್ವಜನಿಕರ ಬೇಡಿಕೆಯಿದೆ" ಎಂದು ಸಭೆಯಲ್ಲಿ ಮನವಿ ಮಾಡಿದರು.

ವಿಶೇಷ ಆಯುಕ್ತರ ಮತ್ತು ಸಾರ್ವಜನಿಕರ ಬೇಡಿಕೆಯನ್ನು ಪರಿಗಣಿಸಿ, ಟ್ರಾಫಿಕ್ ಫೈನ್ ಪ್ರಕರಣದಲ್ಲಿ ಶೇ50ರಷ್ಟು ರಿಯಾಯಿತಿ ನೀಡುವುದನ್ನು 15 ಕಾಲ ವಿಸ್ತರಿಸುವಂತೆ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲು ಕಾನೂನು ಸೇವೆಗಳ ಪ್ರಾಧಿಕಾರ ತೀರ್ಮಾನಿಸಿದೆ.

ನೈರುತ್ಯ ರೈಲ್ವೆ G2G

ಇ-ಟೆಂಡರು ಸೂಚನೆ ಸಂ.: GEM/2023/B/3093594 ದಿನಾಂಕ: 08.02.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಬೆಂಗಳೂರು ವಿಭಾಗ: ಬೆಂಗಳೂರಿನ ಕಂಟೋನ್ಮೆಂಟ್, ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಬೈಯ್ಯಪ್ಪನಹಳ್ಳಿ) ಡಿಪೋ ಮತ್ತು ಎಸ್‌ಜಿಟಿ ಡಿಪೋದಲ್ಲಿ ಎರಡು ವರ್ಷಗಳ ಅವಧಿಗೆ ಎಲ್ಲಾ ಸಮಯಗಳಲ್ಲಿಯೂ ಆಗುವಂತೆ BAND DEMU ಶೆಡ್‌ನಲ್ಲಿರುವ MEMU ಶೆಡ್‌ಗೆ ಪುರುಷರ ಮತ್ತು ಇತರ ವಸ್ತುಗಳ ಸಾಗಣೆಗಾಗಿ ಬಹು ಉಪಯೋಗಿ ವಾಹನಗಳನ್ನು ಬಾಡಿಗೆಗೆ ಪಡೆಯುವ ಕೆಲಸ.	ರೂ. 24,58,800/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 28.02.2023, 14:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ https://gem.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್ ಬೆಂಗಳೂರು

PUB/672/AAD/PRB/SWR/2022-23

S.W.Railways SWRRLY SWRRLY

ಸುಧಾ, ಮಯೂರ ಓದಿರಿ

SBI ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಮಲ್ಲೇಶ್ವರಂ ಬ್ರಾಂಚ್, ನಂ. 143, 8ನೇ ಅಡ್ಡರಸ್ತೆ, ಮಾರ್ಗೋಸ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003, ಕರ್ನಾಟಕ, ಭಾರತ, ಬ್ರಾಂಚ್ ಕೋಡ್: (07080), ಫೋನ್: 080-25943204, ಇ-ಮೇಲ್: sbi.07080@sbi.co.in

ಸೂಚನೆ:

ಈ ಮೂಲಕ ಲಾಕರ್ ಹೋಲ್ಡರ್‌ಗಳಾದ ಸೂಚಿಸುವುದೇನೆಂದರೆ ದಿನಾಂಕ: 16-03-2023 ರ ಒಳಗಾಗಿ ಲಾಕರ್ ಬಾಡಿಗೆಯ ಬಾಕಿ ಮೊತ್ತಗಳನ್ನು ಪಾವತಿಸದಿದ್ದರೆ ಅವರುಗಳು ಬಾಡಿಗೆಗೆ ಪಡೆದಿರುವ ಬ್ಯಾಂಕ್ ಲಾಕರುಗಳನ್ನು ಬ್ಯಾಂಕಿನ ನಿಯಮದ ಪ್ರಕಾರ **ದಿನಾಂಕ: 15-03-2023** ರಂದು ಒಡೆದು ತೆರೆಯಲು ಉದ್ದೇಶಿಸಲಾಗುತ್ತದೆ.

ಕ್ರ. ಸಂ.	ಮೊತ್ತ	ಹೆಸರು
1.	5192.00	ಶ್ರೀ ಮೊಹಮ್ಮದ್ ಅಸೀಫ್ ಪಾಷ ಮತ್ತು ಶ್ರೀಮತಿ ಸಾಯೀದ ಅಸೀಫ್
2.	13053.00	ಶ್ರೀ ವಿಜಯ ರಾಘವನ್ ಎಸ್. ಮತ್ತು ಶ್ರೀಮತಿ ವನಜ ರಾಘವನ್
3.	15528.00	ಶ್ರೀ ನಾರಾಯಣ ಸ್ವಾಮಿ ಎನ್. ಮತ್ತು ಶ್ರೀಮತಿ ಕರುಣ ಆರ್.

ಸ್ಥಳ: ಬೆಂಗಳೂರು, ದಿನಾಂಕ: 15-02-2023 ಶಾಖಾ ವ್ಯವಸ್ಥಾಪಕರು

ರೈಲು ಭೂಮಿ ಅಭಿವೃದ್ಧಿ ಪ್ರಾಧಿಕಾರ

(ಭಾರತ ಸರ್ಕಾರದ ರೈಲ್ವೆ ಸಚಿವಾಲಯ ಅಡಿಯಲ್ಲಿನ ಒಂದು ಶಾಸನಬದ್ಧ ಪ್ರಾಧಿಕಾರ)
ಯೂನಿಟ್ ನಂ. 702-ಬಿ, 7ನೇ ಮಹಡಿ, ಕನ್ನೆಕ್ಷನ್ ಟವರ್-2, ಡಿಎಂಆರ್‌ಸಿ ಬಿಲ್ಡಿಂಗ್, ಅಜ್ಮೇರಿ ಗೇಟ್, ನವದೆಹಲಿ-110002 ಫೋನ್: +91-11-23232854, ಫ್ಯಾಕ್ಸ್: +91-11-23232835

ಇ-ಟೆಂಡರ್ ಮುಖಾಂತರ ಪ್ರಸ್ತಾವಣೆಗೆ ಮನವಿ
(ಆರ್‌ಎಫ್‌ಪಿ ನೋಟಿಸ್ ನಂ. ಆರ್‌ಎಲ್‌ಡಿಎ/2023/ಆರ್‌ಎಫ್‌ಪಿ/ಸಿಡಿ-06 ದಿನಾಂಕ 10.02.2023)

ರೇಣಿಗುಂಟದಲ್ಲಿ ಹೋಟೆಲ್ ಕೆಆರ್ ಭವನ ಹತ್ತಿರದ ಸ್ಟೇಷನ್ ರಸ್ತೆಗುಂಟ ಇರುವ 5,532.00 ಚ.ಮೀ. ರೈಲ್ವೆಯ ಭೂ ಪ್ರದೇಶದಲ್ಲಿ ವಾಣಿಜ್ಯ ಅಭಿವೃದ್ಧಿಗಾಗಿ 45 ವರ್ಷಗಳ ಭೋಗ್ಯ ಮಂಜೂರಾತಿ

ಜಮೀನು	ನಿವೇಶನದ ವಿಸ್ತೀರ್ಣ	ಬಿಲ್ಟಪ್ ಪ್ರದೇಶ	ಬಿಡ್ ಸೆಕ್ಯೂರಿಟಿ	ಮೀಸಲು ಬೆಲೆ
ರೇಣಿಗುಂಟ ಹೋಟೆಲ್ ಕೆಆರ್ ಭವನ ಹತ್ತಿರದ ಸ್ಟೇಷನ್ ರಸ್ತೆಗುಂಟ	5,532.00 ಚ.ಮೀ.	7,502.42 ಚ.ಮೀ.	ರೂ. 25.00 ಲಕ್ಷ	ರೂ. 6.77 ಕೋಟಿ

ವೆಬೆಕ್ಸ್‌ನಲ್ಲಿ ಬಿಡ್‌ಪೂರ್ವ ಆನ್‌ಲೈನ್ ಸಭೆ: 24 ಫೆಬ್ರವರಿ, 2023 ರಂದು 11:30 ಗಂಟೆ.
(ಬಿಡ್‌ಪೂರ್ವ ಆನ್‌ಲೈನ್ ಸಭೆಯ ವಿವರಗಳನ್ನು ಡೆ. ಜನರಲ್ ಮ್ಯಾನೇಜರ್/ಮಾರ್ಕೆಟಿಂಗ್/ಎಸ್‌ಸಿ ಇವರಿಂದ ಪಡೆದುಕೊಳ್ಳುವುದು)
ಆನ್‌ಲೈನ್‌ನಲ್ಲಿ ಇ-ಬಿಡ್ ಸಲ್ಲಿಸುವ ಕೊನೆಯ ದಿನಾಂಕ: 29.03.2023 ರಂದು 15:00 ಗಂಟೆವರೆಗೆ.
ಯೋಜನೆಯ ಕುರಿತಾದ ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ನಮ್ಮ www.rlda.indianrailways.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನ www.tenderwizard.in/RLDA ಪೋರ್ಟಲ್‌ನಲ್ಲಿರುವ 'ಇ-ಟೆಂಡರ್' ಶೀರ್ಷಿಕೆಯನ್ನು ಪರಿಶೀಲಿಸಿರಿ.
ಯಾವುದೇ ಸ್ಪಷ್ಟೀಕರಣಗಳಿಗಾಗಿ, ದಯವಿಟ್ಟು ಇವರನ್ನು ಸಂಪರ್ಕಿಸಿರಿ:-

ಡೆ. ಜನರಲ್ ಮ್ಯಾನೇಜರ್/ ಮಾರ್ಕೆಟಿಂಗ್/ಎಸ್‌ಸಿ	ಜಾ.ಜನರಲ್ ಮ್ಯಾನೇಜರ್/ ಪ್ರಾಜೆಕ್ಟ್/ಎಸ್‌ಸಿ	ಚೀಫ್ ಪ್ರಾಜೆಕ್ಟ್ ಮ್ಯಾನೇಜರ್/ ಸಿಕಂದರಾಬಾದ್	ಕನ್ಸಲ್ಟಂಟ್/ಆರ್‌ಎಲ್‌ಡಿಎ ಶ್ರೀ. ವಾಸುದೇವ	ಇ-ಬಿಡ್ ವಿಚಾರಣೆಗಳಿಗಾಗಿ- ಶ್ರೀ. ಸೂರಜ್ ಸಿಂಗ್
ಮೊ: 7337550024	ಮೊ: 9440467999	ಮೊ: 6305489280	ಮೊ: 8650319273	ಮೊ: 9599653865
rorldasc@gmail.com	ksraorlda@gmail.com	cpmrldasc22@gmail.com	imvdeva07@gmail.com	suraj@etenderwizard.com

ಸೂಚನೆ:- ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡು ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
ಡಿಜಿಎಂ/ಟೆಂಡರ್, (ಮೊ) 9013164466

ಹಗರಣ ಶೀಘ್ರ ಸಿಬಿಐಗೆ: ಸಚಿವ ಸೋಮಶೇಖರ್

ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ₹1,290 ಕೋಟಿ ವಂಚನೆ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರ ಹಗರಣವನ್ನು ಸಿಬಿಐಗೆ ವಹಿಸಲು ಎಲ್ಲ ರೀತಿಯ ತಯಾರಿ ನಡೆದಿದೆ. ಮುಖ್ಯಮಂತ್ರಿ ಜೊತೆ ಸಮಾಲೋಚಿಸಿ, ಗೃಹ ಇಲಾಖೆ ಶೀಘ್ರ ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದರು.

ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ಸಿಐಡಿ, ಸಹಕಾರ ಇಲಾಖೆ ಮತ್ತು ಇಡಿ (ಜಾರಿ ನಿರ್ದೇಶನಾಲಯ) ಹಗರಣದ ತನಿಖೆ ನಡೆಸಿ, ₹ 1,290 ಕೋಟಿ ವಂಚನೆಯನ್ನು ಪತ್ತೆಹಚ್ಚಿವೆ. ಸಿಐಡಿ ತನಿಖೆ ಸಮರ್ಪಕವಾಗಿ ನಡೆಯುತ್ತಿದೆ. ಈ ಹಂತದಲ್ಲಿ ಸಿಬಿಐಗೆ ವಹಿಸಿದರೆ ತನಿಖೆ ವಿಳಂಬ ಆಗಬಹುದು ಎಂಬ ಕಾರಣಕ್ಕೆ ತಡೆಹಿಡಿಯಲಾಗಿತ್ತು' ಎಂದು ವಿವರಿಸಿದರು.

'ಬ್ಯಾಂಕಿನಿಂದ ಸಾಲ ಪಡೆದವರ ಆಸ್ತಿ ಜಪ್ತಿ ಮಾಡಲು ಸಾಧ್ಯವಿಲ್ಲ. ಏಕೆಂದರೆ, ಅಡಮಾನಕ್ಕಾಗಿ ನೀಡಿರುವ ದಾಖಲೆಗಳು ಬೇರೆಯವರಿಗೆ ಸೇರಿವೆ. ಸಾಲ ವಸೂಲಿ ಮಾಡುತ್ತಿದ್ದೇವೆ, ಆಸ್ತಿ ಜಪ್ತಿ ಮಾಡುತ್ತೇವೆ ಎನ್ನುತ್ತಾ ಸರ್ಕಾರ ಸುಳ್ಳು ಹೇಳುತ್ತಾ ಬಂದಿದೆ. ಹಗರಣವನ್ನು ತಕ್ಷಣ ಸಿಬಿಐಗೆ ಒಪ್ಪಿಸಬೇಕು' ಎಂದು ವೆಂಕಟೇಶ್ ಆಗ್ರಹಿಸಿದರು.

'ಮೂರು ವರ್ಷಗಳಿಂದ ಸಿಐಡಿ ಮತ್ತು ಸಹಕಾರ ಇಲಾಖೆ ತನಿಖೆ ನಡೆಸಿ ಏನೆಲ್ಲ ಅವ್ಯವಹಾರ ನಡೆದಿದೆ ಎಂಬ ಮಾಹಿತಿ ಕಲೆಹಾಕಲಾಗಿದೆ. ಮುಂದಿನ ಹಂತದಲ್ಲಿ ಸಿಬಿಐಗೆ ನೀಡಲು ತಯಾರಾಗಿದ್ದೇವೆ. ಸಿಬಿಐ ಏನೆಲ್ಲಾ ದಾಖಲೆಗಳನ್ನು ಕೇಳಬಹುದೆಂಬ ಎಂಬ ನಿರೀಕ್ಷೆಯಲ್ಲಿಯೇ ಎಲ್ಲ ಮಾಹಿತಿಗಳನ್ನು ಕಲೆಹಾಕಿದ್ದೇವೆ' ಎಂದು ಸಚಿವರು ವಿವರಿಸಿದರು.

'ಇಷ್ಟೆಲ್ಲ ತನಿಖೆ ಮಾಡಿದರೂ ವಂಚನೆ ಯಾರು ಮಾಡಿದ್ದಾರೆ ಎಂದು ಕಂಡುಹಿಡಿಯಲು ಆಗಿಲ್ಲ. ಇಡಿ ಅಧಿಕಾರಿಗಳೂ ವಿಚಾರಣೆ ಮಾಡಿದ್ದಾರೆ. ಹಣ ಎಲ್ಲಿಂದ ಎಲ್ಲಿಗೆ ವರ್ಗಾವಣೆ ಆಗಿದೆ ಎಂಬ ಮಾಹಿತಿಯನ್ನೂ ಪರಿಶೀಲಿಸಿದ್ದಾರೆ. ಗೃಹ ಇಲಾಖೆಗೆ 2-3 ದಿನಗಳಲ್ಲಿ ಕಡತ ರವಾನೆ ಆಗಲಿದೆ. ನಂತರ ಸಿಬಿಐಗೆ ಒಪ್ಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

ಜೆಡಿಎಸ್‌ನ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದ ಐದು ಜಿಲ್ಲಾ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ನೀಡುವ ವಿಷಯದಲ್ಲಿ ಕೇಳಿಬಂದಿದ್ದ ಆರೋಪಗಳ ಕುರಿತು ಇಲಾಖೆಯ ಅಧಿಕಾರಿಗಳು ತನಿಖೆ ನಡೆಸಿದ್ದಾರೆ. ಧಾರವಾಡ, ವಿಜಯಪುರ, ಶಿವಮೊಗ್ಗ, ಕೋಲಾರ ಬ್ಯಾಂಕ್‌ಗಳಲ್ಲಿ ಆರೋಪ ಕೇಳಿಬಂದಿತ್ತು. ನಬಾರ್ಡ್ ನಿಯಮದ ಪ್ರಕಾರ ಸಾಲ ನೀಡಲಾಗಿದೆ. ಸಾಫ್ಟ್‌ವೇರ್ ಬದಲಿಸಲಾಗಿದೆ. ಹೊಸ ವ್ಯವಸ್ಥೆಯಲ್ಲಿ ವಂಚನೆ ಮಾಡಲು ಸಾಧ್ಯವಿಲ್ಲ. ಆರೋಪ ಕೇಳಿಬಂದ ಕಾರಣ ಕೋಲಾರ ಬ್ಯಾಂಕಿನ ವ್ಯವಸ್ಥಾಪಕರಿಗೆ ನೋಟಿಸ್ ನೀಡಲಾಗಿದೆ' ಎಂದು ಹೇಳಿದರು.

'ನೋಟಿಸ್ ನೀಡಿದರೆ ಸಾಲದು. ಅಕ್ರಮ ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಶರವಣ ಆಗ್ರಹಿಸಿದರು.

'ಒಂದು ಸಿದ್ಧಾಂತ, ವ್ಯಕ್ತಿಯಿಂದ ದೇಶ ಕಟ್ಟಲು ಆಗದು'

ನಾಗ್ಪುರ (ಪಿಟಿಐ): ಒಂದು ಸಿದ್ಧಾಂತ, ಒಬ್ಬ ವ್ಯಕ್ತಿಯಿಂದ ದೇಶವನ್ನು ಕಟ್ಟಲು ಅಥವಾ ಒಡೆಯಲು ಆಗದು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಮಂಗಳವಾರ ಹೇಳಿದರು.

ಇಲ್ಲಿನ ರಾಜರತ್ನ ಪುರಸ್ಕಾರ ಸಮಿತಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಜಗತ್ತಿನ ಉತ್ತಮ ದೇಶಗಳು ವಿವಿಧ ಬಗೆಯ ವಿಚಾರಗಳು, ಬಹು ವ್ಯವಸ್ಥೆಗಳಿಂದಲೇ ನಿರ್ಮಿತವಾಗಿವೆ. ಇಂಥ ವಿವಿಧತೆಯಿಂದಲೇ ಅವು ಅಭಿವೃದ್ಧಿ ಹೊಂದುತ್ತಿವೆ' ಎಂದು ಹೇಳಿದರು.

ನಾಗ್ಪುರದ ರಾಜ ಮನೆತನ ಭೋಂಸ್ಲೆ ಕುಟುಂಬ ಕುರಿತು ಪ್ರಸ್ತಾಪಿಸಿದ ಅವರು, 'ಭೋಂಸ್ಲೆ ಕುಟುಂಬವು ಸಂಘದ ಸಂಸ್ಥಾಪಕ ಕೆ.ಬಿ.ಹೆಡಗೇವಾರ್ ಕಾಲದಿಂದಲೂ ಆರ್‌ಎಸ್‌ಎಸ್ ಜೊತೆ ಸಂಪರ್ಕ ಹೊಂದಿದೆ' ಎಂದರು.

'ಛತ್ರಪತಿ ಶಿವಾಜಿ ಮಹಾರಾಜ್‌ರಿಂದ ದಕ್ಷಿಣ ಭಾರತವು ದೌರ್ಜನ್ಯದಿಂದ ಮುಕ್ತವಾಯಿತು. ನಾಗ್ಪುರದ ಭೋಂಸ್ಲೆ ಕುಟುಂಬವು ಉತ್ತರ ಹಾಗೂ ಪೂರ್ವ ಭಾರತವನ್ನು ದೌರ್ಜನ್ಯಗಳಿಂದ ಬಿಡುಗಡೆ ಮಾಡಿತು' ಎಂದರು.

ಸಾಲ ವಸೂಲಿ ಏಜೆಂಟ್ ವಿವರ ನೀಡಲು ಆರ್‌ಬಿಐ ತಾಕೀತು

ಮುಂಬೈ (ಪಿಟಿಐ): ಡಿಜಿಟಲ್ ವೇದಿಕೆಗಳ ಮೂಲಕ ಸಾಲ ವಿತರಣೆ ಮಾಡುವ ಸಂಸ್ಥೆಗಳು, ಗ್ರಾಹಕರು ಸಾಲ ಮರುಪಾವತಿಸಲು ವಿಫಲವಾದರೆ ಸಾಲ ವಸೂಲಿಗೆ ಅವರನ್ನು ಯಾರು ಸಂಪರ್ಕಿಸುತ್ತಾರೆ ಎಂಬ ವಿವರವನ್ನು ಕೊಡಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತಾಕೀತು ಮಾಡಿದೆ.

'ಸಾಲ ವಸೂಲಿಗೆ ತಮ್ಮಿಂದ ಯಾವ ಏಜೆಂಟರನ್ನು ನೇಮಕ ಮಾಡಲಾಗಿದೆ ಎಂಬ ವಿವರವನ್ನು ಗ್ರಾಹಕರಿಗೆ ಕೊಡಬೇಕು. ಹಾಗೆಯೇ, ಸಾಲ ವಸೂಲಿ ಪ್ರಕ್ರಿಯೆ ಆರಂಭಿಸುವ ಮೊದಲು ಅದರ ಮಾಹಿತಿಯನ್ನು ಗ್ರಾಹಕರಿಗೆ ನೀಡಬೇಕು' ಎಂದು ಕೂಡ ಆರ್‌ಬಿಐ ಸ್ಪಷ್ಟಪಡಿಸಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಆರ್‌ಬಿಐ, ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವ ಸಂಸ್ಥೆಗಳು ಪಾಲಿಸಬೇಕಿರುವ ನಿಯಮಗಳನ್ನು ಬಿಗಿಗೊಳಿಸಿತ್ತು. ಸಂಸ್ಥೆಗಳು ವಿಪರೀತ ಪ್ರಮಾಣದಲ್ಲಿ ಬಡ್ಡಿ ಹೇರದಂತೆ ತಡೆಯಲು ಈ ಕ್ರಮ ಕೈಗೊಂಡಿತ್ತು.

ಡಿಜಿಟಲ್ ವೇದಿಕೆಗಳ ಮೂಲಕ ಸಾಲ ನೀಡುವ ಪ್ರಕ್ರಿಯೆಗೆ ಸಂಬಂಧಿಸಿದ ಮಾರ್ಗಸೂಚಿಗಳ ಕುರಿತಾಗಿ ಕೆಲವು ವಿವರಗಳನ್ನು (ಎಫ್‌ಎಕ್ಯು) ಆರ್‌ಬಿಐ ಮಂಗಳವಾರ ಬಿಡುಗಡೆ ಮಾಡಿದೆ. 'ಸಾಲ ಮರುಪಾವತಿಯಲ್ಲಿ ಗ್ರಾಹಕ ವಿಫಲನಾದರೆ, ಆತನನ್ನು ಸಂಸ್ಥೆಯ ಕಡೆಯಿಂದ ಯಾವ ಏಜೆಂಟ್‌ಗಳು ಸಂಪರ್ಕಿಸುತ್ತಾರೆ ಎಂಬುದರ ವಿವರವನ್ನು ಸಾಲ ಮಂಜೂರು ಮಾಡುವಾಗಲೇ ತಿಳಿಸಬೇಕು' ಎಂದು ಹೇಳಿದೆ.

'ಗ್ರಾಹಕ ಸಾಲವನ್ನು ಮರುಪಾವತಿಸದೆ ಇದ್ದರೆ, ಸಾಲ ವಸೂಲಿ ಹೊಣೆಯನ್ನು ಏಜೆಂಟ್‌ಗೆ ವಹಿಸಿದರೆ, ಆ ಏಜೆಂಟ್‌ನ ವಿವರವನ್ನು ಗ್ರಾಹಕನಿಗೆ ಇ-ಮೇಲ್ ಹಾಗೂ ಎಸ್‌ಎಂಎಸ್ ಮೂಲಕ ತಿಳಿಸಬೇಕು. ಗ್ರಾಹಕನನ್ನು ಏಜೆಂಟ್ ಸಂಪರ್ಕಿಸುವ ಮೊದಲೇ ಈ ವಿವರಗಳನ್ನು ಕಳಿಸಿರಬೇಕು' ಎಂದು ಆರ್‌ಬಿಐ ಹೇಳಿದೆ.

ಚೆಕ್ ಬೌನ್ಸ್‌ಗೆ ಹಾಗೂ ಸಾಲ ಪಡೆದವರ ಉಳಿತಾಯ ಖಾತೆಯಿಂದ ಸಾಲದ ಖಾತೆಗೆ ಹಣ ವರ್ಗಾವಣೆ ಆಗದಿದ್ದರೆ ವಿಧಿಸುವ ಶುಲ್ಕವನ್ನು ಗ್ರಾಹಕರಿಗೆ ಪ್ರತ್ಯೇಕವಾಗಿ ತಿಳಿಸಬೇಕು ಎಂದು ಸೂಚಿಸಿದೆ.

ನಗರದಲ್ಲಿ 262 ಡೆಂಗಿ ಪ್ರಕರಣ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಕಂಡಿದ್ದರೆ, ಡೆಂಗಿ ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿದೆ. ಈ ವರ್ಷ ಈಗಾಗಲೇ 262 ಮಂದಿಯಲ್ಲಿ ಡೆಂಗಿ ಜ್ವರ ದೃಢಪಟ್ಟಿದೆ.

ಕಳೆದ ವರ್ಷ ಈ ವೇಳೆ ನಗರದಲ್ಲಿ 2,842 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿತ್ತು. ಅವರಲ್ಲಿ 74 ಮಂದಿಯಲ್ಲಿ ದೃಢಪಟ್ಟಿತ್ತು. ಈ ವರ್ಷ 1,567 ಮಂದಿಯಲ್ಲಿ ಡೆಂಗಿ ಶಂಕೆ ವ್ಯಕ್ತವಾಗಿದ್ದು, 512 ಮಂದಿಯ ರಕ್ತದ ಮಾದರಿಯನ್ನು ತಪಾಸಣೆ ಮಾಡಲಾಗಿದೆ. ಬೆಂಗಳೂರು ಹೊರತುಪಡಿಸಿ, ಉಳಿದ ಜಿಲ್ಲೆಗಳಿಂದ 367 ಪ್ರಕರಣಗಳು ವರದಿಯಾಗಿವೆ.

ಕಳೆದ ವರ್ಷ ಈ ವೇಳೆ ನಗರದಲ್ಲಿ ಚಿಕೂನ್‌ಗುನ್ಯಾ ಪ್ರಕರಣ ವರದಿಯಾಗಿರಲಿಲ್ಲ. ಈ ವರ್ಷ 415 ಶಂಕಿತರನ್ನು ಗುರುತಿಸಲಾಗಿದ್ದು, 75 ಮಂದಿಯ ರಕ್ತದ ಮಾದರಿಗಳನ್ನು ತಪಾಸಣೆ ಮಾಡಲಾಗಿದೆ. ಅವರಲ್ಲಿ 34 ಜನರಲ್ಲಿ ಚಿಕೂನ್‌ಗುನ್ಯಾ ದೃಢಪಟ್ಟಿದೆ.

ನಗರದಲ್ಲಿ ಕಳೆದ ಒಂದು ವಾರದ ಅವಧಿಯಲ್ಲಿ ದೃಢಪಟ್ಟ ಕೋವಿಡ್ ಪ್ರಕರಣಗಳನ್ನು ಬಿಬಿಎಂಪಿ ವಾರ್ ರೂಮ್ ವಿಶ್ಲೇಷಿಸಿದೆ. 96 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸಕ್ರಿಯ ಪ್ರಕರಣ 74 ಇವೆ.

ಸುದ್ದಿ 2 ನಿಮಿಷ

ಐದನೇ ಮಹಡಿಯಿಂದ ಬಿದ್ದು ಯುವಕ ಸಾವು

ಬೆಂಗಳೂರು: ವಿದ್ಯಾರಣ್ಯಪುರದ ಎನ್‌ಟಿಐ ಜಂಕ್ಷನ್ ಬಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಐದನೇ ಮಹಡಿಯಿಂದ ಬಿದ್ದು ಸುಚಿರ್ (21) ಎಂಬುವರು ಮೃತಪಟ್ಟಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

'ಸ್ಥಳೀಯ ನಿವಾಸಿ ಸುಚಿರ್, ತಾಯಿ ಜೊತೆ ವಾಸವಿದ್ದರು. ತಂದೆ, ಅಮೆರಿಕದಲ್ಲಿ ಉದ್ಯೋಗದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಸ್ಥಳೀಯ ಕಾಲೇಜೊಂದರ ವಿದ್ಯಾರ್ಥಿ ಸುಚಿರ್, ಹಲವು ದಿನಗಳಿಂದ ಮಾನಸಿಕವಾಗಿ ನೊಂದಿದ್ದರು. ಒಂದು ಬಾರಿ ಆತ್ಮಹತ್ಯೆಗೂ ಯತ್ನಿಸಿದ್ದರೆಂದು ಗೊತ್ತಾಗಿದೆ.'

'ಮಂಗಳವಾರ ಬೆಳಿಗ್ಗೆ ಐದನೇ ಮಹಡಿಗೆ ಹೋಗಿದ್ದ ಸುಚಿರ್, ಅಲ್ಲಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ತಾಯಿ ಹಾಗೂ ಪ್ರತ್ಯಕ್ಷದರ್ಶಿ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪವಿತ್ರ ಗಂಗಾಜಲ ವಿತರಣೆ

ನಗರದ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹರಿದ್ವಾರದಿಂದ ತಂದ ಗಂಗಾಜಲ ವಿತರಣಾ ಕಾರ್ಯಕ್ರಮಕ್ಕೆ ಆನಂದ ಗುರೂಜಿ, ಮಾಜಿ ಸಚಿವ ಮಾಲೂರು ಕೃಷ್ಣಯ್ಯ ಶೆಟ್ಟಿ ಚಾಲನೆ ನೀಡಿದರು.

ಬೆಂಗಳೂರು: ಮಹಾ ಶಿವರಾತ್ರಿ ಹಬ್ಬದ ಅಂಗವಾಗಿ ಆನಂದ ಗುರೂಜಿ ಮತ್ತು ಮಾಜಿ ಸಚಿವ ಮಾಲೂರು ಕೃಷ್ಣಯ್ಯ ಶೆಟ್ಟಿ ಪವಿತ್ರ ಗಂಗಾಜಲ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಗರದ ಪುರಾತನ ಕಾಶಿ ವಿಶ್ವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹರಿದ್ವಾರದಿಂದ ತಂದ ಗಂಗಾಜಲದಿಂದ ಅಭಿಷೇಕ ಮಾಡಿ, ವಿಶೇಷ ಪೂಜೆ ಸಲ್ಲಿಸಿ, ಭಕ್ತರಿಗೆ ವಿತರಣೆ ಮಾಡಲಾಯಿತು. ನಂತರ ತುಳಸಿತೋಟ ಶ್ರೀಕೃಷ್ಣ ದೇವಸ್ಥಾನದಿಂದ 30 ವಾಹನಗಳ ಮೂಲಕ ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ರವಾನೆ ಮಾಡಲಾಯಿತು.

ಮಾಜಿ ಸಚಿವ ಮಾಲೂರು ಕೃಷ್ಣಯ್ಯ ಶೆಟ್ಟಿ ಮಾತನಾಡಿ, 'ನಾನು ಮುಜರಾಯಿ ಸಚಿವನಾಗಿದ್ದಾಗ ರಾಜ್ಯದ ಜನತೆಗೆ ಕೊಟ್ಟ ಮಾತಿನ ಪ್ರಕಾರ ಪ್ರತಿವರ್ಷದಂತೆ ಈ ವರ್ಷವೂ ಮಹಾ ಶಿವರಾತ್ರಿ ಹಬ್ಬದಂದು ರಾಜ್ಯದಲ್ಲಿರುವ 3000 ಪುರಾತನ ಶಿವನ ದೇವಾಲಯಗಳಿಗೆ ಗಂಗಾಜಲವನ್ನು ಸರಬರಾಜು ಮಾಡುತ್ತಿದ್ದೇನೆ. ಶಿವನ ಮೂರ್ತಿಗಳಿಗೆ ಅಭಿಷೇಕ ಮತ್ತು ತೀರ್ಥ ವಿನಿಯೋಗ ಮಾಡುವ ಉದ್ದೇಶದಿಂದ 30 ಜಿಲ್ಲೆಗಳಿಗೆ ತಲುಪಿಸುತ್ತಿದ್ದೇನೆ' ಎಂದರು. ಆನಂದ ಗುರೂಜಿ ಮಾತನಾಡಿದರು.

Surprise For BANGALORE CITIZENS Public Give Good Response and His Heavy Demand So sale extended For 4 DAYS.

Venue Only @ HOTEL AJANTHA, M.G. ROAD, BANGALORE

BRANDED READYMADE GARMENTS BIGGEST EVER DISCOUNT SALE

Like Ladies, Gents & Kids and Bed Sheets

"For Direct Retail Customers" Up to 80% Heavy Disscount

ಸೂಚನೆ: ಬ್ರಾಡೆಂಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕ್ಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ಬೆಂಗಳೂರಿನ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 4 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

ಹೋಟೆಲ್ ಅಜಂತಾ, ಎಂ.ಜಿ. ರಸ್ತೆ, ಬೆಂಗಳೂರು

Sincere Request : To the customers to maintain silence during shopping

10,000 ವಿವಿಧ ಪ್ರಕಾರದ ಜೇಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ — Just Rs.150/- to 350/-

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್:
INDIGO NATION DANIEL HECHTER BARE IZOD HIGHLANDER INDIAN TERRAIN SCULLERS
MRP: 1499/- to 4999/-
Choose 30,000 Verities Jeans Pant, Cotton Pant, Formal, Shirts, T-Shirts, Lower Etc.
Just Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತಿಸ್ ಮೇಳಾ, ಕುರ್ತಿ ಮತ್ತು ಪಾಶ್ಚಿಮಾತ್ಯ ಬಟ್ಟೆಗಳು
MRP : Up to 3999/-
BIBA abof ONLY JACK&JONES VERO MODA
Choose 20,000 Plazo, Pant, Kurti & Western Outfits ectc
Just Rs. 200/-, 400/-, 600/-

BIG Offer Rajasthani Royal Printed Bedsheets, Pillow cover, Sofa cover etc

Ladies & Gents Under Garments Just Rs. 60/- to 125/- Time: 10am to 10pm

ಆಫರ್ 4 ದಿನಗಳು ಮಾತ್ರ 15 ಬುಧ, 16 ಗುರು, 17 ಶುಕ್ರ & 18 ಶನಿ ಫೆಬ್ರವರಿ 2023

Venue: Only @ HOTEL AJANTHA # 22A, M.G.Road, Near Trinity Metro Station, Bangalore-560001

ಹೋಟೆಲ್ ಅಜಂತಾ # 22ಎ, ಎಂ.ಜಿ.ರಸ್ತೆ, ಟ್ರಿನಿಟಿ ಮೆಟ್ರೋ ಸ್ಟೇಷನ್, ಬೆಂಗಳೂರು-560001

This offer till stock lasts *Condition apply

FREE PARKING ENTRANCE All Major Debit / Credit Cards. Google Pay, PhonePe Accepted

ಅಡಿಕೆ ಆಮದು: ಕನಿಷ್ಠ ದರ ₹351ಕ್ಕೆ ಹೆಚ್ಚಳ

ನವದೆಹಲಿ: ಅಡಿಕೆಯ ಆಮದಿನ ಕನಿಷ್ಠ ದರವನ್ನು ಪ್ರತಿ ಕೆ.ಜಿ.ಗೆ ₹251ಯಿಂದ ₹351ಕ್ಕೆ ಹೆಚ್ಚಿಸಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮಂಗಳವಾರ ಆದೇಶ ಹೊರಡಿಸಿದೆ.

‘ಇನ್ನು ಮುಂದೆ ಯಾವುದೇ ದೇಶದಿಂದ ಅಡಿಕೆ ಆಮದು ಮಾಡಿದರೂ ಕೆ.ಜಿ.ಗೆ ₹351 ಕ್ಕಿಂತ ಹೆಚ್ಚಿನ ಬೆಲೆ ಕೊಡಬೇಕಾಗಿದೆ’ ಎಂದು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಆದೇಶ ಹೊರಡಿಸಿರುವ ಕುರಿತು ತಮ್ಮ ಫೇಸ್ ಬುಕ್ ಪುಟದಲ್ಲಿ ಬರೆದುಕೊಂಡಿರುವ ಶೋಭಾ, ‘ವಿದೇಶದಿಂದ ಕಡಿಮೆ ಬೆಲೆಗೆ ಆಮದಾಗುತ್ತಿರುವ ಅಡಿಕೆ ರಾಜ್ಯದ ಬೆಳೆಗಾರರನ್ನು ಕಂಗೆಡಿಸಿತ್ತು. ನಮ್ಮ ರಾಜ್ಯದ ಅಡಿಕೆಯನ್ನು ಕಡಿಮೆ ಬೆಲೆಗೆ ಆಮದು ಆಗುತ್ತಿದ್ದ ಅಡಿಕೆ ತೀವ್ರವಾಗಿ ಬಾಧಿಸಿತ್ತು. ಹೊರದೇಶಗಳಿಂದ ಆಮದಾಗುವ ಅಡಿಕೆಯ ದರವನ್ನು ಹೆಚ್ಚಿಸಿದ್ದರಿಂದ ಬೆಳೆಗಾರರಿಗೆ ನ್ಯಾಯ ಸಿಗಲಿದೆ. ಇನ್ನು ಮುಂದೆ ಅಡಿಕೆ ಆಮದು ಮಾಡುವಾಗ ಪ್ರತಿ ಕೆ.ಜಿ.ಗೆ ₹351 ಕ್ಕಿಂತ ಹೆಚ್ಚಿನ ದರ ಕೊಡಬೇಕಾಗುತ್ತದೆ’ ಎಂದು ತಿಳಿಸಿದ್ದಾರೆ.

ಲೋಕಸಭೆಯಲ್ಲಿ ವಿಷಯ ಪ್ರಸ್ತಾಪಿಸಿದ್ದ ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ, ‘ದೇಶೀಯ ಮಾರುಕಟ್ಟೆಯಲ್ಲಿ ಅಡಿಕೆ ಬೆಲೆ ಕುಸಿತವನ್ನು ತಡೆಯಲು ಅಡಿಕೆಗೆ ಹೆಚ್ಚಿನ ಆಮದು ಸುಂಕವನ್ನು ವಿಧಿಸಬೇಕು’ ಎಂದು ಒತ್ತಾಯಿಸಿದ್ದರು.

ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸದಸ್ಯ ಜಿ.ಸಿ.ಚಂದ್ರಶೇಖರ್ ಧ್ವನಿ ಎತ್ತಿದ್ದರು.

ತ್ಯಾಜ್ಯ ಘಟಕ ಮುಚ್ಚಲು ಅನಿರ್ದಿಷ್ಟ ಧರಣಿ

ಬೆಂಗಳೂರು: ಲಿಂಗಧೀರನಹಳ್ಳಿ ತ್ಯಾಜ್ಯ ಸಂಸ್ಕರಣೆ ಘಟಕದಿಂದ ಬನಶಂಕರಿ 6ನೇ ಹಂತದ ಸುತ್ತಮುತ್ತಲಿನ ನಾಗರಿಕರಿಗೆ ತೊಂದರೆಯಾಗುತ್ತಿದ್ದು, ಅದನ್ನು ಮುಚ್ಚಬೇಕು ಎಂದು ಆಗ್ರಹಿಸಿ ಬನಶಂಕರಿ 6ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮಂಗಳವಾರದಿಂದ ಅನಿರ್ದಿಷ್ಟ ಧರಣಿ ಆರಂಭಿಸಿದ್ದಾರೆ. ‘ಘಟಕ ಮುಚ್ಚಿ ಎಂಬ ಬೇಡಿಕೆ ಸಲ್ಲಿಸಿ 8 ತಿಂಗಳಿಂದ ಹೋರಾಟ ಮಾಡುತ್ತಿದ್ದೇವೆ. ಸಚಿವ ಎಸ್.ಟಿ. ಸೋಮಶೇಖರ್ ಅವರೂ ಈ ಬಗ್ಗೆ ಬಿಬಿಎಂಪಿಗೆ ಸೂಚನೆ ನೀಡಿದ್ದಾರೆ. ಮುಖ್ಯಮಂತ್ರಿಯವರು ಫೆ.9ರಂದು ಘಟಕ ಮುಚ್ಚಲು ಕ್ರಮ ಕೈಗೊಳ್ಳಿ ಎಂದು ಸೂಚಿಸಿದ್ದಾರೆ. ಇಷ್ಟಾದರೂ ಬಿಬಿಎಂಪಿ ಮುಖ್ಯ ಆಯುಕ್ತರು ಕ್ರಮ ಕೈಗೊಂಡಿಲ್ಲ. ಹೀಗಾಗಿ ಹೋರಾಟ ಆರಂಭಿಸಿದ್ದೇವೆ’ ಎಂದು ನಿವಾಸಿಗಳು ತಿಳಿಸಿದರು.

‘ಇಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದರಿಂದ ಸುತ್ತಲಿನ ನಾಲ್ಕೈದು ಕಿ.ಮೀ ವಾಸನೆ ಬೀರುತ್ತಿದೆ. ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ವಾಸಿಸಲು ಸಾಧ್ಯವಾಗುತ್ತಿಲ್ಲ. ಭೂಮಿ ಹಾಗೂ ಜಲತೊರೆಗಳಿಗೆ ಕಲ್ಮಶವೂ ಸೇರುತ್ತಿದೆ’ ಎಂದು ದೂರಿದರು.

₹84 ಸಾವಿರ ಕೋಟಿ ಮೌಲ್ಯದ ರಕ್ಷಣಾ ಸರಕು ತಯಾರಿಕೆಗೆ ಕಾರ್ಯಾದೇಶ

ಬೆಂಗಳೂರು: ‘ವಿವಿಧ ವೈಮಾನಿಕ ಮತ್ತು ರಕ್ಷಣಾ ಸರಕುಗಳನ್ನು ತಯಾರಿಸಲು ₹84 ಸಾವಿರ ಕೋಟಿ ಮೊತ್ತದ ಕಾರ್ಯಾದೇಶವನ್ನು ಪಡೆಯಲಾಗಿದೆ’ ಎಂದು ಎಚ್ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತ್‌ಕೃಷ್ಣನ್ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಇನ್ನೂ 50 ಸಾವಿರ ಕೋಟಿ ಮೊತ್ತದ ರಕ್ಷಣಾ ಸಾಮಗ್ರಿಗಳನ್ನು ತಯಾರಿಸುವಂತೆ ಕಾರ್ಯಾದೇಶ ಸಹ ಮುಂದಿನ ದಿನಗಳಲ್ಲಿ ದೊರೆಯಲಿದೆ. ಆತ್ಮನಿರ್ಭರದಿಂದ ಎಚ್ಎಎಲ್‌ಗೆ ಅತಿ ಹೆಚ್ಚು ಪ್ರಯೋಜನವಾಗುತ್ತಿದೆ. ನಮ್ಮ ಉತ್ಪನ್ನಗಳನ್ನು ತಯಾರಿಸುವಲ್ಲಿ ಸ್ವಾವಲಂಬನೆ ಸಾಧಿಸುತ್ತಿದ್ದೇವೆ. ಖಾಸಗಿ ಸಹಭಾಗಿತ್ವವು ಸಹ ಎಚ್ಎಎಲ್‌ಗೆ ಮತ್ತಷ್ಟು ಬಲ ನೀಡಲಿದೆ.’ ಎಂದು ತಿಳಿಸಿದರು.

‘ಅರ್ಜೆಂಟಿನಾ ಮತ್ತು ಈಜಿಪ್ಟ್ ರಾಷ್ಟ್ರಗಳು ಎಚ್ಎಎಲ್ ನಿರ್ಮಿತ ಲಘು ಯುದ್ಧ ವಿಮಾನ ತೇಜಸ್ ಖರೀದಿಸಲು ಆಸಕ್ತಿ ತೋರಿವೆ. ಅರ್ಜೆಂಟಿನಾಗೆ 15 ಮತ್ತು ಈಜಿಪ್ಟ್‌ಗೆ 22 ಯುದ್ಧ ವಿಮಾನಗಳ ಅಗತ್ಯವಿದೆ’ ಎಂದು ವಿವರಿಸಿದರು.



Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) - 122050, India; **Website:** www.honda2wheelersindia.com; **Customer Care:** customercare@honda2wheelersindia.com

*ಹಣಕಾಸು ಸ್ಕೀಮ್ ಕೊಡುಗೆಗಳು ಆಯ್ದ ಆದ್ಯತೆಯ ಹಣಕಾಸು ಪಾಲುದಾರರ ಮೂಲಕ ಅವರ ಏಕಪಕ್ಷೀಯ ವಿವೇಚನೆಗೆ ಒಳಪಟ್ಟು ಗ್ರಾಹಕರ ಆಯ್ದ ಪ್ರೊಫೈಲ್ಗಳಿಗೆ ಆಯ್ದ ಮಾಡೆಲ್ಗಳ ಮೇಲೆ ಲಭ್ಯವಿದೆ ಮತ್ತು ಹಣಕಾಸು ಕಂಪನಿ ನೀತಿಗೆ ಒಳಪಟ್ಟಿರುತ್ತವೆ. ಹಣಕಾಸು ಸ್ಕೀಮ್ ಗಳು 2023 ಫೆಬ್ರವರಿ 28ರ ವರೆಗೆ ಮಾತ್ರ ಆಯ್ದ ಡೀಲರ್ಶಿಪ್‌ಗಳಲ್ಲಿ ಲಭ್ಯವಿದೆ ಮತ್ತು ಮೊದಲೇ ನೋಟಿಸ್ ನೀಡದೇ ಯಾವುದೇ ಸಮಯದಲ್ಲಿ ಹಿಂಪಡೆಯಬಹುದಾಗಿದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. ಚಿತ್ರದಲ್ಲಿ ಕಾಣಿಸುವ ಉತ್ಪನ್ನವು ಮಾರುಕಟ್ಟೆಯಲ್ಲಿ ಲಭ್ಯವಿರುವ ನಿಜವಾದ ಉತ್ಪನ್ನಕ್ಕಿಂತ ವಿಭಿನ್ನವಾಗಿರಬಹುದು. ಉತ್ಪನ್ನದಲ್ಲಿ ತೋರಿಸಿದ ಆಕ್ಸೆಸರಿಗಳು ಪ್ರಮಾಣಿತ ಸಲಕರಣೆಯ ಭಾಗವಿಲ್ಲ.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397; Haiku Honda - **DOMLUR:** 49656565, 9342432156; **INDIRANAGAR:** 9343796289, 080 - 41133737; Dhruvdesh Honda - **MEKHRI CIRCLE:** 40500700, 9972237311; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 26574467/68, 9844502222; **BANSHANKARI:** 9844502444, 8722279009; **R.R. NAGAR:** 9964388333, 9071174800; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 49499299, 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 080-45510000, 7259030091; **MARTHAHALLI:** 080-67166600, 7259030093; **VARTHUR RD:** 8105597877, 9686573013; **GUNJUR:** 9606450642, 9606450641; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 08153-266606, 9900092115; **MULBAGAL:** 9008941044; **SRINIVASAPUR:** 8495956515; Namma Honda - **CHIKKABALLAPUR:** 9606060610, 9900071211; **CHINTAMANI:** 9606060620, 9606060690; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; SLN Honda - **SHIDLAGATTA:** 9986160961; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030; **KANAKAPURA:** 9606036053; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 9731414444.

For Bulk/Institutional enquiries, please write us at: institutionalsales@honda2wheelersindia.com

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

‘ಆಶಾ’ ಗೌರವಧನ ಹೆಚ್ಚಳ: ಭರವಸೆ

ಪ್ರಜಾವಾಣಿ ವಾರ್ತೆ

ಸಮಾವೇಶದಲ್ಲಿ ಡಾ.ಕೆ. ಸುಧಾಕರ್ ಅವರು ಆಶಾ ಕಾರ್ಯಕರ್ತೆಯರ ಅಹವಾಲುಗಳನ್ನು ಆಲಿಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕೋವಿಡ್ ಸಮಯದಲ್ಲಿ ಎಲ್ಲರೂ ಮನೆಯಿಂದ ಕೆಲಸ ನಿರ್ವಹಿಸಿದರೆ, ಆಶಾ ಕಾರ್ಯಕರ್ತೆಯರು ಕೋವಿಡ್ ನಿರ್ವಹಣೆಗೆ ಬೀದಿಗಿಳಿದು ಶ್ರಮಿಸಿದರು. ಅವರ ಗೌರವಧನ ಹೆಚ್ಚಳಕ್ಕೆ ಕ್ರಮವಹಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಆಶಾ ಕಾರ್ಯಕರ್ತೆಯರ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಿದ ಅವರು, ಸಂಘದ ಮನವಿ ಸ್ವೀಕರಿಸಿ ಮಾತನಾಡಿದರು. ‘ಈ ಬಾರಿಯ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರ ಗೌರವಧನವನ್ನು ₹ 2 ಸಾವಿರ ಹೆಚ್ಚಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಈಗಾಗಲೇ ಮನವಿ ಮಾಡಿದ್ದೇನೆ. ಈ ಬಗ್ಗೆ ಅವರೊಂದಿಗೆ ಮತ್ತೊಮ್ಮೆ ಚರ್ಚೆ ನಡೆಸುತ್ತೇನೆ. ನಮ್ಮ ಸರ್ಕಾರವು ಆಶಾ ಕಾರ್ಯಕರ್ತೆಯರ ಗೌರವಧನವನ್ನು ಎರಡು ಬಾರಿ ತಲಾ ₹ 1 ಸಾವಿರ ಹೆಚ್ಚಿಸಿದೆ. ಬಜೆಟ್‌ನಲ್ಲಿಯೇ ಗೌರವಧನ ಹೆಚ್ಚಳಕ್ಕೆ ಪ್ರಯತ್ನಿಸುತ್ತೇನೆ’ ಎಂದು ಹೇಳಿದರು.

‘ಆಶಾ ಕಾರ್ಯಕರ್ತೆಯರಿಗೆ ₹ 5 ಕೋಟಿ ಕ್ಷೇಮಾಭಿವೃದ್ಧಿ ನಿಧಿ ಇರಿಸಿ, ಅವರ ಆರೋಗ್ಯ ರಕ್ಷಣೆಗೆ ನೀಡಬೇಕೆಂಬ ಬೇಡಿಕೆಯನ್ನೂ ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು. ಸಂಘದ ಎಲ್ಲಾ ನ್ಯಾಯಸಮ್ಮತ ಬೇಡಿಕೆಗಳನ್ನು ಈಡೇರಿಸಲು ಕ್ರಮ ವಹಿಸಲಾಗುವುದು’ ಎಂದು ಭರವಸೆ ನೀಡಿದರು.

₹ 12 ಸಾವಿರ ನಿಗದಿಪಡಿಸಿ: ಸಂಘದ ರಾಜ್ಯ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ, ‘ಆಶಾ ಕಾರ್ಯಕರ್ತೆಯರಿಗೆ ರಾಜ್ಯ ಸರ್ಕಾರದ ನಿಶ್ಚಿತ ಗೌರವಧನ ಹಾಗೂ ಪ್ರೋತ್ಸಾಹಧನಗಳನ್ನು ಒಟ್ಟುಗೂಡಿಸಿ, ಮಾಸಿಕ ₹ 12 ಸಾವಿರ ಪಾವತಿಸಲು ಕ್ರಮ ಕೈಗೊಳ್ಳಬೇಕು. ಆರ್‌ಸಿಎಚ್ (ಆಶಾ ನಿಧಿ) ಪೋರ್ಟಲ್ ಸಮಸ್ಯೆಯಿಂದ ಕಾರ್ಯಕರ್ತೆಯರು ಅನುಭವಿಸಿದ ಆರ್ಥಿಕ ನಷ್ಟವನ್ನು ಹಿಂಬಾಕಿ ರೂಪದಲ್ಲಿ ನೀಡಬೇಕು’ ಎಂದು ಆಗ್ರಹಿಸಿದರು.

‘ಕೋವಿಡ್ ಸೇವೆಯ ಪ್ರೋತ್ಸಾಹಧನ ಪಾವತಿಸಬೇಕು, ನಗರ ಪ್ರದೇಶದ ಕಾರ್ಯಕರ್ತೆಯರ ಹೆಚ್ಚುವರಿ ಕೆಲಸ ಹಾಗೂ ಜೀವನ ನಿರ್ವಹಣಾ ವೆಚ್ಚವನ್ನು ಪರಿಗಣಿಸಿ, ಗೌರವಧನ ಹೆಚ್ಚಿಸಬೇಕು. ಸೇವಾ ನಿವೃತ್ತಿ ಅಥವಾ ಸೇವಾ ಅವಧಿಯಲ್ಲಿ ಸ್ವಯಂ ನಿವೃತ್ತಿ ಪಡೆಯುವವರಿಗೆ ಇಡುಗಂಟನ್ನು ₹ 20 ಸಾವಿರದಿಂದ ₹ 3 ಲಕ್ಷಕ್ಕೆ ಹೆಚ್ಚಳ ಮಾಡಬೇಕು’ ಎಂದು ಒತ್ತಾಯಿಸಿದರು.

ಸಂಘದ ರಾಜ್ಯಾಧ್ಯಕ್ಷ ಕೆ. ಸೋಮಶೇಖರ್ ಯಾದಗಿರಿ, ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ, ಎಐಯುಟಿಯುಸಿ ರಾಜ್ಯಾಧ್ಯಕ್ಷ ಕೆ.ಸೋಮಶೇಖರ್ ಇದ್ದರು.

ಲೋಕಾರ್ಪಣೆಯಾಗದ ವೀರಗಲ್ಲು

ಪ್ರಜಾವಾಣಿ ವಾರ್ತೆ

ವೀರಗಲ್ಲು ಲೋಕಾರ್ಪಣೆ ಸಮಾರಂಭ ರದ್ದುಗೊಳಿಸಿರುವುದಕ್ಕೆ ಮಾಜಿ ಸೈನಿಕರು ಅಧಿಕಾರಿಗಳ ಜತೆಗೆ ವಾಗ್ವಾದ ನಡೆಸಿದರು. – ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದಲ್ಲಿ ಮಂಗಳವಾರ ನಿಗದಿಯಾಗಿದ್ದ ಏಕಶಿಲಾ ವೀರಗಲ್ಲು ಲೋಕಾರ್ಪಣೆ ಸಮಾರಂಭವು ರಕ್ಷಣಾ ಇಲಾಖೆ ಸೂಚನೆ ಮೇರೆಗೆ ರದ್ದುಗೊಂಡಿತು.

ಇಂದಿರಾಗಾಂಧಿ ಸಂಗೀತ ಕಾರಂಜಿ ಪಾರ್ಕ್‌ನ ರಾಷ್ಟ್ರೀಯ ಸೈನಿಕ ಸ್ಮಾರಕದಲ್ಲಿ ಏಕಶಿಲಾ ವೀರಗಲ್ಲು ತಲೆಯೆತ್ತಿದೆ. ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಸಮಾರಂಭದಲ್ಲಿ ಭಾಗವಹಿಸಬೇಕಾಗಿತ್ತು. ಮುಖ್ಯಮಂತ್ರಿ ಅವರ ಕಾರ್ಯಕಲಾಪದಲ್ಲಿಯೂ ಪೂರ್ವ ನಿಗದಿಯಾಗಿತ್ತು. ಆದರೆ, ಕೊನೆಯ ಕ್ಷಣದಲ್ಲಿ ಈ ಕಾರ್ಯಕ್ರಮವನ್ನು ರದ್ದುಪಡಿಸಿ, ಮಾರ್ಚ್ ತಿಂಗಳಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಹುತಾತ್ಮ ಯೋಧರ ಕುಟುಂಬದ ಸದಸ್ಯರು, ಮಾಜಿ ಸೈನಿಕರು ಸೇರಿ ಹಲವರು ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದಿದ್ದರು. ಕಾರ್ಯಕ್ರಮವನ್ನು ರದ್ದುಗೊಳಿಸಿರುವುದಾಗಿ ಅಧಿಕಾರಿಗಳು ತಿಳಿಸುತ್ತಿದ್ದಂತೆ ನೆರೆದಿದ್ದ ಮಾಜಿ ಸೈನಿಕರು ಅಸಮಾಧಾನ ವ್ಯಕ್ತಪಡಿಸಿ, ಅಧಿಕಾರಿಗಳ ಜತೆಗೆ ವಾಗ್ವಾದ ನಡೆಸಿದರು.

ವ್ಯಾಪಾರಿ ಕೊಲೆ: ಇಬ್ಬರು ವೈದ್ಯರ ಸೆರೆ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ನಗರದಲ್ಲಿ ಈಚೆಗೆ ನಡೆದ ವ್ಯಾಪಾರಿಯೊಬ್ಬರ ಕಾಣೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ. ಪ್ರಕರಣ ಭೇದಿಸಿರುವ ಪೊಲೀಸರು ಮಂಗಳವಾರ ಇಬ್ಬರು ವೈದ್ಯರನ್ನು ಬಂಧಿಸಿದ್ದಾರೆ.

ವ್ಯಾಪಾರಿಯನ್ನು ಕೊಲೆ ಮಾಡಲಾಗಿದೆ ಎಂಬುದನ್ನೂ ಖಚಿತ ಪಡಿಸಿದ್ದಾರೆ.

ರಾಜು ಝುಂವರ

ನಗರದ ತಜ್ಞ ವೈದ್ಯ ಸಚಿನ್ ಶಂಕರ ಶಿರಗಾಂವಿ ಮತ್ತು ಹುಕ್ಕೇರಿ ತಾಲ್ಲೂಕಿನ ಶಿರಢ್ಾಣದ ಆಯುರ್ವೇದ ವೈದ್ಯ ಶಿವಾನಂದ ಕಾಡಗೌಡ ಪಾಟೀಲ ಬಂಧಿತರು. ನಗರದ ಹಿಲ್ ಗಾರ್ಡನ್‌ನ ನಿವಾಸಿ, ಮಾರುಕಟ್ಟೆ ಯಲ್ಲಿ ಸಗಟು ವ್ಯಾಪಾರ ಮಾಡಿ ಕೊಂಡಿದ್ದ ರಾಜು ಝುಂವರ (53) ಕೊಲೆಯಾದವರು.

ಇಬ್ಬರೂ ಆರೋಪಿಗಳನ್ನು ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನಗರದಲ್ಲಿ ಇಂದು

ಆಗಮಿಕರ ಪ್ರೋತ್ಸಾಹ ಸಮಿತಿಯ ಸುವರ್ಣ ಮಹೋತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿ, ಉದ್ಘಾಟನೆ: ವಿಶ್ವೇಶ್ವರ ಹೆಗಡೆ ಕಾಗೇರಿ, ಅತಿಥಿಗಳು: ಶಶಿಕಲಾ ಜೊಲ್ಲೆ, ದಿನೇಶ್ ಗುಂಡೂರಾವ್, ರೋಹಿಣಿ ಸಿಂಧೂರಿ, ಆರ್. ಲಕ್ಷ್ಮೀಕಾಂತ, ಅಧ್ಯಕ್ಷತೆ: ಎಸ್.ಆರ್. ಶೇಷಾದ್ರಿಭಟ್ಟ, ಆಯೋಜನೆ: ಕರ್ನಾಟಕ ರಾಜ್ಯ ಆಗಮಿಕರ ಪ್ರೋತ್ಸಾಹ ಸಮಿತಿ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬೆಳಿಗ್ಗೆ 9.45

‘ಸ್ಟೋನಾ-2023’ ಕಲ್ಲು ಉದ್ಯಮ ಮೇಳದ ಉದ್ಘಾಟನೆ: ಹಾಲಪ್ಪ ಆಚಾರ್, ಇಶ್ವಿಂದರ್ ಸಿಂಗ್, ಮನೋಜ್ ಕುಮಾರ್ ಸಿಂಗ್, ಎಸ್. ಕೃಷ್ಣಪ್ರಸಾದ್, ಆಯೋಜನೆ: ಭಾರತೀಯ ಗ್ರಾನೈಟ್ ಮತ್ತು ಕಲ್ಲು ಉದ್ಯಮಗಳ ಒಕ್ಕೂಟ (ಎಫ್‌ಐಜಿಎಸ್‌ಐ), ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ಬೆಳಿಗ್ಗೆ 10.30



ಸಂತ ಸೇವಾಲಾಲ್ ಜಯಂತಿ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಅತಿಥಿಗಳು: ಸಿದ್ದರಾಮಯ್ಯ, ಆರ್. ಅಶೋಕ, ವಿ. ಸೋಮಣ್ಣ, ಡಾ.ಸಿ.ಎನ್. ಅಶ್ವತ್ಥನಾರಾಯಣ, ಬಿ.ಎ. ಬಸವರಾಜ, ಎಸ್.ಟಿ. ಸೋಮಶೇಖರ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಬೆಳಿಗ್ಗೆ 11

ಡಿ.ವಿ.ಜಿ ನೆನಪು ಹಾಗೂ ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮ: ಸನ್ಮಾನಿಸುವವರು: ಬಸವರಾಜ ಹೊರಟ್ಟಿ, ಸನ್ಮಾನ: ರುದ್ರಣ್ಣ ಹರ್ತಿಕೋಟೆ, ಪದ್ಮರಾಜ ದಂಡಾವತಿ, ವೈ.ಗ. ಜಗದೀಶ್, ಅಜಿತ್ ಹನುಮಕ್ಕನವರ್, ರಾಧಾಕೃಷ್ಣ ಭಡ್ತಿ, ನಿರಂಜನ ಕಗ್ಗೆರೆ, ಡಿ.ಜಿ. ಮಮತಾ, ಕೆ.ಎಸ್. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಕಂದಾಯ ಭವನ, ಮಧ್ಯಾಹ್ನ 12.30

‘ಶ್ರೀಕೃಷ್ಣ ಸಂಧಾನ’ ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ವಿ.ಎನ್. ಅಶ್ವತ್ಥ್, ಆಯೋಜನೆ: ಭಾವತರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 3.30

ಪ್ರವಚನ ವಾಹಿನಿ ಕಾರ್ಯಕ್ರಮ: ‘ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ ಹಾಗೂ ಪ್ರವಚನ’ ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

‘ಶ್ರೀಮದ್ಭಾಗವತ’ ಪ್ರವಚನ: ಖೇಡಾ ಪ್ರಮೋದಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರನಗರ, ಸಂಜೆ 7

ಖೇಡಾ ಪ್ರಮೋದಾಚಾರ್

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

MANASA EDUCATIONAL TRUST (R)
M.S.CONVENT
Sultanpalya, R.T.Nagar, Bangalore-32
REQUIRED TEACHING STAFF
*Nursery Teachers- Qualified, experienced, Young, enthusiastic, fluent in English
*Primary and High School- Graduates with B.Ed/ D.Ed for All Subject.
Walk-in interview
Send your updated resume to:
manasa.edu.trust@gmail.com
080-23651001
9844456549

Wanted Experienced Lady Teachers with excellent communication skills in English
1. Lower Primary
Graduate with B.Ed./D.Ed.
2. Higher Primary
Graduate with B.Ed. to teach English, Hindi, Maths, Science and Social Science.
3. High School
Post Graduate with B.Ed. to teach English, Science and Social Science.
4. Librarian
Graduate/Post-Graduate in Library Science with a passion for reading.
Walk-in Interview
Thursday, 16th Feb and Friday, 17th Feb 2023
Between: 3 p.m. - 4 p.m.
Or Email your resume to info@florence.edu.in for an appointment.
Florence High School
3rd Block, 3rd Stage, Basaveshwaranagar, Bengaluru-560 079
Tel : 080-23236160/41536693

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers to handle Nursery, Primary, Higher Primary, High School and Music Teacher for the Academic year 2023-24 STATE & ICSE. Qualification :NTT, B.A/B.Sc.,B.Ed.,M.A/M.Sc.,M.Ed. Only English medium candidates need apply.

"ST. MARTIN'S HIGH SCHOOL" 7th Cross Behind Anjan Theatre, Magadi Road, Bengaluru-23. Requires: Head Mistress, Academic Advisers, Accountant/ Clerk/ Qualified And Trained Teachers for Nursery/ Primary and High School to teach all the subjects including Computer, PE, Drawing. PREFERABLY LADIES. Contact- Office- Phone: 080- 23101999, 9591990199

KUVEMPU ADARSHA PUBLIC SCHOOL Requires Trained Teachers, for Nursery, Primary and High School to Teach Languages, Core subjects & Physical Education. Apply before 18-02-2023 Interested candidates mail resume to kapsmmedutrust@gmail.com Contact:7760337806 / 9972095137 Address: 214, Muneshwara temple road, RMV 2nd stage, Nagashettyhalli, Bangalore-94

ADMISSION OPEN 2023-24 ST.PHILOMENA'S ENGLISH SCHOOL. Vidyaranyapura, Bangalore. Affiliated to ICSE GRADE I-X Invites applications from well qualified experienced, trained. Graduates /Post- Graduates TEACHERS for all subjects. Please apply immediately or WALK IN for an INTERVIEW Email: st.philomena.vrp@gmail.com Contact: 080-40919242, 9945761253

CAMLIN ENGLISH SCHOOL, 6th 'C' main 4th Cross Vijayanagar IInd Stage Hampinagar Bangalore-560104 REQUIRES qualified TEACHERS for all Subjects from NURSERY to 10th STANDARD. Also P.E., Computer Teacher, Drawing, Security Guard, Attender, Aaya, School Bus Driver. WALK-IN INTERVIEW Or Apply your Resume to: PRINCIPAL. Contact: 080-23301363, 080-29551463

MOUNT CARMEL PU COLLEGE #58, Palace Road, Bengaluru-52. mountcarmelpucollege@yahoo.co.in Phone-22370404 requires LECTURERS-POST GRADUATES with B.Ed in ENGLISH, PHYSICS, CHEMISTRY, MATHEMATICS, COMPUTER SCIENCE, STATISTICS, ECONOMICS and COMMERCE Apply before: 20/02/2023

WANTED POST Graduate lady teacher for High school, Higher primary & Nursery, English Medium M.Sc,BEd, BSc,BEd(PCM,CBZ),MA,BEd,BA BEd.for English,Social,Kannada,Hindi with Minimum 5years Experience, Fluent in English.Freshers and Retd can also apply Walk for the interview with Originals on 16-2-23,17-2-23&22-2-23 between 10am to 12.30pm Apply to The Principal,Secretary PT Jawaharlal Nehru Memorial Highschool.623/1,4th main,9th cross,Chamarajpet, Bangalore-18 PH - 9632315392

A REPUTED ICSE SCHOOL in North Bangalore requires an experienced (minimum 5years) FEMALE PRINCIPAL from the academic year 2023-24. Send ur resume to: faculty22recruit@gmail.com

WANTED TEACHERS Primary All Subjects & Computer Science Contact Royal English School Rajajinagar: 9611878492/ 8861406060

WANTED TEACHERS with BA/ MA (Eng/ SS) B.Sc, M.Sc with B.Ed B.Lib/ M.Lib, & NTT Teachers. Salary upto 28000/- Contact: Sidhartha International School, Peenya Dasarahalli. 9620100046/ 9964670328

TEACHERS FOR Subjects from One to Tenth standards best teachers (Reputed CBSE School). Attend interview with originals. Attractive Salary. 9449835744/ 9535601743

General

REQUIRED
1. Accountant - B.Com Graduate with HR Knowledge. 5-7 years of Tally experience
2. System Engineer Experience of 2 years in desktop networking.
3. Electrical Maintenance Technician (ITI) with experience of 5 years.
SADASHIVANAGAR CLUB
Apply to Hon.Secretary
#21, 15th Cross, Sadashivanagar, B'lore- 80
Ph : 080-23614158,23618263
secy.ssnclub@gmail.com
Whatsapp No: 9148975091

WANTED SECURITY Guards Providing Free Food and Accommodation Contact: MGP Institutions, Kanmanikai, Mysore Road, Bangalore.Call: 9886236341.

Required for immediate placement an experienced Lady Service Co-ordinator for a reputed company in Millers Road, Bangalore. Candidate should have good communication skills and should have experience in handling SERVICE RELATED ISSUES. Candidates staying in & around Shivajinagar / Vasanthnagar / RT Nagar preferred . Salary RS.24,000 /- PM.
Email Your Biodata : resume@multeeproe.com

WANTED STENOGRAPHER having Competence in indipendent Correspondence, Admin, Computer for SSI at Electronic City Phase-2, 9341018766. jobsbangaloreac@gmail.com

WANTED 1) Computer Operator 2)Office Boy. for Developer Office Dollars Colony RMV 2nd Stage, 9035883017

Situation Required

mtG
India's Fastest Growing Educational Publisher based in NCR
WE'RE HIRING!
OVER 100 POSITIONS PAN INDIA
SALES PROFESSIONALS
For Competition & School Books
* Regional Managers
Min Exp: 7-10 yrs
* Area Sales Managers
Min Exp: 5 yrs
* Sr. Sales Exec. / Business Developers
Min Exp: 3-5 yrs
Role involves extensive travelling own conveyance is a must.
Salary at par with the industry.
e-mail resume at:
hr@mtg.in
Plot No. 99, Sector 44, Gurugram, Haryana

Multiple Vacancy

ಬೆಂಗಳೂರು ಮೂಲದ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಡೆವಲಪರ್ ಸಂಸ್ಥೆಗೆ ಬೇಕಾಗಿದ್ದಾರೆ
ರಿಯಲ್ ಎಸ್ಟೇಟ್ ಲೀಗಲ್ ಮ್ಯಾನೇಜರ್
– ತಾಲ್ಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಗ್ರಾಮ ಪಂಚಾಯಿತಿ, ವಕೀಲರ ಕಚೇರಿ ಮುಂತಾದ ಇಲಾಖೆಗಳಲ್ಲಿ ಜ್ಞಾನ ಮತ್ತು ಅನುಭವ
– ಬಿಲ್ಡರ್‌ಗಳು/ ಡೆವಲಪರ್‌ಗಳು, ಸ್ಟ್ಯಾಂಪ್ ವೆಂಡರ್‌ಗಳು ಅಥವಾ ವಕೀಲರೊಂದಿಗೆ ಕಾರ್ಯ ನಿರ್ವಹಿಸಿರುವ ಹಿಂದಿನ ಅನುಭವವು ಹೆಚ್ಚುವರಿ ಅರ್ಹತೆಯಾಗಲಿದೆ.
ಸರ್ವೆ ಇಂಜಿನಿಯರ್
– ಭೂಮಿ ಟಿಪ್ಪಣಿ, ಲೇಔಟ್ ಪ್ಲಾನ್‌ಗಳು ಇತ್ಯಾದಿಗಳ ಕೆಲಸ ನಿರ್ವಹಿಸಲು ಆಟೋಕ್ಯಾಡ್‌ನಲ್ಲಿ ಜ್ಞಾನ ಮತ್ತು ಅನುಭವ
– ಸರ್ವೆ ದಾಖಲೆಗಳನ್ನು ವಿಶ್ಲೇಷಿಸಲು ಸರ್ವೆ ಇಲಾಖೆಯ ಜ್ಞಾನ ಹೊಂದಿರಬೇಕು.
– ಟೋಟಲ್ ಸ್ಟೇಷನ್ ಉಪಕರಣ ಬಳಕೆಯ ಅನುಭವವು ಹೆಚ್ಚುವರಿ ಅರ್ಹತೆಯಾಗಲಿದೆ ಆದರೆ ಕಡ್ಡಾಯವಲ್ಲ.
– ಲ್ಯಾಂಡ್ ಡೆವಲಪರ್‌ಗಳು ಅಥವಾ ಸರ್ವೆಯರ್‌ಗಳೊಂದಿಗೆ ಕೆಲಸ ಮಾಡಿರುವ ಅನುಭವವು ಹೆಚ್ಚುವರಿ ಅರ್ಹತೆಯಾಗಿದೆ.
ಸಂಪರ್ಕಿಸಿ 6362386190

OPPORTUNITY of Career & Income for Retired Officials, Bankers, Teachers, CAs, Professionals, Homemakers. Call: 8095301555

Edify SCHOOL THINKBEYOND — Managed by VVN Trust
ಕನಕಪುರ ಮುಖ್ಯ ರಸ್ತೆ, ಬೆಂಗಳೂರು
91 7022895987
hr@edifyschoolbengaluru.com
ಈಗಲೇ ಅರ್ಜಿ ಸಲ್ಲಿಸಿ
2023–24 ಶೈಕ್ಷಣಿಕ ವರ್ಷಕ್ಕೆ ಈ ಕೆಳಗಿನ ಸಿಬ್ಬಂದಿಯ ಅಗತ್ಯವಿದೆ
• ಕ್ಯಾಂಪಸ್ ಮೇಲ್ವಿಚಾರಕರು
• ಲ್ಯಾಬ್ ಸಹಾಯಕರು
ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಪ್ರಯೋಗಾಲಯಗಳಿಗಾಗಿ
• ಗ್ರಂಥಪಾಲಕರು
* ಕಾನೂನಿನ ಪ್ರಕಾರ ಸಿಬಿಎಸ್‌ಇ ಪ್ರಕಾರ ಸಂಬಂಧಿತ ಅರ್ಹತೆ
* ಕನಿಷ್ಠ ಎರಡು ವರ್ಷಗಳ ಅನುಭವ

OFFICE EXECUTIVE/ MARKETING EXECUTIVE, A Public Limited Company situated at Bangalore seeking young and efficient candidates for immediate appointment. Graduate with proficiency in English, Hindi, Kannada and Tamil is preferred. Contact : accounts@indobloom.net

Engg/ Production Technical

WANTED FRESH or Experienced 'FIELD SURVEYORS' & 'SURVEYOR ASSISTANTS' with well versed in total station operation for a Reputed Surveying Company. Good Salary. Guideline Surveying Consultants, No. 272, 14th Cross, Domlur Layout, Bangalore-71. Ph: 25353877, 25357205. guidelinesurveys@gmail.com

WANTED MECHANICAL ENGINEERS & DIPLOMA HOLDERS as CNC MACHINE SHOP TRAINEE for an Aircraft Component Manufacturing Industry in Bangalore. Training period 1 year, Stipend 6 months- Rs.14000, balance period Rs.16000 per month. Mail your resume to mail@ayyappa-cnc.com Phone: 080-26585172

Marketing & Sales

WANTED
SENIOR SALES MANAGER
- FEMALE -
For award-winning luxury senior commune.
Good communication skills, with experience.
Age 40 or above.
Send your resume to admin@sreeseniorhomes.in
Sree Senior Homes
S-615, Manipal Centre, Dickenson Road (off M G Road), Bengaluru
CONTACT: 99000 31257

WANTED SALES Manager/ Executive/ TeamLeader Throughout Karnataka Fresher/ Experience Male Candidates Needed Mini Qualif: any Degree Two Wheeler Must Interested can Send Their Resume tobangalore@agsar.net: 9900091609

Wanted

WANTED CHOREOGRAPHER/ DANCE TEACHER to train Film/ T.V. Stars. Contact: 9341288049/ 7349730607

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

RENTAL PROPERTIES

Accommodation Available

Commercial

COMMERCIAL SPACE Available- Malleshwaram, Guttahalli Main Road. Ready to occupy 1600x2 floors, Lift, Fully furnished, Semi furnished as per Vasthu. Contact: 9916349550, 9663383127.

REAL ESTATE BUYING

Sites

Nagarabhavi

WANTED VISHWESHWARAIYA NGEF/ ITI Layout 30X40, 30X50, 40x60, Site/ House. Immediate Registration. Contact: 9035334418 9141326819

REAL ESTATE SELLING

Agricultural Land Converted

Magadi Road

15 GUNTA DC CONVERSION LAND SALE in Magadi Road Tavarekere Kurubarahalli Pipeline Road Attached: 9343911234

CAUTION NOTICE
Readers are advised to make appropriate thorough enquiries before acting upon any advertisement.
This newspaper does not vouch or subscribe to the claims and representations made by advertisers.
GM-Advertisement

Flat

Vishweshwariah Layout

3 BHK semi furnished flat available for sale at Vishweshwaraiah layout Bangalore. Contact: 9242299427

BUSINESS

Business Offers

Finance

NRI'S INVESTMENT And Finance Available On Low Interest Against Properties, Land& Building,Sites,Flats, Converted& Agriculture Lands Call:7204995189

WE ARRANGE Finance from Financial institutions such as Term /Project loan, working capital Housing loan and Mortgage loan. contact S.Narayan, Retd Banker. 8971377299/ 8971132289.

Business to Business

Business

SIDDAGANGA_SREE SHIVAKUMARA SWAMIJI VIDYAPEETHA TRUST #1,1st Stage,2nd Phase Chandra-Layout Bengaluru 560072 Phone: 080-23397600 Mail: sskvptrust.2001@gmail.com Invites`quotation-for Housekeeping and Security Agency. Interested may`Visit the Trust Office to obtain prescribed format and submit the sealed quotation along with profile on or before 21/02/2023.

PERSONAL

Change of Name

I, HARISH BABU THIMMPPASETTY SATYANARAYANA, residing at D. No. 5, Ground Floor, Shri Hari Apartment, Chamarajapuram, Mysuru-570005 have changed my name from HARISH BABU THIMMAPPASETTY SATYANARAYANA to HAREESH BABU THIMMAPPASETTY SATYANARAYANA vide affidavit sworn before Notary C.R. SEETHARAM, Mysuru dated 04.02.2023.

CONNECT

Mrigashira Kolkata
Presents an Exclusive
DESIGNER BOUTIQUE FESTIVAL
Sarees & Kurties from Bengal
at SAFINA PLAZA
84/85 infantry road Bangalore-01
Main art Gallery
From 13-02-2023 to 19-02-2023
Time: 11 am - 9 pm

EXCELLENT BUSINESS OPPORTUNITY
For Retired, Housewives, CA's, Doctors, MLM, Real Estate Consultant, Lecturers/ Professor's, Banking Financial & Services, Chit Fund/ Mutual Fund Agents. VRS, NRI'S Self Employed, Business Owners, Professionals etc.
India's Most trusted, Leading 153 Year old MNC Company offers service oriented DISTRIBUTION with Zero investment
Address: No. 220/A, 2nd Floor, BMW Building, Whitefield Road, Opp to Prestige Shantiniketan, Bangalore-560 048
Ph : 8152022200 / 9246502812

I, ROOPA NETRAKAR W/o.late.Prakash Netrakar, R/a.#63/64 HaridasNagar, Gattigere Extension, Rajarajeshwari Nagar, Bengaluru- 560098, have`changed`my name`to CHANDRIKA M SIRSIKAR`vide affidavit`dated 09-02-2023 Before Notary K.V.Prema Kumari.Bangalore

I, YATISH KUMAR VYAS and father of LIKHIT VYAS previously called LIKHIT, R/at No.407, JR Layout, Chelekere, Kalyan Nagar, Bangalore-560043, Karnataka, have changed my minor son's name from LIKHIT to LIKHIT VYAS vide affidavit dated: 13.02.2023 before notary A.S.NARAYANA REDDY, Bangalore

I USHA HARISH KRISHNAPPA Residing at D.No. 5, Ground Floor, Shri Hari Apartment, Chamarajapuram, Mysuru-570005 have Changed my name from USHA HARISH KRISHNAPPA to USHAHAREESH KRISHNAPPA vide affidavit sworn beforem Notary C R Seetharam, Mysuru dated 04.02.2023.

I, SHANTHI, residing at No. 10, D.Street, Baidarahalli, Benson Town, Bangalore-46, have changed my name to MARGRATE, vide affidavit dated 03.02.2023 before Notary Gangaraju B.N., Bangalore. Henceforth I shall be known as MARGRATE only.

I, SUBHASCHANDRA PATIL, Residing at Vijayapura-586103, have chaqnged my name as SUBHASCHANDRA S PATIL, vide affidavit dated 14/02/2023 before Notary P.C.Ramaiah, Bengaluru

I, GEETHA R/at No. 20/2 Govindappa Road Ramaswamypalya, Maruthi Seva Nagarpost Bengaluru-560033 have changed my name to ARCOT GNANAOLI GEETHA vide affidavit dated: 13/2/2023 Before Notary K.C. Shashikala Bangalore.

CHANGE OF NAME
I, ELIZABETH. K @ ELIZABETH RANI @ ELIZABETH RANI. K residing at No. 89, Near St. Rocks Church, Meginapalya, Chelekere, Bangalore-560043, declare that all these names pertain to me and henceforth I shall be known as ELIZABETH RANI. K vide affidavit dated 04.02.2023 before Notary Y.R. Chandrasekar, Bangalore

I, CHANDANA HARISH Residing at D. No. 5, Ground Floor, Shri Hari Apartment, Chamarajapuram, Mysuru-570005 have Changed my name from CHANDANA HARISH to CHANDANA MYSURU HAREESH vide Affidavit sworn before Notary C R Seetharam, Mysuru dated 04.02.2023.

CHANGE OF NAME
I, Feroza Banu Sheikh Iqbal Ahmed W/o Sheikh Iqbal Ahmed aged 56 years. Residing at No.27/A, College Road, Shanthi Nagar, Hospet, Vijayanagara, Karnataka-583201 have changed my name to FEROZA BANU vide affidavit dated 13.02.2023 before Notary Hegde Ganapati Venkataraman, Bengaluru.

I, SHAFATH HUSSAIN PEER R/o. #1728, BCCHS Layout, Vajarahalli, Bengaluru-560109 have changed my name as SHAFATH HUSSAIN PEER HUSSAIN CHITRADURGA Vide affidavit dated 13/02/2023 before Notary Jayappa. A, Bangalore

I, SHAJI P. CHACKO, residing at Panachickal House, Koppam, Nellyadi PO, Dakshina Kannada-574229 have changed my name to Fr. MATHEWS PANACHICKAL vide affidavit dated 14-02-2023 before Notary Y.R.Chandrasekar, Bangalore

MALIKASAB, FATHER/O, 14840333M, SEP/SS (ER), RASULASAB MUDDEBIHAL, Vill- Aski, Sindgi, Bijapur, Karnataka changed name MALIKASAB to MALIKASAB MUDDEBIHAL, 11/02/2023 Notary K.V. Mani, Bangalore

Lost

LOST
I, Chandregowda S/o Kalegowda, No.59, 5th Cross, Saraswati Nagar, Mahadevapura, Bangalore - 560048, have lost the Original Sale Deed, Document No. 9405/95-96 Dated: 24.01.1996. In this regard I have lodged missing complaint with the Lost Article Report Reference No.0437964/2023 dated: 07.01.23. If found please contact: 9880027572

DH DECCAN HERALD — ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB | LOST | REAL ESTATE | NAME CHANGE | EDU | HEALTH | MATRI | AUTO | ASTRO | NOTICE | TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ಮನೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹1.5 ಲಕ್ಷ ಲಂಚ ಪಡೆದ ಆರೋಪ

ಬೆಸ್ಕಾಂ ಎ.ಇ, ಮಧ್ಯವರ್ತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯೊಂದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹1.5 ಲಕ್ಷ ಲಂಚ ಪಡೆದ ಬೆಸ್ಕಾಂನ ಅಗರ ಉಪ ವಿಭಾಗದ (ಎಸ್–20) ಸಹಾಯಕ ಎಂಜಿನಿಯರ್ ಸಂತೋಷ್ ಮತ್ತು ಅಧಿಕಾರಿಯ ಪರವಾಗಿ ಲಂಚದ ಹಣ ಪಡೆದುಕೊಂಡ ಮಧ್ಯವರ್ತಿ ಮಲ್ಲಿಕಾರ್ಜುನ್ ಎಂಬುವವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಎಚ್ಎಸ್ಆರ್ ಬಡಾವಣೆಯಲ್ಲಿ ಸುಜಿತ್ ಕುಮಾರ್ ಮತ್ತು ಇತರರು ಹೊಸ ಮನೆ ನಿರ್ಮಿಸಿದ್ದಾರೆ. ಮನೆಗೆ ವಿದ್ಯುತ್ ಸಂಪರ್ಕ ಪಡೆಯಲು ಗುತ್ತಿಗೆದಾರ ಪುಟ್ಟೇನಹಳ್ಳಿಯ ವೇಣುಗೋಪಾಲ್ ಎಸ್. ಎಂಬುವವರ ಮೂಲಕ ಅರ್ಜಿ ಸಲ್ಲಿಸಿದ್ದರು. ಅರ್ಜಿಯನ್ನು ಮಾನ್ಯ ಮಾಡಿ, ವಿದ್ಯುತ್ ಸಂಪರ್ಕಕ್ಕೆ ಮಂಜೂರಾತಿ ನೀಡಲು ₹2.30 ಲಕ್ಷ ಲಂಚ ನೀಡುವಂತೆ ಆನಂದ್ ಬೇಡಿಕೆ ಇಟ್ಟಿದ್ದರು.

ಪುನಃ ಗುತ್ತಿಗೆದಾರರು ಭೇಟಿಮಾಡಿ ಚೌಕಾಸಿ ನಡೆಸಿದ್ದರು. ₹1.5 ಲಕ್ಷ ಲಂಚ ನೀಡಿದರೆ ಮಂಜೂರಾತಿ ನೀಡುವುದಾಗಿ ಆರೋಪಿ ತಿಳಿಸಿದ್ದರು. ಈ ಕುರಿತು ಗುತ್ತಿಗೆದಾರರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ದೂರು ನೀಡಿದ್ದರು. ಅಧಿಕಾರಿಯ ಸೂಚನೆಯಂತೆ ದೂರುದಾರರು ಮಂಗಳವಾರ ಬೆಸ್ಕಾಂ ಕಚೇರಿಯಲ್ಲಿ ಭೇಟಿಮಾಡಿದ್ದರು. ಲಂಚದ ಹಣವನ್ನು ಅಲ್ಲಿದ್ದ ಮಧ್ಯವರ್ತಿ ಮಲ್ಲಿಕಾರ್ಜುನ್‌ಗೆ ನೀಡುವಂತೆ ಆನಂದ್ ಸೂಚಿಸಿದ್ದರು. ಅದರಂತೆ ದೂರುದಾರರು ಹಣ ನೀಡಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸರು ಇಬ್ಬರನ್ನೂ ಬಂಧಿಸಿದರು.

‘ಆರೋಪಿಗಳನ್ನು ಬಂಧಿಸಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ. ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿದ್ದ ಅರ್ಜಿ ಹಾಗೂ ಅದಕ್ಕೆ ಸಂಬಂಧಿಸಿದ ಕಡತವನ್ನೂ ವಶಕ್ಕೆ ಪಡೆಯಲಾಗಿದೆ. ಪ್ರಾಥಮಿಕ ವಿಚಾರಣೆ ಬಳಿಕ ಆರೋಪಿಗಳನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಲಾಗುವುದು’ ಎಂದು ಲೋಕಾಯುಕ್ತದ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಲೋಕಾಯುಕ್ತದ ಬೆಂಗಳೂರು ನಗರ ಎಸ್‌ಪಿ ಕೆ.ವಿ. ಅಶೋಕ್ ನೇತೃತ್ವದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ಆನಂದ್

ಮಲ್ಲಿಕಾರ್ಜುನ್

ಇಂದು ಅಹವಾಲು ಸ್ವೀಕಾರ

ಬಿಡಿಎ ಕೇಂದ್ರ ಕಚೇರಿಯ ಆವರಣದಲ್ಲಿ ಲೋಕಾಯುಕ್ತ ಪೊಲೀಸ್ ವಿಭಾಗದಿಂದ ಬುಧವಾರ ಮಧ್ಯಾಹ್ನ 3 ಗಂಟೆಯಿಂದ ಸಾರ್ವಜನಿಕ ಕುಂದುಕೊರತೆ ಹಾಗೂ ಅಹವಾಲು ಸ್ವೀಕಾರ ಸಭೆ ಆಯೋಜಿಸಲಾಗಿದೆ.

ಸಾರ್ವಜನಿಕರು ದೂರು ಅಥವಾ ಅಹವಾಲುಗಳಿದ್ದರೆ ಸಂಸ್ಥೆಯ ಪೊಲೀಸರನ್ನು ಭೇಟಿಮಾಡಿ ಸಲ್ಲಿಸಬಹುದು ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ಬಿಡಿಎ ಕೇಂದ್ರ ಕಚೇರಿ ಮೇಲೆ ಶುಕ್ರವಾರ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು, ಶೋಧ ನಡೆಸಿದ್ದರು. ಇಬ್ಬರು ದಲ್ಲಾಳಿಗಳನ್ನು ಬಂಧಿಸಿದ್ದರು.

ಬೆಸ್ಕಾಂ: ಡಿಜಿಟಲ್ ಮೀಟರ್‌ನಿಂದ ವಿದ್ಯುತ್ ಬಿಲ್ ಮೊತ್ತ ಹೆಚ್ಚಳ!

• ಸ್ನೇಹಾ ರಮೇಶ್

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ವಿದ್ಯುತ್ ಹಳೆ ಮೀಟರ್‌ಗಳನ್ನು ಕೆಲವು ತಿಂಗಳ ಹಿಂದೆ ಡಿಜಿಟಲ್ ಮೀಟರ್‌ಗಳಿಗೆ ಬದಲಿಸಿಕೊಂಡ ಗ್ರಾಹಕರಿಗೆ ಬಿಲ್ ಮೊತ್ತದಲ್ಲಿ ಗಮನಾರ್ಹ ಬದಲಾವಣೆಯಾಗಿದೆ. ಶೇ 30ರವರೆಗೂ ಬಿಲ್ ಮೊತ್ತ ಹೆಚ್ಚಾಗಿದೆ.

‘ನಮ್ಮ ಮನೆಯಲ್ಲಿ ಮೂರು ಜನರಿದ್ದೇವೆ. ಬೆಳಿಗ್ಗೆ ಹೊರಟರೆ ಸಂಜೆಯೇ ಬರುವುದು. ವಿದ್ಯುತ್ ಬಳಕೆ ಕಡಿಮೆ. ಡಿಜಿಟಲ್ ಮೀಟರ್ ಅಳವಡಿಸಿಕೊಳ್ಳುವ ಮೊದಲು ₹500ರಿಂದ ₹600 ಮೊತ್ತದ ಬಿಲ್ ಬರುತ್ತಿತ್ತು. ಆದರೆ, ಇದೀಗ ₹800ರಿಂದ ₹900 ಬರುತ್ತಿದೆ’ ಎಂದು ರಾಜಾಜಿನಗರದ ನಿವಾಸಿ ಸುರೇಶ್ ಹೇಳಿದರು.

ಹೊಸದಾಗಿ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಿಕೊಂಡಿರುವ ನಗರದ ಹಲವಾರು ಗ್ರಾಹಕರು ಇದೇ ರೀತಿಯ ಮಾತುಗಳನ್ನು ಹೇಳುತ್ತಿದ್ದಾರೆ. ಬೆಸ್ಕಾಂನ ಮೂಲಗಳ ಪ್ರಕಾರ, 70 ಸಾವಿರದಿಂದ 80 ಸಾವಿರ ದೂರುಗಳು ಆರು ತಿಂಗಳಿಂದೀಚೆಗೆ ನೋಂದಣಿಯಾಗಿವೆ.

‘ಮೀಟರ್‌ಗಳ ಪರಿವರ್ತನೆ ಪ್ರಕ್ರಿಯೆ ಆರಂಭವಾದ ನಂತರದ ದಿನಗಳಲ್ಲಿ ದೂರುಗಳ ಸಂಖ್ಯೆ ಸತತವಾಗಿ ಹೆಚ್ಚಾಗುತ್ತಿವೆ. ಮೀಟರ್ ಬದಲಿಸಿರುವವರಲ್ಲಿ ಶೇ 10ರಷ್ಟು ಗ್ರಾಹಕರು ದೂರು ನೀಡಿದ್ದಾರೆ’ ಎಂದರು.

ಬೆಸ್ಕಾಂ ನಗರದಲ್ಲಿ ಈವರೆಗೆ ಬಹುತೇಕ 10 ಲಕ್ಷ ಎಲೆಕ್ಟ್ರೋಮೆಕ್ಯಾನಿಕಲ್ ಮೀಟರ್‌ಗಳನ್ನು ಡಿಜಿಟಲ್ ಎಲೆಕ್ಟ್ರೋಸ್ಟ್ಯಾಟಿಕ್ ಮೀಟರ್‌ಗಳಿಗೆ ಬದಲಿಸಿದೆ. ಇನ್ನೂ 7 ಲಕ್ಷ ಮೀಟರ್‌ಗಳನ್ನು ಬದಲಿಸುವ ಪ್ರಕ್ರಿಯೆ ನಡೆಯುತ್ತದೆ.

‘ಡಿಜಿಟಲ್ ಮೀಟರ್‌ಗಳು ನಿಖರವಾದ ಮಾಪನವನ್ನು ನೀಡುತ್ತವೆ. ಕೆಲವು ಗ್ರಾಹಕರ ವಿದ್ಯುತ್ ಬಿಲ್ ಮೊತ್ತ ಹೆಚ್ಚಾಗಿರಬಹುದು. ಈ ಹಿಂದೆ ಮಾಪನವಾಗದ ಒಂದು ನಿಮಿಷದ ಬಳಕೆಯನ್ನೂ ಡಿಜಿಟಲ್ ಮೀಟರ್‌ಗಳು ದಾಖಲಿಸುತ್ತವೆ. ಹೀಗಾಗಿ, ಶೇ 5ರಿಂದ 10ರಷ್ಟು ಮೊತ್ತ ಹೆಚ್ಚಾಗಿರಬಹುದು’ ಎಂದು ಬೆಸ್ಕಾಂ ಅಧಿಕಾರಿಯೊಬ್ಬರು ತಿಳಿಸಿದರು.

‘ಡಿಜಿಟಲ್ ಮೀಟರ್ 3 ಕೆ.ಡಬ್ಲ್ಯು (ಕಿಲೊ ವಾಟ್) ಸಾಮರ್ಥ್ಯದಲ್ಲಿರುತ್ತದೆ. ಈ ಹಿಂದೆ ಗ್ರಾಹಕರು 1 ಕೆ.ಡಬ್ಲ್ಯು ಸಾಮರ್ಥ್ಯಕ್ಕೆ ಅನುಮತಿ ಪಡೆದು, ಅದನ್ನು ಬಳಸುವ ಅವಕಾಶ ಹೊಂದಿದ್ದರು. ಹಿಂದಿನ ವರ್ಷಗಳಲ್ಲಿ ಬಳಕೆ ಪ್ರಮಾಣ ಹೆಚ್ಚಾಗುತ್ತಿತ್ತು. ಆದರೂ ಅಧಿಕ ಲೋಡ್ ಬಳಕೆಯ ಪ್ರಮಾಣವನ್ನು ಆಗಿನ ಮೀಟರ್‌ಗಳು ದಾಖಲಿಸುತ್ತಿರಲಿಲ್ಲ. ಉದಾಹರಣೆಗೆ, 1 ಕೆ.ಡಬ್ಲ್ಯುಗೆ ಅನುಮತಿ ಪಡೆದವರು 2.5 ಕೆ.ಡಬ್ಲ್ಯು ಉಪಯೋಗಿಸುತ್ತಿದ್ದರು. ಇದೀಗ ಲೋಡ್ ಬಳಕೆ ನಿಖರವಾಗಿ ದಾಖಲಾಗುತ್ತಿದೆ. ಹೀಗಾಗಿ ಬಿಲ್ ಮೊತ್ತ ಕನಿಷ್ಠ ₹250ರಷ್ಟು ಹೆಚ್ಚಾಗುತ್ತಿದೆ’ ಎಂದು ಮತ್ತೊಬ್ಬ ಅಧಿಕಾರಿ ಸ್ಪಷ್ಟನೆ ನೀಡಿದರು.

‘ಯಾವುದೇ ಮೀಟರ್‌ಗಳನ್ನು ತಪ್ಪು ಮಾಪನ ಮಾಡುತ್ತಿಲ್ಲ. ಹೆಚ್ಚಿನ ಮೊತ್ತ ಬರುತ್ತಿದ್ದರೆ ಗ್ರಾಹಕರು ದೂರು ನೀಡಬಹುದು. ಸಿಬ್ಬಂದಿ ಸ್ಥಳಕ್ಕೆ ಬಂದು ಮೀಟರ್ ಪರಿಶೀಲಿಸುತ್ತಾರೆ. ಈ ಮೀಟರ್‌ಗಳು ಹೇಗೆ ನಿಖರವಾಗಿ ಮಾಪನ ಮಾಡುತ್ತವೆ ಎಂಬುದನ್ನು ಗ್ರಾಹಕರಿಗೆ ತೋರಿಸಲಾಗುತ್ತದೆ’ ಎಂದು ಬೆಸ್ಕಾಂ ಅಧಿಕಾರಿಗಳು ಹೇಳಿದರು.

ಆಹಾರ ಇಲಾಖೆ ಅಧಿಕಾರಿಗೆ ಮೂರು ವರ್ಷ ಜೈಲು

ಬೆಂಗಳೂರು: ಪಡಿತರ ಚೀಟಿ ವಿತರಣೆಯಲ್ಲಿ ಅರ್ಜಿದಾರರಿಂದ ಲಂಚ ಪಡೆಯುತ್ತಿದ್ದ ಅಪರಾಧಕ್ಕಾಗಿ ಆನೇಕಲ್ ತಾಲ್ಲೂಕಿನ ಹಿಂದಿನ ಆಹಾರ ನಿರೀಕ್ಷಕ ಎಚ್.ಎಸ್. ಶಂಕರ್ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯ ಮೂರು ವರ್ಷಗಳ ಜೈಲು ಶಿಕ್ಷೆ ಮತ್ತು ₹ 25,000 ದಂಡ ವಿಧಿಸಿದೆ.

ಅಪರಾಧಿಯು ಆನೇಕಲ್ ತಾಲ್ಲೂಕಿನ ಆಹಾರ ನಿರೀಕ್ಷಕರಾಗಿದ್ದ ಅವಧಿಯಲ್ಲಿ ಪಡಿತರ ಚೀಟಿ ವಿತರಣೆಗೆ ಲಂಚ ಪಡೆಯುತ್ತಿದ್ದ ದೂರುಗಳು ಲೋಕಾಯುಕ್ತ ಪೊಲೀಸರಿಗೆ ಬಂದಿದ್ದವು. 2013ರ ಜೂನ್ 27ರಂದು ಅವರ ಕಚೇರಿ ಮೇಲೆ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದರು. ಶಂಕರ್ ಅವರು ಪಡಿತರ ಚೀಟಿ ಕೋರಿ ಅರ್ಜಿ ಸಲ್ಲಿಸಿದ್ದ ವ್ಯಕ್ತಿಗಳಿಂದ ಹೆಚ್ಚುವರಿ ಹಣ ಸಂಗ್ರಹಿಸುತ್ತಿರುವುದು ಶೋಧದಲ್ಲಿ ಪತ್ತೆಯಾಗಿತ್ತು.

ಒಂದು ವಾರದ ಅವಧಿಯಲ್ಲಿ ಅರ್ಜಿದಾರರಿಂದ ಅಧಿಕಾರಿಯು ₹ 71,610ರಷ್ಟು ಹೆಚ್ಚುವರಿ ಹಣ ಸಂಗ್ರಹಿಸಿರುವುದು ತನಿಖೆಯಲ್ಲಿ ಪತ್ತೆಯಾಗಿತ್ತು. ಡಿವೈಎಸ್‌ಪಿ ವಿಜಯ್ ಕುಮಾರ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಮಂಗಳವಾರ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಿದ ಬೆಂಗಳೂರು ಗ್ರಾಮಾಂತರ ಒಂಬತ್ತನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಸ್. ಶ್ರೀಧರ, ‘ಶಂಕರ್ ವಿರುದ್ಧದ ಆರೋಪ ಸಾಬೀತಾಗಿದೆ’ ಎಂದು ಪ್ರಕಟಿಸಿದರು.

ಅಪರಾಧಿಗೆ ಮೂರು ವರ್ಷ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿ ಆದೇಶ ಹೊರಡಿಸಿದರು. ಲೋಕಾಯುಕ್ತದ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ. ಮಹಾಲಕ್ಷ್ಮಿ ಈ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಪರವಾಗಿ ವಾದ ಮಂಡಿಸಿದ್ದರು.

ಟ್ರ್ಯಾಕ್ಟರ್ ಕದ್ದಿದ್ದ ಇಬ್ಬರ ಬಂಧನ

ಬೆಂಗಳೂರು: ಕೆಂಗೇರಿ ಠಾಣೆ ವ್ಯಾಪ್ತಿಯ ಮನೆಯೊಂದರ ಮುಂದೆ ನಿಲ್ಲಿಸಿದ್ದ ಟ್ರ್ಯಾಕ್ಟರ್ ಕಳ್ಳತನ ಮಾಡಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

‘ಬನ್ನೇರುಘಟ್ಟ ರಸ್ತೆ ಕೋಳಿ ಫಾರಂ ಬಡಾವಣೆಯ ರಮೇಶ್ (33) ಹಾಗೂ ಗಣೇಶ್ (19) ಬಂಧಿತರು. ₹ 6 ಲಕ್ಷ ಮೌಲ್ಯದ ಟ್ರ್ಯಾಕ್ಟರ್ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಮಂಜುನಾಥ್ ಎಂಬುವರು ಮನೆ ಮುಂದೆ ಟ್ರ್ಯಾಕ್ಟರ್ ನಿಲ್ಲಿಸಿದ್ದರು. ಅದನ್ನು ಫೆ. 9ರ ರಾತ್ರಿ ಕಳ್ಳತನ ಮಾಡಲಾಗಿತ್ತು.

ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ (ಎಸ್‌ಸಿ) ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಮುದಾಯಗಳ ಪ್ರತಿನಿಧಿಗಳು – ಪ್ರಜಾವಾಣಿ ಚಿತ್ರ

ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠ ಹಾಗೂ ರಾಷ್ಟ್ರೀಯ ಆರ್ಯ ಈಡಿಗ ಮಹಾಮಂಡಳಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಸಮುದಾಯದವರು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು

ಮುಂದುವರಿದ ಪ್ರತಿಭಟನೆಗಳು

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರವೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಬಿಸಿಯೂಟ ತಯಾರಿ ಸಿಬ್ಬಂದಿ ಪ್ರತಿಭಟನೆ: ‘ನಿವೃತ್ತಿ ವೇಳೆ ಬಿಸಿಯೂಟ ಸಿಬ್ಬಂದಿಗೆ ₹1 ಲಕ್ಷ ಇಡುಗಂಟು ನೀಡಬೇಕು. ಬಿಸಿಯೂಟ ಯೋಜನೆ ಕಾಯಂಗೊಳಿಸಿ, ಕೆಲಸ ನಿರತ ಮಹಿಳೆಯರನ್ನು ಕಾರ್ಮಿಕರೆಂದು ಗುರುತಿಸಬೇಕು’ ಎಂದು ಒತ್ತಾಯಿಸಿ ರಾಜ್ಯ ಅಕ್ಷರ ದಾಸೋಹ ನೌಕರರ ಸಂಘದ ನೇತೃತ್ವದಲ್ಲಿ ಬಿಸಿಯೂಟ ತಯಾರಿಕೆ ಮಹಿಳೆಯರು ನಡೆಸುತ್ತಿರುವ ಪ್ರತಿಭಟನೆ ಎರಡನೇ ದಿನ ಪೂರೈಸಿತು.

ಬ್ರಹ್ಮಶ್ರೀ ನಾರಾಯಣ ಗುರುಶಕ್ತಿಪೀಠ: ‘ಈಡಿಗ, ಬಿಲ್ಲವ, ನಾಮದಾರಿ ಸೇರಿದಂತೆ 26 ಪಂಗಡಗಳ ಬೇಡಿಕೆ ಈಡೇರಿಸಬೇಕು’ ಎಂದು ಆಗ್ರಹಿಸಿ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿಪೀಠ ಹಾಗೂ ರಾಷ್ಟ್ರೀಯ ಆರ್ಯ ಈಡಿಗ ಮಹಾಮಂಡಳಿ ನೇತೃತ್ವದಲ್ಲಿ ಸಮುದಾಯದವರು ಪ್ರತಿಭಟನೆ ನಡೆಸಿದರು.

‘26 ಪಂಗಡಗಳನ್ನು ಪರಿಶಿಷ್ಟ ಪಂಗಡ (ಎಸ್.ಟಿ) ಪಟ್ಟಿಗೆ ಸೇರಿಸಬೇಕು. ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿ ಅಭಿವೃದ್ಧಿ ನಿಗಮ ಮಂಡಳಿ ರಚಿಸಿ, ₹ 500 ಕೋಟಿ ಅನುದಾನ ನೀಡಬೇಕು. ಕುಲಕಸುಬು ಸೇಂದಿ ಇಳಿಸಿ ಮಾರಾಟ ಮಾಡಲು ಅನುಮತಿ ನೀಡಬೇಕು. ಸಿಗಂದೂರು ಚೌಡೇಶ್ವರಿ ದೇವಸ್ಥಾನಕ್ಕೆ 12 ಎಕರೆ ಜಮೀನು ಮಂಜೂರು ಮಾಡಬೇಕು. ಶಿವಮೊಗ್ಗದ ನೂತನ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಹೆಸರಿಡಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ: ‘ಗ್ರಾಮ ಪಂಚಾಯಿತಿಯ ಕರ ವಸೂಲಿಗಾರ, ಗುಮಾಸ್ತ, ಡಾಟಾ ಎಂಟ್ರಿ ಆಪರೇಟರ್ಸ್, ಜವಾನ್, ಸ್ವಚ್ಛತೆಗಾರರು ಹಾಗೂ ಇತರೆ ಸಿಬ್ಬಂದಿಯನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಆದೇಶ ಹೊರಡಿಸಬೇಕು’ ಎಂದು ಒತ್ತಾಯಿಸಿ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ನೇತೃತ್ವದಲ್ಲಿ ಸಿಬ್ಬಂದಿ ಪ್ರತಿಭಟನೆ ಮಾಡಿದರು.

‘ಕನಿಷ್ಠ ₹ 25,000 ವೇತನ ನೀಡಬೇಕು. ₹ 6,000 ಪಿಂಚಣಿ ವ್ಯವಸ್ಥೆ ಜಾರಿಗೊಳಿಸಬೇಕು. ನಿತ್ಯದ ಧ್ವಜಾರೋಹಣ ಭತ್ಯೆಯನ್ನು ₹ 60ಕ್ಕೆ ಏರಿಸಬೇಕು. ಅವೈಜ್ಞಾನಿಕವಾಗಿರುವ ಬಯೋಮೆಟ್ರಿಕ್ ಸಹಿ ಕಡ್ಡಾಯ ವ್ಯವಸ್ಥೆ ಕೈಬಿಡಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ರಾಜ್ಯದ ಹಲವು ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ಮಂಗಳವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

‘ಒಳಮೀಸಲಾತಿ ನೀಡದಿದ್ದರೆ ಬಿಜೆಪಿಗೆ ತಕ್ಕಪಾಠ’

‘ಒಳಮೀಸಲಾತಿ ನೀಡುವಂತೆ ಒತ್ತಾಯಿಸಿ ರಾಯಚೂರಿನಿಂದ ಪಾದಯಾತ್ರೆ ಮೂಲಕ ಬೆಂಗಳೂರಿಗೆ ಬಂದು 2022ರ ಡಿ. 11ರಂದು ಬೃಹತ್ ಸಮಾವೇಶ ನಡೆಸಲಾಗಿತ್ತು. 65 ದಿನ ಧರಣಿ ಕುಳಿತರೂ ಸರ್ಕಾರ ತಿರುಗಿ ನೋಡಿಲ್ಲ. ಮುಂಬರುವ ಚುನಾವಣೆಯಲ್ಲಿ ವಚನ ಭ್ರಷ್ಟ ಬಿಜೆಪಿಯನ್ನು ಸೋಲಿಸಿ ಬುದ್ಧಿ ಕಲಿಸುತ್ತೇವೆ’ ಎಂದು ಒಳಮೀಸಲಾತಿ ಹೋರಾಟ ಸಮಿತಿಯ ಮುಖಂಡ ಅಂಬಣ್ಣ ಅರೋಲಿಕರ್ ಎಚ್ಚರಿಸಿದರು.

‘ನ್ಯಾ. ಎ.ಜೆ. ಸದಾಶಿವ ವರದಿ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು’ ಎಂದು ಆಗ್ರಹಿಸಿ ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ (ಎಸ್.ಸಿ) ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಪದಾಧಿಕಾರಿಗಳು ಹಮ್ಮಿಕೊಂಡಿದ್ದ ಬೃಹತ್ ಪ್ರತಿಭಟನಾ ಸಭೆ ಉದ್ದೇಶಿಸಿ ಅವರು ಮಾತನಾಡಿದರು.

‘ಮೋಚಿ, ಡೋಹರ, ಸಮಗಾರ ತ್ರಿಮತಸ್ಥರಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಅಲೆಮಾರಿ ಬುಡಕಟ್ಟು ಆಯೋಗ ರಚಿಸಬೇಕು. ಮಾದಿಗ ಹಾಗೂ ಛಲವಾದಿಗಳ ಜನಸಂಖ್ಯೆಗೆ ಅನುಗುಣವಾಗಿ ರಾಜಕೀಯ ಪ್ರಾತಿನಿಧ್ಯ ಕಲ್ಪಿಸಬೇಕು. ರಾಜ್ಯದಲ್ಲಿರುವ 43 ಸಾವಿರ ಪೌರಕಾರ್ಮಿಕರು ಹಾಗೂ ವಾಹನ ಚಾಲಕರನ್ನು ಕಾಯಂಗೊಳಿಸಬೇಕು. ಹೋರಾಟಗಾರರ ಮೇಲೆ ದಾಖಲಿಸಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ಬ್ರಿಟನ್ ಸರ್ಕಾರದಿಂದ ಪರಿಸ್ಥಿತಿ ಅವಲೋಕನ’

ಲಂಡನ್ (ಪಿಟಿಐ): ಭಾರತದಲ್ಲಿರುವ ಬಿಬಿಸಿ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ‘ಪರಿಶೀಲನೆ’ ನಡೆಸುತ್ತಿದ್ದು, ಬ್ರಿಟನ್ ಸರ್ಕಾರ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಿದೆ ಎಂದು ಮೂಲಗಳು ಹೇಳಿವೆ.

ಆದರೆ, ಈ ಕುರಿತು ಸರ್ಕಾರದಿಂದ ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆಯಾಗಿಲ್ಲ.

‘ಸಂಸ್ಥೆಯ ದೆಹಲಿ ಹಾಗೂ ಮುಂಬೈ ಕಚೇರಿಗಳಲ್ಲಿನ ನಮ್ಮ ಸಿಬ್ಬಂದಿ ಪರಿಶೀಲನೆಗೆ ಸಹಕಾರ ನೀಡುತ್ತಿದ್ದಾರೆ’ ಎಂದು ಬಿಬಿಸಿ ವಕ್ತಾರರೊಬ್ಬರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ನಮ್ಮ ಸಿಬ್ಬಂದಿ ಬೆಂಬಲಕ್ಕೆ ನಿಂತಿದ್ದೇವೆ. ನಮ್ಮ ಪತ್ರಿಕಾಧರ್ಮವನ್ನು ಮುಂದುವರಿಸುವ ಜೊತೆಗೆ, ಭಾರತದಲ್ಲಿನ ನಮ್ಮ ವೀಕ್ಷಕರಿಗೆ ಸೇವೆ ಮುಂದುವರಿಸಲು ನಾವು ಬದ್ಧರಿದ್ದೇವೆ’ ಎಂದೂ ವಕ್ತಾರ ಹೇಳಿದ್ದಾರೆ.

ಗ್ಲೋಬಲ್ ಹಿಂದೂ ಫೆಡರೇಷನ್ ಎಂಬ ಸಂಘಟನೆಯು ಬಿಬಿಸಿ ಕಚೇರಿಗಳಲ್ಲಿನ ಪರಿಶೀಲನೆಯನ್ನು ಬೆಂಬಲಿಸಿದೆ.

₹ 4.25 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ಕೊಮ್ಮಘಟ್ಟ ಮೈದಾನ ಬಳಿ ಗಾಂಜಾ ಮಾರುತ್ತಿದ್ದ ಆಂಧ್ರಪ್ರದೇಶದ ಭಾರ್ಗವ್ ಕುಮಾರ್ (29) ಎಂಬುವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರೋಪಿಯಿಂದ ₹4.25 ಲಕ್ಷ ಮೌಲ್ಯದ 9 ಕೆ.ಜಿ 920 ಗ್ರಾಂ ಗಾಂಜಾ ಹಾಗೂ ₹1,200 ನಗದು ಜಪ್ತಿ ಮಾಡಲಾಗಿದೆ.

K.L.E. SOCIETY
Since 1916
BELAGAVI, KARNATAKA, INDIA
Tel: 0831-2404040 Web: klesociety.org
WANTED
FOR KLE BENGALURU INSTITUTIONS
A globally acclaimed education organization with proven track record of quality education invites applications for the following posts
- Lecturer BHM
  Qualification: Full-time Master Degree in Hospitality Administration/ Hotel Management from a recognized University/ Institute with at least 60% marks and at least 2 years work Experience is preferred
- Lecturer BBA
  Qualification: MBA (Marketing/ Finance/ HR) with a minimum of 60% Marks or M.Com with a minimum of 60% Marks
- Lecturer BCA
  Qualification: MCA/M.Tech (CSE/CN/SE)/M.Sc Comp Science with a minimum of 60% Marks
- Lecturer English
  Qualification: MA (English) with a minimum of 60% Marks
- Lecturer in B.Sc Fashion and Apparel Design
  Qualification: M.Sc. in Fashion designing/ Clothing and Textiles/ M.Design in Fashion/ M.Tech in textiles.
Candidates with prior teaching and industry experience will be preferred
Salary: Commensurate with quality and work experience
Interested candidates send in your resume along with scanned copies of all relevant documents and testimonials to klebbabcarecruitment@gmail.com on or before 25th February, 2023.
For further details please contact 9663854454
Belagavi
Date : 15.02.2023
Dr. Prabhakar Kore
Chairman, KLE Society, Belagavi

ದೊಣ್ಣೆಯಿಂದ ಹೊಡೆದು ಕೊಲೆ: ಸಂಬಂಧಿ ಬಂಧನ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯ ಕಮ್ಮನಹಳ್ಳಿಯಲ್ಲಿ ಜೋಸೆಫ್ (54) ಎಂಬುವರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಸಂಬಂಧಿ ಆಂಟೋನಿಯನ್ನು (24) ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಕೊಳಗೇರಿ ಪ್ರದೇಶದಲ್ಲಿ ವಾಸವಿದ್ದ ಜೋಸೆಫ್, ಅಕ್ಕನ ಮಗನಾದ ಆಂಟೋನಿಯನ್ನು ಚಿಕ್ಕಂದಿನಿಂದಲೂ ಸಾಕಿದ್ದರು. ಮದ್ಯವ್ಯಸನಿ ಆಗಿದ್ದ ಆಂಟೋನಿ, ಮದ್ಯ ಖರೀದಿಗೆ ಹಣ ನೀಡಲಿಲ್ಲವೆಂಬ ಕಾರಣಕ್ಕೆ ಸೋಮವಾರ ರಾತ್ರಿ ದೊಣ್ಣೆಯಿಂದ ಹೊಡೆದು ಜೋಸೆಫ್ ಅವರನ್ನು ಕೊಲೆ ಮಾಡಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಕೃತ್ಯದ ಬಳಿಕ ಆರೋಪಿ ಸ್ಥಳದಿಂದ ಪರಾರಿಯಾಗಿದ್ದ. ಮಾಹಿತಿ ಬರುತ್ತಿದ್ದಂತೆ ಆರೋಪಿ ಫೋಟೊವನ್ನು ಎಲ್ಲ ಠಾಣೆಗಳಿಗೆ ಕಳುಹಿಸಲಾಗಿತ್ತು. ಆರ್.ಟಿ. ನಗರ ಪೊಲೀಸರು ಆರೋಪಿಯನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ತಿಳಿಸಿದರು.

ನಿತ್ಯವೂ ಗಲಾಟೆ, ಹಲ್ಲೆ: ‘ಜೋಸೆಫ್ ಅವರು ಆಂಟೋನಿಯನ್ನು ಹೆಚ್ಚು ಇಷ್ಟಪಡುತ್ತಿದ್ದರು. ಅಕ್ಕನ ಮನೆಯಲ್ಲಿದ್ದ ಆಂಟೋನಿಯನ್ನು ಬಾಲಕನಾಗಿದ್ದಾಗಲೇ ತಮ್ಮ ಮನೆಗೆ ಕರೆತಂದು ಸಾಕುತ್ತಿದ್ದರು. ಆತ ಕೇಳಿದ್ದನ್ನೆಲ್ಲ ತಂದುಕೊಡುತ್ತಿದ್ದರು’ ಎಂದರು.

‘ದುಶ್ಚಟ ಅಂಟಿಸಿಕೊಂಡಿದ್ದ ಆಂಟೋನಿ, ಹಣಕ್ಕಾಗಿ ಜೋಸೆಫ್ ಅವರನ್ನು ಪೀಡಿಸುತ್ತಿದ್ದ. ಹಣ ನೀಡದಿದ್ದಕ್ಕೆ ಹಲವು ಬಾರಿ ಜಗಳ ತೆಗೆದು ಹಲ್ಲೆ ಸಹ ಮಾಡಿದ್ದ. ಸ್ಥಳೀಯರು ಬುದ್ಧಿವಾದ ಹೇಳಿದರೂ ಸುಧಾರಿಸಿರಲಿಲ್ಲ’ ಎಂದು ತಿಳಿಸಿದರು.

‘ಸೋಮವಾರ ರಾತ್ರಿಯೂ ಜೋಸೆಫ್ ಜೊತೆ ಜಗಳ ತೆಗೆದಿದ್ದ ಆರೋಪಿ, ದೊಣ್ಣೆಯಿಂದ ತಲೆಗೆ ಹೊಡೆದಿದ್ದ. ತೀವ್ರ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಮೃತಪಟ್ಟಿದ್ದಾರೆ. ಕೊಲೆ ಬಗ್ಗೆ ವೈದ್ಯರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದರು.


ಆಂಟೋನಿ

ಎಂ.ಸಿ. ಲೇಔಟ್‌ನಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ: 7 ಶಸ್ತ್ರಚಿಕಿತ್ಸೆ ಕೊಠಡಿ, 20 ಐಸಿಯು ಬೆಡ್: ನಾಳೆ ಉದ್ಘಾಟನೆ

ಪ್ರಥಮ ದಿನದಿಂದಲೇ ಕಾಗದರಹಿತ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರದ ಎಂ.ಸಿ. ಲೇಔಟ್‌ನಲ್ಲಿ 300 ಹಾಸಿಗೆಗಳ ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾರಂಭದ ದಿನದಿಂದಲೇ ಕಾಗದರಹಿತ ಕಾರ್ಯಾಚರಣೆ ನಡೆಸಲಿದೆ ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಬಿಬಿಎಂಪಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸೌಲಭ್ಯಗಳನ್ನು ಪರಿಚಯಿಸಿ ಅವರು ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದರು.

‘ಏಳು ಶಸ್ತ್ರಚಿಕಿತ್ಸೆ ಕೊಠಡಿ, ಇನ್‌ಕ್ಯುಬೇಟರ್ಸ್ ಸೇರಿ 30 ಐಸಿಯು ಬೆಡ್‌ಗಳು, ಎಂಆರ್‌ಐ, ಸಿಟಿ–ಸ್ಕ್ಯಾನ್ ವ್ಯವಸ್ಥೆಯೊಂದಿಗೆ ಹೃದ್ರೋಗ, ನರರೋಗ ಚಿಕಿತ್ಸೆ ಸೇರಿದಂತೆ ಎಲ್ಲ ರೀತಿಯ ರೋಗಗಳಿಗೆ ಚಿಕಿತ್ಸೆ ನೀಡಲಾಗುತ್ತದೆ. ಇಂತಹ ಸೌಲಭ್ಯಗಳುಳ್ಳ ರಾಜ್ಯದಲ್ಲಿ ಮುನಿಸಿಪಾಲಿಟಿ ನಿರ್ವಹಿಸುತ್ತಿರುವ ಅತಿದೊಡ್ಡ ಆಸ್ಪತ್ರೆ ಇದಾಗಿದೆ ಎಂದರು.


ಎಂ.ಸಿ. ಲೇಔಟ್‌ನ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ವೈದ್ಯಕೀಯ ಉಪಕರಣಗಳನ್ನು ವಸತಿ ಸಚಿವ ವಿ. ಸೋಮಣ್ಣ ಮಂಗಳವಾರ ಪರಿಶೀಲಿಸಿದರು. ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳು, ಬಿಜೆಪಿ ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥಗೌಡ ಇದ್ದರು

‘ಆಸ್ಪತ್ರೆಯನ್ನು ಸಂಪೂರ್ಣ ಡಿಜಿಟಲೀಕರಣ ಮಾಡಿದ್ದು, ಕಮ್ಯಾಂಡ್ ಸೆಂಟರ್ ಮೂಲಕ ವೈದ್ಯರು ಎಲ್ಲವನ್ನೂ ಈ ಕೇಂದ್ರದಿಂದಲೇ ನಿಗಾವಹಿಸಬಹುದು. ಶಸ್ತ್ರಚಿಕಿತ್ಸೆ ಕೊಠಡಿಯೂ ಡಿಜಿಟಲೀಕರಣವಾಗಿದ್ದು, ಬೇರೆ ಆಸ್ಪತ್ರೆಯ ತಜ್ಞರೊಂದಿಗೂ ನೇರ ಸಮಾಲೋಚನೆ ನಡೆಸುವ ಸೌಲಭ್ಯವೂ ಇದೆ’ ಎಂದು ಮಾಹಿತಿ ನೀಡಿದರು.

ಆರೋಗ್ಯ ಇಲಾಖೆಯಿಂದ 17 ತಜ್ಞವೈದ್ಯರು ನಿಯೋಜನೆ ಮೇರೆಗೆ ಗುರುವಾರದಿಂದಲೇ ಕಾರ್ಯನಿರ್ವಹಿಸಲಿದ್ದಾರೆ. ಇತರೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. 192 ವೈದ್ಯರನ್ನು ನೇಮಿಸಿಕೊಳ್ಳಲು ಅನುಮತಿ ಪಡೆಯಲಾಗಿದೆ. ಹಂತಹಂತವಾಗಿ ಎಲ್ಲ ರೀತಿಯ ವ್ಯವಸ್ಥೆಯನ್ನೂ ಆಸ್ಪತ್ರೆ ಆರಂಭಿಸಲಿದೆ. ಇನ್ನು ಮೂರು ತಿಂಗಳಲ್ಲಿ ಸಂಪೂರ್ಣವಾಗಿ ಐದು ಅಂತಸ್ತಿನ ಕಟ್ಟಡದಲ್ಲಿ ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತದೆ ಎಂದು ತಿಳಿಸಿದರು.

2020ರಲ್ಲಿ ಬಿ.ಎಸ್. ಯಡಿಯೂರಪ್ಪ ಶಂಕುಸ್ಥಾಪನೆ ಮಾಡಿದ್ದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಒಟ್ಟು ₹106 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿದೆ. ಫೆ.16ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಸ್ಪತ್ರೆಗೆ ಚಾಲನೆ ನೀಡಲಿದ್ದಾರೆ. ಪಂತರಪಾಳ್ಯದಲ್ಲಿ ಮತ್ತೊಂದು ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ 200 ಹಾಸಿಗೆಗಳೊಂದಿಗೆ ಆರಂಭವಾಗಲಿದೆ. ಈ ಭಾಗದ ನಾಗರಿಕರು ಜಯದೇವ, ವಿಕ್ಟೋರಿಯಾ, ವಾಣಿವಿಲಾಸ ಆಸ್ಪತ್ರೆಗಳ ಕಡೆಗೆ ಹೋಗುವ ಅಗತ್ಯವಿಲ್ಲ ಎಂದರು.

ಇಲ್ಲೇ ಸ್ಪರ್ಧೆ: ಸೋಮಣ್ಣ

‘ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರದಿಂದಲೇ ಸ್ಪರ್ಧೆ ಮಾಡುತ್ತೇನೆ. ಇದರಲ್ಲಿ ಯಾವುದೇ ಅನುಮಾನ ಬೇಡ. ಅಪ್ಪ–ಮಗ (ಎಂ.ಕೃಷ್ಣಪ್ಪ–ಪ್ರಿಯಕೃಷ್ಣ) ಅವರು ಇಲ್ಲಸಲ್ಲದ ಮಾತುಗಳನ್ನು ಹರಿಬಿಡುತ್ತಿದ್ದಾರೆ. ನಾಲ್ಕು ದಶಕಗಳಿಂದ ಇಲ್ಲಿ ಕೆಲಸ ಮಾಡಿದ್ದೇನೆ. ಜನರು ನನ್ನ ಅಭಿವೃದ್ಧಿ ಕಾರ್ಯವನ್ನು ಕಂಡಿದ್ದಾರೆ. ಅವರ ಆಶೀರ್ವಾದ ಮತ್ತೆ ನನಗೆ ಸಿಗುತ್ತದೆ’ ಎಂದು ಗೋವಿಂದರಾಜನಗರ ಕ್ಷೇತ್ರ ಶಾಸಕರೂ ಆದ ವಿ. ಸೋಮಣ್ಣ ತಿಳಿಸಿದರು.

On the Occasion of Mahashivarathri Presenting
Presents Weaves ವೀವ್ಸ್
Exhibition & Sale
An exposition of handloom textiles
An opulent show of Ethnic & Traditional Silk, Cotton Handloom Products made by master 100 Weavers from all over India
Silk Saree | Suits | Dress Material | Stoles | Dupattas | Kurtas
Kurties | Pure & Probable Silk | Tussar Silk | Shanthipur Silk
SINDOOR CONVENTION CENTER
15th Cross, Sarakki, 1st Phase, J.P. Nagar Ring Road, Bengaluru
From :15th to 22nd Feb. 2023
Full A/c
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...

8 Days Only
Opening Today
Time : 10.30 am - 8.30 pm Call: 08850902824
All Credit & Debit Cards Accepted
Entry & Parking Free

ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ 'ಏರೋ ಇಂಡಿಯಾ–2023'ರ 2ನೇ ದಿನ ನಡೆದ ವೈಮಾನಿಕ ಪ್ರದರ್ಶನದಲ್ಲಿ 'ಸೂರ್ಯಕಿರಣ್ ತಂಡ'ವು ಆಕಾಶದಲ್ಲಿ ಬಿಡಿಸಿದ ಹೃದಯದ ಆಕಾರದ ಚಿತ್ರಕ್ಕೆ ಹೋಲುವಂತೆ ಜೋಡಿಯೊಂದು ಪ್ರೀತಿಯ ಚಿಹ್ನೆ ತೋರಿಸಿತು (1) ವೈಮಾನಿಕ ಪ್ರದರ್ಶನದಲ್ಲಿ ಭಾರತೀಯ ವಾಯುಪಡೆಯ ಸಾರಂಗ್ ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದವು (2) ಏರೋ ಇಂಡಿಯಾದಲ್ಲಿ ಮೊದಲ ಬಾರಿಗೆ ಪ್ರದರ್ಶನ ನೀಡಿದ ಅಮೆರಿಕದ ಎಫ್–35 ಯುದ್ಧ ವಿಮಾನ (3) –ಪ್ರಜಾವಾಣಿ ಚಿತ್ರಗಳು / ಕಿಶೋರ್ ಕುಮಾರ್ ಬೋಳಾರ್/ ಪುಷ್ಕರ್ ವಿ.

ಏರೋ ಇಂಡಿಯಾ: ಮೊದಲ ಬಾರಿಗೆ ಅಮೆರಿಕದ 'ಎಫ್–35' ಚಮತ್ಕಾರ • ಇದು ವಿಶ್ವದ ಮಾರಕ ಯುದ್ಧವಿಮಾನ

ವಿದೇಶಿ ಯುದ್ಧ ವಿಮಾನಗಳ ಗರ್ಜನೆ

• ಆದಿತ್ಯ ಕೆ.ಎ.

ಬೆಂಗಳೂರು: 'ಏರೋ ಇಂಡಿಯಾ 2023'ರಲ್ಲಿ ಮಂಗಳವಾರ ವಿದೇಶಿ ಯುದ್ಧ ವಿಮಾನಗಳು, ಬಾನಂಗಳದಲ್ಲಿ ಚಮತ್ಕಾರ ಮಾಡಿದವು. ಅವುಗಳು ಆಗಸದಲ್ಲಿ ಮೋಡಿಯೊಂದಿಗೆ ಕಸರತ್ತು ನಡೆಸಿದವು. ತಮ್ಮ ಸಾಮರ್ಥ್ಯ ಸಾಬೀತು ಪಡಿಸಿದವು.

ಮೊದಲ ದಿನ ಭಾರತದ ಯುದ್ಧ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳು ಪ್ರದರ್ಶನ ನೀಡಿದ್ದವು. 2ನೇ ದಿನ ವಿದೇಶಿ ಯುದ್ಧ ವಿಮಾನಗಳು ತಮ್ಮ ಕಾರ್ಯಕ್ಷಮತೆ, ದಕ್ಷತೆ, ಕರಾರುವಕ್ಕಾಗಿ ಹಾರಾಟ ನಡೆಸಿದವು. ವೈಮಾನಿಕ ಪ್ರದರ್ಶನಕ್ಕೆ ಮತ್ತಷ್ಟು ಮೆರುಗು ತುಂಬಿದವು.

ಏರೋ ಇಂಡಿಯಾದ ಮೊದಲ ಬಾರಿಗೆ ಭಾಗಿಯಾಗಿರುವ ಅಮೆರಿಕದ ಸೂಪರ್‌ಸಾನಿಕ್ ಬಹುಮಾದರಿಯ 'ಎಫ್–35' ಯುದ್ಧ ವಿಮಾನವು ಬೆಂಗಳೂರಿನ ಯಲಹಂಕದ ವಾಯುನೆಲೆಯಲ್ಲಿ ಸಾಮರ್ಥ್ಯ ತೋರಿತು. ಅಮೆರಿಕದ ಅಲಾಸ್ಕ ಮತ್ತು ಉತಾಹ್ ವಾಯುನೆಲೆಯಿಂದ ಬಂದಿದ್ದ ಎರಡು ಎಫ್–35 ವಿಮಾನಗಳು ನೀಲಾಕಾಶದಲ್ಲಿ ಗರ್ಜಿಸುತ್ತ ಸಾಗಿದವು. ನೆರೆದಿದ್ದ ಸಾವಿರಾರು ಪ್ರೇಕ್ಷಕರನ್ನು ಮನಸೂರೆಗೊಳಿಸಿದವು. ಇದನ್ನು ವಿಶ್ವದ ಅತ್ಯಂತ ಮಾರಕ ಯುದ್ಧ ವಿಮಾನ ಎಂದೇ ಕರೆಯಲಾಗುತ್ತಿದೆ.

ಎಫ್ 35 ಜತೆಗೇ ಬಂದಿದ್ದ ಅಮೆರಿಕದ ಎಫ್–16 ಸಹ ಪ್ರೇಕ್ಷಕರ ಮೈನವಿರೇಳಿಸುವಂತೆ ಪ್ರದರ್ಶನ ನೀಡಿತು. ಬಹು ಆಯಾಮದಲ್ಲಿ ಪ್ರದರ್ಶನ ನೀಡಿ ಆಕರ್ಷಿಸಿತು. ಯಲಹಂಕ ಬಳಿಯ ಶುಭ್ರ ಆಕಾಶದಲ್ಲಿ ವಿದೇಶಿ ಪೈಲೆಟ್‌ಗಳ ಕರಾಮತ್ತು ಮೈನವಿರೇಳಿಸಿತು.

ಅದಾದ ಮೇಲೆ ರಫೇಲ್ ಸಹ ಸದ್ದು ಮಾಡುತ್ತಾ ಸಾಗಿತು. ಅವುಗಳಿಂದ ಹೊಮ್ಮುತ್ತಿದ್ದ ಶಬ್ದವು ಮೈನಡುಗಿಸಿತು. ಭಾರತದ ಹಳೇ ಡಕೋಟ ವಿಮಾನ 2ನೇ ದಿನ ಹಾರಾಟ ನಡೆಸಿ, ತನ್ನ ಸಾಮರ್ಥ್ಯ ತೋರಿತು. ಅದಾದಮೇಲೆ ಎಚ್‌ಎಎಲ್‌ನ ಲಘು ಯುದ್ಧ ವಿಮಾನಗಳೂ ನಭಕ್ಕೆ ಜಿಗಿದು ತಮ್ಮ ತಾಕತ್ತು ತೋರಿದವು. ಎಸ್‌ಯು 30, ಸುಖೋಯ್ ಸಹ ವೇಗದಲ್ಲಿ ಮುನ್ನುಗಿದವು.

ಕರಾರುವಾಕ್ಕಾದ ಪ್ರದರ್ಶನಕ್ಕೆ ಹೆಸರಾದ ಸೂರ್ಯಕಿರಣ್ ತಂಡವು ಮತ್ತೊಮ್ಮೆ ಆಕರ್ಷಿಸಿತು. ಯುದ್ಧ ವಿಮಾನ ಹಿಂಬಾಲಿಸಿದ ಸೂರ್ಯ-ಕಿರಣ್‌ಗಳು ಶಿಸ್ತಿನಿಂದ ಸಾಗಿದವು. ಆಕಾಶದಲ್ಲಿಯೇ ಧೂಮದಲ್ಲಿ ಹೃದಯಾಕಾರದ ಚಿತ್ರ ಬಿಡಿಸಿದವು. ಸಾರಂಗ್ ಸಹ ಸಾಹಸ ತೋರಿತು.

'ಅಮೆರಿಕದ ಎಫ್–35 ಈ ಬಾರಿಯ ಆಕರ್ಷಣೆಯಾಗಿದೆ. ಭಾರತಕ್ಕೆ ಮೊದಲ ಬಾರಿಗೆ ಬಂದಿದ್ದು, ಅದನ್ನು ಭಾರತವು ಖರೀದಿಸಲೂಬಹುದು. ಈ ಬೆಳವಣಿಗೆ ಶತ್ರು ರಾಷ್ಟ್ರಕ್ಕೆ ನಡುಕ ಹುಟ್ಟಿಸಿದೆ' ಎಂದು ಏರೋ ಇಂಡಿಯಾಕ್ಕೆ ಬಂದಿದ್ದ ಗೋಪಾಲಕೃಷ್ಣ ಹೇಳಿದರು.

ಮಂಗಳವಾರ ವಿಮಾನಗಳು ನಿಲುಗಡೆಯಾದ ಸ್ಥಳದ ಬಳಿಗೆ ಉದ್ದಿಮೆದಾರರು, ಹೂಡಿಕೆದಾರರು ಹಾಗೂ ಪ್ರೇಕ್ಷಕರನ್ನು ಬಿಡಲಾಗಿತ್ತು. ಆಕಾಶದಲ್ಲಿ ಚತುರತೆ ತೋರಿ ಬಂದ ವಿಮಾನಗಳನ್ನು ಹತ್ತಿರದಿಂದಲೇ ಕಣ್ತುಂಬಿಕೊಂಡ ನಂತರ ಅವರೆಲ್ಲರೂ ಫೋಟೊ ಕ್ಲಿಕ್ಕಿಸಿಕೊಂಡರು.

'ಬಿ–1ಬಿ' ಜೆಟ್ ಪ್ರದರ್ಶನ

ಬೆಂಗಳೂರು: ಅಮೆರಿಕ ವಾಯು ಪಡೆಯ ಎರಡು 'ಬಿ–1ಬಿ' ಲ್ಯಾನ್ಸರ್ ಸೂಪರ್‌ಸಾನಿಕ್ ಬಾಂಬರ್ ಜೆಟ್‌ಗಳು ಇಲ್ಲಿನ ಯಲಹಂಕ ವಾಯುನೆಲೆಗೆ ಮಂಗಳವಾರ ಬಂದಿಳಿದು ಪ್ರದರ್ಶನ ನೀಡಿದವು.

'ಏರೋ ಇಂಡಿಯಾ–2023'ರ ಅಂಗವಾಗಿ ಅಮೆರಿಕ ಪ್ರದರ್ಶಿಸು-ತ್ತಿರುವ ಯುದ್ಧ ವಿಮಾನಗಳ ಜತೆ ಈ ಎರಡು ಜೆಟ್‌ಗಳು ಸಹ ಈಗ ಸೇರಿವೆ. 'ದಿ ಬೋನ್' ಎಂದೇ ಕರೆಯಲಾಗುವ 'ಬಿ–1ಬಿ' ಜೆಟ್‌ಗಳು ವಿವಿಧ ರೀತಿಯ ಕಾರ್ಯಾಚರಣೆಗಳಲ್ಲಿ ಬಳಸಬಹುದಾಗಿದೆ. 2021ರ ಫೆಬ್ರುವರಿ 3ರಿಂದ ನಡೆದ ಏರೋ ಇಂಡಿಯಾದಲ್ಲಿ 'ಬಿ–1ಬಿ' ಜೆಟ್ ವಿಮಾನಗಳು ಮೊದಲ ಬಾರಿ ಭಾಗವಹಿಸಿದ್ದವು.

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

'ಸಶಕ್ತ ರಾಷ್ಟ್ರಗಳು ಇತರರಿಗೆ ನಿರ್ದೇಶನ ನೀಡಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಿಲಿಟರಿ ವಲಯದಲ್ಲಿ ಸಶಕ್ತವಾಗಿರುವ ರಾಷ್ಟ್ರಗಳು ಇತರ ರಾಷ್ಟ್ರಗಳಿಗೆ ನಿರ್ದೇಶನ ನೀಡಬಾರದು' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಏರೋ ಇಂಡಿಯಾ ಅಂಗವಾಗಿ ಮಂಗಳವಾರ ಆಯೋಜಿಸಿದ್ದ ರಕ್ಷಣಾ ಸಚಿವರ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಕೆಲವು ರಾಷ್ಟ್ರಗಳು ಶ್ರೀಮಂತವಾಗಿರಬಹುದು ಹಾಗೂ ತಂತ್ರಜ್ಞಾನ ಮತ್ತು ಮಿಲಿಟರಿ ಕ್ಷೇತ್ರದಲ್ಲಿ ಇತರ ರಾಷ್ಟ್ರಗಳಿಗಿಂತ ಅಭಿವೃದ್ಧಿ ಸಾಧಿಸಿರಬಹುದು. ಇಂತಹ ಶಕ್ತಿ ಸಾಮರ್ಥ್ಯಕ್ಕಾಗಿ ಇತರ ರಾಷ್ಟ್ರಗಳಿಗೆ ತಾವು ಸೂಚಿಸಿದ ಪರಿಹಾರವನ್ನು ಅಳವಡಿಸಿಕೊಳ್ಳುವಂತೆ ನಿರ್ದೇಶನ ನೀಡುವ ಹಕ್ಕು ಇಲ್ಲ' ಎಂದು ಪ್ರತಿಪಾದಿಸಿದರು.

'ನೆರವು ಬಯಸುವ ರಾಷ್ಟ್ರಗಳಿಗೆ ಉಪದೇಶ ನೀಡುವ ಪದ್ಧತಿಯಲ್ಲಿ ಭಾರತವು ನಂಬಿಕೆ ಇರಿಸಿಲ್ಲ. ನಾವು ಎಲ್ಲರೊಂದಿಗೆ ಸಾಗಲು ಬಯಸುತ್ತೇವೆ. ನಿಮ್ಮೊಂದಿಗೆ ಅಭಿವೃದ್ಧಿ ಸಾಧಿಸಲು ಬಯಸುತ್ತೇವೆ' ಎಂದರು.

'ಒಂದು ರಾಷ್ಟ್ರದಲ್ಲಿ ಕಾಣಿಸಿಕೊಂಡ ಕೋವಿಡ್–19, ಇಡೀ ಜಗತ್ತಿನಾದ್ಯಂತ ಪರಿಣಾಮ ಬೀರಿತು. ಹೀಗಾಗಿ, ನಾವೆಲ್ಲರೂ ಒಂದೇ ದೋಣಿಯಲ್ಲಿದ್ದೇವೆ. ಎಲ್ಲರೂ ಒಗ್ಗಟ್ಟಿನಿಂದ ಈಜಬೇಕು ಅಥವಾ ಮುಳುಗಬೇಕಾಗುತ್ತದೆ ಎನ್ನುವುದನ್ನು ಅರಿತುಕೊಳ್ಳಬೇಕು' ಎಂದು ಹೇಳಿದರು.

'ಭಯೋತ್ಪಾದನೆಯಂತಹ ಸವಾಲುಗಳನ್ನು ಒಗ್ಗಟ್ಟಿನಿಂದ ಎದುರಿಸಬೇಕು. ಇದಕ್ಕಾಗಿ ಹೊಸ ಕಾರ್ಯತಂತ್ರಗಳನ್ನು ರೂಪಿಸಬೇಕು. ಜಾಗತಿಕ ಭದ್ರತಾ ಸನ್ನಿವೇಶದಲ್ಲಿ ಪರಸ್ಪರ ಸಹಕಾರ ಅಗತ್ಯ' ಎಂದರು.

27 ರಾಷ್ಟ್ರಗಳ ರಕ್ಷಣಾ ಸಚಿವರು ಸಮ್ಮೇಳನದಲ್ಲಿ ಭಾಗ ವಹಿಸಿದ್ದರು.

'ವಿಡಿಯೊ' ನೋಡಲು ಕೋಡ್ ಸ್ಕ್ಯಾನ್ ಮಾಡಿ....
ಪ್ರಜಾವಾಣಿ ನೋಡಿಯೊ

ದೇವನಹಳ್ಳಿ ರಸ್ತೆಯಲ್ಲಿ ಮಂಗಳವಾರ ಕಂಡುಬಂದ ವಾಹನ ದಟ್ಟಣೆ

ವಾಹನ ದಟ್ಟಣೆ: ರಸ್ತೆಯಲ್ಲಿ ಕಾದ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತ-ರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಮಂಗಳವಾರವೂ ವಾಹನ ದಟ್ಟಣೆ ಕಂಡುಬಂತು.

ಯಲಹಂಕ ವಾಯುನೆಲೆಯಲ್ಲಿ ನಡೆಯುತ್ತಿರುವ ಏರೋ ಇಂಡಿಯಾಕ್ಕೆ ದೇಶ –ವಿದೇಶಗಳ ಪ್ರತಿನಿಧಿಗಳನ್ನು ಕರೆತಂದ ವಾಹನಗಳು ಒಂದೇ ಸಮಯದಲ್ಲಿ ಬಂದ ಕಾರಣಕ್ಕೆ ರಾಷ್ಟ್ರೀಯ ಹೆದ್ದಾರಿಯಲ್ಲಿ ದಟ್ಟಣೆ ಕಂಡುಬಂತು. ಇದರಿಂದ ದೇವನಹಳ್ಳಿ, ಬಳ್ಳಾರಿ, ಹೈದರಾಬಾದ್ ಕಡೆಗೆ ತೆರಳುವವರೂ ಪರದಾಡಿದರು. ಕೆಲವು ಸ್ಥಳಗಳಲ್ಲಿ ವಾಹನಗಳೂ ಮುಂದಕ್ಕೆ ಸಾಗಲು ಸಾಧ್ಯವಾಗಲಿಲ್ಲ. ದಟ್ಟಣೆಯಲ್ಲಿ ಸಿಲುಕಿದ ಪ್ರದರ್ಶಕರು ನಿಗದಿತ ಸಮಯಕ್ಕೆ ತೆರಳಲು ಸಾಧ್ಯವಾಗದೆ ಸಮಸ್ಯೆಗೆ ಸಿಲುಕಿದರು. ಪೊಲೀಸರು ಸಹ ವಾಹನಗಳ ನಿಯಂತ್ರಣಕ್ಕೆ ಹರಸಾಹಸಪಟ್ಟರು.

2023
ಏರೋ ಇಂಡಿಯಾ

ಇಂದು ಏನೇನು?

- ಬೆಳಿಗ್ಗೆ 9ರಿಂದ 11ರ ತನಕ ಭಾರತೀಯ ನೌಕಾದಳ ಕುರಿತು ವಿಚಾರಸಂಕಿರಣ
- ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರ ತನಕ ನವೋದ್ಯಮಗಳ ಕುರಿತು ವಿಚಾರಸಂಕಿರಣ
- ಬೆಳಿಗ್ಗೆ 11.30ರಿಂದ 2ರ ತನಕ ಬಂಡವಾಳ ಹೂಡಿಕೆ ಕುರಿತು ವಿಚಾರಸಂಕಿರಣ
- ಮಧ್ಯಾಹ್ನ 12ರಿಂದ 1.30ರ ತನಕ ವೈಮಾನಿಕ ಪ್ರದರ್ಶನ
- ಮಧ್ಯಾಹ್ನ 3.15ರಿಂದ 4.15ರ ತನಕ ಉದ್ಘಾಟನಾ ವೇದಿಕೆ ಬಳಿ 'ಬಂಧನ್' ಸಂಗೀತ ಕಾರ್ಯಕ್ರಮ

Kirloskar

ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್.,

ನೋಂದಾಯಿತ ಕಛೇರಿ : ಸಂ. 19, 2ನೇ ಮುಖ್ಯ ರಸ್ತೆ, ಪೀಣ್ಯ 1ನೇ ಸ್ಟೇಜ್, ಫೇಸ್–1, ಪೀಣ್ಯ, ಬೆಂಗಳೂರು – 560058. **ದೂರವಾಣಿ :** 080 28397256; **ಫ್ಯಾಕ್ಸ್ :** 080 28396727;
ವೆಬ್‌ಸೈಟ್ : www.kirloskarelectric.com **ಇ–ಮೇಲ್ :** investors@kirloskarelectric.com
CIN : L31100KA1946PLC000415

ಅಂಚೆ ಮತಪತ್ರದ ಸೂಚನೆ ಮತ್ತು ಇ–ಮತದಾನದ ಬಗ್ಗೆ ಮಾಹಿತಿ:

ಸೆಕ್ಷನ್ 108, 110 ಕಂಪನಿಗಳ ಕಾಯಿದೆ, 2013 ("ದಿ ಆಕ್ಟ್"), ನಿಯಮ 20 ಮತ್ತು ನಿಯಮ 22 ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ಮತ್ತು ಇತರ ಅನ್ವಯವಾಗುವ ನಿಬಂಧನೆಗಳಿಗೆ ಅನುಸಾರವಾಗಿ ಸದಸ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಸೆಕ್ರೆಟರಿಯಲ್ ಸ್ಟ್ಯಾಂಡರ್ಡ್ ("SS-2") 8 ಏಪ್ರಿಲ್ 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020 ನೊಂದಿಗೆ ಹೇಳಲಾದ, 17/2020 ದಿನಾಂಕ 13 ಏಪ್ರಿಲ್ 2020, 22/2020 ದಿನಾಂಕ 15 ಜೂನ್ 2020, 33/2020 ದಿನಾಂಕ 28 ಸೆಪ್ಟೆಂಬರ್ 2020, 39/2020 ದಿನಾಂಕ 31 ಡಿಸೆಂಬರ್ 2020, 10/2021, ದಿನಾಂಕ 23 ಜೂನ್ 2021, 20/2021, ದಿನಾಂಕ 8 ಡಿಸೆಂಬರ್ 2021, 03/2022 ದಿನಾಂಕ 05 ಮೇ 2022 ಮತ್ತು 11/2022, ದಿನಾಂಕ 28 ಡಿಸೆಂಬರ್ 2022 ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("MCA ಸುತ್ತೋಲೆಗಳು") ಮತ್ತು ನಿಯಮ 44 ರಿಂದ ಹೊರಡಿಸಲಾದ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015, ("SEBI ಪಟ್ಟಿಯ ನಿಯಮಗಳು 2015") (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಅನುಷ್ಠಾನವನ್ನು ಒಳಗೊಂಡಂತೆ) ರಲ್ಲಿ ನಿಗದಿಪಡಿಸಿದಂತೆ ನಿರ್ಣಯಗಳು ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ಸದಸ್ಯರು ಅಂಚೆ ಮತಪತ್ರದ ಮೂಲಕ ವಿದ್ಯುನ್ಮಾನ ವಿಧಾನದ ಮೂಲಕ ಮಾತ್ರ ಮತ ಚಲಾಯಿಸುವ ಮೂಲಕ ಅಂಗೀಕರಿಸಲು ಪ್ರಸ್ತಾಪಿಸಲಾಗಿದೆ ('ರಿಮೋಟ್ ಇ–ವೋಟಿಂಗ್').

MCA ಮತ್ತು SEBI ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ / ಡಿಪಾಸಿಟರಿಗಳಲ್ಲಿ ನೋಂದಾಯಿಸಲಾದ ಇಮೇಲ್ ಐಡಿಗಳನ್ನು ಹೊಂದಿರುವ ಎಲ್ಲ ಸದಸ್ಯರಿಗೆ ವಿವರಣಾತ್ಮಕ ಹೇಳಿಕೆಯೊಂದಿಗೆ ಅಂಚೆ ಮತಪತ್ರದ ಸೂಚನೆಯನ್ನು ವಿದ್ಯುನ್ಮಾನವಾಗಿ ಕಳುಹಿಸಲಾಗಿದೆ. ಕಂಪನಿಯು ಮಂಗಳವಾರ, ಫೆಬ್ರುವರಿ 14, 2023 ರಂದು ಪೋಸ್ಟಲ್ ಬ್ಯಾಲೆಟ್ ನೋಟೀಸ್ ರವಾನೆಯನ್ನು ಪೂರ್ಣಗೊಳಿಸಿದೆ. ಅಂಚೆ ಮತಪತ್ರದ ಸೂಚನೆಯನ್ನು ಕಂಪನಿಯ ವೆಬ್‌ಸೈಟ್ www.kirloskarelectric.com ನಲ್ಲಿಯೂ ಸಹ ಲಭ್ಯವಾಗುವಂತೆ ಮಾಡಲಾಗಿದೆ. ಈ ಮಾಹಿತಿಯು ಸ್ಟಾಕ್ ಎಕ್ಸ್ಚೇಂಜ್‌ಗಳಾದ BSE ಲಿಮಿಟೆಡ್, www.bseindia.com ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಆಫ್ ಇಂಡಿಯಾ ಲಿಮಿಟೆಡ್, www.nseindia.com ಮತ್ತು CDSL ವೆಬ್‌ಸೈಟ್ www.evotingindia.com ನಲ್ಲಿ ಸಹ ಲಭ್ಯವಿದೆ.

ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 108 ರ ಪ್ರಕಾರ, MCA ಸುತ್ತೋಲೆಗಳೊಂದಿಗೆ, ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ಒದಗಿಸಿದೆ ಹಾಗೂ ಸೆಂಟ್ರಲ್ ಡಿಪಾಸಿಟರಿ ಸರ್ವಿಸಸ್ (ಇಂಡಿಯಾ) ಲಿಮಿಟೆಡ್ (CDSL) ಒದಗಿಸಿದ ರಿಮೋಟ್ ಇ–ವೋಟಿಂಗ್ ಸೇವೆಗಳ ಮೂಲಕ ಸದಸ್ಯರು ತಮ್ಮ ಮತಗಳನ್ನು ವಿದ್ಯುನ್ಮಾನವಾಗಿ ಚಲಾಯಿಸಬಹುದು. ಈ ಉದ್ದೇಶಕ್ಕಾಗಿ ಕಟ್–ಆಫ್ ದಿನಾಂಕವು **ಶುಕ್ರವಾರ, ಫೆಬ್ರುವರಿ 10, 2023** ಆಗಿದೆ ಮತ್ತು ಸದಸ್ಯರ ರಿಜಿಸ್ಟರ್‌ನಲ್ಲಿ ಅಥವಾ ಕಟ್–ಆಫ್ ದಿನಾಂಕದಂದು ಡಿಪಾಸಿಟರಿಗಳಲ್ಲಿ ನಿರ್ವಹಿಸುವ ಲಾಭದಾಯಕ ಮಾಲೀಕರ ರಿಜಿಸ್ಟರ್‌ನಲ್ಲಿ ಹೆಸರು ನೋಂದಾಯಿಸಿರುವ ಸದಸ್ಯರು ಮಾತ್ರ ಇ–ಮತದಾನ ಸೇವೆಗಳನ್ನು ಪಡೆಯಲು ಅರ್ಹರಾಗಿರುತ್ತಾರೆ. ಕಟ್–ಆಫ್ ದಿನಾಂಕದ ನಂತರ ಸದಸ್ಯರಾದವರು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಎಂದು ಪರಿಗಣಿಸಬೇಕು. ಇ–ಮತದಾನದ ಅವಧಿಯು **ಬುಧವಾರ, ಫೆಬ್ರುವರಿ 15, 2023** ರಂದು 9.00 A.M (IST) ಕ್ಕೆ ಪ್ರಾರಂಭವಾಗುತ್ತದೆ ಮತ್ತು **ಗುರುವಾರ, ಮಾರ್ಚ್ 16, 2023** ರಂದು 5.00 P.M (IST) ಕ್ಕೆ ಕೊನೆಗೊಳ್ಳುತ್ತದೆ. ಆನಂತರ CDSL ಇ–ವೋಟಿಂಗ್ ಮಾಡ್ಯೂಲ್ ಅನ್ನು ಮತ ಚಲಾಯಿಸಲು ನಿಷ್ಕ್ರಿಯಗೊಳಿಸುತ್ತದೆ. ಒಮ್ಮೆ ನಿರ್ಣಯದ ಮೇಲಿನ ಮತವನ್ನು ಸದಸ್ಯರು ಚಲಾಯಿಸಿದರೆ, ನಂತರ ಅದನ್ನು ಬದಲಾಯಿಸಲು ಅಥವಾ ಮತ್ತೊಮ್ಮೆ ಮತ ಚಲಾಯಿಸಲು ಅವರಿಗೆ ಅನುಮತಿಸಲಾಗುವುದಿಲ್ಲ.

ಡಿಮೆಟಿರಿಯಲೈಸ್ಡ್ ಮತ್ತು ಫಿಸಿಕಲ್ ರೀತಿಗಳಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಹಾಗೂ ತಮ್ಮ ಇ–ಮೇಲ್ ಐಡಿಯನ್ನು ನೋಂದಾಯಿಸದ ಸದಸ್ಯರಿಗೆ ರಿಮೋಟ್ ಇ–ವೋಟಿಂಗ್ ವಿಧಾನವನ್ನು ಪೋಸ್ಟಲ್ ಬ್ಯಾಲೆಟ್ ಸೂಚನೆಯಲ್ಲಿ ಒದಗಿಸಲಾಗಿದೆ.

ಶ್ರೀ ಸುಧೀಂದ್ರ ಪಿ ಫಲಿ, ಪ್ರಾಕ್ಟಿಸಿಂಗ್ ಕಂಪನಿ ಕಾರ್ಯದರ್ಶಿ (ACS No. 7037 / PCS No. 7537), ಬೆಳಗಾವಿ, ಇವರನ್ನು ಇ–ಮತದಾನ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಪರಿಶೀಲಕರಾಗಿ ನೇಮಿಸಲಾಗಿದೆ. ಪೋಸ್ಟಲ್ ಬ್ಯಾಲೆಟ್ ಮೂಲಕ ನಡೆಸಿದ ಇ–ವೋಟಿಂಗ್ ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಮಾರ್ಚ್ 18, 2023 ರ ಶನಿವಾರ ಅಥವಾ ಮೊದಲು ಪ್ರಕಟಿಸಲಾಗುತ್ತದೆ. ಇದನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ www.kirloskarelectric.com ನಲ್ಲಿ ಪ್ರದರ್ಶಿಸಲಾಗುತ್ತದೆ ಹಾಗೂ ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ಗಳು ಅಂದರೆ, BSE ಲಿಮಿಟೆಡ್, ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು CDSL ವೆಬ್‌ಸೈಟ್‌ಗಳಲ್ಲಿ ಕ್ರಮವಾಗಿ www.bseindia.com, www.nseindia.com ಮತ್ತು www.evotingindia.com ಪ್ರಕಟಿಸಲಾಗುವುದು.

ಇ–ಮತದಾನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಶ್ನೆ / ಕುಂದುಕೊರತೆಗಳಿದ್ದರೆ ಅವುಗಳನ್ನು ಶ್ರೀ ಸಿ. ಎಸ್ ಹರೀಶ, ಪ್ರಾದೇಶಿಕ ವ್ಯವಸ್ಥಾಪಕರು–ಕರ್ನಾಟಕ, CDSL, ಅವರಿಗೆ 022–23058738 ಮತ್ತು 22–23058542–43 ಮುಖಾಂತರ ಅಥವಾ helpdesk.evoting@cdslindia.com ಗೆ ಮತ್ತು ಒಂದು ಪ್ರತಿಯೊಂದಿಗೆ investors@kirloskarelectric.com ನಲ್ಲಿ ಸಲ್ಲಿಸಬಹುದು.

ನಿರ್ದೇಶಕರ ಮಂಡಳಿಯ ಆದೇಶದಂತೆ,
ಕಿರ್ಲೋಸ್ಕರ್ ಎಲೆಕ್ಟ್ರಿಕ್ ಕಂಪನಿ ಲಿಮಿಟೆಡ್,
ಮಹಾಬಲೇಶ್ವರ ಭಟ್,
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣೆ ಅಧಿಕಾರಿ

ಸ್ಥಳ : ಬೆಂಗಳೂರು,
ದಿನಾಂಕ : ಫೆಬ್ರುವರಿ 14, 2023

ವಿದೇಶಿ ಪ್ರತಿನಿಧಿಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರೋ ಇಂಡಿಯಾಕ್ಕೆ ಈ ಬಾರಿ ಹೆಚ್ಚಿನ ವಿದೇಶಿ ಪ್ರತಿನಿಧಿಗಳು ಹಾಗೂ ಪ್ರದರ್ಶಕರು ಬಂದಿದ್ದಾರೆ. ಅಮೆರಿಕದಿಂದ ದೊಡ್ಡ ತಂಡವೇ ಬಂದಿದೆ ಎಂದು ವಾಯುಸೇನೆಯ ಅಧಿಕಾರಿಗಳು ತಿಳಿಸಿದರು.

ಪ್ರದರ್ಶಕ ಮಳಿಗೆಯಲ್ಲಿ ಪ್ರತ್ಯೇಕವಾಗಿ ಭಾರತೀಯ ಪೆವಿಲಿಯನ್ ಸ್ಥಾಪಿಸಲಾಗಿದೆ. ಅಲ್ಲಿ ಭಾರತೀಯ ಸಂಸ್ಥೆಗಳು ತಯಾರಿಸಿದ ರಕ್ಷಣಾ ಉಪಕ-ರಣಗಳನ್ನು ಇಡಲಾಗಿದೆ. ವಿದೇಶಿ ಪ್ರತಿನಿಧಿಗಳು ಈ ಮಳಿಗೆಯತ್ತ ಧಾವಿಸಿ ರಕ್ಷಣಾ ಇಲಾಖೆಗೆ ಸಂಬಂಧಿಸಿದ ಉಪಕರಣ ಮಾಹಿತಿ ಪಡೆದುಕೊಂಡರು. ಬಹುತೇಕ ಕೌಂಟರ್‌ಗಳಲ್ಲಿ ಪ್ರತ್ಯೇಕ ಮೀಟಿಂಗ್ ಹಾಲ್ ನಿರ್ಮಿಸಲಾಗಿದ್ದು, ಅದೇ ಸ್ಥಳದಲ್ಲಿ ಕಂಪನಿಗಳ ರಕ್ಷಣಾ ಉಪಕರಣಗಳ ಖರೀದಿ ಕುರಿತು ಒಡಂಬಡಿಕೆ ಮಾಡಿಕೊಳ್ಳಲಾಯಿತು.

ವಿದ್ಯಾರ್ಥಿಗಳ ವೀಕ್ಷಣೆ: ಪ್ರಥಮ ಬಾರಿಗೆ ಅಲ್ಪಸಂಖ್ಯಾತ ಇಲಾಖೆಯ ಶಾಲೆಗಳ ವಿದ್ಯಾರ್ಥಿಗಳಿಗೆ ವೈಮಾನಿಕ ಪ್ರದರ್ಶನದ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿತ್ತು.

ಶೀಘ್ರವೇ ಬರಲಿದೆ ಸ್ಮಾರ್ಟ್ ಕನ್ನಡಕ!

ಐಐಟಿ ಬಾಂಬೆ ಸಹಯೋಗದಲ್ಲಿ ಬೆಂಗಳೂರಿನ 'ಪ್ಯುಪಿಲ್ ಮೆಷ್' ಅಭಿವೃದ್ಧಿ

• ಸಚ್ಚಿದಾನಂದ ಕುರುಗುಂದ

ಬೆಂಗಳೂರು: ಸ್ಮಾರ್ಟ್ ಗಡಿಯಾರದ ರೀತಿಯಲ್ಲಿ ಇನ್ನು ಮುಂದೆ ಸ್ಮಾರ್ಟ್ ಕನ್ನಡಕವೂ ಶೀಘ್ರದಲ್ಲೇ ಬರಲಿದೆ. ಸ್ಮಾರ್ಟ್‌ಫೋನ್‌ನ ಎಲ್ಲ ಸೌಲಭ್ಯಗಳೂ ಇದರಲ್ಲಿ ಇರಲಿವೆ.

ಸಾಮಾನ್ಯ ಕನ್ನಡಕಗಳನ್ನು ಹಾಕುವ ಮಾದರಿಯಲ್ಲೇ ಇದನ್ನು ಬಳಸಬಹುದು. ಐಐಟಿ ಬಾಂಬೆ ಸಹಯೋಗದಲ್ಲಿ ಬೆಂಗಳೂರಿನ 'ಪ್ಯುಪಿಲ್ ಮೆಷ್' ನವೋದ್ಯಮ ಕಂಪನಿ ಇಂತಹ ಪ್ರಯತ್ನ ಕೈಗೊಂಡಿದೆ. ನಾಲ್ಕೈದು ವರ್ಷಗಳಲ್ಲಿ ಸ್ಮಾರ್ಟ್ ಕನ್ನಡಕಗಳನ್ನು ಅಭಿವೃದ್ಧಿಪಡಿಸುವ ಗುರಿ ಹೊಂದಿದೆ.

ಈ ಕಂಪನಿ 'ಆರ್ಮಾರ್ ಆರ್30' ಹೆಸರಿನಲ್ಲಿ ಪ್ರಸ್ತುತ ಅಭಿವೃದ್ಧಿಪಡಿಸಿರುವ ಕನ್ನಡಕದ ಗ್ಲಾಸ್‌ಗಳನ್ನು ಸೇನೆಯಲ್ಲಿ ದಿಕ್ಕುಗಳನ್ನು ಗುರುತಿಸಲು ಮತ್ತು ನಿಖರ ಗುರಿಗಾಗಿ ಬಳಸಲಾಗುತ್ತಿದೆ. ಜತೆಗೆ, ಆಟೊಮೊಬೈಲ್ ಉದ್ಯಮಗಳಲ್ಲೂ ಇದನ್ನು ಉಪಯೋಗಿಸಲಾಗುತ್ತಿದೆ.

ಯೋಧರು ಹೆಗಲ ಮೇಲೆ ಕ್ಷಿಪಣಿಗಳು ಅಥವಾ ಯಾವುದೇ ಶಸ್ತ್ರಾಸ್ತ್ರಗಳ ಮೂಲಕ ದಾಳಿ ನಡೆಸುವ ಸಂದರ್ಭದಲ್ಲಿ ನಿಖರ ಗುರಿಗಾಗಿ ಈ ಗ್ಲಾಸ್‌ಗಳ ನೆರವು ಪಡೆಯಲಾಗುತ್ತಿದೆ. ಹೆಲ್ಮೆಟ್‌ನಲ್ಲೂ ಅಳವಡಿಸಲಾದ ಈ ಗ್ಲಾಸ್‌ಗಳು ಸುರಕ್ಷಿತ ವ್ಯವಸ್ಥೆಯನ್ನು ಹೊಂದಿವೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಏರೋ ಇಂಡಿಯಾ ಪ್ರದರ್ಶನದಲ್ಲಿ ಪ್ಯುಪಿಲ್ ಮೆಷ್ ಕಂಪನಿ ಅಭಿವೃದ್ಧಿಪಡಿಸಿರುವ ಕನ್ನಡಕದ ವಿಶೇಷ ಗ್ಲಾಸ್‌ಗಳನ್ನು ಕಂಪನಿಯ ಅಧಿಕಾರಿ ಪ್ರದೀಪ್ ಪಾರ್ಥಸಾರಥಿ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ವಾಹನಗಳ ಚಲಾಯಿಸುವ ಸಂದರ್ಭದಲ್ಲೂ ಇದನ್ನು ಬಳಸಬಹುದಾಗಿದೆ.

ವಿಶೇಷವಾಗಿ ತಯಾರಿಸಿದ ಈ ಗ್ಲಾಸ್‌ಗಳನ್ನು 'ಏರೋ ಇಂಡಿಯಾ–2023'ರಲ್ಲಿ ಪ್ರದರ್ಶಿಸಲಾಗಿದೆ.

'ಸೇನಾ ಕಾರ್ಯಾಚರಣೆಗಳಲ್ಲಿ ಸದ್ಯ ಬಳಕೆಯಲ್ಲಿ ಗ್ಲಾಸ್‌ಗಳು ಹೆಚ್ಚು ಅನುಕೂಲವಾಗಿವೆ. ಸ್ಥಳದ ಮಾಹಿತಿ ಮತ್ತು ಗುರುತಿಸಲು ಇಂತಹ ಗ್ಲಾಸ್‌ಗಳು ಬಹಳಷ್ಟು ಪ್ರಯೋಜ-ನವಾಗಿವೆ. ಇದರಿಂದ, ತ್ವರಿತಗತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳಬಹುದಾಗಿದೆ. ಸಮಗ್ರವಾದ ಮಾಹಿತಿ ದೊರೆಯುವುದರಿಂದ ಕಾರ್ಯಾಚರಣೆಯು ಸರಳವಾಗಿಯೂ ಮತ್ತು ಸಮರ್ಥವಾಗಿಯೂ ಕೈಗೊಳ್ಳಬಹುದಾಗಿದೆ' ಎಂದು ಕಂಪನಿಯ ಪ್ರದೀಪ್ ಪಾರ್ಥಸಾರಥಿ ವಿವರಿಸಿದರು.

'ಸ್ಮಾರ್ಟ್ ಕನ್ನಡಕದ ವಿನ್ಯಾಸಗಳನ್ನು ರೂಪಿ-ಸಲಾಗುತ್ತಿದೆ. ಪ್ರತಿಯೊಂದು ವಿಷಯವು ಸ್ಮಾರ್ಟ್ ಕನ್ನಡಕದಲ್ಲಿ ದೊರೆಯಲಿವೆ. ಕನ್ನಡಕದ ವಿಶೇಷ ಚೌಕಟ್ಟಿನಲ್ಲಿ ಸ್ಮಾರ್ಟ್‌ಫೋನ್‌ನ ತಂತ್ರಜ್ಞಾನವ-ನ್ನು ಅಳವಡಿಸಲಾಗುತ್ತಿದೆ. ಇದು ಸದ್ಯ ಮಾರುಕಟ್ಟೆಯಲ್ಲಿ ಲಭ್ಯವಿರುವ ಸ್ಮಾರ್ಟ್‌ಫೋನ್ ರೀತಿ ಇರುವುದಿಲ್ಲ. ಪ್ರತ್ಯೇಕವಾದ ತಂತ್ರಜ್ಞಾನ ಹೊಂದಿರುತ್ತದೆ. ಇದಕ್ಕೆ ಪ್ರತ್ಯೇಕ ಸ್ಮಾರ್ಟ್‌ಫೋನ್ ಹೊಂದುವ ಅಗತ್ಯವೂ ಇಲ್ಲ. ಮುಂಬರುವ ದಿನಗಳಲ್ಲಿ ತಂತ್ರಜ್ಞಾನ ಅಭಿವೃದ್ಧಿಯಾದಂತೆ ಮತ್ತಷ್ಟು ಸುಧಾರಿಸಬಹುದು' ಎಂದು ವಿವರಿಸುತ್ತಾರೆ.

ಈ ಕಂಪನಿ ಅಭಿವೃದ್ಧಿಪಡಿಸುತ್ತಿರುವ ತಂತ್ರಜ್ಞಾನ-ಗಳಿಗೆ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅನುದಾನವೂ ದೊರೆತಿದೆ.

ಕೆಐಎಡಿಬಿ ಭೂಮಿ ಹಂಚಿಕೆ: ಅವ್ಯವಹಾರ ಆರೋಪ

ಬೆಂಗಳೂರು: 'ಕೆಐಎಡಿಬಿಯಿಂದ ಖಾಸಗಿ ರಿಯಲ್ ಎಸ್ಟೇಟ್ ಸಂಸ್ಥೆಗೆ ಭೂಮಿ ನೀಡಿಕೆಯಲ್ಲಿ ಅವ್ಯವಹಾರ-ವಾಗಿದೆ' ಎಂದು ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಮಾಡಿದ ಆರೋಪ ಚರ್ಚೆಗೆ ಗ್ರಾಸವಾಯಿತು.

'ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಬಡವರಿಗೆ ಮನೆ ಕಟ್ಟಿಕೊಡಲು ದೇವನಹಳ್ಳಿಯ ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಬ್ರಿಗೇಡ್ ರಿಯಲ್ ಎಸ್ಟೇಟ್ ಸಂಸ್ಥೆಗೆ ಕೆಐಎಡಿಬಿಯಿಂದ ಭೂಮಿ ನೀಡಲಾಗಿದೆ. ಅದರಲ್ಲಿ ಬಡವರಿಗೆ ಮನೆ ಕಟ್ಟಿಕೊಡುವುದಾಗಿ ಹೇಳಲಾಗಿತ್ತು. ಆದರೆ, ನಿಯಮ ಪಾಲನೆ ಆಗದಿರು-ವುದರಿಂದ ಸರ್ಕಾರಕ್ಕೆ ನಷ್ಟವಾಗಿದೆ' ಎಂದು ಮರಿತಿಬ್ಬೇಗೌಡ ದೂರಿದರು.

ಅದಕ್ಕೆ ಪ್ರತಿಕ್ರಿಯಿಸಿದ ಕೈಗಾರಿಕೆ ಸಚಿವ ಮುರುಗೇಶ ನಿರಾಣಿ, 'ಕೆಐಎಡಿಬಿ ಭೂಸ್ವಾಧೀನ ಮಾಡಿಕೊಳ್ಳುವ ಜಾಗದಲ್ಲಿ ಶೇ 15ರಷ್ಟು ಭೂಮಿಯನ್ನು ಆಸ್ಪತ್ರೆ, ಶಾಲೆ, ವಸತಿ ಸೇರಿದಂತೆ ಮೂಲಸೌಕರ್ಯಕ್ಕೆ ಬಳಸಲಾಗುತ್ತಿದೆ. ಬ್ರಿಗೇಡ್ ಸಂಸ್ಥೆಗೆ ತಲಾ 25 ಎಕರೆಯಂತೆ ಎರಡು ಬಾರಿ ಭೂಮಿ ನೀಡಲಾಗಿದೆ. ಕೌಶಲ್ಯ ಅಭಿವೃದ್ಧಿಗೆ ಖಾಸಗಿ ಸಹಭಾ-ಗಿತ್ವದಲ್ಲಿ ಸಂಸ್ಥೆ ಸ್ಥಾಪಿಸಲು ಈ ಭೂಮಿ ನೀಡಲಾಗಿದೆ. ಅದನ್ನು ಉಚಿತವಾಗಿ ನೀಡಿಲ್ಲ. ಸರ್ಕಾರಕ್ಕೆ ಬರಬೇಕಾದ ಹಣ ಪಡೆಯಲಾಗಿದೆ. ನಿಯಮ ಉಲ್ಲಂಘನೆ ಆಗಿಲ್ಲ' ಎಂದರು.

ಉತ್ತರದಿಂದ ಸಮಾಧಾನಗೊ-ಳ್ಳದ ಮರಿತಿಬ್ಬೇಗೌಡ, 'ಮಂತ್ರಿಗಳು ರಾಜ್ಯವನ್ನು ಹರಾಜು ಹಾಕುತ್ತಾರೆ' ಎಂದರು. ಅದಕ್ಕೆ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿಯ ವೈ.ಎ. ನಾರಾಯಣಸ್ವಾಮಿ, ತೇಜಸ್ವಿನಿ ಗೌಡ ಆಕ್ಷೇಪ ವ್ಯಕ್ತಪಡಿಸಿದರು.

'ಈ ಬಗ್ಗೆ ಚರ್ಚೆಗೆ ಹೆಚ್ಚಿನ ಕಾಲಾವಕಾಶ ನೀಡಬೇಕು. ಅಲ್ಲದೆ, ಸದನ ಸಮಿತಿಯಿಂದ ತನಿಖೆ ನಡೆಸಬೇಕು' ಎಂದು ಮರಿತಿಬ್ಬೇಗೌಡ ಪಟ್ಟುಹಿಡಿದರು. ಈ ಬಗ್ಗೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಸಮಾಧಾನಪಡಿಸಿದರು.

'ಬಾದಾಮಿಯಿಂದಲೇ ಕಣಕ್ಕಿಳಿಯಿರಿ'

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ ಬಾದಾಮಿಯ ನೂರಾರು ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು, ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ತಮ್ಮ ಕ್ಷೇತ್ರದಿಂದಲೇ ಕಣಕ್ಕಿಳಿ-ಯುವಂತೆ ಒತ್ತಾಯಿಸಿದರು.

ಸಿದ್ದರಾಮಯ್ಯ ಅವರ ನಿವಾಸಕ್ಕೆ ಬಂದ ಮುಖಂಡರು, ಕಾರ್ಯಕರ್ತರು, ಅವರು ಮನೆಯಿಂದ ಹೊರಬರುವು-ದಕ್ಕಾಗಿ ಸುಮಾರು 2 ಗಂಟೆ ಕಾದರು. ಅವರು ಮನೆಯಿಂದ ಹೊರಡುತ್ತಿದ್ದಂತೆ ಮುತ್ತಿಗೆ ಹಾಕಿ ಒತ್ತಡ ಹೇರುವ ಪ್ರಯತ್ನ ಮಾಡಿದರು. ಅಲ್ಲದೆ, ಮಾತನಾಡಿಸಲು ಮುಂದಾದರು. ಆದರೆ, ಅವರು ಮಾತುಕತೆಗೆ ನಿಲ್ಲದೆ ಕಾರು ಏರಿ ಹೊರಟಾಗ ಕೆಲಹೊತ್ತು ಧರಣಿ ಕುಳಿತರು.

'ಬಾದಾಮಿ ಕ್ಷೇತ್ರಕ್ಕೆ ಬಾರದೇ ಇದ್ದರೆ ಸಾಮೂಹಿಕ ರಾಜೀನಾಮೆ ನೀಡುತ್ತೇವೆ' ಎಂದು ಗ್ರಾಮ ಪಂಚಾಯಿತಿ, ಪಟ್ಟಣ ಪಂಚಾಯಿತಿ, ಪುರಸಭೆ ಸದಸ್ಯರು ಎಚ್ಚರಿಕೆಯ ಪತ್ರವನ್ನು ಸಿದ್ದರಾಮಯ್ಯ ಅವರಿಗೆ ನೀಡಿದರು.

ಬೆಂಗಳೂರಿನಲ್ಲಿ ಅಮೆರಿಕ ವೀಸಾ ಕಚೇರಿ– ಸಿಎಂ ಆಗ್ರಹ

ಬೆಂಗಳೂರು: 'ಬೆಂಗಳೂರಿನಲ್ಲಿ ಅಮೆರಿಕ ವೀಸಾ ಕಚೇರಿ ತೆರೆಯುವ ಅಗತ್ಯವಿದೆ' ಎಂದು ತಮ್ಮನ್ನು ಭೇಟಿಯಾದ ಭಾರತದಲ್ಲಿರುವ ಅಮೆರಿಕದ ರಾಯಭಾರಿ ಎಲಿಜಬೆತ್ ಜೋನ್ಸ್ ಮತ್ತು ಚೆನ್ನೈನಲ್ಲಿರುವ ಕಾನ್ಸುಲ್ ಜನರಲ್ ಜೂಡಿತ್ ರೇವಿನ್ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಪ್ರಸ್ತುತ ವೀಸಾ ಕಚೇರಿ ಚೆನ್ನೈನಲ್ಲಿ ಇರುವುದರಿಂದ ಬೆಂಗಳೂರಿನಿಂದ ಅಮೆರಿಕಕ್ಕೆ ಪ್ರಯಾಣಿಸುವವರಿಗೆ ತೊಂದರೆ-ಯಾಗುತ್ತಿದೆ. ಪ್ರತಿನಿತ್ಯ ವಿದೇಶಿಗರು ಸೇರಿದಂತೆ ಐದು ಸಾವಿರಕ್ಕೂ ಹೆಚ್ಚು ಜನ ಅಮೆರಿಕಕ್ಕೆ ಪ್ರಯಾಣ ಬೆಳೆಸು-ತ್ತಿದ್ದಾರೆ. ಹೀಗಾಗಿ, ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ಜಾಗತಿಕ ಹೂಡಿಕೆದಾರರ ಸಮಾವೇಶ 'ಇನ್ವೆಸ್ಟ್ ಕರ್ನಾಟಕ' ಸೇರಿದಂತೆ ಅಂತರರಾಷ್ಟ್ರೀಯ ಮಟ್ಟದ ಹಲವು ಸಮಾವೇಶ ಹಾಗೂ ವಿಚಾರಸಂಕಿರಣಗಳು ಬೆಂಗಳೂರಿನಲ್ಲಿ ನಡೆಯುತ್ತಲೇ ಇರುತ್ತವೆ. ಅಮೆರಿಕದ ಸಂಸ್ಥೆಗಳಿಗೆ ಬೆಂಗಳೂರಿನಲ್ಲಿರುವ ಎಲ್ಲ ರೀತಿಯ ಸಹಕಾರವನ್ನು ಸರ್ಕಾರ ನೀಡುತ್ತಿದೆ. ವಿದೇಶಿ ಬಂಡವಾಳ ಹೂಡಿಕೆ ರಾಜ್ಯದಲ್ಲಿ ಹೆಚ್ಚಾಗಿದೆ' ಎಂದರು.

ಎಲಿಜಬೆತ್ ಜೋನ್ಸ್ ಮಾತನಾಡಿ, 'ಬೆಂಗಳೂರಿಗೆ ಇದು ನನ್ನ ಮೊದಲ ಭೇಟಿ. ಇಲ್ಲಿ 650ಕ್ಕೂ ಹೆಚ್ಚು ಅಮೆರಿಕನ್ ಕಂಪನಿಗಳಿವೆ. ಅವುಗಳಿಂದ ಅಮೆರಿಕ ಮತ್ತು ಭಾರತದಲ್ಲಿ ಲಕ್ಷಾಂತರ ಉದ್ಯೋಗ ಸೃಷ್ಟಿಯಾಗುತ್ತಿವೆ. ಅಮೆರಿಕ-ಭಾರತದ ವಾಣಿಜ್ಯ ಸಹಭಾಗಿತ್ವವನ್ನು ಮುನ್ನ-ಡೆಸುವಲ್ಲಿ ಕರ್ನಾಟಕ ಮಹತ್ವದ ಪಾತ್ರವಹಿಸಿದ್ದು, ಈ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಲು ಉತ್ಸುಕರಾಗಿದ್ದೇವೆ' ಎಂದರು.

ಸಮಾಜ ಸುಧಾರಕ ಸೇವಾಲಾಲ್

• ಎ.ಆರ್. ಗೋವಿಂದಸ್ವಾಮಿ

ಇಂದು ಸಂತ ಸೇವಾಲಾಲ್ ಜಯಂತಿ

ಬಂಜಾರ ಜನಾಂಗದಿಂದ ಪೂಜಿಸಲ್ಪಡುತ್ತಿರುವ ಸೇವಾಲಾಲರು 1739ರಲ್ಲಿ ಕರ್ನಾಟಕದ ದಾವಣಗೆರೆ ಜಿಲ್ಲೆಯ ಸೂರಗೊಂಡನಕೊಪ್ಪದಲ್ಲಿ ಭೀಮಾನಾಯ್ಕ್ ಮತ್ತು ಧರ್ಮಿಣಿಬಾಯಿಯ ವರಿಗೆ ಜನಿಸಿದರು. ಬಂಜಾರರು ಹಾಡುವ ಲಾವಣಿ ಪದಗಳಲ್ಲಿ, ಕೋಲಾಟದ ಹಾಡುಗಳಲ್ಲಿ, ವಾಜ, ಮದುವೆ–ಹಬ್ಬಹರಿದಿನಗಳಲ್ಲಿ ಹಾಡುವ ಹಾಡುಗಳಲ್ಲಿ ಜನಾಂಗದ ಇತಿಹಾಸವು ಅಡಗಿತ್ತು, ಅದನ್ನು ಸೇವಾಲಾಲರು ತಿಳಿದುಕೊಂಡಿದ್ದರು. ಲದೇಣಿ (ಸರಕು ಸಾಗಾಣಿಕೆ) ಮೂಲಕ ಸೇವಾಲಾಲರು ಕೂಡ ಸಾವಿರಾರು ಜನರು ಇರುವ ತಮ್ಮದೇ ತಂಡವನ್ನು ಕಟ್ಟಿಕೊಂಡರು. ಆಗಿನ ವಸಾಹತುಶಾಹಿಗಳಿಂದ ಎದುರಾದ ಅನೇಕ ಸವಾಲುಗಳನ್ನು ಎದುರಿಸುತ್ತಲೇ ಸಾವಿರಾರು ಗೋವುಗಳೊಂದಿಗೆ ಸಂಚಾರ ಮಾಡುತ್ತಾ ಇಡೀ ದೇಶವನ್ನೇ ಸುತ್ತಿದರು. ದುಶ್ಚಟಗಳಿಗೆ ಬಲಿಯಾಗಿದ್ದ ತನ್ನ ಸಮುದಾಯದ ಜನರನ್ನು ತಿದ್ದಿ, ಬುದ್ಧಿ ಹೇಳಿದರು. ಬಂಜಾರರ ಕುಲದೇವತೆಯಾದ ಮರಿಯಮ್ಮ ಯಾಡಿಯನ್ನು (ತಾಯಿ) ಪೂಜಿಸುತ್ತಿದ್ದರು.

ತಮ್ಮ ಧನಾತ್ಮಕ ಚಿಂತನೆಗಳೊಂದಿಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುತ್ತಿದ್ದ ಸೇವಾಲಾಲರು ಕೆಲವೇ ವರ್ಷಗಳಲ್ಲಿ ನಾಡಿನಾದ್ಯಂತ ಸಮುದಾಯದ ಜನರಿಗೆ ದಾರ್ಶನಿಕರಾಗಿ ಕಂಡರು. ಪ್ರತಿಯೊಬ್ಬರು ಶಿಕ್ಷಣ ಪಡೆಯಬೇಕು; ಮೌಢ್ಯ–ಕಂದಾಚಾರಗಳಿಗೆ ಬಲಿಯಾಗದೆ ನಮ್ಮ ಪೂರ್ವಿಕರಂತೆ ನಾವೂ ಪ್ರಕೃತಿಯನ್ನು ಪೋಷಿಸಬೇಕು ಮತ್ತು ಆರಾಧಿಸಬೇಕು ಎಂದು ಕರೆ ನೀಡಿದರು. ಸಕಲ ಜೀವಜಂತುಗಳಿಗೂ ಒಳಿತನ್ನೇ ಬಯಸಬೇಕು ಎನ್ನುವ ವಿಶ್ವಮಾನವತೆಯನ್ನು ಸಾರಿದರು. ಮಹಿಳೆಯರ ಮೇಲಾಗುತ್ತಿದ್ದ ದೌರ್ಜನ್ಯ, ಅಸಮಾನತೆಯನ್ನು ಖಂಡಿಸಿದರು. 1806ರಲ್ಲಿ ಸೇವಾಲಾಲರು ಮಹಾರಾಷ್ಟ್ರದ ಪೌರಾಘಡ್‌ನಲ್ಲಿ ಮರಣ ಹೊಂದಿದರು.

ಪ್ರತಿಯೊಂದು ಬಂಜಾರ ತಾಂಡಗಳಲ್ಲೂ ಸೇವಾಲಾಲ್ ಹಾಗೂ ಮರಿಯಮ್ಮದೇವಿಯ ದೇವಸ್ಥಾನವಿರುತ್ತದೆ. ಎರಡೂವರೆ ಶತಮಾನಗಳು ಕಳೆದರೂ ಸೇವಾಲಾಲ್ ಅವರನ್ನು ಇಡೀ ಬಂಜಾರ ಜನಾಂಗ ಈಗಲೂ ಪೂಜಿಸುತ್ತಿದ್ದಾರೆ.

ಅನೇಕ ಲಾವಣಿ ಪದಗಳು, ಲಂಬಾಣಿ ಶೈಲಿಯ ನೃತ್ಯಗಳು, ವಾಜ(ಭಜನೆ) – ಹೀಗೆ ಅನೇಕ ಬಂಜಾರ ಸಂಸ್ಕೃತಿಯ ಮೂಲಕ ಅವರನ್ನು ಸ್ಮರಿಸಿಕೊಳ್ಳಲಾಗುತ್ತದೆ. ಪ್ರಮಾನವತಾವಾದಿ ಚಿಂತನೆಗಳು, ಪ್ರಗತಿಪರ ಆಲೋಚನೆಗಳು, ಎಲ್ಲ ಜೀವಿಗಳಲ್ಲೂ ದೇವರನ್ನು ಕಾಣಬೇಕು ಎನ್ನುವ ಅವರ ತತ್ವಗಳ ಅನುಸಂಧಾನದ ಮೂಲಕ ನಾವು ಸೇವಾಲಾಲಾರನ್ನು ಸ್ಮರಿಸಬೇಕು.

ಈಗಿನ ಪೀಳಿಗೆ ಸೇವಾಲಾಲರನ್ನು ನಿಜವಾಗಿಯೂ ಪೂಜಿಸುವುದಾದರೆ ಅವರು ಅನುಸರಿಸಿದ ತತ್ವಗಳನ್ನು ಪಾಲಿಸಬೇಕು. ದುಶ್ಚಟಗಳಿಗೆ ಬಲಿಯಾಗದಂತೆ ಅವರು ಸಾರಿದ ಸಂದೇಶವನ್ನು, ಮೌಢ್ಯ–ಕಂದಾಚಾರಗಳಿಗೆ ಬಲಿಯಾಗದಂತೆ ಎಚ್ಚರಿಸಿದ ವೈಜ್ಞಾನಿಕ ಮನೋಭಾವವನ್ನು, ಸಕಲ ಚರಾಚರ ಜೀವಿಗಳಿಗೂ ಒಳಿತಾಗಲಿ ಎಂಬ ವಿಶ್ವಮಾನವ ತತ್ವವನ್ನು ಅನುಸರಿಸಬೇಕು. ಹೆಣ್ಣುಮಕ್ಕಳಿಗೆ ಸಮಾನ ಗೌರವ ಮತ್ತು ಸ್ವಾತಂತ್ರ್ಯ ದಕ್ಕಬೇಕು ಎಂದು ಅವರು ಹೇಳಿದ ಸಮಾನತೆಯ ಅಂಶಗಳನ್ನು ಪಾಲಿಸುವವರಾಗಬೇಕು. ಪರರ ನೋವಿಗೆ ಸ್ಪಂದಿಸುವ ಗುಣವನ್ನು ಬೆಳೆಸಿಕೊಳ್ಳಬೇಕು. ಪರಸ್ಪರ ಗೌರವಿಸುವುದನ್ನು ಕಲಿಯಬೇಕು. ಅದೇ ನಾವು ಸೇವಾಲಾಲರನ್ನು ಪೂಜಿಸುವ ವಿಧಾನ.

‘ಕಾಮ ಕ್ರೋಧೇರಿ ಧೂಣಿ ಬಾಳೋ, ಸತ್ಯ ಧರ್ಮೇನಾ ಅಂಗ ಚಲವೋ. ಭೂಕ ಜೇನ ಅನ್ ಖರಾಯೋ, ತರಸ ಜೇನ ಪಾಣಿಪರಯೋ’ – ಎಂದರೆ ‘ಜೀವನದಲ್ಲಿ ಅರಿಷಡ್ವರ್ಗಗಳನ್ನು ಸುಟ್ಟುಹಾಕಿ, ಸತ್ಯಧರ್ಮವನ್ನು ಮುನ್ನಡೆಸಿ, ಹಸಿದವರಿಗೆ ಅನ್ನ ನೀಡಿ, ಬಾಯಾರಿದವರಿಗೆ ನೀರು ಕೊಡಿ.’ ಇದು ಸೇವಾಲಾಲರ ಹಲವು ಸಂದೇಶಗಳಲ್ಲಿ ಒಂದು. ಇಂತಹ ನೀತಿಗಳ ಅನುಸರಣೆಯಲ್ಲಿಯೇ ಸೇವಾಲಾಲರ ಪ್ರಸ್ತುತತೆ ಇದೆ.

ಸೇವಾಲಾಲ್ ಕ್ಷೇತ್ರದ ಅಭಿವೃದ್ಧಿಗೆ ₹10 ಕೋಟಿ

ಪ್ರಜಾವಾಣಿ ವಾರ್ತೆ

ಭಾಯಾಗಡ್: (ನ್ಯಾಮತಿ): ‘ಸೂರಗೊಂಡನಕೊಪ್ಪದ ಭಾಯಾಗಡ್‌ನ ಸಂತ ಸೇವಾಲಾಲ್ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸಂತ ಸೇವಾಲಾಲ್ ಕ್ಷೇತ್ರ ಅಭಿವೃದ್ಧಿ ಮತ್ತು ನಿರ್ವಹಣಾ ಪ್ರತಿಷ್ಠಾನಕ್ಕೆ ₹10 ಕೋಟಿ ಅನುದಾನ ಬಿಡುಗಡೆ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಮಂಗಳವಾರ ಆಯೋಜಿಸಿದ್ದ ಸಂತ ಸೇವಾಲಾಲ್ ಅವರ 284ನೇ ಜಯಂತ್ಯುತ್ಸವ ಹಾಗೂ ವಿವಿಧ ಕಟ್ಟಡಗಳ ಉದ್ಘಾಟನಾ ಕಾರ್ಯಕ್ರಮಕ್ಕೆ ನಗಾರಿ ಬಾರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದರು.

‘ಮಾರ್ಚ್ ತಿಂಗಳಲ್ಲಿ ಹೊನ್ನಾಳಿ ಅಥವಾ ನ್ಯಾಮತಿಯಲ್ಲಿ ಸಮಾವೇಶ ನಡೆಸಿ 52,000 ಜನರಿಗೆ ಹಕ್ಕುಪತ್ರಗಳನ್ನು ನೀಡಲಾಗುವುದು’ ಎಂದು ಅವರು ತಿಳಿಸಿದರು.

‘ಈಗಾಗಲೇ ಹಕ್ಕುಪತ್ರ ನೀಡಿರುವ 52,000 ಫಲಾನುಭವಿಗಳಿಗೆ ಎಸ್‌ಸಿಪಿ, ಟಿಎಸ್‌ಪಿ ಯೋಜನೆಯಡಿ ಮನೆಗಳನ್ನು ನಿರ್ಮಿಸಿಕೊಡಲು ಲಿಡ್ಕರ್ ಮಾದರಿಯಲ್ಲೇ ಕಾರ್ಯಕ್ರಮ ರೂಪಿಸಲಾಗುವುದು. ಬಂಜಾರ ಸಮುದಾಯ ಹೆಚ್ಚು ಇರುವ ಕಡೆ ಮಕ್ಕಳ ಶಿಕ್ಷಣಕ್ಕೆ ವಿಶೇಷ ವಸತಿ ಶಾಲೆಗಳನ್ನು ನಿರ್ಮಿಸಲಾಗುವುದು’ ಎಂದು ಹೇಳಿದರು.

‘ಶಿವಮೊಗ್ಗ– ರಾಣೆಬೆನ್ನೂರು ರೈಲು ಮಾರ್ಗದಲ್ಲಿ ಸೂರಗೊಂಡನಕೊಪ್ಪ ಭಾಯಾಗಡ್‌ದಲ್ಲಿ ರೈಲು ನಿಲ್ದಾಣ ಮಂಜೂರು ಮಾಡಿಸಲು ಯತ್ನಿಸಲಾಗುತ್ತಿದೆ. ಸಮಾಜದ ಬೇಡಿಕೆಗಳ ಈಡೇರಿಕೆಗೆ ಮುಖ್ಯಮಂತ್ರಿ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ತಿಳಿಸಿದರು.

ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಜಯಂತ್ಯುತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು. ಸಚಿವ ಪ್ರಭು ಚವ್ಹಾಣ್, ಶಾಸಕ ಎಂ.ಪಿ.ರೇಣುಕಾಚಾರ್ಯ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಸಮಾಜದ ಬಾಬುಸಿಂಗ್ ಮಹಾರಾಜ್, ಸಿದ್ಧಲಿಂಗ ಸ್ವಾಮೀಜಿ ಇದ್ದರು –ಪ್ರಜಾವಾಣಿ ಚಿತ್ರ

ಹನುಮಾನ್ ಚಿತ್ರ ತೆಗೆದು ಹಾಕಿದ ಎಚ್‌ಎಎಲ್

ಬೆಂಗಳೂರು: ಎಚ್‌ಎಲ್‌ಎಫ್‌ಟಿ–42 ಯುದ್ಧ ವಿಮಾನ ಮಾದರಿ ಮೇಲಿದ್ದ ಹನುಮಾನ್ ಚಿತ್ರವನ್ನು ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಮಂಗಳವಾರ ತೆಗೆದುಹಾಕಿದೆ.

ತರಬೇತಿ ನೀಡಲು ಈ ಯುದ್ಧ ವಿಮಾನವನ್ನು ಬಳಸಲು ಉದ್ದೇಶಿಸಲಾಗಿದೆ. ಯಲಹಂಕ ವಾಯು ನೆಲೆಯಲ್ಲಿ ನಡೆಯುತ್ತಿರುವ ‘ಏರೋ ಇಂಡಿಯಾ –2023’ರಲ್ಲಿ ಇದೇ ಮೊದಲ ಬಾರಿ ಈ ವಿಮಾನದ ಮಾದರಿಯನ್ನು ಪ್ರದರ್ಶಿಸಲಾಗಿದೆ.

’ಚಂಡಮಾರುತ ಬರುತ್ತಿದೆ’ ಎನ್ನುವ ಘೋಷ ವಾಕ್ಯದ ಜತೆಗೆ ಹನುಮಾನ್ ಚಿತ್ರವು ಯುದ್ಧ ವಿಮಾನದ ಹಿಂಬದಿಯ ರೆಕ್ಕೆಯಲ್ಲಿತ್ತು. ಸೋಮವಾರ ಇದ್ದ ಈ ಚಿತ್ರವನ್ನು ಮಂಗಳವಾರ ತೆಗೆದುಹಾಕಲಾಗಿದೆ.

‘ಎಚ್‌ಎಫ್–24 ಮಾರುತ್ ಎನ್ನುವ ಎಚ್‌ಎಎಲ್ ಯುದ್ಧ ವಿಮಾನ ಹಿಂದೆಯೂ ಇತ್ತು. ಇದೇ ಹೆಸರನ್ನು ಇಲ್ಲಿ ಬಳಸಲಾಗಿದೆ’ ಎಂದು ಎಚ್‌ಎಎಲ್ ಅಧಿಕಾರಿಯೊಬ್ಬರು ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಎಚ್‌ಎಎಲ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸಿ.ಬಿ. ಅನಂತ್ ಕೃಷ್ಣನ್, ‘ಯುದ್ಧ ವಿಮಾನದ ಶಕ್ತಿಯನ್ನು ಬಿಂಬಿಸುವ ಉದ್ದೇಶದಿಂದ ಈ ಚಿತ್ರ ಹಾಕಲಾಗಿತ್ತು’ ಎಂದು ಸಮರ್ಥಿಸಿಕೊಂಡರು.

ವಿಶೇಷ ಏನು: ಎಚ್‌ಎಲ್‌ಎಫ್‌ಟಿ–42 ಯುದ್ಧ ವಿಮಾನವು ಸೂಪರ್‌ಸಾನಿಕ್ ತರಬೇತಿ ವಿಮಾನವಾಗಿದೆ. ಆಧುನಿಕ ಯುದ್ಧ ವಿಮಾನಗಳ ತರಬೇತಿ ಪಡೆಯುವ ಪೈಲಟ್‌ಗಳಿಗಾಗಿ ಇದನ್ನು ರೂಪಿಸಲಾಗುತ್ತಿದೆ. ಈ ಯುದ್ಧ ವಿಮಾನವನ್ನು ತಯಾರಿಸುವ ಪ್ರಕ್ರಿಯೆ ನಡೆಯುತ್ತಿದ್ದು, 4– 5 ವರ್ಷಗಳಲ್ಲಿ ಲಭ್ಯವಾಗಲಿದೆ. ಇದು ಅತ್ಯಾಧುನಿಕ ಯುದ್ಧ ವಿಮಾನವಾಗಿದೆ ಎಂದು ಗ್ರೂಪ್ ಕ್ಯಾಪ್ಟನ್ ಅಜಯ್ ಮೆನನ್ ತಿಳಿಸಿದರು.

ಬೆಂಗಳೂರಿನಲ್ಲಿ ನಡೆಯುತ್ತಿರುವ ಏರೋ ಇಂಡಿಯಾ ‘ಎಚ್‌ಎಲ್‌ಎಫ್‌ಟಿ–42’ ಯುದ್ಧ ವಿಮಾನ ಮಾದರಿ ಮೇಲಿದ್ದ ಹನುಮಾನ್ ಚಿತ್ರ. – ಪಿಟಿಐ ಚಿತ್ರ

‘ಎಚ್‌ಎಲ್‌ಎಫ್‌ಟಿ–42’ ಯುದ್ಧ ವಿಮಾನ ಮಾದರಿ ಮೇಲಿನ ಹನುಮಾನ್ ಚಿತ್ರವನ್ನು ತೆಗೆದು ಹಾಕಲಾಗಿದೆ –ಪ್ರಜಾವಾಣಿ ಚಿತ್ರ

Infosys® Navigate your next

Infosys Limited

Regd. office : Electronics City, Hosur Road, Bengaluru 560 100, India.

CIN : L85110KA1981PLC013115
Website : www.infosys.com
Email : investors@infosys.com
T : 91 80 2852 0261 / extn 67775
F : 91 80 2852 0362

Contact: A.G.S. Manikantha, Company Secretary
Tel: +91 80 4116 7775;
Fax: +91 80 2852 0754
Email: sharebuyback@infosys.com

POST-BUYBACK PUBLIC ADVERTISEMENT FOR THE ATTENTION OF SHAREHOLDERS OF INFOSYS LIMITED

This post-buyback public advertisement (“**Advertisement**”) is being made in accordance with the Regulation 24(vi) and other applicable provisions of the Securities and Exchange Board of India (Buy-Back of Securities) Regulations, 2018, as amended (“**Buyback Regulations**”) including any statutory modification(s), or re-enactment for the time being in force, regarding completion of the Buyback (as defined below) by Infosys Limited (“**the Company**”) of its own equity shares from the members of the Company (other than the promoters, promoter group and persons in control of the Company).

This Advertisement should be read in conjunction with the public announcement dated December 05, 2022, published on December 06, 2022 (“**Public Announcement**”), issued in connection with the Buyback. Unless specifically defined herein, capitalized terms and abbreviations used herein have the same meaning as ascribed to them in the Public Announcement.

1. THE BUYBACK

1.1 The Board of Directors of the Company (hereinafter referred to as “**the Board**”, which expression includes any committee duly constituted by the Board to exercise its powers, and / or the powers conferred by the Board resolution), at its meeting held on October 13, 2022, had, subject to the approval of the members of the Company, by way of a special resolution (“**Special Resolution**”) and subject to the approvals of such statutory, regulatory or governmental authorities as may be required under applicable laws, approved the proposal to buy back its own fully paid-up equity shares of face value of ₹ 5/- each (“**Equity Shares**”) from the members of the Company (other than the promoters, promoter group and persons in control of the Company) payable in cash, for an amount aggregating up to ₹ 9,300 crore (Rupees Nine Thousand Three Hundred Crore only) (“**Maximum Buyback Size**”) at a price not exceeding ₹ 1,850/- (Rupees One Thousand Eight Hundred and Fifty only) per Equity Share (“**Maximum Buyback Price**”), through the open market route through the stock exchanges, in accordance with Companies Act, 2013, as amended, the Companies (Share Capital and Debentures) Rules, 2014, as amended, the Companies (Management and Administration) Rules, 2014, as amended and the Buyback Regulations (the transaction / process herein after referred to as the “**Buyback**”).

1.2 The shareholders' approval for the Buyback was received on December 02, 2022, the results of which were announced on December 03, 2022.

1.3 The Maximum Buyback Size does not include any expenses or transaction costs incurred or to be incurred for the Buyback, such as, brokerage, filing fees, advisory fees, intermediaries' fees, public announcement publication expenses, printing and dispatch expenses, applicable taxes such as buyback tax, securities transaction tax, goods and services tax, stamp duty, etc. and other incidental and related expenses (collectively referred to as “**Transaction Costs**”).

1.4 The Buyback commenced on December 07, 2022 and closed on February 13, 2023. Till the date of closure of the Buyback, the Company has utilized 99.9999993% of Maximum Buyback Size (excluding Transaction Costs) with a balance of ₹628.68 (Rupees Six Hundred Twenty Eight and Paise Sixty Eight only).

1.5 In view of the fact that the Company has utilized 99.9999993% of the Maximum Buyback Size (excluding Transaction Costs) with a balance of ₹628.68 (Rupees Six Hundred Twenty Eight and Paise Sixty Eight only) till February 13, 2023, the Company has decided to close the Buyback on February 13, 2023. Approval of the Buyback Committee for closure of the Buyback was disclosed to the Stock Exchanges on February 13, 2023.

1.6 The total number of Equity Shares bought back under the Buyback is 6,04,26,348.

2. DETAILS OF THE BUYBACK

2.1 The Company bought back a total of 6,04,26,348 Equity Shares (1.44% of the pre-Buyback paid-up Equity Share capital of the Company) and the total amount utilized towards the Buyback is ₹9299,99,99,371.32 (Rupees Nine Thousand Two Hundred and Ninety Nine Crore Ninety Nine Lakh Ninety Nine Thousand Three Hundred Seventy One and Paise Thirty Two only) (excluding Transaction Costs) which represents 99.9999993% of the Maximum Buyback Size. The price at which the Equity Shares were bought back was dependent on the price quoted on BSE Limited and National Stock Exchange of India Limited, collectively referred to as “**Indian Stock Exchanges**”. The highest price at which the Equity Shares were bought back was ₹1,623.90 per Equity Share while the lowest price was ₹1,468.10 per Equity Share. The Equity Shares were bought back at a volume weighted average price of ₹1,539.06 per Equity Share. These prices are based on contract notes issued by the Company's Broker (Kotak Securities Limited) and exclude Transaction Costs, and have been rounded off to two decimal points.

2.2 The payout formalities have been completed as per settlement mechanism with the Indian Stock Exchanges. The Company has extinguished all the Equity Shares purchased under the Buyback i.e. 6,04,26,348 Equity Shares.

2.3 All Equity Shares bought back were in the dematerialized (demat) segment from the platform of the Indian Stock Exchanges. As the buyback was done from the open market through the Indian Stock Exchanges, the identity of members from whom Equity Shares exceeding one per cent of the total Equity Shares were bought back in the Buyback is not known.

3. CAPITAL STRUCTURE AND SHAREHOLDING PATTERN

3.1 The capital structure of the Company as on the date of the Public Announcement and as on February 13, 2023 (“**Post-Buyback**”) is set forth below:

Particulars	As on the date of the Public Announcement		Post-Buyback	
	No. of Equity Shares	Amount (₹)	No. of Equity Shares	Amount (₹)
Authorized share capital	4,80,00,00,000	24,00,00,00,000	4,80,00,00,000	24,00,00,00,000
Issued share capital	4,20,80,80,843	21,04,04,04,215	4,14,76,54,495	20,73,82,72,475
Subscribed and fully paid-up share capital	4,20,80,80,843	21,04,04,04,215	4,14,76,54,495	20,73,82,72,475

Note: All the Equity Shares bought back have been extinguished by February 13, 2023

3.2 The shareholding pattern of the Company as on December 2, 2022 as disclosed in the Public Announcement (“**Pre-Buyback**”) and as on February 13, 2023 (“**Post-Buyback**”) is as follows:

Particulars	No. of Equity Shares	% of Equity Shares	No. of Equity Shares	% of Equity Shares
	Pre-Buyback		Post-Buyback	
Promoters and/or persons who are in control and/or acting in concert (promoter group)	55,16,82,338	13.11	55,16,82,338	13.30
Indian financial institutions	54,23,83,039	12.89	3,59,59,72,157	86.70
Banks	33,25,271	0.08		
Mutual funds	64,53,77,813	15.34		
Indian public and corporates	53,48,36,397	12.71		
Foreign institutional investors	1,33,91,42,501	31.82		
NRIs	3,47,00,970	0.82		
Foreign nationals and overseas corporate bodies	8,802	0.00		
American Depository Shares (ADSs)	55,66,23,712	13.23		
TOTAL	**4,20,80,80,843**	**100.00**	**4,14,76,54,495**	**100.00**

Note: All the Equity Shares bought back have been extinguished by February 13, 2023

4. MERCHANT BANKER TO THE BUYBACK

kotak® Investment Banking

Kotak Mahindra Capital Company Limited
27BKC, 1st Floor, Plot No. C-27, “G” Block,
Bandra Kurla Complex, Bandra (East), Mumbai 400 051
Contact Person : Ganesh Rane
Phone : +91-22-4336 0128
Fax : +91-22-6713 2447
Email : project.infosysbuyback2022@kotak.com
SEBI Registration : INM000008704
Validity Period : Permanent Registration

5. For further details, please refer to the Company's website (www.infosys.com) and the websites of the Indian Stock Exchanges (i.e. www.bseindia.com and www.nseindia.com)

6. DIRECTORS' RESPONSIBILITY

As per Regulation 24(i)(a) of the Buyback Regulations, the Board of Directors of the Company, in their capacity as directors, accepts full and final responsibility for all the information contained in this Advertisement and confirms that the information is true, factual and material and does not contain anything misleading. This Advertisement is issued under the authority of the Buyback Committee in terms of the resolution dated February 14, 2023.

For and on behalf of the Board of Directors of Infosys Limited

Sd/-	Sd/-	Sd/-
Nandan M. Nilekani	**Salil Parekh**	**A.G.S. Manikantha**
Chairman	Chief Executive Officer and Managing Director	Company Secretary
DIN: 00041245	DIN: 01876159	M. No. A21918

Place: Bengaluru
Date: February 14, 2023

ತಂತ್ರಜ್ಞಾನ

ಎಸ್. ಎಸ್. ಎಲ್. ವಿ. ನೂತನ ಉಡಾವಣಾ ರಾಕೆಟ್

ತನ್ನ ಎರಡನೆಯ ಉಡಾವಣೆಯ ಅಂಗವಾಗಿ ಗಗನಕ್ಕೇರುತಿರುವ ಎಸ್. ಎಸ್. ಎಲ್. ವಿ. (ಚಿತ್ರಕೃಪೆ: ಇಸ್ರೊ)

ಪುಟ್ಟ ಉಪಗ್ರಹಗಳ ಉಡಾವಣೆಗೆ ಇಂದು ಭಾರಿ ಬೇಡಿಕೆಯಿದೆ

ಬಿ. ಆರ್. ಗುರುಪ್ರಸಾದ್

ಭಾರತದ ಆಗ್ನೇಯ ಕರಾವಳಿಯಲ್ಲಿರುವ ಶ್ರೀಹರಿಕೋಟಾದಲ್ಲಿ ನಮ್ಮ ದೇಶದ ಏಕೈಕ ಉಪಗ್ರಹ ಉಡಾವಣಾ ನೆಲೆಯಾದ 'ಸತೀಶ್ ಧವನ್ ಅಂತರಿಕ್ಷ ಕೇಂದ್ರ'ವಿದೆ. ಅಲ್ಲಿರುವ ಎರಡು ಉಡಾವಣಾ ವೇದಿಕೆಗಳ ಪೈಕಿ ಮೊದಲನೆಯದರಲ್ಲಿ ಸುಮಾರು ಹನ್ನೊಂದು ಮಹಡಿಗಳಷ್ಟು ಎತ್ತರದ ರಾಕೆಟ್ ಒಂದು ಈ ಫೆಬ್ರುವರಿ 10ರಂದು ಯಾನಕ್ಕೆ ಸಿದ್ಧವಾಗಿ ನಿಂತಿತ್ತು. ಭಾರತೀಯ ಅಂತರಿಕ್ಷ ಸಂಶೋಧನಾ ಸಂಸ್ಥೆ 'ಇಸ್ರೊ' ನಿರ್ಮಿಸಿದ 640 ಟನ್ ತೂಕದ ರಕ್ಕಸ ರಾಕೆಟ್ಟಾದ 'ಎಲ್. ವಿ. ಎಂ. 3 (ಜಿ. ಎಸ್. ಎಲ್. ವಿ. ಮಾರ್ಕ್3)'ಗೆ ಹೋಲಿಸಿದಲ್ಲಿ (ಎತ್ತರ 14 ಮಹಡಿಗಳು) ಕೇವಲ 120 ಟನ್ ತೂಕದ ಆ ರಾಕೆಟ್ ಸಾಕಷ್ಟು ಚಿಕ್ಕದೆನ್ನಬಹುದು. ಅದಕ್ಕೆ ತಕ್ಕಂತೆ ಆ ರಾಕೆಟ್ ನ ಹೆಸರೇ 'ಸ್ಮಾಲ್ ಸ್ಯಾಟಲೈಟ್ ಲಾಂಚ್ ವೆಹಿಕಲ್' ('ಎಸ್ ಎಸ್ ಎಲ್ ವಿ'), ಅಂದರೆ 'ಪುಟ್ಟ ಉಪಗ್ರಹಗಳ ಉಡಾವಣಾ ವಾಹನ'.

ಇಸ್ರೊದ ಈ ಪುಟ್ಟ ರಾಕೆಟ್ ವಾಹನದ ಉಡಾವಣೆಯನ್ನು ನಮ್ಮ ಹಾಗೂ ಜಾಗತಿಕ ಸುದ್ದಿಮಾಧ್ಯಮಗಳು ಕುತೂಹಲದಿಂದ ಎದುರುನೋಡುತ್ತಿದ್ದವು. ಕಳೆದ ವರ್ಷದ ಆಗಸ್ಟ್‌ನಲ್ಲಿ ನಡೆಯಲಾದ ಅದರ ಮೊದಲ ಉಡಾವಣೆ ಯಶಸ್ಸನ್ನು ಕಾಣದಿರಲಾಗಿ ಮಾಧ್ಯಮಗಳ ಕುತೂಹಲ ಮತ್ತಷ್ಟು ಹೆಚ್ಚಿತ್ತು. ಯಾವ ಕಾರಣದಿಂದಾಗಿ ಆ ಉಡಾವಣೆ ವಿಫಲವಾಯಿತೆಂಬುದನ್ನು ಗುರುತಿಸಿ ಅದನ್ನು ಸರಿಪಡಿಸಿರುವುದನ್ನು ಸಾರಿದ್ದರೂ ಈ ರಾಕೆಟ್‌ನ ಬಗ್ಗೆ ಜಗತ್ತಿನ ಗಮನ ಹೆಚ್ಚಿರುವುದನ್ನು ಗ್ರಹಿಸಿದ್ದ ಇಸ್ರೊ ವಿಜ್ಞಾನಿಗಳ ಚಡಪಡಿಕೆಯೂ ಅಂದು ಹೆಚ್ಚಿತ್ತು.

ಆದರೆ ಅಂದು ಬೆಳಗ್ಗೆ 9:18ಕ್ಕೆ ಆಗಸಕ್ಕೇರಿದ 'ಎಸ್ ಎಸ್ ಎಲ್ ವಿ' ನಂತರದ 16 ನಿಮಿಷಗಳಲ್ಲಿ ತನಗೆ ವಹಿಸಿದ್ದ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಸಫಲವಾಯಿತು. ಪರಿಣಾಮವಾಗಿ ಅದರ ಹೆಗಲ ಮೇಲಿದ್ದ ಮೂರು ಪುಟ್ಟ ಉಪಗ್ರಹಗಳು (ಒಟ್ಟು ತೂಕ 334 ಕಿಲೋಗ್ರಾಂ) ಯಶಸ್ವಿಯಾಗಿ 450 ಕಿಲೋಮೀಟರ್ ಎತ್ತರದ ಉದ್ದೇಶಿತ ಕಕ್ಷೆಯನ್ನು ಸೇರಿ ಭೂಮಿಯನ್ನು ಶರವೇಗದಲ್ಲಿ ಸುತ್ತಲಾರಂಭಿಸಿದವು. ಹೀಗೆ ಭಾರತದ ಆರನೇ ಪೀಳಿಗೆಯ ಉಪಗ್ರಹ ಉಡಾವಣಾ ವಾಹನವೂ ವಿಜೃಂಭಿಸಿತು. ಭಾರತದ ತಾಂತ್ರಿಕ ಸಾಮರ್ಥ್ಯದ ಬಗ್ಗೆ ಹೊರಜಗತ್ತಿಗೆ ಮತ್ತಷ್ಟು ಅರಿವು ಮೂಡಿತು.

ಈಗಾಗಲೇ 'ಪಿ. ಎಸ್. ಎಲ್. ವಿ.', 'ಜಿ. ಎಸ್. ಎಲ್. ವಿ.' ಹಾಗೂ 'ಜಿ. ಎಸ್. ಎಲ್. ವಿ.-ಮಾರ್ಕ್ 3' ಎಂಬ ಮೂರು ದೊಡ್ಡ ಹಾಗೂ ಸಮರ್ಥ ರಾಕೆಟ್ ವಾಹನಗಳನ್ನು ಯಶಸ್ವಿಯಾಗಿ ನಿರ್ಮಿಸಿರುವ ಇಸ್ರೊ ಈ 'ಎಸ್. ಎಸ್. ಎಲ್. ವಿ.' ಎಂಬ ಪುಟ್ಟ ಉಪಗ್ರಹ ಉಡಾವಣಾ ರಾಕೆಟ್ ಅನ್ನು ನಿರ್ಮಿಸಿರುವುದಕ್ಕೆ ಕಾರಣವಾದರೂ ಏನು?

ಅದಕ್ಕೆ ಬಲವಾದದ್ದೇ ಆದ ಕಾರಣವಿದೆ. ಕಳೆದ ಒಂದೆರಡು ದಶಕಗಳ ಸುಮಾರಿನಲ್ಲಿ ಎಲೆಕ್ಟ್ರಾನಿಕ್ಸ್ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ತಂತ್ರಜ್ಞಾನ ಅಪಾರವಾಗಿ ಅಭಿವೃದ್ಧಿ ಹೊಂದಿದೆ. ಇದರಿಂದಾಗಿ ಕೃತಕ ಭೂ ಉಪಗ್ರಹಗಳ ತೂಕ, ಗಾತ್ರ ಅವುಗಳ ಕಾರ್ಯನಿರ್ವಹಣೆಗೆ ಬೇಕಾಗುವ ವಿದ್ಯುಚ್ಛಕ್ತಿ ಹಾಗೂ ನಿರ್ಮಾಣಕ್ಕೆ ಅಗತ್ಯವಾದ ಸಮಯ – ಇವು ಅಪಾರವಾದ ಇಳಿತವನ್ನು ಕಂಡಿವೆ. ಹೀಗಾಗಿ ಪರಿಮಿತ ಸಾಮರ್ಥ್ಯವುಳ್ಳ ಪುಟ್ಟ ಉಪಗ್ರಹವೊಂದನ್ನು ನಿರ್ಮಿಸಲು ಇಂದು ನೂರಾರು ಕೋಟಿ ರೂಪಾಯಿಗಳ ವೆಚ್ಚವೇನೂ ಬೇಕಾಗುವುದಿಲ್ಲ. ಇದರೊಂದಿಗೇ ಪುಟ್ಟ ಪ್ರಯೋಗಾತ್ಮಕವಾದ ಉಪಗ್ರಹಗಳನ್ನು ನಿರ್ಮಿಸುವ ಸಾಮರ್ಥ್ಯವನ್ನು ಅನೇಕ ರಾಷ್ಟ್ರಗಳೂ ಇಂದು ಗಳಿಸುತ್ತಿವೆ. ರಾಷ್ಟ್ರಗಳಿರಲಿ, ವಿಶ್ವವಿದ್ಯಾಲಯಗಳು, ಕಾಲೇಜುಗಳು ಹಾಗೂ ಕೆಲಮಟ್ಟಿಗೆ ಶಾಲಾವಿದ್ಯಾರ್ಥಿಗಳೂ ಪುಟ್ಟ ಉಪಗ್ರಹಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಹೊಸತಂತ್ರಜ್ಞಾನವನ್ನು ಭೂಕಕ್ಷೆಯಲ್ಲಿನ ಪರಿಸರದಲ್ಲಿ ಪರೀಕ್ಷಿಸುವುದು, ಪ್ರಯೋಗಗಳನ್ನು ನಿರ್ವಹಿಸುವುದು ಇಲ್ಲವೇ ತಿಂಗಳುಗಟ್ಟಲೇ ಇಲ್ಲವೇ ವರ್ಷಗಟ್ಟಲೇ ಕೆಳಗಿನ ಭೂಮಿಯನ್ನು ಕ್ರಮಬದ್ಧವಾಗಿ ವೀಕ್ಷಿಸಿ ಅಲ್ಲಿನ ವಿವಿಧ ವಿದ್ಯಮಾನಗಳ ಬಗ್ಗೆ ವರದಿ ಮಾಡುವ ಪುಟ್ಟ ಉಪಗ್ರಹಗಳ 'ಗುಚ್ಛ'ಗಳೂ (ಕಾನ್ಸ್ಟಲೇಷನ್) ಇಂದು ಕಾರ್ಯನಿರ್ವಹಿಸುತ್ತಿವೆ. ಅಮೆರಿಕದ 'ಪ್ಲಾನೆಟ್ ಲ್ಯಾಬ್ಸ್' ಸಂಸ್ಥೆಯ ಸುಮಾರು 135 ಉಪಗ್ರಹಗಳ 'ಡೋವ್' ಗುಚ್ಛ ಇದಕ್ಕೊಂದು ಉತ್ತಮ ಉದಾಹರಣೆ. ಆ ಗುಚ್ಛದ ಪ್ರತಿಯೊಂದು ಉಪಗ್ರಹವೂ ಉಡಾವಣೆಯ ವೇಳೆಯಲ್ಲಿ ಕೇವಲ ನಾಲ್ಕೂವರೆ ಕಿಲೋಗ್ರಾಂ ತೂಕವಿದ್ದು ಗಾತ್ರದಲ್ಲಿ ಒಂದು ಬೂಟಿನ ಪೆಟ್ಟಿಗೆಯಷ್ಟಿತ್ತು!

ಇಂದು ಆ ಉಪಗ್ರಹಗಳು ಭೂಮಿಯ ಯಾವುದೇ ಒಂದು ಪ್ರದೇಶದ ಮೇಲಿನ ವಿದ್ಯಮಾನಗಳನ್ನು ದಿನವೂ ವೀಕ್ಷಿಸುವ ಸಾಮರ್ಥ್ಯವನ್ನು ಹೊಂದಿವೆ. ಪ್ರತಿಯೊಂದೂ ಆ ಉಪಗ್ರಹಗಳ ಪೈಕಿ 88ನ್ನು ನಮ್ಮ 'ಪಿ. ಎಸ್. ಎಲ್. ವಿ.' ರಾಕೆಟ್ಟು 2017ರ ಫೆಬ್ರುವರಿಯ ತನ್ನ ಯಾನದ ನಡುವೆ ನಿಖರವಾಗಿ ಕಕ್ಷೆಗೆ ಉಡಾಯಿಸಿದಾಗ ಆ ಕಂಪನಿಯ ಉದ್ಯೋಗಿಗಳು ಕುಣಿದು ಚಪ್ಪಾಳೆ ತಟ್ಟಿ ಸಂಭ್ರಮಿಸಿದ್ದರು.

ಅಂತೂ ಪುಟ್ಟ ಉಪಗ್ರಹಗಳ ಉಡಾವಣೆಗೆ ಇಂದು ಭಾರಿ ಬೇಡಿಕೆಯಿದೆ. ಆದರೆ ಜಾಗತಿಕ ಮಟ್ಟದಲ್ಲಿಂದು ಲಭ್ಯವಿರುವ ಬಹುತೇಕ ಉಡಾವಣಾ ರಾಕೆಟ್‌ಗಳಾದರೋ ದೊಡ್ಡ ಉಪಗ್ರಹಗಳನ್ನು ಉಡಾಯಿಸಬಲ್ಲವಾಗಿವೆ. ಹೀಗಾಗಿ ದೊಡ್ಡ ಉಪಗ್ರಹಗಳನ್ನು ಉಡಾಯಿಸುವ ರಾಕೆಟ್‌ಗಳಲ್ಲಿ ಜಾಗವಿದ್ದಲ್ಲಿ ಆಗ ಈ ಪುಟ್ಟ ಉಪಗ್ರಹಗಳು 'ಹೆಚ್ಚುವರಿ' (ಪಿಗ್ಗಿಬ್ಯಾಕ್) ಪ್ರಯಾಣಿಕರಂತೆ ಆ ದೊಡ್ಡ ರಾಕೆಟ್‌ಗಳ ಹೆಗಲೇರಿ ಪಯಣಿಸಬೇಕಾಗುತ್ತದೆ. ಒಂದುವೇಳೆ ಜಾಗವಿಲ್ಲದಿದ್ದಲ್ಲಿ ಸಾಕಷ್ಟು ದಿನ ಕಾಯಬೇಕಾಗುತ್ತದೆ.

ದುಬಾರಿಯಾದ ಹಾಗೂ ಸಂಕೀರ್ಣವಾದ ದೊಡ್ಡ ಉಪಗ್ರಹಗಳನ್ನು ಉಡಾಯಿಸುವುದಕ್ಕೆ ಪೂರ್ವಭಾವಿಯಾಗಿ ಸಾಕಷ್ಟು ಕಾಲ ಅಗತ್ಯವಾಗುತ್ತದೆ. ಆ ನಡುವೆ ಉಪಗ್ರಹ, ಇಲ್ಲವೇ ರಾಕೆಟ್‌ನಲ್ಲಿ ಸಮಸ್ಯೆಗಳೇನಾದರೂ ಎದುರಾದರೆ ಆಗ ಆ ಕಾಯುವಿಕೆ ಮತ್ತಷ್ಟು ದೀರ್ಘವಾಗಬಹುದು. ಇದಕ್ಕೆ ಬದಲಾಗಿ ಪುಟ್ಟ ಉಪಗ್ರಹಗಳನ್ನು ಬಹುಮಟ್ಟಿಗೆ ಬೇಕೆಂದಾಗ ಉಡಾಯಿಸಬಲ್ಲದಾದ ಪುಟ್ಟ ರಾಕೆಟ್‌ಗಳು ಸುಲಭವಾಗಿ ಲಭ್ಯವಾದರೆ ಆಗ ಕಾಯುವುದು ತಪ್ಪಿ ಅಂತಹ ಉಪಗ್ರಹಗಳನ್ನು ನಿರ್ಮಿಸುವವರಿಗೂ ಬಳಕೆದಾರರಿಗೂ ಸಾಕಷ್ಟು ಅನುಕೂಲವಾಗುತ್ತದೆ. ಕೆಲವು ಪ್ರಕ್ಷುಬ್ಧ ಪರಿಸ್ಥಿತಿಗಳಲ್ಲಿ, ಪುಟ್ಟದಾದ ಆದರೆ ವಿಶಿಷ್ಟ ಸಾಮರ್ಥ್ಯವುಳ್ಳ ಉಪಗ್ರಹಗಳನ್ನು ಬಹುಮಟ್ಟಿಗೆ ಬೇಕೆಂದಾಗ ಹಾರಿಬಿಡುವುದು ರಾಷ್ಟ್ರೀಯ ಸುರಕ್ಷತೆಯ ಇಲ್ಲವೇ ರಾಷ್ಟ್ರದ ಹಿತದೃಷ್ಟಿಯಿಂದ ಅಗತ್ಯವಾಗಬಹುದು. ಹೀಗೆ ವಾಣಿಜ್ಯಾತ್ಮಕ ಹಾಗೂ ಸುರಕ್ಷತಾ ದೃಷ್ಟಿಕೋನಗಳೆರಡರಿಂದಲೂ ಪುಟ್ಟ ಉಪಗ್ರಹಗಳನ್ನು ಉಡಾಯಿಸಬಲ್ಲ ಕಡಿಮೆ ಸಂಕೀರ್ಣತೆಯ ರಾಕೆಟ್‌ಗಳು ಪ್ರಾಮುಖ್ಯವನ್ನು ಪಡೆಯುತ್ತವೆ. ❖

ಚಾಟ್‌ಜಿಪಿಟಿ

ಕೃತಕ ಬುದ್ಧಿಮತ್ತೆಯ 'ಸಹಜ'ಬುದ್ಧಿ

ಕೃಷ್ಣ ಭಟ್

2022ರ ನವೆಂಬರ್ ಮಾಸ ಭವಿಷ್ಯದ ತಂತ್ರಜ್ಞಾನ ವಲಯದಲ್ಲೊಂದು ಬಿರುಗಾಳಿ ಎಬ್ಬಿಸುವುದಕ್ಕೆ ಕಾರಣವಾಗುತ್ತದೆ ಎಂದು ಯಾರೂ ಊಹಿಸಿರಲಿಲ್ಲವೇನೋ! ಸದ್ದು ಗದ್ದಲವಿಲ್ಲದೇ 'ಓಪನ್ ಎಐ' ತನ್ನ ವೆಬ್‌ಸೈಟ್‌ನ ಒಂದು ಮೂಲೆಯಲ್ಲಿ 'ಟ್ರೈ ಇಟ್' ಎಂಬ ಬಟನ್ ಅಡಿಯಲ್ಲಿ ಬಿಡುಗಡೆ ಮಾಡಿದ 'ಚಾಟ್ ಜಿಪಿಟಿ' ಮುಂದಿನ ಮೂರ್ನಾಲ್ಕು ತಿಂಗಳಲ್ಲಿ ಗೂಗಲ್ ಎಂಬ ಬೃಹತ್ ಸಂಸ್ಥೆಯ ಭವಿಷ್ಯಕ್ಕೆ ಕೊಳ್ಳಿ ಇಟ್ಟೀತು ಎಂದು ಯಾರೂ ಊಹಿಸಿರಲಿಲ್ಲ.

ತಂತ್ರಜ್ಞಾನ ವಲಯದಲ್ಲಿ ಓಪನ್ ಎಐ ಅಭಿವೃದ್ಧಿಪಡಿಸುತ್ತಿರುವ ಜಿಪಿಟಿ-3 ಬಗ್ಗೆ ಅಪಾರ ಕುತೂಹಲವೇನೋ ಇತ್ತು. ಆದರೆ, ಇದು ಹೊರತಂದ ಉತ್ಪನ್ನ ಚಾಟ್ ಜಿಪಿಟಿ ಈ ಮಟ್ಟಕ್ಕೆ ನಿಖರ ಮತ್ತು ಕರಾರುವಾಕ್ಕಾಗಿರುತ್ತದೆ ಮತ್ತು ಇದರ ಅಳವಡಿಕೆಯ ವ್ಯಾಪ್ತಿ ಅಪಾರವಾಗಬಹುದು ಎಂಬ ಅಂದಾಜು ಇರಲಿಲ್ಲ.

ಇದು ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಜನಪ್ರಿಯವಾಗತೊಡಗಿತು. ಇದು ಸಮಸ್ಯೆಗಳಿಗೆ ನೀಡಿದ ಪರಿಹಾರ, ಕೇಳಿದ ಪ್ರಶ್ನೆಗಳಿಗೆ ನೀಡಿದ ಉತ್ತರದ ನಿಖರತೆ ತಂತ್ರಜ್ಞಾನ ವಲಯದಲ್ಲಿ ಬೆಕ್ಕಸು ಬೆರಗು ಉಂಟುಮಾಡಿತು.

ಮೊದಲು ಇದಕ್ಕೆ ಪ್ರತಿಸ್ಪರ್ಧಿಯನ್ನು ಹುಟ್ಟುಹಾಕುವುದು ಅಗತ್ಯವಿಲ್ಲ – ಎಂಬರ್ಥದಲ್ಲಿ ಗೂಗಲ್ ತಂತ್ರಜ್ಞರು ಮಾತನಾಡಿದರಾದರೂ, ಮೈಕ್ರೋಸಾಫ್ಟ್ ತನ್ನ 'ಬಿಂಗ್' ಎಂಬ ಸರ್ಚ್ ಇಂಜಿನ್‌ಗೆ ಈ ಚಾಟ್ ಜಿಪಿಟಿಯನ್ನು ಅಳವಡಿಸುವುದಾಗಿ ಘೋಷಿಸಿದ ದಿನವೇ, ಅಂದರೆ ಫೆಬ್ರುವರಿ 7ರಂದೇ ತಮ್ಮದೇ ಜನರೇಟಿವ್ ಎಐ ಅನ್ನು ಹೊರತಂದರು. ಸಹಜವಾಗಿಯೇ ಎರಡೂ ಜನರೇಟಿವ್ ಎಐ ಕಾರ್ಯಕ್ಷಮತೆಯನ್ನು ಹೋಲಿಸಿ ನೋಡಿದಾಗ, ಗೂಗಲ್‌ನ ಜನರೇಟಿವ್ ಎಐ ಬಾರ್ಡ್‌ನ ಕಾರ್ಯಕ್ಷಮತೆ, ನಿಖರತೆ ಜನರಿಗೆ ಮನರಿಕೆಯಾಗಲಿಲ್ಲ. ಈ ರೇಸ್‌ನಲ್ಲಿ ಗೂಗಲ್ ಹಿಂದೆ ಬೀಳುವುದು ಹೂಡಿಕೆದಾರರಿಗೆ ಖಚಿತವಾಗುತ್ತಿದ್ದಂತೆಯೇ, ಗೂಗಲ್‌ನಲ್ಲಿ ತಮ್ಮ ಹೂಡಿಕೆಯನ್ನು ಹಿಂಪಡೆಯಲು ಮುಗಿಬಿದ್ದರು. ಹೀಗಾಗಿ ಮಾರುಕಟ್ಟೆಯಲ್ಲಿ ಗೂಗಲ್‌ನ ಷೇರು ಅಪಾರವಾಗಿ ಇಳಿಕೆ ಕಾಣುವಂತಾಯಿತು.

ಏನಿದು ಚಾಟ್‌ಜಿಪಿಟಿ?

'ಚಾಟ್‌ಜಿಪಿಟಿ' ಎಂಬುದು ಒಂದು ಜನರೇಟಿವ್ ಎಐ. ಅಂದರೆ ಕೇಳಿದ ಪ್ರಶ್ನೆಗಳಿಗೆ ಅಂತರ್ಜಾಲದಲ್ಲಿ ಹುಡುಕಾಡಿ ನಿಖರವಾದ ಉತ್ತರವನ್ನು ಒದಗಿಸುವ ಒಂದು ಅಪ್ಲಿಕೇಶನ್. ಇದಕ್ಕಾಗಿ ಅಪಾರ ಸಂಖ್ಯೆಯಲ್ಲಿ ಮುಕ್ತವಾಗಿರುವ ದತ್ತಾಂಶವನ್ನು ಇದು ಬಳಸಿಕೊಂಡಿದೆ. ಸರಳ ಇಂಗ್ಲಿಷ್‌ನಲ್ಲಿ ಕೇಳಿದ ಪ್ರಶ್ನೆಗಳಿಗೆ ನಿಖರವಾಗಿ ಉತ್ತರಿಸುವ ಸಾಮರ್ಥ್ಯವೇ ಇದರ ಹೆಗ್ಗಳಿಕೆ. ಇದನ್ನು ಹುಟ್ಟುಹಾಕಿದ್ದು, ಇಂಥದ್ದೊಂದು ಕನಸು ಕಂಡಿದ್ದು ಉದ್ಯಮಿ ಎಲಾನ್ ಮಸ್ಕ್. ಈಗ ಈ ಓಪನ್‌ಎಐ ಸಂಸ್ಥೆಯ ಮಾಲೀಕತ್ವದಲ್ಲಿ ಹೆಚ್ಚಿನ ಪಾಲನ್ನು ಮೈಕ್ರೋಸಾಫ್ಟ್ ಹೊಂದಿದೆ.

ಉದಾಹರಣೆಗೆ, ವ್ಯಕ್ತಿಯೊಬ್ಬನಿಗೆ ಚಳಿಗಾಲದಲ್ಲಿ ಒಂದು ಪ್ರವಾಸ ಹೋಗಬೇಕಿದೆ. ಆತ ಸಾಮಾನ್ಯವಾಗಿ ಗೂಗಲ್‌ನಲ್ಲಿ ಹುಡುಕಾಟ ನಡೆಸುತ್ತಾನೆ. ಅವನಿಗೆ ವಿವಿಧ ವೆಬ್‌ಸೈಟ್‌ಗಳಲ್ಲಿ ಮಾಡಿದ ಪಟ್ಟಿಗಳು ಕಾಣಿಸುತ್ತವೆ. ಅವೆಲ್ಲವನ್ನೂ ಓದಿ ತನಗೆ ಹೊಂದುವುದನ್ನು ಹುಡುಕುವ ಕೆಲಸ ಅವನದ್ದೇ. ಆದರೆ, ಇದೇ ಪ್ರಶ್ನೆಯನ್ನು ಆತ ಚಾಟ್ ಜಿಪಿಟಿಗೆ ಕೇಳುತ್ತಾನೆ. ಅದು ಎಲ್ಲ ವೆಬ್‌ಸೈಟ್‌ಗಳನ್ನೂ ಹುಡುಕಿ ತಂದು ಒಂದು ಪಟ್ಟಿಯನ್ನು ಅವನಿಗೆ ನೀಡುತ್ತದೆ. ಪ್ರತಿ ಪ್ರದೇಶದ ಅನುಕೂಲ, ಅನಾನುಕೂಲವನ್ನೂ ಅವನಿಗೆ ತಿಳಿಸುತ್ತದೆ. ಆಗ ಅವನಿಗೆ ಒಂದೇ ಕಡೆ ಎಲ್ಲ ಮಾಹಿತಿಯೂ ಸಿಕ್ಕಂತಾಯಿತು. ಬೇರೆ ಬೇರೆ ವೆಬ್‌ಸೈಟ್‌ಗಳನ್ನು ಕ್ಲಿಕ್ ಮಾಡಿ, ಅವುಗಳ ನಿಖರತೆಯನ್ನು ಪರಿಶೀಲಿಸಿಕೊಂಡು, ಅದರಲ್ಲಿರುವ ಮಾಹಿತಿಯನ್ನು ಓದಿ ತನಗೆ ಬೇಕಾದ್ದನ್ನು ಮಾತ್ರ ಸೋಸಿಕೊಳ್ಳುವ ತೊಂದರೆ ಇಲ್ಲವೇ ಇಲ್ಲ. ಇಲ್ಲಿ ಎಲ್ಲವೂ ಸಿದ್ಧ ಮಾಹಿತಿ ಅವನಿಗೆ ಲಭ್ಯವಾಗುತ್ತದೆ.

ಯಾವ ಉದ್ಯಮಕ್ಕೆ ಪರಿಣಾಮ?

ಗೂಗಲ್‌ನಂತಹ ಜಗತ್ತಿನ ಬೃಹತ್ ಸಂಸ್ಥೆಯ ಬುಡವನ್ನೇ ಚಾಟ್‌ಜಿಪಿಟಿ ಅಲ್ಲಾಡಿಸಿದೆ ಎಂದ ಮೇಲೆ ಯಾವ ಉದ್ಯಮದ ದಿಕ್ಕು ದೆಸೆಯನ್ನು ಬೇಕಾದರೂ ಬದಲಿಸಬಹುದು! ಮುಂದಿನ ಕೆಲವು ವರ್ಷಗಳಲ್ಲಿ ಇದು ಬಾಧಿಸದ ಉದ್ಯಮವೇ ಇಲ್ಲ. ಮೊದಲು ಇದು ಬಾಧಿಸುವುದು ಸಹಜವಾಗಿಯೇ ಸರ್ಚ್ ಇಂಜಿನ್‌ಗಳನ್ನು. ಈಗಾಗಲೇ ಇದು ಸರ್ಚ್ ಇಂಜಿನ್‌ಗಳ ಮೇಲೆ ಪರಿಣಾಮ ಬೀರಲು ಶುರು ಮಾಡಿದೆ. ಇದನ್ನು ಹೊರತುಪಡಿಸಿ, ಮಾರ್ಕೆಟಿಂಗ್, ಕಾಪಿರೈಟಿಂಗ್, ಇಲ್ಲಸ್ಟ್ರೇಶನ್ ಮತ್ತು ವಿನ್ಯಾಸ, 3ಡಿ ಮಾಡೆಲಿಂಗ್, ಗ್ರಾಹಕಸೇವೆ, ಸಾಫ್ಟ್‌ವೇರ್ ಕೋಡಿಂಗ್, ವೀಡಿಯೋ ಎಡಿಟಿಂಗ್, ಸಿನಿಮಾ ನಿರ್ಮಾಣ, ಗೇಮಿಂಗ್, ಕಾನೂನು ವಿಷಯಗಳು, ವೈಜ್ಞಾನಿಕ ಸಂಶೋಧನೆ ಸೇರಿದಂತೆ ಬಹುತೇಕ ಎಲ್ಲ ವಲಯಗಳಲ್ಲೂ ಜನರೇಟಿವ್ ಎಐ ಬಳಕೆಯಾಗಲಿದೆ.

ಮುನ್ನೆಚ್ಚರಿಕೆ ಬೇಕೆ?

ಜನರೇಟಿವ್ ಎಐನಿಂದ ಎಷ್ಟು ಅನುಕೂಲವಿದೆಯೋ ಅಷ್ಟೇ ಅನಾನುಕೂಲಗಳೂ ಇವೆ. ಇದನ್ನು ಬಳಸಿ ಅಸಲಿಯಂತೆಯೇ ನಕಲಿಯನ್ನು ಸೃಷ್ಟಿಸುವುದೂ ತುಂಬ ಸುಲಭ! ಚಾಟ್‌ಜಿಪಿಟಿ ಬಳಸಿಕೊಂಡು ಅಸಲಿಯಂತೆಯೇ ಕಾಣುವ ನಕಲಿ ವೆಬ್‌ಸೈಟ್‌ಗಳನ್ನು ಹುಟ್ಟುಹಾಕುವುದು ಎಷ್ಟು ಹೊತ್ತಿನ ಕೆಲಸವೂ ಅಲ್ಲ! ಹೀಗಾಗಿ, ನಕಲಿಯನ್ನು ಪತ್ತೆ ಹಚ್ಚುವುದು ಮೊದಲಿಗಿಂತ ಕಷ್ಟಕರವಾದೀತು.

ಅದೇ ರೀತಿ, ಹಲವು ಉದ್ಯಮಗಳು ಈ ಚಾಟ್‌ಜಿಪಿಟಿ ಇಂದ ಬುಡಮೇಲಾಗಬಹುದು, ಉದ್ಯಮಗಳು ವಹಿವಾಟು ನಡೆಸುವ ಸ್ವರೂಪ ಬದಲಾಗಬಹುದು. ಪುನರಾವರ್ತಿತ ಕೆಲಸಗಳನ್ನು ಮಾಡುವವರಿಗೆ ಕೆಲಸ ಕಡಿಮೆಯಾಗಬಹುದು. ಹಾಗೆಂದ ಮಾತ್ರಕ್ಕೆ ಮನುಷ್ಯನಿಗೆ ಕೆಲಸವೇ ಕಡಿಮೆಯಾಗುತ್ತದೆ ಎಂದೇನಿಲ್ಲ! ಕಂಪ್ಯೂಟರ್ ಬಂದ ಹೊಸತರಲ್ಲಿ ಕೂಡ ಉದ್ಯಮದಲ್ಲಿ ದೊಡ್ಡದೊಂದು ಆತಂಕ ಮನೆ ಮಾಡಿತ್ತು. ಮುಂದಿನ ದಿನಗಳಲ್ಲಿ ಇಬ್ಬರು ಮಾಡುವ ಕೆಲಸವನ್ನು ಒಂದು ಕಂಪ್ಯೂಟರ್ ಮಾಡುವುದರಿಂದ ಕೋಟ್ಯಂತರ ಜನರು ಕೆಲಸ ಕಳೆದುಕೊಳ್ಳುತ್ತಾರೆ ಎಂಬ ಆತಂಕ ಕಾಡಿತ್ತು. ಆದರೆ, ಹಾಗಾಗಲಿಲ್ಲ. ಬದಲಿಗೆ ಮಾನವನ ಕೆಲಸದ ವಿಧಾನ ಬದಲಾಯಿತು.

ಈಗಲೂ ಹಾಗೆಯೇ, ಮನುಷ್ಯ ತನ್ನ ಕೆಲಸದಲ್ಲಿ ಯಾಂತ್ರಿಕತೆಯನ್ನು ಕಡಿಮೆ ಮಾಡಿ 'ಮನುಷ್ಯತ್ವ''ವನ್ನು ಸೇರಿಸುವ ಪ್ರಮಾಣ ಹೆಚ್ಚುತ್ತದೆ. ಅಂದರೆ, ಈ ಯಂತ್ರಗಳು ಮನುಷ್ಯನಿಗೆ ಮನುಷ್ಯತ್ವವನ್ನು ಕಲಿಸುತ್ತವೆ ಮತ್ತು ಯಾಂತ್ರಿಕವಾದ ಎಲ್ಲ ಕೆಲಸವನ್ನೂ ತಾನು ಮಾಡುತ್ತದೆ. ಅದರಲ್ಲೂ, ಜನರೇಟಿವ್ ಆರ್ಟಿಫಿಶಿಯಲ್ ಇಂಟಲಿಜೆನ್ಸ್‌ನಲ್ಲಿ ಮನುಷ್ಯನ ಬುದ್ಧಿಮತ್ತೆಯ ಅಂಶವೂ ಇರುವುದರಿಂದ ಮನುಷ್ಯ ಒಂದೋ ಅದಕ್ಕಿಂತ ಇನ್ನಷ್ಟು ಬುದ್ಧಿವಂತನಾಗಬೇಕು ಅಥವಾ ಎಐಗಿಂತ ದಡ್ಡನಾಗಿ ಎಐಗೆ ಕೆಲಸ ಮಾಡಲು ಬಿಟ್ಟು ತಾನು ಸುಮ್ಮನೆ ಕುಳಿತುಕೊಳ್ಳಬೇಕು! ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಎಸ್ಸೆಸ್ಸೆಲ್ಸಿ

ಮಾದರಿ ಪ್ರಶ್ನೋತ್ತರ–

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

12) ಈ ವೃತ್ತದಲ್ಲಿ "O" ಕೇಂದ್ರ PT ಸ್ಪರ್ಶಕ $\angle PTO = 30^\circ$, ಇದ್ದರೆ $\angle POT$ ಯನ್ನು ಕಂಡುಹಿಡಿಯಿರಿ.

ಉತ್ತರ :



OP ತ್ರಿಜ್ಯ PT ಸ್ಪರ್ಶಕ

$\therefore \angle OPT = 90^0$

$\angle OPT + \angle PTO + \angle POT = 180^\circ$

$90^0 + 30^0 + \angle POT = 180^0$

$\angle POT = 180^0 - 120^0$

$\therefore \angle POT = 60^0$

13) 7 ಸೆಂ. ಮೀ ತ್ರಿಜ್ಯವುಳ್ಳ ಒಂದು ಗೋಳದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

ಉತ್ತರ : ಗೋಳದ ಮೇಲ್ಮೈ ವಿಸ್ತೀರ್ಣ = $4\pi r^2$

$4\pi r^2 = 4 \times \frac{22}{7} \times 7^2 = 22 \times 28 = 616\ cm^2$

14) $5 - \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

ಉತ್ತರ : $5 - \sqrt{3} = a$. ಆಗಿರಲಿ ಇಲ್ಲಿ a. ಒಂದು ಭಾಗಲಬ್ಧ ಸಂಖ್ಯೆಯಾಗಿರಲ್ಲಿ

$5 = a + \sqrt{3}$

ಎರಡು ಕಡೆ ವರ್ಗ ಮಾಡಿದಾಗ

$(5)^2 = (a + \sqrt{3})^2$

$25 = a^2 + 3 + 2\sqrt{3}\ .a$

$2\sqrt{3}\ a = 25 - a^2 - 3 \Rightarrow 2\sqrt{3}\ a = 22 - a^2$

$\Rightarrow \sqrt{3} = \frac{22 - a^2}{2a}$

ಆದರೆ $\frac{22 - a^2}{2a}$ ಒಂದು ಭಾಗಲಬ್ಧ ಸಂಖ್ಯೆ ಆದರೆ $\sqrt{3}$ ಒಂದು ಅಭಾಗಲಬ್ಧ ಸಂಖ್ಯೆ.

$\therefore$ 5 – $\sqrt{3}$ ಒಂದು ಭಾಗಲಬ್ಧ ಸಂಖ್ಯೆಯಾಗಲು ಸಾಧ್ಯವಿಲ್ಲ.

$\Rightarrow 5 - \sqrt{3}$ ಒಂದು ಅಭಾಗಲಬ್ಧ ಸಂಖ್ಯೆ.

15) 75 ಗುಲಾಬಿ ಮತ್ತು 45 ನೈದಿಲೆ ಹೂಗಳಿವೆ. ಎರಡೂ ಹೂಗಳನ್ನು ಉಪಯೋಗಿಸಿಕೊಂಡು ಹೂ ಗುಚ್ಛಗಳನ್ನು ಮಾಡಬೇಕಾಗಿದೆ. ಎಲ್ಲಾ ಹೂ ಗುಚ್ಛಗಳಲ್ಲಿಯೂ ಒಂದೇ ಸಂಖ್ಯೆಯ ಹೂಗಳಿರಬೇಕು. ಹೀಗೆ ಮಾಡಲು ಸಾಧ್ಯವಾಗುವ ಹೂ ಗುಚ್ಛಗಳ ಸಂಖ್ಯೆಯನ್ನು ಮತ್ತು ಪ್ರತಿ ಗುಚ್ಛದಲ್ಲಿನ ಹೂಗಳ ಸಂಖ್ಯೆಯನ್ನು ಕಂಡು ಹಿಡಿಯಿರಿ.

ಪರಿಹಾರ:– 75 ಮತ್ತು 45ನ್ನು ಅವಿಭಾಜ್ಯ ಅಪವರ್ತನಗಳಾಗಿ ಬರೆದಾಗ $75^2 = 5^2 \times 3$; $45 = 5 \times 3^2$

ಮಸಾಅ $(75, 45) = 5 \times 3 = 15$

$\therefore$ ಹೂಗುಚ್ಛಗಳ ಸಂಖ್ಯೆಯು 15 ಆಗಿದೆ. ಪ್ರತಿ ಹೂ ಗುಚ್ಛದಲ್ಲಿನ ಹೂಗಳ ಸಂಖ್ಯೆಯು = 5 + 3 = 8 ಆಗಿದೆ

16), $\tan\theta . \sin\theta + \cos\theta = \sec\theta$. ಎಂದು ಸಾಧಿಸಿ.

ಉತ್ತರ :

$\Rightarrow \frac{\sin\theta}{\cos\theta} . \sin\theta + \cos\theta = \sec\theta \quad \left[\because \tan\theta = \frac{\sin\theta}{\cos\theta}\right]$

$\Rightarrow \frac{\sin^2\theta + \cos^2\theta}{\cos\theta} = \sec\theta$

$\Rightarrow \frac{1}{\cos\theta} = \sec\theta$

$\Rightarrow \sec\theta = \sec\theta \quad \left[\because \frac{1}{\cos\theta} = \sec\theta\right]$

$\therefore$ LHS = RHS

17) ಜಾನ್ ಮತ್ತು ಜೀವಂತಿ ಇವರಿಬ್ಬರ ಬಳಿ ಇರುವ ಒಟ್ಟು ಗೋಲಿಗಳ ಸಂಖ್ಯೆ 45 ಆಗಿದೆ. ಇವರಿಬ್ಬರೂ ತಲಾ 5 ಗೋಲಿಗಳನ್ನು ಕಳೆದುಕೊಂಡರೆ ಇವರ ಬಳಿ ಇರುವ ಗೋಲಿಗಳ ಸಂಖ್ಯೆಗಳ ಗುಣಲಬ್ಧ 124 ಆಗುತ್ತದೆ. ಹಾಗಾದರೆ ಆರಂಭದಲ್ಲಿ ಅವರ ಬಳಿ ಇದ್ದ ಗೋಲಿಗಳ ಸಂಖ್ಯೆ ಎಷ್ಟು ಎಂಬುದನ್ನು ಕಂಡುಹಿಡಿಯಲು ಬಯಸುತ್ತೇವೆ. ಇದರ ವರ್ಗ ಸಮೀಕರಣ ಕಂಡುಹಿಡಿಯಿರಿ

ಪರಿಹಾರ:– ಜಾನ್ ಬಳಿ ಇರುವ ಗೋಲಿ x ಆಗಿರಲಿ

ಆಗ ಜೀವಂತಿ ಬಳಿ ಇರುವ ಗೋಲಿ $45 - x$

5 ಗೋಲಿಗಳನ್ನು ಕಳೆದುಕೊಂಡಾಗ, ಜಾನ್‌ನ ಬಳಿ ಉಳಿದ ಗೋಲಿಗಳ ಸಂಖ್ಯೆ = $x - 5$

5 ಗೋಲಿಗಳನ್ನು ಕಳೆದುಕೊಂಡಾಗ, ಜೀವಂತಿಯ ಬಳಿ ಉಳಿದ ಗೋಲಿಗಳ ಸಂಖ್ಯೆ = $45 - x - 5 = 40 - x$

$\therefore$ ಅವುಗಳ ಗುಣಲಬ್ಧ = $(x-5)(40-x)$

$= 40x - x^2 - 200 + 5x$

$= -x^2 + 45x - 200$

ಹೀಗೆ, $-x^2 + 45x - 200 = 124$

ಅಂದರೆ, $-x^2 + 45x - 324 = 0$

ಅಂದರೆ, $x^2 - 45x + 324 = 0$

ಆದ್ದರಿಂದ, ಜಾನ್‌ನ ಬಳಿ ಇದ್ದ ಗೋಲಿಗಳ ಸಂಖ್ಯೆಯು ವರ್ಗ ಸಮೀಕರಣ $x^2 - 45x + 324 = 0$ ಯನ್ನು ಸರಿದೂಗಿಸುತ್ತದೆ. ಇದು ಸಮಸ್ಯೆಯ ಅಪೇಕ್ಷಿತ ಗಣಿತೀಯ ರೂಪವಾಗಿದೆ.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತವಿಜ್ಞಾನದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಭೌತವಿಜ್ಞಾನ

ಪಿಯುಸಿ

ಮಾದರಿ ಪ್ರಶ್ನೋತ್ತರ

56) ಯಾವುದನ್ನು ರೇಖಾ ರೋಹಿತವೆನ್ನುತ್ತಾರೆ.?

ಉತ್ತರ:– ಪ್ರತಿಯೊಂದು ಮೂಲವಸ್ತುವಿನ ಪರಮಾಣುಗಳು ಸ್ಥಿರವಾಗಿದ್ದು ಅವು ವಿಶಿಷ್ಟ ರೋಹಿತವನ್ನು ಹೊರಸೂಸುತ್ತವೆ. ರೋಹಿತವು ಪ್ರತ್ಯೇಕಿಸಲ್ಪಟ್ಟ ಸಮಾನಾಂತರ ರೇಖೆಗಳ ಗುಂಪನ್ನು ಹೊಂದಿದ್ದು ಅದನ್ನು ರೇಖಾ ರೋಹಿತವೆನ್ನುತ್ತಾರೆ. ಇದು ಪರಮಾಣುವಿನ ರಚನೆಯ ಬಗ್ಗೆ ಉಪಯುಕ್ತ ಮಾಹಿತಿಯನ್ನು ನೀಡುವುದು.

57) ನೀಲ್ಸ್ ಬೋರ್ ಮಾದರಿಗೆ ಮೂರು ಸ್ವಯಂಸಿದ್ಧಗಳನ್ನು ಪರಿಚಯಿಸಿದರು. ಅವು ಕ್ವಾಂಟಮ್ ಮೆಕ್ಯಾನಿಕ್ಸ್‌ನ ಅಡಿಪಾಯಗಳಾಗಿವೆ. ಹಾಗಾದರೆ ಅವು ಯಾವುವು?

ಉತ್ತರ:– ಹೈಡ್ರೋಜನ್ ತರಹದ (ಏಕ ಇಲೆಕ್ಟ್ರಾನ್) ಪರಮಾಣುಗಳಿಂದ ಹೊರಸೂಸಲ್ಪಟ್ಟ ರೇಖಾ ರೋಹಿತವನ್ನು ಮತ್ತು ಪರಮಾಣುಗಳ ಸ್ಥಿರತೆಯನ್ನು ವಿವರಿಸಲು ನೀಲ್ಸ್ ಬೋರ್ ಒಂದು ಮಾದರಿಯನ್ನು ಪ್ರಸ್ತಾಪಿಸಿದರು. ಅಲ್ಲಿ ಅವರು ಮೂರು ಸ್ವಯಂ ಸಿದ್ಧಗಳನ್ನು ಪರಿಚಯಿಸಿದರು. ಅವು ಕ್ವಾಂಟಮ್ ಮೆಕ್ಯಾನಿಕ್ಸ್‌ನ ಅಡಿಪಾಯಗಳಾಗಿವೆ.

(a) ಯಾವುದೇ ಹೈಡ್ರೋಜನ್ ಪರಮಾಣುವಿನಲ್ಲಿ ಯಾವುದೇ ಇಲೆಕ್ಟ್ರಾನ್‌ಗಳು ನಿರ್ದಿಷ್ಟ ಸ್ಥಿರ ಕಕ್ಷೆಗಳಲ್ಲಿ (ಅವುಗಳಿಗೆ ಸ್ಥಾಯೀ ಕಕ್ಷೆಗಳೆನ್ನುತ್ತಾರೆ) ವಿಕಿರಣ ಶಕ್ತಿಯನ್ನು ಹೊರಸೂಸದೆ ಪರಿಭ್ರಮಿಸುತ್ತವೆ.

(b) ಸ್ಥಾಯಿ ಕಕ್ಷೆಗಳ ಕೋನೀಯ ವೇಗವು $h/2\pi$ನ ಪೂರ್ಣಾಂಕಗಳ ಅಪವರ್ತ್ಯಗಳಾಗಿರುತ್ತವೆ (ಬೋರ್ ಕ್ವಾಂಟೀಕರಣ ನಿರ್ಬಂಧ) ಅಂದರೆ $L = nh/2\pi$ ಇಲ್ಲಿ n ಪೂರ್ಣಾಂಕವಾಗಿದ್ದು ಅದನ್ನು ಕ್ವಾಂಟಮ್ ಸಂಖ್ಯೆ ಎನ್ನುತ್ತಾರೆ.

(c) ಇಲೆಕ್ಟ್ರಾನ್ ನಿಗದಿಪಡಿಸಿದ, ಅವಿಕಿರಣಶೀಲ ಕಕ್ಷೆಗಳಿಂದ, ಬೇರೆ ಕಡಿಮೆ ಶಕ್ತಿ ಮಟ್ಟಕ್ಕೆ ಸಂಕ್ರಮಿಸಬಹುದೆಂದು ಬೋರ್‌ರ ಮೂರನೆಯ ಸ್ವಯಂಸಿದ್ಧ ಹೇಳುತ್ತದೆ. ಹಾಗಾದಾಗ, ಫೋಟಾನೊಂದು ಚಿಮ್ಮಲ್ಪಟ್ಟು, ಅದರ ಶಕ್ತಿಯು ಆರಂಭಿಕ ಹಾಗೂ ಅಂತಿಮ ಶಕ್ತಿ ಮಟ್ಟದ ವ್ಯತ್ಯಾಸಕ್ಕೆ ಸಮನಾಗಿರುತ್ತದೆ. ಚಿಮ್ಮಲ್ಪಟ್ಟ ಫೋಟಾನಿನ ಆವೃತ್ತಿಯನ್ನು ಕೆಳಗಿನ ಸೂತ್ರದಿಂದ ಪಡೆಯಬಹುದು.

$$h\nu = Ei - Ef$$

ಒಂದು ಪರಮಾಣು ಹೊರಸೂಸಲ್ಪಟ್ಟ ಅವೃತ್ತಿಯಷ್ಟೇ ಇರುವ ವಿಕಿರಣವನ್ನು ಹೀರಬಹುದು, ಆಗ ಇಲೆಕ್ಟ್ರಾನ ಹೆಚ್ಚಿನ n ಬೆಲೆ ಇರುವ ಕಕ್ಷೆಗೆ ವರ್ಗಾವಣೆಯಾಗುತ್ತದೆ.

$$Ei + h\nu = Ef$$

58) $2.0 \times 10^4\ N\ C^{-1}$ ಮೌಲ್ಯವಿರುವ ಏಕರೂಪ ವಿದ್ಯುತ್ ಕ್ಷೇತ್ರದಲ್ಲಿ ಒಂದು ಇಲೆಕ್ಟ್ರಾನ್ 1.5 cm ದೂರ ಬೀಳುತ್ತದೆ. [ಚಿತ್ರ (a)]. ಕ್ಷೇತ್ರದ ಮೌಲ್ಯವನ್ನು ಬದಲಾಯಿಸದೆ ಅದರ ದಿಕ್ಕನ್ನು ಪರಾವರ್ತಿಸಿದರೆ ಹಾಗೂ ಒಂದು ಪ್ರೋಟಾನ್ ಆದೆ ದೂರದಲ್ಲಿ ಬೀಳುತ್ತದೆ. [ಚಿತ್ರ.(b)]. ಬೀಳಲು ಬೇಕಾದ ಸಮಯವನ್ನು ಲೆಕ್ಕ ಹಾಕಿರಿ. ಇದನ್ನು ಗುರುತ್ವದಲ್ಲಿನ ಮುಕ್ತ ಪತನಕ್ಕಿರುವ ವ್ಯತ್ಯಾಸವನ್ನು ತಿಳಿಸಿರಿ.



a b

ಪರಿಹಾರ: [ಚಿತ್ರ.(a)]. ಇದರಲ್ಲಿ ಕ್ಷೇತ್ರವು ಮೇಲಕ್ಕಿರುತ್ತದೆ. ಇದರಿಂದ ಋಣ ಆವೇಶವಿರುವ ಇಲೆಕ್ಟ್ರಾನ್ eE ಮೌಲ್ಯವಿರುವ ಬಲವನ್ನು ಕೆಲ ದಿಕ್ಕಿನಲ್ಲಿ ಅನಿಭವಿಸುತ್ತದೆ. ಇಲ್ಲಿ E ವಿದ್ಯುತ್ ಕ್ಷೇತ್ರದ ಮೌಲ್ಯವಾಗಿರುತ್ತದೆ. ಎಲೆಕ್ಟ್ರಾನಿನ ವೇಗೋತ್ಕರ್ಷ.

$ae = eE/m_e$

m_e ಎಲೆಕ್ಟ್ರಾನಿನ ರಾಶಿಯಾಗಿರುತ್ತದೆ.

ನಿಶ್ಚಲ ಸ್ಥಿತಿಯಿಂದ h ದೂರಕ್ಕೆ ಚಲಿಸಲು ಬೇಕಾದ ಕಾಲಾವಕಾಶ

$$t_e = \sqrt{\frac{2h}{a_e}} = \sqrt{\frac{2hm_e}{eE}}$$

$e = 1.6 \times 10^{-19} C$, $me = 9.11 \times 10^{-31}$ kg,

$E = 2.0 \times 10^4\ N\ C^{-1}$, $h = 1.5 \times 10^{-2}$ m,

$t_e = 2.9 \times 10^{-9} s$

[ಚಿತ್ರ(b)]ಯಲ್ಲಿ ಕ್ಷೇತ್ರವು ಕೆಳ ದಿಕ್ಕಿನಲ್ಲಿರುತ್ತದೆ, ಧನಾತ್ಮಕ ಆವೇಶವಿರುವ ಪ್ರೋಟಾನ್ eE ಮೌಲ್ಯದ ಬಲವನ್ನು ಕೆಳ ದಿಕ್ಕಿನಲ್ಲಿ ಅನುಭವಿಸುತ್ತದೆ.

ಪ್ರೋಟಾನ್ ವೇಗೋತ್ಕರ್ಷವ $a_p = eE/m_p$

ಇಲ್ಲಿ m_p ಪ್ರೋಟಾನ್ ರಾಶಿಯಾಗಿರುತ್ತದೆ. $m_p = 1.67 \times 10^{-27}$ kg.

ಪ್ರೋಟಾನ್ ಬೀಳುವ ಕಾಲಾವಕಾಶ

$$t_p = \sqrt{\frac{2h}{a_p}} = \sqrt{\frac{2hm_p}{eE}} = 1.3 \times 10^{-7} s$$

ಅಂದರೆ ಭಾರವಾಗಿರುವ ಕೇಂದ್ರ (ಪ್ರೋಟಾನ್) ಅಷ್ಟೇ ದೂರದಲ್ಲಿ ಚಲಿಸಲು ಹೆಚ್ಚು ಸಮಯ ತೆಗೆದುಕೊಳ್ಳುತ್ತದೆ. ಇದು ಗುರುತ್ವದಲ್ಲಿನ ಮುಕ್ತ ಪತನಕ್ಕೆ ವಿರುದ್ಧವಾಗಿರುತ್ತದೆ. ಏಕೆಂದರೆ ಗುರುತ್ವದಲ್ಲಿ ಕಾಯದ ರಾಶಿಯನ್ನು ಅವಲಂಬಿಸಸಿರುವುದಿಲ್ಲ. ಈ ಉದಾಹರಣೆಯಲ್ಲಿ ಕಾಯದ ರಾಶಿಯನ್ನು ಲೆಕ್ಕಹಾಕುವಾಗ ಗುರುತ್ವವೇಗೋತ್ಕರ್ಷವನ್ನು ಪರಿಗಣಿಸುವುದಿಲ್ಲ ಎಂಬುದನ್ನು ಗಮನಿಸಬೇಕು. ಇದು ನ್ಯಾಯಯುತವಾಗಿದೆ ಎಂದು ನೋಡಲು ಈ ವಿದ್ಯುತ್ ಕ್ಷೇತ್ರದಲ್ಲಿ ಪ್ರೋಟಾನ್‌ನ ವೇಗೋತ್ಕರ್ಷವನ್ನು ಕಂಡುಹಿಡಿಯೋಣ.

$$a_p = \frac{eE}{m_p} = \frac{(1.6 \times 10^{-19}\ C) \times (2.0 \times 10^4\ NC^{-1})}{1.67 \times 10^{-27}\ kg} = 1.9 \times 10^{12} ms^{-2}$$

ಇದು g (9.8 m s^{-2}), ಮೌಲ್ಯಕ್ಕೆ ಹೋಲಿಸಿದರೆ ಬಹುದೊಡ್ಡದಾಗಿದೆ.

ಎಲೆಕ್ಟ್ರಾನಿನ ವೇಗೋತ್ಕರ್ಷವು ಇನ್ನು ಹೆಚ್ಚಾಗುತ್ತದೆ. ಆದ್ದರಿಂದ ಗುರುತ್ವವೇಗೋತ್ಕರ್ಷವನ್ನು ಪರಿಗಣಿಸಬೇಕಾಗಿಲ್ಲ.

ರಾಜ್ಯದ 1,316 ಖಾಸಗಿ ಶಾಲೆಗಳು ಅನಧಿಕೃತ

ಬೆಂಗಳೂರು: ರಾಜ್ಯದ 1,316 ಖಾಸಗಿ ಅನುದಾನರಹಿತ ಶಾಲೆಗಳನ್ನು ಅನಧಿಕೃತ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗುರುತಿಸಿದೆ.



ಬಿ.ಸಿ. ನಾಗೇಶ್

ಬೆಂಗಳೂರು ಉತ್ತರದ 485, ಬೆಂಗಳೂರು ದಕ್ಷಿಣದ 386, ತುಮಕೂರು ಜಿಲ್ಲೆಯ 109 ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ 66 ಶಾಲೆಗಳು ಸೇರಿವೆ. ಪೋಷಕರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಅನಧಿಕೃತ ಶಾಲೆಗಳ ಪಟ್ಟಿಯನ್ನು ಶೀಘ್ರ ಪ್ರಕಟಿಸಲಾಗುವುದು. ಶಿಕ್ಷಣ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ್ದಕ್ಕಾಗಿ ಅಂತಹ ಶಾಲೆಗಳ ಆಡಳಿತ ಮಂಡಳಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಸಚಿವ ಬಿ.ಸಿ.ನಾಗೇಶ್ ಮಾಹಿತಿ ನೀಡಿದ್ದಾರೆ.

63 ಶಾಲೆಗಳು ನೋಂದಣಿ ಮಾಡಿಸಿಲ್ಲ, 74 ಶಾಲೆಗಳು ಅನುಮತಿ ಪಡೆಯದೇ ತರಗತಿಗಳನ್ನು ಮೇಲ್ದರ್ಜೆಗೇರಿಸಿವೆ. 95 ಶಾಲೆಗಳು ರಾಜ್ಯದ ಅನುಮತಿ ಪಡೆದು ಸಿಬಿಎಸ್‌ಸಿಗೆ ಪ್ರವೇಶ ನೀಡುತ್ತಿವೆ. 294 ಶಾಲೆಗಳು ಕನ್ನಡ ಮಾಧ್ಯಮಕ್ಕೆ ಅನುಮತಿ ಪಡೆದು, ಇಂಗ್ಲಿಷ್ ಮಾಧ್ಯಮದಲ್ಲಿ ಬೋಧಿಸುತ್ತಿವೆ. 620 ಶಾಲೆಗಳು ಅನುಮತಿಗಿಂತ ಹೆಚ್ಚುವರಿ ವಿಭಾಗಗಳನ್ನು ಹೊಂದಿವೆ. 141 ಶಾಲೆಗಳನ್ನು ಅನುಮತಿ ಪಡೆಯದೆ ಸ್ಥಳಾಂತರಿಸಿರುವುದು ಪತ್ತೆಯಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

ಬೆಂಗಳೂರಿನ ಕೆಲ ಪ್ರಮುಖ ಶಾಲೆಗಳು ಅನುಮತಿ ಪಡೆಯದೆ ಮಕ್ಕಳಿಗೆ ಸಿಬಿಎಸ್‌ಇಗೆ ಪ್ರವೇಶ ನೀಡಿವೆ ಎಂದು ಹಲವು ಪೋಷಕರು ಪ್ರತಿಭಟನೆ ನಡೆಸಿ, ದೂರು ನೀಡಿದ್ದರು. ಅಂತಹ ಶಾಲೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿತ್ತು.

ಗಡಿಯಲ್ಲಿ ಗುಂಡು ಹಾರಿಸಲೂ ‘ನಾಗ್ಪುರ’ ಆದೇಶ: ಹರಿಪ್ರಸಾದ್

ಬೆಂಗಳೂರು: ದೇಶದ ಗಡಿಯಲ್ಲಿ ಒಂದು ಗುಂಡು ಹಾರಿಸಲು ಈ ಹಿಂದೆ ಮೇಲಿನವರ ಆದೇಶಕ್ಕೆ ಕಾಯಬೇಕಿತ್ತು. ಈಗ ಅಂತಹ ಪರಿಸ್ಥಿತಿ ಇಲ್ಲ ಎಂದ ವಿಧಾನ ಪರಿಷತ್‌ನ ಮುಖ್ಯಸಚೇತಕ ವೈ.ಎ.ನಾರಾಯಣಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ‘ಹೌದು, ನಿಜ ಈಗ ನಾಗ್ಪುರದ ಆದೇಶ ಸಾಕು’ ಎಂದು ಕಾಲೆಳೆದರು.



ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮುಂದುವರಿದ ಚರ್ಚೆಯಲ್ಲಿ ಕಾಂಗ್ರೆಸ್ ಸದಸ್ಯ ಯು.ಬಿ. ವೆಂಕಟೇಶ್ ಮಾತನಾಡಿ, ಬಿಜೆಪಿ ವಾಸ್ತವದ ಸೂತ್ರಗಳಿಗಿಂತ ಶಾಸ್ತ್ರಕ್ಕೆ ಮನ್ನಣೆ ನೀಡುತ್ತದೆ. ಶನಿ ಎರಡನೇ ಮನೆಗೆ ಒಕ್ಕರಿಸಿದೆ. ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎನ್ನುವುದು ಗೊತ್ತಾಗಿದೆ ಎಂದರು.

‘ಇತರೆ ಸದಸ್ಯರು ಮಾತನಾಡುವಾಗ ಅವಕಾಶ ಕೊಡಬೇಕು. ಬತ್ತಿ ಇಟ್ಟು ಕುಳಿತುಕೊಳ್ಳಬಾರದು’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅವರು ನಾರಾಯಣಸ್ವಾಮಿಗೆ ತಿವಿದರು. ಚರ್ಚೆ ನಡೆಯುವಾಗ ಪರಸ್ಪರ ಮಾತನಾಡುತ್ತಿದ್ದ ಸಚಿವ ಮುರುಗೇಶ ನಿರಾಣಿ, ಬಿಜೆಪಿಯ ಆಯನೂರು ಮಂಜುನಾಥ್ ಅವರನ್ನು ಪ್ರತ್ಯೇಕವಾಗಿ ಕುಳಿತುಕೊಳ್ಳುವಂತೆ ಸಭಾಪತಿ ಸೂಚಿಸಿದರು.

ಶುಕ್ರವಾರ ಬೆಳಿಗ್ಗೆ 10.15ಕ್ಕೆ ಬಜೆಟ್

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸಭೆಯಲ್ಲಿ ಶುಕ್ರವಾರ ಬೆಳಿಗ್ಗೆ 10.15ರಿಂದ 2023–24ನೇ ಹಣಕಾಸು ವರ್ಷದ ಬಜೆಟ್ ಮಂಡಿಸಲಿದ್ದಾರೆ.

‘ಮಂಗಳವಾರ ನಡೆದ ವಿಧಾನಸಭೆಯ ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ನಿಗದಿಯಂತೆ ಇದೇ 24ರವರೆಗೂ ಅಧಿವೇಶನ ನಡೆಸಲು ನಿರ್ಧರಿಸಲಾಗಿದೆ’ ಎಂದು ವಿಧಾನ ಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಸದನದಲ್ಲಿ ಪ್ರಕಟಿಸಿದರು.

ಶೇ 40 ಲಂಚದ ಆರೋಪ: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯ

‘ನ್ಯಾಯಮೂರ್ತಿ ನೇತೃತ್ವದ ಆಯೋಗ ರಚಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇ 40ರಷ್ಟು ಲಂಚ ಪ್ರಕರಣವೂ ಸೇರಿ 2008 ರಿಂದ ಈವರೆಗೆ ನಡೆದಿದೆ ಎನ್ನಲಾದ ಎಲ್ಲ ಅವ್ಯವಹಾರಗಳ ಬಗ್ಗೆಯೂ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಆಯೋಗ ರಚಿಸಬೇಕು ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸರ್ಕಾರವನ್ನು ಆಗ್ರಹಿಸಿದರು.

ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಶೇ 40 ರಷ್ಟು ಲಂಚದ ಆರೋಪ ನನ್ನ ಆರೋಪವಲ್ಲ. ಗುತ್ತಿಗೆದಾರರು ಮಾಡಿರುವ ಆರೋಪ. ಅವರು ಪ್ರಧಾನಿಯವರಿಗೆ ಬರೆದಿರುವ ಪತ್ರವನ್ನೇ ದಾಖಲೆ ಎಂದು ಪರಿಗಣಿಸಿ. ಅದೇ ರೀತಿ ನಮ್ಮ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ತನಿಖಾ ಆಯೋಗಕ್ಕೆ ನೀವೂ ದಾಖಲೆಗಳನ್ನು ಕೊಡಿ’ ಎಂದು ಹೇಳಿದರು.

‘ಪ್ರಧಾನಿ ಮೋದಿ ಅವರು 2018ರ ಚುನಾವಣೆ ವೇಳೆ ನಮ್ಮ ಸರ್ಕಾರದ ವಿರುದ್ಧ ಶೇ 10 ರಷ್ಟು ಲಂಚದ ಆರೋಪ ಮಾಡಿದ್ದರು. ಮೋದಿ ದಾಖಲೆ ಇಟ್ಟುಕೊಂಡು ಮಾತನಾಡಿದ್ದರಾ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ‘ಸಾರ್ವಜನಿಕ ಸಭೆಯಲ್ಲಿ ಮಾತನಾಡುವಾಗ ಶೇ 40, 50, 60 ಎಷ್ಟು ಬೇಕಾದರೂ ಹೇಳಿ. ಆದರೆ ವಿಧಾನಸಭೆಯಲ್ಲಿ ವಿಷಯ ಪ್ರಸ್ತಾಪಿಸುವಾಗ ದಾಖಲೆಗಳನ್ನು ಇಟ್ಟುಕೊಂಡು ಮಾತನಾಡಬೇಕಾಗುತ್ತದೆ. ಇಲ್ಲಿಯವರೆಗೂ ಯಾವುದೇ ತನಿಖಾ ಸಂಸ್ಥೆಗೆ ಏಕೆ ದೂರು ಕೊಟ್ಟಿಲ್ಲ? ಇದರ ಬಗ್ಗೆ ನೀವೇನಾದರೂ ಸ್ವತಂತ್ರವಾಗಿ, ಆಳವಾದ ಅಧ್ಯಯನ ಮಾಡಿ ದಾಖಲೆಗಳನ್ನು ಸಂಗ್ರಹಿಸಿದ್ದೀರಾ? ಹಾಗೇನಾದರೂ ಇದ್ದರೆ ಮುಂದಿಡಿ, ಯಾರೋ ದೂರು ಕೊಟ್ಟಿದ್ದು ಹೇಳುತ್ತಾ ಕೂತರೆ ಆಗಲ್ಲ. ಕೊಂಚ ಸಂಶೋಧನೆ ಮಾಡಿ’ ಎಂದರು.

‘ಗುತ್ತಿಗೆದಾರ ಸಂತೋಷ್ ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದು ದಾಖಲೆಯಲ್ಲವೇ’ ಎಂದು ಸಿದ್ದರಾಮಯ್ಯ ಹೇಳಿದಾಗ, ‘ಸಂತೋಷ್ ಪ್ರಕರಣದ ಬಗ್ಗೆ ತನಿಖೆ ಆಗಿದೆ, ಮಾಜಿ ಸಚಿವರಿಗೆ ಕ್ಲೀನ್‌ಚಿಟ್ ನೀಡಿದೆ. ಅಷ್ಟೇ ಅಲ್ಲ, ಆತನಿಗೆ ಕಾಮಗಾರಿ ಮಾಡಿಸಲು ಸರ್ಕಾರದಿಂದ ಕಾರ್ಯಾದೇಶವಾಗಲಿ, ಪತ್ರವಾಗಲಿ ಕೊಟ್ಟೇ ಇಲ್ಲ.

ವಿಧಾನ ಸಭೆಯ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

> **ಇವರು(ಕೆ.ಜೆ.ಜಾರ್ಜ್) ಮಾತನಾಡುವುದು ನೋಡಿದರೆ, ಪರಪ್ಪನ ಅಗ್ರಹಾರದಲ್ಲಿ ಸತ್ಯಹರಿಶ್ಚಂದ್ರನ ನಾಟಕ ಆಡಿದಂತೆ. ಇವರು ಆತ್ಮಸಾಕ್ಷಿ, ವಿವೇಕದ ಬಗ್ಗೆ ಮಾತನಾಡುತ್ತಾರೆ**
>
> **ಜೆ.ಸಿ.ಮಾಧುಸ್ವಾಮಿ,** ಕಾನೂನು ಸಚಿವ

ಸುಖಾಸುಮ್ಮನೆ ಗೂಬೆ ಕೂರಿಸುವುದು ಸರಿಯಲ್ಲ’ ಎಂದು ಮಾಧುಸ್ವಾಮಿ ಪ್ರತಿಕ್ರಿಯಿಸಿದರು.

‘ರಾಜ್ಯಪಾಲರ ಭಾಷಣದಲ್ಲಿ 4.93 ಲಕ್ಷ ಮನೆ ಕಟ್ಟಿದ್ದೇವೆ ಎಂದು ಸರ್ಕಾರ ಹೇಳಿದೆ. ಅದು ನಮ್ಮ ಸರ್ಕಾರ ಪ್ರಕಟಿಸಿದ್ದ ವಸತಿ ಯೋಜನೆಯನ್ನು ಪೂರ್ಣಗೊಳಿಸಿದೆ. ಬಿಜೆಪಿ ಸರ್ಕಾರ ಒಂದು ಮನೆಯನ್ನಾದರೂ ಕಟ್ಟಿಸಿದೆಯೆ’ ಎಂದು ಅವರು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ವಸತಿ ಸಚಿವ ವಿ.ಸೋಮಣ್ಣ, ‘ಇವರು

> **ಭ್ರಷ್ಟಾಚಾರಕ್ಕೆ ಮುಕ್ತಿ ಸಿಕ್ಕಿ, ಕರ್ನಾಟಕದ ಜನತೆಗೆ ನೆಮ್ಮದಿ ಸಿಗಬೇಕಾದರೆ, ಬಿಜೆಪಿ ಸರ್ಕಾರ ತೊಲಗಿ, ನಾವು ಅಲ್ಲಿ ಬಂದು ಕೂರಬೇಕು**
>
> **ಡಿ.ಕೆ.ಶಿವಕುಮಾರ್**
> ಕಾಂಗ್ರೆಸ್ ಶಾಸಕ

ಅಧಿಕಾರ ಬಿಟ್ಟು ಹೋಗುವಾಗ ವಸತಿ ಯೋಜನೆಗಳು ಕೇವಲ ಕಾಗದದ ಮೇಲಿತ್ತು. ಹಣವನ್ನೂ ಕೊಟ್ಟಿರಲಿಲ್ಲ. ವಸತಿ ಯೋಜನೆಗಾಗಿ ನಿಗದಿ ಮಾಡಿದ್ದ ಭೂಮಿಗೆ ಸಂಬಂಧಿಸಿ ಸಮಸ್ಯೆಗಳು ಇದ್ದವು. ನಮ್ಮ ಸರ್ಕಾರ ಆ ಸಮಸ್ಯೆಗಳನ್ನು ನಿವಾರಣೆ ಮಾಡಿ, ಹಣವನ್ನು ಒದಗಿಸಿ ಯೋಜನೆಗಳನ್ನು ಪೂರ್ಣಗೊಳಿಸುತ್ತಿದೆ’ ಎಂದರು.

‘ನಾನು ಹಿಂದೂ ವಿರೋಧಿ ಎಂದು ಬಿಜೆಪಿ ಬಿಂಬಿಸುತ್ತಿದೆ. ನಾನು ಹಿಂದು ವಿರೋಧಿಯಲ್ಲ. ದೇವರ ವಿರೋಧಿಯೂ ಅಲ್ಲ. ನಾನೂ ಕೂಡಾ ಹಿಂದು. ಮನುವಾದ ಮತ್ತು ಪುರೋಹಿತಶಾಹಿ ಈ ದೇಶಕ್ಕೆ ಶಾಪ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದರು. ನಾನೂ ಕೂಡ ಅದನ್ನೇ ಹೇಳುತ್ತೇನೆ’ ಎಂದರು.

‘ಬೇರೆ ರಾಜ್ಯಗಳ ಮಾದರಿ ಬೇಕಿಲ್ಲ’

ಬೆಂಗಳೂರು: ‘ಕರ್ನಾಟಕವೇ ಒಂದು ಮಾದರಿ. ನಮಗೆ ಯುಪಿ, ಗುಜರಾತ್ ಮಾದರಿ ಬೇಕಿಲ್ಲ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಹೇಳಿದರು.

ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಚರ್ಚೆಯ ಮೇಲೆ ಮಾತನಾಡಿದ ಅವರು, ‘ರಾಜ್ಯಪಾಲರದ್ದು ಸತ್ಯಕ್ಕೆ ದೂರವಾದ ಭಾಷಣ. ಸರ್ಕಾರದ ತಪ್ಪು ಒಪ್ಪುಗಳನ್ನು ಮುಚ್ಚುವ ಭಾಷಣ’ ಎಂದರು.

‘ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡಿದರೆ, ಅದನ್ನು ದೇಶದ್ರೋಹದ ಕೆಲಸ ಎಂದು ಕರೆಯಬೇಕಾಗುತ್ತದೆ’ ಎಂದ ಅವರು, ‘ಕರಾವಳಿಯಲ್ಲಿ ಗಾಂಜಾ, ಮಾದಕ ವಸ್ತುವಿನ ಜಗಳವನ್ನು ಧರ್ಮ ದ್ವೇಷಕ್ಕೆ ಬಳಸಿಕೊಳ್ಳುತ್ತಿದ್ದೀರಿ. ರಾಜಕೀಯಕ್ಕಾಗಿ ಅಮಾಯಕರನ್ನು, ಬಡವರ ಮಕ್ಕಳನ್ನು ಬಾವಿಗೆ ತಳ್ಳುತ್ತಿದ್ದೀರಿ’ ಎಂದು ವಾಗ್ದಾಳಿ ನಡೆಸಿದರು.

‘ರಾಜ್ಯದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ವಿಧಾನಸೌಧಕ್ಕೆ ಬಂದು ₹ 10 ಲಕ್ಷ ಕೊಡುತ್ತಾರೆಂದರೆ ಜನರಿಗೆ ಯಾವ ಭಾವನೆ ಬರಲಿದೆ? ಆದರೆ, ಅದರ ಉಲ್ಲೇಖ ರಾಜ್ಯಪಾಲರ ಭಾಷಣದಲ್ಲಿ ಇಲ್ಲ’ ಎಂದರು.

‘ಕುಂದಾಪುರ ಕನ್ನಡಕ್ಕೆ ಪ್ರತ್ಯೇಕ ಅಕಾಡೆಮಿ ಮಾಡಬೇಕು. ತುಳು ಮತ್ತು ಕೊಡವ ಭಾಷೆಗಳನ್ನು ಎಂಟನೆ ಪರಿಚ್ಛೇದದಲ್ಲಿ ಸೇರಿಸಲು ಕ್ರಮ ಕೈಗೊಳ್ಳಬೇಕು’ ಎಂದೂ ಒತ್ತಾಯಿಸಿದರು.

‘ನಾನು ಎಂದೂ ಪ್ರಸ್ತುತ’

‘ಸಿ.ಟಿ. ರವಿ ಬಹಳಷ್ಟು ಬಾರಿ ನನ್ನ ಹೆಸರು ಹೇಳಿದ್ದಾರೆ. ಅವರಿಗೆ ಧನ್ಯವಾದ. ಈ ಬಿಜೆಪಿಯವರು ಬಹಳ ಜನ ಆಗಾಗ ನನ್ನ ಹೆಸರು ಹೇಳುತ್ತಿರುತ್ತಾರೆ. ರಾಜಕೀಯದಲ್ಲಿ ನಾನು ಅಷ್ಟೊಂದು ಪ್ರಸ್ತುತವೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಮಂಗಳವಾರ ಕೇಳಿದರು.

ಆಗ ಪ್ರತಿಕ್ರಿಯಿಸಿದ ಸಿ.ಟಿ. ರವಿ, ‘ನಿಮಗೇಕೆ ಈ ಅನುಮಾನ ಬಂತು? ರಾಜಕೀಯವಾಗಿ ಅಪ್ರಸ್ತುತ ಆಗುತ್ತಿದ್ದೇನೆ ಎಂಬ ಪ್ರಶ್ನೆ ಕಾಡುತ್ತಿದೆಯೆ’ ಎಂದು ಕೆಣಕಿದರು. ‘ಇಲ್ಲಪ್ಪಾ. ರಾಜಕಾರಣದಲ್ಲಿ ನಾನು ಯಾವಾಗಲೂ ಪ್ರಸ್ತುತವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಹಿರಿಯ ನಾಗರಿಕರಿಗೆ ವಿಭಾಗಮಟ್ಟದಲ್ಲಿ ವೃದ್ಧಾಶ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿರಿಯ ನಾಗರಿಕರಿಗಾಗಿ ವಿಭಾಗಮಟ್ಟದಲ್ಲಿ ವೃದ್ಧಾಶ್ರಮಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಅವರ ಪ್ರಶ್ನೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರ ಪರವಾಗಿ ಉತ್ತರಿಸಿದ ಸಚಿವರು, ‘2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ 58 ಲಕ್ಷ ಹಿರಿಯ ನಾಯಕರಿದ್ದಾರೆ. 60 ವರ್ಷ ದಾಟಿದವರಿಗೆ ವಿವಿಧ ಹಂತಗಳಲ್ಲಿ ಪಿಂಚಣಿ ನೀಡಲಾಗುತ್ತಿದೆ. 18 ಲಕ್ಷ ಜನ ಪಿಂಚಣಿ ಸೌಲಭ್ಯ ಪಡೆಯುತ್ತಿದ್ದಾರೆ’ ಎಂದರು.

‘30 ಜಿಲ್ಲೆಗಳಲ್ಲಿ ನಿರ್ಗತಿಕ ನಾಗರಿಕರಿಗಾಗಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ. ಅವುಗಳಿಗೆ ನೀಡುತ್ತಿದ್ದ ಸಹಾಯಧನವನ್ನು ₹ 8 ಲಕ್ಷದಿಂದ ₹ 12 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಪ್ರತಿ ಕಂದಾಯ ಉಪವಿಭಾಗದಲ್ಲಿ ಸ್ವಯಂಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಆರಂಭಿಸಲಾಗುವುದು. ಪ್ರಸ್ತುತ ಒಂಬತ್ತು ಕಂದಾಯ ಉಪ ವಿಭಾಗಗಳಲ್ಲಿ ವೃದ್ಧಾಶ್ರಮಗಳನ್ನು ನಡೆಸಲಾಗುತ್ತಿದೆ’ ಎಂದರು. ‘ಪೋಷಕರನ್ನು ನೋಡಿಕೊಳ್ಳದ ಮಕ್ಕಳ ವಿರುದ್ಧ ಹಿರಿಯ ನಾಗರಿಕರು ನೀಡುವ ದೂರನ್ನು ವಿಚಾರಣೆ ನಡೆಸಲು ಉಪ ವಿಭಾಗಾಧಿಕಾರಿಗಳ ಸಮಿತಿ ರಚಿಸಲಾಗಿದೆ. ಅಲ್ಲಿ ನ್ಯಾಯ ಸಿಗದಿದ್ದಾಗ ಜಿಲ್ಲಾಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಅಲ್ಲಿ ವಿಳಂಬವಾಗುತ್ತಿದೆ ಎಂಬ ಆಕ್ಷೇಪವಿದ್ದು, ನಿಯಮಗಳನ್ನು ಸರಳೀಕರಿಸಿ, ವಿಚಾರಣಾ ಅವಧಿ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದು’ ಎಂದೂ ಭರವಸೆ ನೀಡಿದರು.

‘ಸಿದ್ದರಾಮಯ್ಯ ಎಲ್ಲೇ ಸ್ಪರ್ಧಿಸಿದರೂ ಸೋಲಿಸುತ್ತೇವೆ’

ಕೊಪ್ಪಳ: ‘ಕ್ಷೇತ್ರಕ್ಕಾಗಿ ಅಲೆದಾಡುತ್ತಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ರಾಜ್ಯದಲ್ಲಿ ಎಲ್ಲೇ ಸ್ಪರ್ಧಿಸಿದರೂ ಸೋಲಿಸುತ್ತೇವೆ. ಕೋಲಾರದಲ್ಲಿ ಸ್ಪರ್ಧಿಸಿದರಂತೂ ಕಾಂಗ್ರೆಸ್‌ನವರೇ ಸೋಲಿಸುತ್ತಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

‘ಸಿದ್ದರಾಮಯ್ಯ ಅವರು ಬಾದಾಮಿ ಮತ್ತು ವರುಣಾದಲ್ಲಿ ಸ್ಪರ್ಧಿಸಲಿ. ನಾವು ಸೋಲಿಸುತ್ತೇವೆಯೊ ಇಲ್ಲವೊ ನೋಡಿ’ ಎಂದು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು. ‘ಕಾಂಗ್ರೆಸ್‌ನವರಿಗೆ ತಾಕತ್ತು ಇದ್ದರೆ ರಾಹುಲ್ ಮತ್ತು ಪ್ರಿಯಾಂಕಾ, ಸೋನಿಯಾ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರನ್ನು ಕರೆಯಿಸದೇ ಚುನಾವಣೆ ಎದುರಿಸಲಿ’ ಎಂದರು.

‘ಸಮವಸ್ತ್ರ: ಅಧಿಕಾರಿ ಜೈಲಿಗಟ್ಟಿದರೆ ಗೊತ್ತಾಗುತ್ತೆ’

ಬೆಂಗಳೂರು: ರಾಜ್ಯದ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂ ಮತ್ತು ಕಾಲು ಚೀಲ ವಿತರಿಸಿರುವ ಬಗ್ಗೆ ಅಗತ್ಯ ದಾಖಲೆಗಳನ್ನು ನೀಡದ ರಾಜ್ಯ ಸರ್ಕಾರದ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ‘ಉನ್ನತ ಅಧಿಕಾರಿಯೊಬ್ಬರನ್ನು ಜೈಲಿಗೆ ಕಳುಹಿಸಿದರೆ ಎಲ್ಲ ಸರಿಹೋಗುತ್ತದೆ’ ಎಂದು ಕಿಡಿಕಾರಿದೆ.

ಈ ಸಂಬಂಧ ಕೊಪ್ಪಳ ಜಿಲ್ಲೆಯ ಮಾಸ್ಟರ್ ಮಂಜುನಾಥ್ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

‘ಸರ್ಕಾರದ ಉನ್ನತ ಅಧಿಕಾರಿಯೊಬ್ಬರನ್ನು ಜೈಲಿಗೆ ಕಳುಹಿಸಿದಾಗ ಜನರಿಗೆ ನಮ್ಮನ್ನು ಕಾಪಾಡಲು ನ್ಯಾಯಾಲಯವಿದೆ ಎಂಬುದು ಗೊತ್ತಾಗುತ್ತದೆ. ಆದರೇನು, ಮಾನ ಮಾರ್ಯದೆ ಇಲ್ಲದ ಅಧಿಕಾರಿಗಳು ಆರು ತಿಂಗಳಾದರೂ ಸರಿಯೇ ಜೈಲಿಗೆ ಹೋಗಿಬರುತ್ತಾರೆ’ ಎಂದು ಬೇಸರ ವ್ಯಕ್ತಪಡಿಸಿತು.

‘ಸಮವಸ್ತ್ರ ಖರೀದಿಸಲು ರಾಜ್ಯ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ. ಅದರಲ್ಲಿ ಎಷ್ಟು ಹಣ ಸದ್ಬಳಕೆಯಾಗಿದೆ ಎಂಬ ಬಗ್ಗೆ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕರು (ಡಿಡಿಪಿಐ) ಪರಿಶೀಲನೆ ನಡೆಸಬೇಕು. 2019–20ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಶಾಲಾ ವಿದ್ಯಾರ್ಥಿಗಳಿಗೆ ಎರಡು ಜೊತೆ ಸಮವಸ್ತ್ರ ಮತ್ತು ಶೂ, ಕಾಲು ಚೀಲ ವಿತರಣೆ ಮಾಡುವ ಮೂಲಕ ಸರ್ಕಾರವು ಹೈಕೋರ್ಟ್‌ನ 2019ರ ಆಗಸ್ಟ್ 28ರ ತೀರ್ಪು ಪಾಲಿಸಿದೆಯೇ ಅಥವಾ ಇಲ್ಲವೇ ಎಂಬುದನ್ನು ಖಾತರಿಪಡಿಸಿ ಎರಡು ವಾರಗಳಲ್ಲಿ ವರದಿ ಸಲ್ಲಿಸಬೇಕು’ ಎಂದು ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿದೆ.

‘ಸ್ವತಂತ್ರ ಅಧ್ಯಯನ ವರದಿ’ ಬಿಡುಗಡೆ ಮಾಡಿದ ದೇವನೂರ ಮಹಾದೇವ

ಆರ್‌ಎಸ್‌ಎಸ್ ಶೈಲಿಯ ಸಾಂಸ್ಥಿಕ ರಚನೆ ಅಗತ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದ ಮುಂಚೂಣಿ ಸಮಾಜಮುಖಿ ರಾಜಕೀಯ ಪಕ್ಷಗಳಿಗೆ ಆರ್‌ಎಸ್‌ಎಸ್ ಶೈಲಿಯ ಸಾಂಸ್ಥಿಕ ರಚನೆಯ ತಳಪಾಯ ಹಾಗೂ ರಾಜಕೀಯ ಪ್ರಜ್ಞೆ ಅತ್ಯಗತ್ಯ’ ಎಂದು ಲೇಖಕ ದೇವನೂರ ಮಹಾದೇವ ಪ್ರತಿಪಾದಿಸಿದರು.

ನಗರದಲ್ಲಿ ಮಂಗಳವಾರ ಪ್ರೊ. ಮಧುದಂಡವತೆ ಶತಮಾನೋತ್ಸವ ಪ್ರಯುಕ್ತ ‘ಮುಕ್ತ ಮತದಾನ– ಸಮರ್ಥ ಸರ್ಕಾರ’ – ಜನತಂತ್ರದ ‘ನೈಜ ಹಕ್ಕುದಾರರ ಧ್ವನಿ ಹಿಡಿದಿಡುವ ಡಯಗ್ನಾಸ್ಟಿಕ್ ವರದಿ’ಯನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಬೆಂಗಳೂರಿನ ಸಮಾಜವೇದಿಕೆ, ದೆಹಲಿಯ ಜನತಾಂತ್ರಿಕ ಸಮಾಜವಾದ ಸಂಘಟನೆ ಸಿದ್ಧಪಡಿಸಿದ ವರದಿಯನ್ನು ಹಿತ್ತಲಗಿಡ ಪ್ರಕಾಶನ ಪ್ರಕಟಿಸಿದೆ.

‘ಸಮಾಜಮುಖಿ ರಾಜಕೀಯ ಪಕ್ಷಗಳ ಸಾಂಸ್ಥಿಕ ರಚನೆ ಗಟ್ಟಿಯಿದ್ದರೂ ರಾಜಕೀಯ ಪ್ರಜ್ಞೆಯ ಕೊರತೆಯಿಂದಾಗಿ ಯಾವುದೇ ಅಲೆ ಎಬ್ಬಿಸುತ್ತಿಲ್ಲ. ತನ್ನ ರಾಜಕೀಯ ಪಕ್ಷದ ಗೆಲುವಿನಲ್ಲೇ ತನ್ನ ಅಳಿವು– ಉಳಿವು ಎಂದು ಸಂಘ ಪರಿವಾರವು ಕಾರ್ಯನಿರ್ವಹಿಸುವಂತೆ ಸಮಾಜಮುಖಿ ಪಕ್ಷಗಳ ಸಾಂಸ್ಥಿಕ ಸಂಘಟನೆಗಳು ವರ್ತಿಸುತ್ತಿಲ್ಲ’ ಎಂದು ವಿಷಾದಿಸಿದರು.

ಮೈಸೂರಿನಲ್ಲಿ ಮಂಗಳವಾರ ಪ್ರೊ. ಮಧುದಂಡವತೆ ಶತಮಾನೋತ್ಸವ ಪ್ರಯುಕ್ತ ‘ಮುಕ್ತ ಮತದಾನ– ಸಮರ್ಥ ಸರ್ಕಾರ’ – ಜನತಂತ್ರದ ‘ನೈಜ ಹಕ್ಕುದಾರರ ಧ್ವನಿ ಹಿಡಿದಿಡುವ ಡಯಗ್ನಾಸ್ಟಿಕ್ ವರದಿ’ಯನ್ನು ಸಾಹಿತಿ ದೇವನೂರ ಮಹಾದೇವ ಬಿಡುಗಡೆ ಮಾಡಿ ಮಾತನಾಡಿದರು.

‘ಬಿಜೆಪಿಗೆ ಆರ್‌ಎಸ್‌ಎಸ್ ಎಂಬ ಗಟ್ಟಿ ಸಾಂಸ್ಥಿಕ ತಳಪಾಯವಿರುವುದರ ಬಗ್ಗೆ ವರದಿಯಲ್ಲಿ ಪರಾಮರ್ಶಿಸಲಾಗಿದೆ. ತಳಮಟ್ಟದವರೆಗೂ ಬೇರೂರಿರುವ ಪ್ರಗತಿಪರ ಸಂಘಟನೆಗಳು, ಸಂಘ–ಸಂಸ್ಥೆಗಳು ಹೊಸ ರಾಜಕೀಯ ಪ್ರಯೋಗಕ್ಕೆ ಈ ರೀತಿಯ ಸಾಂಸ್ಥಿಕ ರಚನೆಯನ್ನು ಒದಗಿಸಬಹುದು’ ಎಂದು ಅವರು ಹೇಳಿದರು.

‘ಆಮ್ ಆದ್ಮಿ ಪಕ್ಷವು ಅಲೆ ಎಬ್ಬಿಸುತ್ತಿದ್ದರೂ ಇತರ ಸಮಾನ ಪಕ್ಷಗಳೊಂದಿಗೆ ಕೈಜೋಡಿಸದೆ ಒಂಟಿಯಾಗಿರುವುದೇ ನಿರೀಕ್ಷಿತ ಫಲಿತಾಂಶ ನೀಡದಿರಲು ಕಾರಣ ಎಂಬುದನ್ನು ವರದಿ ಗುರುತಿಸಿದೆ’ ಎಂದರು.

ನಿಗೂಢ ಮತದಾರರು: ‘ವರದಿಯಲ್ಲಿ ಶೇ 23 ರಿಂದ ಶೇ 35ರಷ್ಟು ‘ನಿಗೂಢ ಮತದಾರರು’ ನಿರ್ಣಾಯಕವಾಗಿದ್ದಾರೆ ಎಂದು ತಿಳಿಸಲಾಗಿದೆ. ನಿಗೂಢತೆ ಹೆಚ್ಚಿದ್ದರೆ ನಮ್ಮ ಸುತ್ತ ದುಷ್ಟತೆ ಹೆಚ್ಚಿದೆ ಎಂದರ್ಥ. ಭೀತಿಯಿಂದ ಅಲ್ಪಸಂಖ್ಯಾತರು, ಇತರರ ಕೆಂಗಣ್ಣಿಗೆ ಗುರಿಯಾಗಿ ಮುದುಡಿದ ಮಹಿಳೆಯರು, ಹಿರಿಯ ನಾಗರಿಕರು ನಿಗೂಢರಾಗಿರಬಹುದು. ಕಲ್ಯಾಣ ಕರ್ನಾಟಕದಲ್ಲೂ ಹೀಗೇ ಇದೆ. ಈ ನಿಗೂಢತೆಯ ಅರ್ಥವು ಪರಿಸ್ಥಿತಿ, ಸನ್ನಿವೇಶಕ್ಕೆ ತಕ್ಕಂತೆ ಬದಲಾಗುತ್ತಿರುತ್ತದೆ’ ಎಂದರು.

‘ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಇದುವರೆಗೂ ಆಳ್ವಿಕೆ ಸಂಸಾರ ನಡೆಸಿವೆ. ಅವುಗಳನ್ನು ಬಿಟ್ಟು ಆಳ್ವಿಕೆ ಸಂಸಾರ ಮಾಡದಿರುವ ನವಪಕ್ಷಗಳ ಕಡೆಗೆ ಶೇ 46ರಷ್ಟು ಮತದಾರರು ಒಲವು ತೋರಿದ್ದಾರೆ’ ಎಂದರು.

ಸಮಾಜವಾದಿ ಧುರೀಣ ಕಲಬುರಗಿಯ ಬಿ.ಆರ್. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ದೆಹಲಿ ಜಾಮಿಯಾ ಮಿಲಿಯಾ ವಿವಿಯ ಪ್ರೊ. ಡಿ.ಕೆ.ಗಿರಿ, ರಾಜಕೀಯ ವಿಮರ್ಶಕ ಸುಧೀಂದ್ರ ಕುಲಕರ್ಣಿ, ಅಧ್ಯಯನ ತಂಡದ ಮುಂದಾಳು ಪ್ರಕಾಶ ಕಮ್ಮರಡಿ ಮಾತನಾಡಿದರು.

ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ದಾವಣಗೆರೆಯ ಅನೀಸ್ ಪಾಷ, ಪ್ರೊ ಕಾಳೇಗೌಡ ನಾಗವಾರ, ಅರುಣ್ ಕುಮಾರ್ ಶ್ರೀವಾಸ್ತವ, ಸಿದ್ದನ ಗೌಡ ಪಾಟೀಲ, ಶ್ರೀಕಂಠ ಮೂರ್ತಿ ಇದ್ದರು.

‘ಮೋದಾನಿಯಿಂದ ಉಳಿಗಾಲವಿಲ್ಲ’

ಚುನಾವಣೆ ಹತ್ತಿರವಾಗುತ್ತಿರುವಂತೆ ರಾಜ್ಯದಲ್ಲಿ ಮೋದಿ, ಅಮಿತ್ ಶಾ ಹೆಚ್ಚು ಓಡಾಡುತ್ತಿದ್ದಾರೆ. ಹೀಗಾಗಿ ಇಲ್ಲಿ ಕಸಿಪದ ‘ಮೋದಾನಿ’ ಚಲಾವಣೆಯಲ್ಲಿದೆ. ಮೋದಿ, ಅದಾನಿ ಸೇರಿದ ಒಂದೇ ಪದ, ಒಂದೇ ಹೆಸರು ಇದು. ಅಧಿಕಾರ ಮತ್ತು ಕುರುಡು ಕಾಂಚಾಣ ಸೇರಿ ಒಂದೇ ಪದವಾಗಿದೆ, ಉಳಿಗಾಲವಿಲ್ಲ’ ಎಂದು ದೇವನೂರ ಮಹಾದೇವ ಮಾರ್ಮಿಕವಾಗಿ ನುಡಿದರು.

ನಾಗರಹೊಳೆ: 2 ಹೆಣ್ಣು ಹುಲಿ ಸೆರೆ

ಒಂದನೇ ಪುಟದಿಂದ...

ಪ್ರವಾಸಿಗರ ನೆಚ್ಚಿನ ಹುಲಿ: ‘ಬ್ಯಾಕ್ ವಾಟರ್ ಫಿಮೇಲ್’ ಹುಲಿ (11 ವರ್ಷ) ತನ್ನ ಒಂದು ವರ್ಷದ ವಯಸ್ಸಿನ ನಾಲ್ಕು ಮರಿಗಳೊಂದಿಗೆ ಕಬಿನಿ ಹಿನ್ನೀರು ವ್ಯಾಪ್ತಿಯಲ್ಲಿ ಕಾಣಿಸಿಕೊಳ್ಳುತ್ತಿತ್ತು.

ಅದನ್ನು ನೋಡಲೆಂದೇ ಪ್ರವಾಸಿಗರು ಮತ್ತು ವನ್ಯಜೀವಿ ಛಾಯಾಗ್ರಾಹಕರು ಭೇಟಿ ನೀಡುತ್ತಿದ್ದರು. ಎರಡು ತಿಂಗಳ ಹಿಂದೆ ಜಿಂಕೆಯನ್ನು ಬೇಟೆಯಾಡಿ ತನ್ನ ನಾಲ್ಕು ಮರಿಗಳಿಗೆ ಆಹಾರ ನೀಡಿದ್ದ ದೃಶ್ಯ ಸೆರೆಸಿಕ್ಕಿತ್ತು.

‘ಇನ್ನೊಂದು ಹುಲಿಯೊಂದಿಗೆ ನಡೆದ ಕಾಳಗದಲ್ಲಿ ಈ ಹುಲಿಯ ಕುತ್ತಿಗೆ, ತೊಡೆ ಮತ್ತು ಇತರೆಡೆ ಗಾಯಗಳಾಗಿದ್ದು, ವಯೋಸಹಜ ಅಸಹಾಯಕತೆಯಿಂದ ಅರಣ್ಯದಂಚಿನ ಗ್ರಾಮಗಳಲ್ಲಿ ಜನ– ಜಾನುವಾರುಗಳ ಮೇಲೆ ದಾಳಿ ಮಾಡುತ್ತಿತ್ತು’ ಎಂದು ಡಿ.ಬಿ.ಕುಪ್ಪೆ ವನ್ಯಜೀವಿ ವಲಯ ಅರಣ್ಯಾಧಿಕಾರಿ ಕೆ.ಎಲ್.ಮಧು ತಿಳಿಸಿದರು.

ಕಾರ್ಯಾಚರಣೆಯಲ್ಲಿ ವನ್ಯಜೀವಿ ಪಶುವೈದ್ಯ ರಮೇಶ್, ಎಸಿಎಫ್ ರಂಗಸ್ವಾಮಿ, ಅಂತರಸಂತೆ ವನ್ಯಜೀವಿ ವಲಯ ಅರಣ್ಯಾಧಿಕಾರಿ ಎಸ್.ಸ್.ಸಿದ್ದರಾಜು ಪಾಲ್ಗೊಂಡಿದ್ದರು.

ಗುಬ್ಬಿ ಬಳಿ ಹುಲಿ ಕಳೇಬರ ಪತ್ತೆ!

ಒಂದನೇ ಪುಟದಿಂದ...

ಅರಣ್ಯ ಇಲಾಖೆಯಲ್ಲೂ ಈ ಬಗ್ಗೆ ದಾಖಲಾಗಿಲ್ಲ. ಆದರೆ ಕಳೇಬರ ಪತ್ತೆಯಾಗಿರುವುದು ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸ್ಥಳೀಯರಲ್ಲಿ ಆಶ್ಚರ್ಯ ತರಿಸಿದೆ.

ಹುಲಿ ದೇಹದ ಮೇಲೆ ಯಾವುದೇ ಗಾಯದ ಗುರುತು ಕಂಡು ಬಂದಿಲ್ಲ. ಬೇರೆಡೆ ಕೊಂದು ಇಲ್ಲಿಗೆ ತಂದು ಹಾಕಿರುವ ಸಾಧ್ಯತೆ ಕಡಿಮೆ. ಮೇಲ್ನೋಟಕ್ಕೆ ಸಹಜ ಸಾವಿನಂತೆ ಕಂಡು ಬರುತ್ತಿದೆ. ಭದ್ರಾ ಅಭಯಾರಣ್ಯ ಅಥವಾ ನಾಗರಹೊಳೆ ಅರಣ್ಯ ಪ್ರದೇಶದಿಂದ ಬಂದಿರಬಹುದಾದ ಸಾಧ್ಯತೆಯೂ ಇದೆ. ಹುಲಿ ರಕ್ಷಿತಾರಣ್ಯ ಪ್ರದೇಶದ ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಮೃತ ಹುಲಿಯ ಭಾವಚಿತ್ರವನ್ನು ಸ್ಥಳೀಯ ಅಧಿಕಾರಿಗಳು ಹಂಚಿಕೊಂಡಿದ್ದಾರೆ. ಅಲ್ಲಿನ ಅಧಿಕಾರಿಗಳ ಬಳಿ ಮಾಹಿತಿ ಇದ್ದರೆ ಖಚಿತಪಡಿಸಲಿದ್ದಾರೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಹೇಳುತ್ತಾರೆ. ‘ಹುಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಪ್ರಯೋಗಾಲಯದ ವರದಿ ಬಂದ ನಂತರ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ’ ಎಂದು ತುಮಕೂರಿನ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಚ್.ಅನುಪಮಾ ಪ್ರತಿಕ್ರಿಯಿಸಿದರು.

ಹುಲಿ ಸಾವು ತನಿಖೆಗೆ ತಂಡ: ಹುಲಿ ಎಲ್ಲಿಂದ ಬಂದಿರಬಹುದು ಎಂಬುದರ ಜಾಡು ಪತ್ತೆ ಹಚ್ಚಲು, ಮಂಚಲದೊರೆ ಅರಣ್ಯ ಪ್ರದೇಶದಲ್ಲಿ ಮೊದಲೇ ಇತ್ತೆ ಎಂಬುದನ್ನು ತಿಳಿಯಲು ಹಾಗೂ ಸಾವಿಗೆ ನಿಖರ ಕಾರಣ ಸೇರಿದಂತೆ ಇತರ ಸಂದೇಹಗಳ ಕುರಿತು ತನಿಖೆ ನಡೆಸಲು ತುಮಕೂರು ವಿಭಾಗದ ಆರ್‌ಎಫ್‌ಒ ಮಹೇಶ್ ಮಾಲಗತ್ತಿ ನೇತೃತ್ವದಲ್ಲಿ ತನಿಖಾ ತಂಡ ರಚಿಸಲಾಗಿದೆ ಎಂದರು.

ಗುಬ್ಬಿ ತಾಲ್ಲೂಕಿನಲ್ಲಿ ಸೇತುವೆ ಅಡಿಯ ಸಿಮೆಂಟ್ ಪೈಪಿನಲ್ಲಿ ಕಂಡು ಬಂದ ಹುಲಿಯ ಕಳೇಬರ

ಸೀರೆ, ಕುಕ್ಕರ್ ಹಂಚಿಕೆ: ಹೈಕೋರ್ಟ್ ಕಳವಳ

ಬೆಂಗಳೂರು: ‘ಮತದಾರರಿಗೆ ಸೀರೆ, ಕುಕ್ಕರ್, ಮಿಕ್ಸಿ ಹಂಚಲಾಗುತ್ತಿದೆ’ ಎಂಬ ಮಾಧ್ಯಮ ವರದಿಗಳನ್ನು ಪ್ರಕರಣವೊಂದರ ವಿಚಾರಣೆ ವೇಳೆ ಮೆಲುಕು ಹಾಕಿರುವ ಹೈಕೋರ್ಟ್, ‘ಇದೆಂತಹ ಚುನಾವಣೆ’ ಎಂದು ಕಳವಳ ವ್ಯಕ್ತಪಡಿಸಿದೆ.

‘ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಗೌರಿಶಂಕರ ಅವರ ಆಯ್ಕೆ ಅಸಿಂಧುಗೊಳಿಸಬೇಕು‘ ಎಂದು ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿದ್ದ ತಕರಾರು ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ ಮಂಗಳವಾರ ಮುಂದುವರೆಸಿತು.

‘ಈಗಿನ ಸ್ಥಿತಿಯಲ್ಲಿ ಅಭ್ಯರ್ಥಿಯೊಬ್ಬ ಕನಿಷ್ಠ ₹ 25 ಕೋಟಿ ಖರ್ಚು ಮಾಡಬೇಕು ಎಂಬಂತಹ ಪರಿಸ್ಥಿತಿ ಇದೆ. ಕಲುಷಿತಗೊಂಡಿರುವ ಈ ವ್ಯವಸ್ಥೆಯನ್ನು ಸುಗಮಗೊಳಿಸುವುದು ಹೇಗೆ‘ ಎಂದು ಪೀಠ ಪ್ರಶ್ನಿಸಿತು. ‘ಚುನಾವಣೆಗೆ ಅಭ್ಯರ್ಥಿ ಎಂದು ಘೋಷಿಸಿದ ಬಳಿಕವೇ ಆತನ ಭ್ರಷ್ಟಾಚಾರಗಳ ಬಗ್ಗೆ ಕ್ರಮ ಕೈಗೊಳ್ಳಲು ಕಾನೂನಿನಲ್ಲಿ ಅವಕಾಶವಿದೆ. ಇಂಥದನ್ನು ನಿಯಂತ್ರಿಸಬೇಕು‘ ಎಂಬ ಜಿಜ್ಞಾಸೆಯನ್ನು ನ್ಯಾಯಪೀಠ ವ್ಯಕ್ತಪಡಿಸಿತು. ಗೌರಿಶಂಕರ್ ಪರ ವಕೀಲ ಆರ್.ಹೇಮಂತ ರಾಜ್, ‘ಪ್ರಜಾಪ್ರಭುತ್ವದಲ್ಲಿ ಕ್ರಾಂತಿಕಾರಕ ಬದಲಾವಣೆಯಿಂದ ಮಾತ್ರವೇ ಇಂತಹುದನ್ನೆಲ್ಲಾ ನಿಯಂತ್ರಿಸಲು ಸಾಧ್ಯ’ ಎಂದರು.

ಯುಗಾದಿಗೆ ಸೀರೆ ಗಿಫ್ಟ್!

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಚುನಾವಣೆ ಘೋಷಣೆಗೂ ಮುನ್ನವೇ ತಾಲ್ಲೂಕಿನಲ್ಲಿ ಮತದಾರರಿಗೆ ಪಕ್ಷಗಳು ಉಡುಗೊರೆ ಹಂಚಲು ಆರಂಭಿಸಿವೆ. ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೆಸರಿನಲ್ಲಿ ಮಹಿಳೆಯರಿಗೆ ಯುಗಾದಿ ಉಡುಗೊರೆಯಾಗಿ ಸೀರೆ ಹಂಚಲು ಸಿದ್ಧತೆ ನಡೆದಿದೆ.

ಯೋಗೇಶ್ವರ್ ಭಾವಚಿತ್ರ ಮತ್ತು ಬಿಜೆಪಿಯ ಕಮಲದ ಗುರುತು ಇರುವ 50 ಸಾವಿರ ಸೀರೆಗಳ ಪ್ಯಾಕ್ ಸಿದ್ಧವಾಗಿವೆ. ಶೀಘ್ರ ಹಂಚಿಕೆ ಆರಂಭವಾಗಲಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ನಿಮ್ಮ ಆಶೀರ್ವಾದ ಸದಾ ನನ್ನ ಮೇಲಿರಲಿ’ ಎಂದು ಸೀರೆಗಳ ಪ್ಯಾಕ್ ಮೇಲೆ ಮುದ್ರಿಸಲಾಗಿದೆ. 1999ರಲ್ಲಿ ಚನ್ನಪಟ್ಟಣ ಕ್ಷೇತ್ರದಿಂದ ಮೊದಲ ಬಾರಿ ಪಕ್ಷೇತರರಾಗಿ ಕಣಕ್ಕಿಳಿದಿದ್ದ ಯೋಗೇಶ್ವರ್ ಆಗಲೂ ಸೀರೆ ಹಂಚಿದ್ದರು.

‘ಹಿಂದುತ್ವ ಸೇರಿ ಹಲವು ಅಸ್ತ್ರಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ಸಾಕಷ್ಟು ಅಸ್ತ್ರಗಳನ್ನು ಸಿದ್ಧ ಮಾಡಿಟ್ಟುಕೊಂಡಿದ್ದೇವೆ. ವರಿಷ್ಠರ ಸೂಚನೆಯ ಮೇರೆಗೆ ಅವುಗಳನ್ನು ಪ್ರಯೋಗಿಸುತ್ತೇವೆ ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಹಿಂದುತ್ವ ಕಾರ್ಯಸೂಚಿ ಕುರಿತ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಚುನಾವಣೆಯಲ್ಲಿ ಆಯಾ ಸಂದರ್ಭಕ್ಕೆ ತಕ್ಕಂತೆ ಅಸ್ತ್ರಗಳನ್ನು ಪ್ರಯೋಗಿಸಬೇಕಾಗುತ್ತದೆ. ಅಭಿವೃದ್ಧಿಯೇ ನಮ್ಮ ಮುಖ್ಯ ಕಾರ್ಯಸೂಚಿ. ಆದರೆ, ಬತ್ತಳಿಕೆಯಲ್ಲಿ ಹಿಂದುತ್ವವೂ ಸೇರಿ ಸಾಕಷ್ಟು ಅಸ್ತ್ರಗಳೂ ಇವೆ’ ಎಂದರು. ಚುನಾವಣೆ ಹಿನ್ನೆಲೆಯಲ್ಲಿ ವಿವಿಧ ಮೋರ್ಚಾಗಳ ಸಮಾವೇಶ ನಡೆಸುವ ಜವಾಬ್ದಾರಿ ನೀಡಲಾಗಿದೆ. ಈ ಮೂಲಕ ರಾಜ್ಯ ಮತ್ತು ಕೇಂದ್ರದ ಯೋಜನೆಗಳ ಮಾಹಿತಿಯನ್ನು ಮನೆ ಮನೆಗೆ ಮತ್ತು ಮನ ಮನಕ್ಕೆ ತಲುಪಿಸಲಾಗುವುದು. 224 ವಿಧಾನಸಭಾ ಕ್ಷೇತ್ರಗಳಿಗೆ ತಲುಪುವ ಗುರಿ ಹಾಕಿಕೊಳ್ಳಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ವಿಜಯೇಂದ್ರ ಹೇಳಿದರು.

ಇದರ ಅಂಗವಾಗಿ ಇದೇ 20 ರಂದು ಮಂಡ್ಯದಲ್ಲಿ ಯುವ ಮೋರ್ಚಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರಜಾ ಮತ ಜನತಂತ್ರದ ಹಬ್ಬ ಕರ್ನಾಟಕ ವಿಧಾನಸಭಾ ಚುನಾವಣೆ - 2023

ಪ್ರಿಯಾಂಕ್ ಖರ್ಗೆ ಸೋಲಿಸುವೆ: ತೊಡೆ ತಟ್ಟಿದ ಚಿಂಚನಸೂರ

ಬೆಂಗಳೂರು: ‘ನಾನು ಯಾವುದೇ ಕಾರಣಕ್ಕೂ ಬಿಜೆಪಿ ಬಿಡುವುದಿಲ್ಲ. ಆದರೆ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಸೋಲಿಸುತ್ತೇನೆ’ ಎಂದು ಬಿಜೆಪಿಯ ವಿಧಾನಪರಿಷತ್ ಸದಸ್ಯ ಬಾಬುರಾವ್ ಚಿಂಚನಸೂರ ತೊಡೆ ತಟ್ಟಿ ಮಂಗಳವಾ ಸವಾಲು ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಾನು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರುತ್ತೇನೆ ಎಂದು ಸುಳ್ಳು ಸುದ್ದಿ ಹಬ್ಬಿಸಿದ್ದಾರೆ. ಬಿಜೆಪಿ ನನಗೆ ತಾಯಿ ಇದ್ದಂತೆ. ತಾಯಿಗೆ ದ್ರೋಹ ಮಾಡುವ ಪ್ರಶ್ನೆಯೇ ಇಲ್ಲ’ ಎಂದು ಹೇಳಿದರು.

‘2019 ರ ಲೋಕಸಭೆ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸುವುದಾಗಿ ತೊಡೆ ತಟ್ಟಿ, ಅದನ್ನು ಸಾಧಿಸಿದ್ದೆ. ಈ ಬಾರಿ ಅವರ ಪುತ್ರನ ಸರದಿ’ ಎಂದು ಸುದ್ದಿಗೋಷ್ಠಿಯಲ್ಲಿ ಎರಡೆರಡು ಬಾರಿ ತೊಡೆ ತಟ್ಟಿದರು.

‘ನನಗೆ ಪಕ್ಷದ ಮೇಲೆ ಯಾವುದೇ ಮುನಿಸಿಲ್ಲ. ಕಾಂಗ್ರೆಸ್‌ಗೆ ಮತ್ತೆ ಹೋಗ್ತೇನೆ ಎನ್ನುವ ವಿಚಾರ ಮಾಧ್ಯಮದಲ್ಲಿ ಬಂತು. ಮಗ ಮುನಿಸಿಕೊಂಡ್ರೆ ತಾಯಿ ಕರೀತಾಳೆ. ನಾನು ಕಾಂಗ್ರೆಸ್‌ಗೆ ಹೋಗುತ್ತೇನೆ ಎನ್ನುವುದು ಸುಳ್ಳು. ಬಿಜೆಪಿಯಲ್ಲೇ ಇರುತ್ತೇನೆ, ಬಿಜೆಪಿಯಲ್ಲೇ ಸಾಯುತ್ತೇನೆ. ಗುರುಮಠಕಲ್ ಕ್ಷೇತ್ರದಿಂದ ಚುನಾವಣೆಗೆ ನಿಂತು ಗೆಲ್ಲುತ್ತೇನೆ’ ಎಂದರು.

‘ಬಿಜೆಪಿ ನೀತಿ ಖಂಡಿಸಿ ಸ್ಪರ್ಧೆ’

ಮಡಿಕೇರಿ: ‘ಬಿಜೆಪಿಯ ಹಿಂದೂ ವಿರೋಧಿ ನೀತಿಗಳನ್ನು ಖಂಡಿಸಿ ಅಖಿಲ ಭಾರತ ಹಿಂದೂ ಮಹಾಸಭಾ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲಿದೆ’ ಎಂದು ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ಪವಿತ್ರನ್ ತಿಳಿಸಿದರು. ‘ಮಹಾಸಭಾದ ಹಲವು ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹಿಂದೂಗಳ ವಿರುದ್ಧದ ಪ್ರಕರಣಗಳನ್ನು ವಾಪಸ್ ಪಡೆದಿಲ್ಲ ಎಂದು ಟೀಕಿಸಿದರು.

ಭಾರತೀಯ ಸಂಪಾದಕರ ಕೂಟ, ಪ್ರೆಸ್ ಕ್ಲಬ್ ಆಫ್ ಇಂಡಿಯಾ, ಕಮಿಟಿ ಟು ಪ್ರೊಟೆಕ್ಟ್ ಜರ್ನಲಿಸ್ಟ್ಸ್ ಕಳವಳ

ಪರಿಶೀಲನೆ: ಮಾಧ್ಯಮ ಸಂಘಟನೆಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಹಾಗೂ ಮುಂಬೈನಲ್ಲಿರುವ ಬಿಬಿಸಿ ಸಂಸ್ಥೆಯ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆ ಪರಿಶೀಲನೆ ನಡೆಸಿದ್ದನ್ನು ಮಾಧ್ಯಮ ಸಂಘಟನೆಗಳು ತೀವ್ರವಾಗಿ ಖಂಡಿಸಿವೆ.

ಭಾರತೀಯ ಸಂಪಾದಕರ ಕೂಟ ತೀವ್ರ ಕಳವಳ ವ್ಯಕ್ತಪಡಿಸಿದೆ. 'ಆಡಳಿತಾರೂಢ ಸರ್ಕಾರಗಳನ್ನು ಟೀಕಿಸುವ ಮಾಧ್ಯಮಗಳನ್ನು ಸರ್ಕಾರಿ ತನಿಖಾ ಸಂಸ್ಥೆಗಳ ಮೂಲಕ ಬೆದರಿಸುವ ಹಾಗೂ ಹಿಂಸಿಸುವ ಪ್ರವೃತ್ತಿಯ ಮುಂದುವರಿದ ಭಾಗವಿದು' ಎಂದು ಕರೆದಿದೆ.

2021ರ ಸೆಪ್ಟೆಂಬರ್‌ನಲ್ಲಿ ನ್ಯೂಸ್‌ಕ್ಲಿಕ್, ನ್ಯೂಸ್‌ಲಾಂಡ್ರಿ ಮೇಲೆ ಮತ್ತು 2021ರ ಜೂನ್‌ನಲ್ಲಿ ದೈನಿಕ್ ಭಾಸ್ಕರ್ ಮತ್ತು ಭಾರತ್ ಸಮಾಚಾರ್ ವಿರುದ್ಧ ಇಂಥದ್ದೇ ಕ್ರಮ ತೆಗೆದುಕೊಳ್ಳಲಾಗಿತ್ತು. 2021ರ ಫೆಬ್ರುವರಿಯಲ್ಲಿ ನ್ಯೂಸ್‌ಕ್ಲಿಕ್ ಕಚೇರಿಯಲ್ಲಿ ಇ.ಡಿ ಮೂಲಕ ಶೋಧನೆ ನಡೆಸಲಾಗಿತ್ತು ಎಂದು ಸಂಪಾದಕರ ಕೂಟ ಹೇಳಿದೆ. ಇಂತಹ ಎಲ್ಲ ತನಿಖೆಗಳ ಸಂದರ್ಭದಲ್ಲಿ ಸಂವೇದನಾಶೀಲತೆಯನ್ನು ಕಾಯ್ದುಕೊಳ್ಳಬೇಕು ಹಾಗೂ ಪತ್ರಕರ್ತರು ಹಾಗೂ ಮಾಧ್ಯಮ ಸಂಸ್ಥೆಗಳ ಹಕ್ಕುಗಳನ್ನು ರಕ್ಷಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ಆಗ್ರಹಿಸಿದೆ.

ಕೇಂದ್ರ ಸರ್ಕಾರದ ನಡೆಯನ್ನು ಪ್ರೆಸ್‌ಕ್ಲಬ್ ಆಫ್ ಇಂಡಿಯಾ ಖಂಡಿಸಿದೆ. ಈ ಘಟನೆಯು, ಸರ್ಕಾರದ ಸಂಸ್ಥೆಗಳಿಂದ ಮಾಧ್ಯಮಗಳ ಮೇಲೆ ನಡೆಯುತ್ತಿರುವ ದಾಳಿಯ ಭಾಗ ಎಂದು ಕರೆದಿದೆ. ಮಾಧ್ಯಮಗಳನ್ನು ಬೆದರಿಸುವ ಇಂತಹ ಯತ್ನಗಳಿಂದ ಹಿಂದೆ ಸರಿಯುವಂತೆ ಒತ್ತಾಯಿಸಿದೆ.

ಈ ವಿದ್ಯಮಾನವನ್ನು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆದರಿಕೆ ಹಾಗೂ ಅಪಮಾನ ಎಂದು 'ಕಮಿಟಿ ಟು ಪ್ರೊಟೆಕ್ಟ್ ಜರ್ನಲಿಸ್ಟ್ಸ್' (ಸಿಪಿಜೆ) ಎಂಬ ಅಂತರರಾಷ್ಟ್ರೀಯ ಸಂಸ್ಥೆ ಕರೆದಿದೆ. ಪತ್ರಕರ್ತರ ಮೇಲಿನ ದೌರ್ಜನ್ಯವನ್ನು ತಡೆಯಬೇಕು ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಿದೆ.

ಬೆಂಗಳೂರು ಪ್ರೆಸ್ ಕ್ಲಬ್‌ನ ಅಧ್ಯಕ್ಷ ಆರ್. ಶ್ರೀಧರ್, ಪ್ರಧಾನ ಕಾರ್ಯದರ್ಶಿ ಬಿ.ಪಿ. ಮಲ್ಲಪ್ಪ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಅವರೂ ಖಂಡಿಸಿದ್ದಾರೆ.



ದೆಹಲಿಯ ಬಿಬಿಸಿ ಕಚೇರಿಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಮಂಗಳವಾರ ಪರಿಶೀಲನೆ ನಡೆಸಿದರು—ಎಎಫ್‌ಪಿ ಚಿತ್ರ

ಕೇಂದ್ರ ಸರ್ಕಾರ ಸಮರ್ಥನೆ

ಬಿಬಿಸಿ ಕಚೇರಿಯಲ್ಲಿ ಪರಿಶೀಲನೆ ವಿಚಾರವನ್ನು ಕೇಂದ್ರ ಸರ್ಕಾರ ಸಮರ್ಥಿಸಿಕೊಂಡಿದೆ. ತನಿಖಾ ಸಂಸ್ಥೆಗಳಿಗೆ ಅವುಗಳ ಕೆಲಸ ಮಾಡಲು ಬಿಡಬೇಕು ಎಂದು ಬಿಜೆಪಿ ಮುಖಂಡ ಗೌರವ್ ಭಾಟಿಯಾ ಹೇಳಿದ್ದಾರೆ. ಕಾನೂನಿಗಿಂತ ಯಾರೂ ಮೇಲಲ್ಲ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ. ದೆಹಲಿ ಹಾಗೂ ಮುಂಬೈ ಕಚೇರಿಗಳಲ್ಲಿ ನಡೆದ ಪರಿಶೀಲನೆಯ ಮಾಹಿತಿಯನ್ನು ಆದಾಯ ತೆರಿಗೆ ಇಲಾಖೆಯು ಹಂಚಿಕೊಳ್ಳಲಿದೆ ಎಂದಿದ್ದಾರೆ. ಅವ್ಯವಹಾರಗಳು ನಡೆದಿವೆ ಎಂದು ಗೊತ್ತಾದಾಗ, ತೆರಿಗೆ ಇಲಾಖೆಯು ಆಗಾಗ್ಗೆ ಪರಿಶೀಲನೆ ನಡೆಸುತ್ತದೆ ಎಂದು ಅವರು ಹೇಳಿದ್ದಾರೆ.

ಬೆದರಿಕೆ ನೀತಿಗೆ ಪ್ರತಿಪಕ್ಷಗಳ ಖಂಡನೆ

ಬಿಬಿಸಿ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯ ಪರಿಶೀಲನೆಯನ್ನು ಪ್ರತಿಪಕ್ಷಗಳು ಒಕ್ಕೊರಲಿನಿಂದ ಖಂಡಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಸಾಕ್ಷ್ಯಚಿತ್ರ ತಯಾರಿಸಿದ್ದಕ್ಕೆ ಕೇಂದ್ರ ಸರ್ಕಾರವು ಬಿಬಿಸಿಯನ್ನು ಗುರಿಯಾಗಿಸಿದೆ ಎಂದು ಆರೋಪಿಸಿದ್ದು, ಸುದ್ದಿಸಂಸ್ಥೆಗೆ ಬೆಂಬಲ ವ್ಯಕ್ತಪಡಿಸಿವೆ.

ಕೇಂದ್ರ ಸರ್ಕಾರದ ನಡೆಯು 'ವಿನಾಶ ಕಾಲೇ ವಿಪರೀತ ಬುದ್ಧಿ' ಎಂಬಂತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟೀಕಿಸಿದ್ದಾರೆ. 'ಟೀಕೆಗಳಿಗೆ ಮೋದಿ ಸರ್ಕಾರ ಹೆದರುತ್ತದೆ ಎಂಬುದನ್ನು ಬಿಬಿಸಿ ವಿರುದ್ಧ ತೆಗೆದುಕೊಂಡಿರುವ ಈ ಕ್ರಮವು ತೋರಿಸುತ್ತದೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದ್ದಾರೆ.

'ಇದು ಸೈದ್ಧಾಂತಿಕ ತುರ್ತು ಪರಿಸ್ಥಿತಿಯ ಆರಂಭ' ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ. 'ದಬ್ಬಾಳಿಕೆ ನಡೆಸುತ್ತಿರುವುದನ್ನು ನೋಡಿದರೆ, ಅಂತ್ಯ ಹತ್ತಿರ ಬಂದಿದೆ ಎಂದು ಯಾರಿಗಾದರೂ ಗೊತ್ತಾಗುತ್ತದೆ' ಎಂದು ಹೇಳಿದ್ದಾರೆ.

ಎಡಪಕ್ಷಗಳು ಕೇಂದ್ರವನ್ನು ತರಾಟೆಗೆ ತೆಗೆದುಕೊಂಡಿವೆ. 'ಜಿ–20 ದೇಶಗಳ ನಾಯಕರು ಬಂದು ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯದ ಬಗ್ಗೆ ಪ್ರಶ್ನಿಸಿದರೆ ಮೋದಿ ಸತ್ಯವನ್ನು ಹೇಳುತ್ತಾರೆಯೇ?' ಎಂದು ಸಿಪಿಎಂ ಸಂಸದ ಬಿನೋಯ್ ವಿಶ್ವಂ ಪ್ರಶ್ನಿಸಿದ್ದಾರೆ. 'ಪ್ರತಿಪಕ್ಷಗಳು, ಮಾಧ್ಯಮಗಳು, ಕಾರ್ಯಕರ್ತರು ಯಾರೇ ಆಗಿರಲಿ, ಸತ್ಯ ಹೇಳುವವರನ್ನು ಕೇಂದ್ರ ಸರ್ಕಾರ ಸಹಿಸುವುದಿಲ್ಲ' ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಟ್ವೀಟ್ ಮಾಡಿ ಆರೋಪಿಸಿದ್ದಾರೆ. ಅದಾನಿ ಸಮೂಹದ ಮೇಲೆ ತನಿಖೆ ಏಕಿಲ್ಲ ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಪ್ರಶ್ನಿಸಿದ್ದಾರೆ.

ಶೋಧನೆ, ಪರಿಶೀಲನೆ ಭಿನ್ನ ಕಾರ್ಯಾಚರಣೆ

ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ದಾಖಲೆಗಳಿಗಾಗಿ ನಡೆಸುವ ಶೋಧಕಾರ್ಯಗಳಲ್ಲಿ ಹಲವು ವಿಧಗಳಿವೆ. ಬಿಬಿಸಿ ಕಚೇರಿಯಲ್ಲಿ ನಡೆಸಿರುವುದು ಪರಿಶೀಲನೆ ಎಂದು ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. ಅಧಿಕಾರಿಗಳು ನಡೆಸುವ ಶೋಧನೆ ಮತ್ತು ಪರಿಶೀಲನೆ ಎರಡೂ ಕಾರ್ಯಗಳು ಸಂಪೂರ್ಣವಾಗಿ ಭಿನ್ನ. ಅವುಗಳ ನಡುವಣ ವ್ಯತ್ಯಾಸ ಇಂತಿದೆ

ಶೋಧನೆ

- ಆದಾಯ ತೆರಿಗೆ ಕಾಯ್ದೆಯ 132ನೇ ಸೆಕ್ಷನ್ ಅಡಿ ನಡೆಸುವ ಕಾರ್ಯಾಚರಣೆಯನ್ನು 'ಶೋಧನೆ' (ಸರ್ಚ್) ಎಂದು ಕರೆಯಲಾಗುತ್ತದೆ. ಇದು ಅತ್ಯಂತ ದೊಡ್ಡ ಮಟ್ಟದಲ್ಲಿ ನಡೆಯುವ ಕಾರ್ಯಾಚರಣೆ ಮತ್ತು ಇದರ ಸ್ವರೂಪ ಗಂಭೀರ
- ಈ ಕಾರ್ಯಾಚರಣೆ ವೇಳೆ ಅಪರಾಧ ದಂಡ ಸಂಹಿತೆಯ ಅಡಿಯಲ್ಲಿ ಶೋಧನೆ, ಜಪ್ತಿ ನಡೆಸಲು ಅವಕಾಶವಿದೆ
- ಇಂತಹ ಕಾರ್ಯಾಚರಣೆ ಸಂದರ್ಭದಲ್ಲಿ ಸಂಬಂಧಿತ ವ್ಯಕ್ತಿ ಅಥವಾ ಉದ್ದಿಮೆಗೆ ಸಂಬಂಧಿಸಿದ ಎಲ್ಲಾ ಸ್ವರೂಪದ ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಪರಿಶೀಲಿಸಲು ಮತ್ತು ವಶಕ್ಕೆ ಪಡೆಯಲು ಅವಕಾಶವಿದೆ. ಹೀಗೆ ವಶಕ್ಕೆ ಪಡೆದ ಸ್ವತ್ತುಗಳನ್ನು 60 ದಿನಗಳವರೆಗೂ ಅಧಿಕಾರಿಗಳು ತಮ್ಮ ವಶದಲ್ಲಿ ಇಟ್ಟುಕೊಳ್ಳಬಹುದು
- ಇಂತಹ ಕಾರ್ಯಾಚರಣೆಯನ್ನು ಸೂರ್ಯೋದಯದ ನಂತರವೇ ಆರಂಭಿಸಬೇಕು. ಆದರೆ, ಶೋಧನಾಕಾರ್ಯ ಪೂರ್ಣಗೊಳ್ಳುವವರೆಗೂ ಕಾರ್ಯಾಚರಣೆ ಮುಂದುವರಿಸಬಹುದು. ಸೂರ್ಯಾಸ್ತದ ನಂತರವೂ ಕಾರ್ಯಾಚರಣೆ ಮುಂದುವರಿಸಲು ಅವಕಾಶವಿದೆ

ಪರಿಶೀಲನೆ

- ಆದಾಯ ತೆರಿಗೆ ಕಾಯ್ದೆಯ 133ಎ ಸೆಕ್ಷನ್ ಅಡಿ ನಡೆಸುವ ಕಾರ್ಯಾಚರಣೆಯನ್ನು 'ಪರಿಶೀಲನೆ' (ಸರ್ವೆ) ಎಂದು ಕರೆಯಲಾಗುತ್ತದೆ. ಶೋಧನೆಗೆ ಹೋಲಿಸಿದರೆ ಇದು ಸಣ್ಣ ಪ್ರಮಾಣದ ಕಾರ್ಯಾಚರಣೆ
- ಈ ಸೆಕ್ಷನ್ ಅಡಿ ಕಾರ್ಯಾಚರಣೆ ನಡೆಸುವ ವೇಳೆ ಅಪರಾಧ ದಂಡ ಸಂಹಿತೆಯು ಅನ್ವಯವಾಗುವುದಿಲ್ಲ
- ಯಾವುದೇ ಉದ್ದಿಮೆಗೆ ಸಂಬಂಧಿಸಿದ ಕಚೇರಿ, ಕಾರ್ಖಾನೆಗಳಲ್ಲಿ ಮಾತ್ರ ಪರಿಶೀಲನೆ ನಡೆಸಬೇಕು. ದಾಖಲೆಗಳು ಮನೆಯಲ್ಲಿವೆ ಎಂದು ಸಂಬಂಧಿತ ವ್ಯಕ್ತಿಗಳು ಹೇಳಿದರೆ ಮಾತ್ರ, ಮನೆಯಲ್ಲಿ ಪರಿಶೀಲನೆ ನಡೆಸಬಹುದು. ಯಾವುದೇ ಕಾರಣ ನೀಡದೆಯೇ ಪುಸ್ತಕಗಳು, ದಾಖಲೆ ಪತ್ರಗಳನ್ನು ಇಲಾಖೆಯ ಅಧಿಕಾರಿಯು ತಮ್ಮ ಬಳಿ ಇರಿಸಿಕೊಳ್ಳುವಂತಿಲ್ಲ. ಕಾರಣವನ್ನು ಸೂಚಿಸಿ ಅಂತಹ ದಾಖಲೆಗಳನ್ನು ತಮ್ಮ ಬಳಿ ಇರಿಸಿಕೊಂಡರೂ, ಆ ಸುಪರ್ದಿಯ ಅವಧಿ 15 ದಿನ ಮೀರುವಂತಿಲ್ಲ
- ಇಂತಹ ಕಾರ್ಯಾಚರಣೆಯನ್ನು ಸೂರ್ಯೋದಯದ ನಂತರ ಆರಂಭಿಸಬೇಕು. ಉದ್ದಿಮೆಯ ವ್ಯಾವಹಾರಿಕ ಅವಧಿಯಲ್ಲಿ ಮಾತ್ರ ಪರಿಶೀಲನೆ ನಡೆಸಬೇಕು. ಮನೆಯಲ್ಲಿ ನಡೆಸುವ ಪರಿಶೀಲನೆಯು ಸೂರ್ಯೋದಯ ಮತ್ತು ಸೂರ್ಯಾಸ್ತದ ಮಧ್ಯೆ ಮಾತ್ರ ನಡೆಯಬೇಕು.

ಬಿಬಿಸಿಗೆ ಐ.ಟಿ ಪರಿಶೀಲನೆ ಬಿಸಿ

ಒಂದನೇ ಪುಟದಿಂದ...

ದೆಹಲಿ ಮತ್ತು ಮುಂಬೈ ಕಚೇರಿಗಳಲ್ಲಿ ಬೆಳಿಗ್ಗೆ 11 ಗಂಟೆಗೆ ಏಕಕಾಲದಲ್ಲಿ ದಿಢೀರ್ ಕಾರ್ಯಾಚರಣೆ ಆರಂಭಗೊಂಡಿತು. ತಡಸಂಜೆಯವರೆಗೂ 'ಪರಿಶೀಲನೆ' ನಡೆಯಿತು. ತಮ್ಮ ಮೊಬೈಲ್ ಫೋನ್‌ಗಳನ್ನು ನಿರ್ದಿಷ್ಟ ಜಾಗದಲ್ಲಿ ಇರಿಸುವಂತೆ ಬಿಬಿಸಿ ಸಿಬ್ಬಂದಿಗೆ ಹೇಳಲಾಯಿತು. ಕಚೇರಿಯಲ್ಲಿದ್ದ ಮೊಬೈಲ್ ಫೋನ್‌ಗಳಲ್ಲಿ ಇದ್ದ ದತ್ತಾಂಶಗಳನ್ನು ಬೇರೆ ಮೊಬೈಲ್ ಫೋನ್‌ಗಳಿಗೆ ನಕಲು ಮಾಡಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.

ಐ.ಟಿ ಕಾರ್ಯಾಚರಣೆಯ ಸುದ್ದಿ ಹರಡುತ್ತಿದ್ದಂತೆಯೇ ಜನರು ಮತ್ತು ಮಾಧ್ಯಮ ಸಿಬ್ಬಂದಿ ದೆಹಲಿ ಮತ್ತು ಮುಂಬೈ ಕಚೇರಿಗಳ ಮುಂದೆ ಜಮಾಯಿಸಿದರು. ಉದ್ಯಮ ಸಂಸ್ಥೆಯ ಕಚೇರಿಯಲ್ಲಿ ಮಾತ್ರ 'ಪರಿಶೀಲನೆ' ನಡೆಸಲಾಗುತ್ತದೆ. ಸಂಸ್ಥೆಯ ಪ್ರವರ್ತಕರು ಅಥವಾ ನಿರ್ದೇಶಕರ ಮನೆಗಳಲ್ಲಿ ಪರಿಶೀಲನೆಗೆ ಅವಕಾಶ ಇಲ್ಲ.

'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರವನ್ನು ಭಾರತದಲ್ಲಿ ನಿಷೇಧಿಸಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಕಳೆದ ವಾರ ವಜಾ ಮಾಡಿತ್ತು. ಈ ಅರ್ಜಿಯು ಸಂಪೂರ್ಣವಾಗಿ ತಪ್ಪು ಗ್ರಹಿಕೆಯಿಂದ ಕೂಡಿದೆ ಮತ್ತು ಹುರುಳಿಲ್ಲದ್ದು ಎಂದು ಹೇಳಿತ್ತು.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ
ಹೌದು 90%
ಅಲ್ಲ 10%

ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಭವಾನಿ ರೇವಣ್ಣ ಸ್ಪರ್ಧಿಸಲು ಜೆಡಿಎಸ್ ಪಕ್ಷದ ವರಿಷ್ಠರು ಒಪ್ಪಿಗೆ ನೀಡುವ ಸಾಧ್ಯತೆ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಅದಾನಿ ಸಮೂಹದ ವಿರುದ್ಧದ ಪ್ರಕರಣ: ಕೇಂದ್ರದ ಮೇಲೆ ಕಾಂಗ್ರೆಸ್ ವಾಗ್ದಾಳಿ

'ಏನನ್ನೂ ಮುಚ್ಚಿಡುತ್ತಿಲ್ಲವಾದರೆ ಜೆಪಿಸಿ ತನಿಖೆಗೆ ಏಕೆ ಹಿಂದೇಟು?'

ನವದೆಹಲಿ (ಪಿಟಿಐ): 'ಅದಾನಿ ಸಮೂಹದ ವಿರುದ್ಧದ ಪ್ರಕರಣದ ವಿಚಾರವಾಗಿ ಏನನ್ನೂ ಮುಚ್ಚಿಡುತ್ತಿಲ್ಲ ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಹೀಗಿದ್ದ ಮೇಲೆ ಪ್ರಕರಣವನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಪ್ಪಿಸಲು ಏಕೆ ಹಿಂದೇಟು ಹಾಕುತ್ತಿದೆ' ಎಂದು ಕಾಂಗ್ರೆಸ್ ಮಂಗಳವಾರ ಪ್ರಶ್ನಿಸಿದೆ.

'ಅದಾನಿ ಸಮೂಹದ ವಿರುದ್ಧದ ಪ್ರಕರಣದ ವಿಚಾರದಲ್ಲಿ ಬಿಜೆಪಿ ಏನನ್ನೂ ಮುಚ್ಚಿಡುತ್ತಿಲ್ಲ. ಈ ವಿಚಾರದಲ್ಲಿ ನಮಗೆ ಯಾವ ಭಯವೂ ಇಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಸುದ್ದಿ ಸಂಸ್ಥೆಯೊಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

ಪಕ್ಷದ ಕೇಂದ್ರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, 'ಅದಾನಿ ಸಮೂಹದ ವಿರುದ್ಧದ ಆರೋಪಗಳ ಕುರಿತು ಪಾರದರ್ಶಕ ತನಿಖೆ ನಡೆಸುವಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹಾಗೂ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಮುಖ್ಯಸ್ಥರಿಗೆ ಒತ್ತಾಯಿಸಿದ್ದೇನೆ. ಈ ಸಂಬಂಧ ಇಬ್ಬರಿಗೂ ಪತ್ರ ಬರೆದಿದ್ದೇನೆ' ಎಂದಿದ್ದಾರೆ.

ಜೈರಾಮ್ ರಮೇಶ್

ಶಾ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಜೈರಾಮ್, 'ಪ್ರಕರಣವನ್ನು ಜೆಪಿಸಿ ತನಿಖೆಗೆ ಒಪ್ಪಿಸುವಂತೆ ಸಂಸತ್ತಿನ ಉಭಯ ಸದನಗಳಲ್ಲಿ ಒತ್ತಾಯಿಸುವುದಕ್ಕೂ ನಮಗೆ ಅವಕಾಶ ನೀಡುತ್ತಿಲ್ಲ. ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹಾಗೂ ಪಕ್ಷದ ಇತರ ನಾಯಕರು ಜೆಪಿಸಿ ತನಿಖೆ ಕುರಿತ ಬೇಡಿಕೆ ಇಟ್ಟರೆ ಅವರ ಮಾತುಗಳನ್ನು ಕಡತದಿಂದಲೇ ತೆಗೆದುಹಾಕಲಾಗುತ್ತದೆ' ಎಂದು ದೂರಿದ್ದಾರೆ.

'ಅದಾನಿ ಹಾಗೂ ಅವರ ಸಮೂಹವು ಸರ್ಕಾರದ ಜೊತೆ ಮಾಡಿಕೊಂಡಿರುವ ಒಡಂಬಡಿಕೆಗಳ ವಿಚಾರವಾಗಿ ತನಿಖೆ ನಡೆಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ಖಾಸಗಿ ಸಂಸ್ಥೆಗಳ ಹೂಡಿಕೆಯ ಪರವಾಗಿ ಇರುವುದಾಗಿ ಸ್ಪಷ್ಟಪಡಿಸಿದ ಅವರು, 'ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಖಾಸಗೀಕರಣ ಹಾಗೂ ಅವುಗಳನ್ನು ಮಾರಾಟ ಮಾಡುವ ಕೇಂದ್ರದ ನಿಲುವನ್ನು ನಾವು ಬಲವಾಗಿ ಖಂಡಿಸುತ್ತೇವೆ. ಅದಾನಿ ಪ್ರಕರಣವನ್ನು ಜೆಪಿಸಿ ತನಿಖೆಗೆ ಒಪ್ಪಿಸಬೇಕು ಎಂಬುದು ಎಲ್ಲಾ ವಿರೋಧ ಪಕ್ಷಗಳ ಒಕ್ಕೊರಲ ಒತ್ತಾಯವಾಗಿದೆ' ಎಂದು ತಿಳಿಸಿದ್ದಾರೆ.

'ನೆರೆಯ ದೇಶಗಳೊಂದಿಗಿನ ಆರ್ಥಿಕ ಬಾಂಧವ್ಯ ಬಲಪಡಿಸುವ ಉದ್ದೇಶದಿಂದ ಯುಪಿಎ ಸರ್ಕಾರವು 2010ರಲ್ಲಿ ಬಾಂಗ್ಲಾದೇಶದ ಜೊತೆ ದ್ವಿಪಕ್ಷೀಯ ಒಡಂಬಡಿಕೆಗೆ ಸಹಿ ಹಾಕಿತ್ತು. ರಾಷ್ಟ್ರೀಯ ಉಷ್ಣ ವಿದ್ಯುತ್ ನಿಗಮವು (ಎನ್‌ಟಿಪಿಸಿ) ಬಾಂಗ್ಲಾದ ಬಗೇರ್‌ಹಟ್‌ನಲ್ಲಿ 1,320 ಮೆ.ವಾ ಸಾಮರ್ಥ್ಯದ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸಬೇಕೆಂಬುದು ಒಡಂಬಡಿಕೆಯ ಉದ್ದೇಶವಾಗಿತ್ತು. ಆದರೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಒಪ್ಪಂದ ಮಾರ್ಪಾಡು ಮಾಡಲಾಯಿತು. ನೀವು 2015ರಲ್ಲಿ ಢಾಕಾ ಪ್ರವಾಸ ಕೈಗೊಂಡಿದ್ದಾಗಲೇ ಅದಾನಿ ಪವರ್ ಹಾಗೂ ರಿಲಯನ್ಸ್ ಪವರ್ ಸಂಸ್ಥೆಗಳು ಬಾಂಗ್ಲಾದಲ್ಲಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪಿಸಲಿವೆ ಎಂದು ಪ್ರಕಟಿಸಲಾಗಿತ್ತು' ಎಂದು ರಮೇಶ್ ಅವರು ಮೋದಿಗೆ ಬರೆದ ಪತ್ರದಲ್ಲಿ ದೂರಿದ್ದಾರೆ.

ಅದಾನಿ ಸಮೂಹ ವಿರುದ್ಧ ತನಿಖೆ: ಕಾಂಗ್ರೆಸ್ ನಾಯಕಿ ಜಯಾ 'ಸುಪ್ರೀಂ'ಗೆ ಅರ್ಜಿ

ನವದೆಹಲಿ: 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆಯ ವರದಿಯಲ್ಲಿ ಉಲ್ಲೇಖಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಅದಾನಿ ಸಮೂಹ ಸಂಸ್ಥೆಗಳು ಹಾಗೂ ಉದ್ಯಮಿ ಗೌತಮ್ ಅದಾನಿ ಸಹವರ್ತಿಗಳ ವಿರುದ್ಧ ತನಿಖೆ ನಡೆಸಲು ನಿರ್ದೇಶನ ನೀಡುವಂತೆ ಕೋರಿ ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಅವರು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಜಯಾ ಠಾಕೂರ್ ಅವರು ಕಾಂಗ್ರೆಸ್ ಪಕ್ಷದ ಮಧ್ಯಪ್ರದೇಶ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ.

ಅಡಿಕೆ ಹಾನಿಕರವಲ್ಲ; ಎಂ.ಎಸ್. ರಾಮಯ್ಯ ಇನ್‌ಸ್ಟಿಟ್ಯೂಟ್ ವರದಿ

ಒಂದನೇ ಪುಟದಿಂದ...

ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಹಿಂದಿನ ಕೇಂದ್ರ ಸರ್ಕಾರ, ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂದು ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಿದ್ದರಿಂದ ಅಡಿಕೆ ಬೆಳೆ ಮೇಲೆ ನಿಷೇಧದ ತೂಗುಗತ್ತಿ ಇತ್ತು. ಅದಕ್ಕಾಗಿ ಅಡಿಕೆ ಕಾರ್ಯಪಡೆಯಿಂದಲೇ ವೈಜ್ಞಾನಿಕ ಸಂಶೋಧನೆ ನಡೆಸಲು ರಾಮಯ್ಯ ಇನ್‌ಸ್ಟಿಟ್ಯೂಟ್‌ಗೆ ವಹಿಸಲಾಗಿತ್ತು. ಈಗ ವರದಿ ಬಂದಿದೆ ಎಂದರು.

ಅಡಿಕೆ ಕ್ಷೇತ್ರ ವ್ಯಾಪ್ತಿ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಈಗಾಗಲೇ ರಾಜ್ಯದಲ್ಲಿ 6.11 ಲಕ್ಷ ಹೆಕ್ಟೇರ್ ಬೆಳೆ ಕ್ಷೇತ್ರವಿದೆ. ಅಡಿಕೆ ಭವಿಷ್ಯ ಗುಟ್ಕಾ ಕಂಪನಿಗಳ ಮೇಲೆ ನಿಂತಿದೆ. ದರ ಕುಸಿದರೆ ರೈತರು ತೀವ್ರ ಸಂಕಷ್ಟ ಅನುಭವಿಸುತ್ತಾರೆ. ಹಾಗಾಗಿ, ಏಕ ಬೆಳೆ ಪದ್ಧತಿ ಸರಿಯಲ್ಲ ಎಂದು ಮನವರಿಕೆ ಮಾಡಿಕೊಡಬೇಕಿದೆ. ಉದ್ಯೋಗ ಖಾತ್ರಿಯಲ್ಲಿ ಅಡಿಕೆ ಬೆಳೆಗೆ ಸಹಾಯಧನ, ಪ್ರೋತ್ಸಾಹ ಬೇಡ ಎಂದು ತೋಟಗಾರಿಕಾ ಸಚಿವರನ್ನು ಕೋರಲಾಗಿದೆ ಎಂದರು.

ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ, ಹಾಸನ, ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳ 42,504 ಹೆಕ್ಟೇರ್‌ನಲ್ಲಿ ಎಲೆಚುಕ್ಕಿ ರೋಗ ಕಾಣಿಸಿಕೊಂಡಿದೆ. ರೋಗ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಲಾಗಿದೆ. 17,267 ರೈತರಿಗೆ ಔಷಧ ಖರೀದಿಗೆ ಸಹಾಯ ಮಾಡಲಾಗಿದೆ. ಹೆಕ್ಟೇರ್‌ಗೆ ₹ 15 ಸಾವಿರದಂತೆ ಸಹಾಯಧನ ನೀಡಲಾಗುತ್ತಿದೆ ಎಂದರು.

ತ್ರಿಪುರಾ: ಪ್ರಚಾರ ಅಂತ್ಯ

ಅಂಬಾಸಾ, ತ್ರಿಪುರಾ (ಪಿಟಿಐ): 60 ಸ್ಥಾನಗಳಿಗೆ ನಡೆಯಲಿರುವ ತ್ರಿಪುರಾ ವಿಧಾನಸಭೆ ಚುನಾವಣೆಯ ಪ್ರಚಾರಕ್ಕೆ ಮಂಗಳವಾರ ಸಂಜೆ ತೆರೆಬಿದ್ದಿತ್ತು. ಬಿಗಿ ಭದ್ರತೆಯೊಂದಿಗೆ 3,328 ಮತಗಟ್ಟೆಗಳಲ್ಲಿ ಗುರುವಾರ ಮತದಾನ ನಡೆಯಲಿದೆ. ಮಾರ್ಚ್ 2ರಂದು ಫಲಿತಾಂಶ ಹೊರಬೀಳಲಿದೆ.

ಈ ಮಧ್ಯೆ, ತ್ರಿಪುರಾ ವಿಧಾನಸಭೆ ಚುನಾವಣೆಯಲ್ಲಿ ಏರ್ಪಟ್ಟಿರುವ ತ್ರಿವಳಿ ಸ್ಪರ್ಧೆಯಲ್ಲಿ ಯಾವ ಪಕ್ಷ ಅಥವಾ ಮೈತ್ರಿಕೂಟವೂ ಬಹುಮತ ಪಡೆಯದಿದ್ದರೆ ಸರ್ಕಾರ ರಚಿಸಲು ಟಿಪ್ರಮೋಥಾ ಹಕ್ಕು ಮಂಡಿಸಲಿದೆ ಎಂದು ಪಕ್ಷದ ಅಧ್ಯಕ್ಷ ಬಿಜೋಯ್ ಕುಮಾರ್ ಹ್ರಂಗ್ಖಾವ್ಲ್ ಹೇಳಿದರು.

ಫ್ರಾನ್ಸ್ ಅಧ್ಯಕ್ಷ ಮ್ಯಾಕ್ರಾನ್ ಹೇಳಿಕೆ

> ಸಂಕಷ್ಟ ಸಮಯದಲ್ಲಿಯೇ ಭಾರತ ಜಿ–20 ಅಧ್ಯಕ್ಷತೆ ವಹಿಸಿಕೊಂಡಿದೆ. ಈ ಹೊಣೆಗಾರಿಕೆ ನಿಭಾಯಿಸುವಲ್ಲಿ ಭಾರತದ ಯಶಸ್ಸಿಗಾಗಿ ನಾವೂ ಶ್ರಮಿಸುತ್ತಿದ್ದೇವೆ.

'ಬಿಕ್ಕಟ್ಟು ಬಗೆಹರಿಸಲು ವಿಶ್ವವನ್ನೇ ಭಾರತ ಸಜ್ಜುಗೊಳಿಸಬಲ್ಲದು'

ನವದೆಹಲಿ (ಪಿಟಿಐ): ರಷ್ಯಾ–ಉಕ್ರೇನ್ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ಪ್ರಧಾನಿ ನರೇಂದ್ರ ಮೋದಿ ನಾಯಕತ್ವದಲ್ಲಿ ಭಾರತವು ವಿಶ್ವವನ್ನು ಸಜ್ಜುಗೊಳಿಸಬಲ್ಲದು ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಮಂಗಳವಾರ ಹೇಳಿದರು.

ಏರ್‌ಬಸ್ ಕಂಪನಿಯ 250 ವಿಮಾನಗಳನ್ನು ಏರ್ ಇಂಡಿಯಾ ಖರೀದಿಸುವುದಕ್ಕೆ ಸಂಬಂಧಿಸಿ ನಡೆದ ಉಭಯ ದೇಶಗಳ ನಾಯಕರ ವರ್ಚುವಲ್ ಸಭೆಯಲ್ಲಿ ಅವರು ಈ ಮಾತುಗಳನ್ನು ಹೇಳಿದರು.

'ಉಕ್ರೇನ್ ಮೇಲೆ ರಷ್ಯಾ ಆಕ್ರಮಣ ನಡೆಸಿದೆ. ಈ ಭಯಂಕರ ಸಮಸ್ಯೆಯನ್ನು ಬಗೆಹರಿಸಲು ಇಡೀ ವಿಶ್ವವನ್ನು ಸನ್ನದ್ಧಗೊಳಿಸುವ ಸಾಮರ್ಥ್ಯ ನಿಮ್ಮ ನಾಯಕತ್ವದ ಭಾರತಕ್ಕೆ ಇದೆ' ಎಂದು ಪ್ರಧಾನಿ ಮೋದಿ ಅವರನ್ನು ಉದ್ದೇಶಿಸಿ ಮ್ಯಾಕ್ರಾನ್ ಹೇಳಿದರು.

ಗ್ರಾ.ಪಂ ಸಿಬ್ಬಂದಿಗೆ 'ಡಿ' ದರ್ಜೆ ಸ್ಥಾನವೂ ಇಲ್ಲ

ಒಂದನೇ ಪುಟದಿಂದ...

ಗ್ರಾಮ ಪಂಚಾಯಿತಿ ಸ್ಥಳೀಯ ಪ್ರಾಧಿಕಾರವಾಗಿದೆ. ಮಂಜೂರಾದ ಹುದ್ದೆಗಳಿಗೆ ನಿಯಮದಂತೆ ಜಿಲ್ಲಾ ಪಂಚಾಯಿತಿ ಮುಖ್ಯ ನಿರ್ವಹಣಾಧಿಕಾರಿ ಅನುಮತಿ ಪಡೆದು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಸ್ಥಳೀಯ ಪಂಚಾಯಿತಿಗಳ ಸಂಪನ್ಮೂಲಗಳಿಂದಲೇ ಅವರ ವೇತನ ನೀಡಲಾಗುತ್ತಿದೆ. ರಾಜ್ಯದ ಹಲವು ಪಂಚಾಯಿತಿಗಳಲ್ಲಿ ಸಂಪನ್ಮೂಲ ಕೊರತೆಯಿಂದ ಸಿಬ್ಬಂದಿ ವೇತನ ಪಾವತಿ ವಿಳಂಬವಾಗುತ್ತಿದೆ. ಹಾಗಾಗಿ, ರಾಜ್ಯ ಹಣಕಾಸು ಆಯೋಗದ ಅನುದಾನದಲ್ಲಿ ₹ 811 ಕೋಟಿ ನೀಡಲಾಗಿದೆ. ಅತ್ಯಂತ ಕನಿಷ್ಠ ವೇತನಕ್ಕೆ ಕೆಲಸ ಮಾಡುತ್ತಿರುವುದನ್ನು ಗಮನಿಸಿದ ಸರ್ಕಾರ ಜುಲೈ 2022ರಿಂದ ಅನ್ವಯವಾಗುವಂತೆ ಹುದ್ದೆಗಳಿಗೆ ಅನುಗುಣವಾಗಿ ₹ 13,811–16,957ರ ಮೂಲವೇತನ ವೇತನ, ತುಟ್ಟಿಭತ್ಯೆ ನಿಗದಿ ಮಾಡಿದೆ. ಸಾಂದರ್ಭಿಕ ರಜೆ, ಗಳಿಕೆ ರಜೆ, ಪ್ರಸೂತಿ, ಪಿತೃತ್ವ ರಜೆಯ ವ್ಯವಸ್ಥೆಯನ್ನೂ ಕಲ್ಪಿಸಲಾಗಿದೆ ಎಂದರು.

ಪಂಚಾಯಿತಿ ಸಿಬ್ಬಂದಿ ಸೇವೆಯಲ್ಲಿ ಇರುವಾಗಲೇ ಮೃತಪಟ್ಟರೆ ಅನುಕಂಪದ ಆಧಾರದ ಮೇಲೆ ಅವರ ಅವಲಂಬಿತರನ್ನು ನೇಮಕ ಮಾಡಿಕೊಳ್ಳಲು ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಿಗೂ ನಿರ್ದೇಶನ ನೀಡಲಾಗಿದೆ ಎಂದರು.

ಉತ್ತರ ಪ್ರದೇಶ: ಅತಿಕ್ರಮಣ ಕಟ್ಟಡ ತೆರವು ಕಾರ್ಯಾಚರಣೆ ವೇಳೆ ಘಟನೆ

ತಾಯಿ, ಮಗಳು ಸಜೀವ ದಹನ

ಪ್ರಜಾವಾಣಿ ವಾರ್ತೆ

ಲಖನೌ: ಅತಿಕ್ರಮಣ ಕಟ್ಟಡ ತೆರವು ಕಾರ್ಯಾಚರಣೆ ವೇಳೆ ತಾಯಿ ಮತ್ತು ಮಗಳು ಸಜೀವ ದಹನಗೊಂಡಿರುವ ಘಟನೆ ಉತ್ತರ ಪ್ರದೇಶದ ಕಾನ್ಪುರದ ದೆಹಾತ್ ಜಿಲ್ಲೆಯಲ್ಲಿ ನಡೆದಿದೆ.

ಮೃತರನ್ನು ಪ್ರಮಿಳಾ ದೀಕ್ಷಿತ್ (45) ಮತ್ತು ಶಿವಿ (20) ಎಂದು ಗುರುತಿಸಲಾಗಿದೆ.

'ಪ್ರಕರಣ ಸಂಬಂಧ ಉಪ ವಿಭಾಗೀಯ ಮ್ಯಾಜಿಸ್ಟ್ರೇಟ್ (ಎಸ್‌ಡಿಎಂ) ಗ್ಯಾನೇಶ್ವರ್ ಪ್ರಸಾದ್ ಮತ್ತು ನಾಲ್ವರು ಕಂದಾಯ ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ. ಒಟ್ಟು 39 ಮಂದಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಮಹಾ ನಿರ್ದೇಶಕ (ಕಾನ್ಪುರ ವಲಯ) ಪ್ರಶಾಂತ್ ಕುಮಾರ್ ತಿಳಿಸಿದ್ದಾರೆ.

'ಈವರೆಗೆ ಕಂದಾಯ ಅಧಿಕಾರಿ ಅಶೋಕ್ ಸಿಂಗ್ ಮತ್ತು ಬುಲ್ಡೋಜರ್ ಚಾಲಕ ದೀಪಕ್ ಅವರನ್ನು ಬಂಧಿಸಲಾಗಿದೆ. ಗುಡಿಸಲು ತೆರವಿಗೆ ಬಳಸಿದ್ದ ಬುಲ್ಡೋಜರ್ ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಮೂರ್ತಿ ತಿಳಿಸಿದ್ದಾರೆ.

'ಪಂಚಾಯಿತಿ ಜಾಗದಲ್ಲಿದ್ದ ಅಕ್ರಮ ಗುಡಿಸಲು ತೆರವುಗೊಳಿಸಲು ಅಧಿಕಾರಿಗಳು ಸ್ಥಳಕ್ಕೆ ತೆರಳಿದ್ದರು. ತಾಯಿ ಮತ್ತು ಮಗಳು ಗುಡಿಸಲಿನ ಒಳಗೆ ಇದ್ದರು. ಈ ವೇಳೆ ಎಸ್‌ಡಿಎಂ ಮತ್ತು ಕಂದಾಯ ಅಧಿಕಾರಿಗಳ ಆದೇಶದ ಮೇರೆಗೆ ಗುಡಿಸಲಿಗೆ ಬೆಂಕಿ ಹಾಕಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಮಿಳಾ ಮತ್ತು ಶಿವಿ ಅವರು ಬೆಂಕಿ ಹೊತ್ತಿಕೊಂಡ ಗುಡಿಸಲಿನ ಒಳಗೆ ಕಿರುಚಾಡುತ್ತಿರುವ ಮತ್ತು ಅಧಿಕಾರಿಗಳು ನೋಡುತ್ತಾ ಹೊರಗೆ ನಿಂತಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಸಂತ್ರಸ್ತರ ಭೇಟಿಗೆ ವಿರೋಧ ಪಕ್ಷಗಳು ಸಜ್ಜು: ಘಟನೆ ಸಂಬಂಧಿಸಿದಂತೆ ವಿರೋಧ ಪಕ್ಷಗಳು ಆಡಳಿತಾರೂಢ ಬಿಜೆಪಿಯನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದು, ಅಕ್ರಮ ಕಟ್ಟಡಗಳ ತೆರವಿಗೆ ಬುಲ್ಡೋಜರ್ ಬಳಸುವ ಮೂಲಕ ಬಿಜೆಪಿ ಸರ್ಕಾರ ಜನರಲ್ಲಿ ಭೀತಿ ಹುಟ್ಟಿಸುತ್ತಿದೆ ಎಂದು ಆರೋಪಿಸಿವೆ.

ಈ ಮಧ್ಯೆ ವಿರೋಧ ಪಕ್ಷಗಳು ಸಂತ್ರಸ್ತ ಕುಟುಂಬವನ್ನು ಭೇಟಿಯಾಗಲು ಮುಂದಾಗಿವೆ. ಆದರೆ ಗ್ರಾಮಕ್ಕೆ ಪ್ರವೇಶಿಸಲು ಅಧಿಕಾರಿಗಳು ನಿರ್ಬಂಧ ವಿಧಿಸಿ, ಹಲವು ನಾಯಕರನ್ನು ಬಂಧಿಸಿದ್ದಾರೆ. ಗ್ರಾಮದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ತಾಯಿ ಮತ್ತು ಮಗಳು ಸಜೀವ ದಹನಗೊಂಡ ಸ್ಥಳದಲ್ಲಿ ಮಾದರಿಗಳನ್ನು ಕಲೆಹಾಕುತ್ತಿರುವ ವಿಧಿವಿಜ್ಞಾನ ತಂಡ —ಪಿಟಿಐ ಚಿತ್ರ

ಪ್ರತಿಪಕ್ಷಗಳ ತರಾಟೆ

ಘಟನೆ ಬಗ್ಗೆ ಪ್ರತಿಕ್ರಿಯಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಅಧಿಕಾರದ ದುರಹಂಕಾರವು ಜನರ ಬದುಕುವ ಹಕ್ಕನ್ನು ಕಸಿದುಕೊಂಡರೆ ಅದನ್ನು ಸರ್ವಾಧಿಕಾರ ಎಂದು ಕರೆಯಲಾಗುತ್ತದೆ. ಬುಲ್ಡೋಜರ್ ನೀತಿಯು ಸರ್ಕಾರದ ಕ್ರೂರ ಮುಖವನ್ನು ಹೊರಹಾಕುತ್ತಿದೆ. ಭಾರತ ಇದನ್ನು ಒಪ್ಪುವುದಿಲ್ಲ' ಎಂದು ಟ್ವೀಟ್ ಮೂಲಕ ವಾಗ್ದಾಳಿ ನಡೆಸಿದ್ದಾರೆ.

'ಈ ಹೃದಯ ವಿದ್ರಾವಕ ಘಟನೆಯನ್ನು ಖಂಡಿಸುತ್ತೇನೆ. ಇಂಥ ಅಮಾನವೀಯ ಕೃತ್ಯದ ವಿರುದ್ಧ ನಾವು ಧ್ವನಿ ಎತ್ತಲೇಬೇಕು. ಸಂತ್ರಸ್ತ ಕುಟುಂಬಕ್ಕೆ ನ್ಯಾಯ ಸಿಗಬೇಕು. ಆಪಾದಿತರಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಟ್ವೀಟ್ ಮಾಡಿದ್ದಾರೆ.

'ಘಟನೆಯು ಬಿಜೆಪಿಯ ನಿಜವಾದ ಮುಖವನ್ನು ಬಹಿರಂಗಪಡಿಸಿದೆ. ಬೇಟಿ ಬಚಾವೊ ಬರೀ ಘೋಷಣೆಗಷ್ಟೇ ಸೀಮಿತವಾಗಿದೆ' ಎಂದು ಸಮಾಜವಾದಿ ಪಕ್ಷದ ಹಿರಿಯ ನಾಯಕ ಶಿವಪಾಲ್ ಸಿಂಗ್ ಯಾದವ್ ಹರಿಹಾಯ್ದಿದ್ದಾರೆ.

ಸುದ್ದಿ 2 ನಿಮಿಷ

ಭಯೋತ್ಪಾದನೆ ಜನರ ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ: ಕೇರಳ ಹೈಕೋರ್ಟ್

ಕೊಚ್ಚಿ (ಪಿಟಿಐ): ಐಎಸ್ ಉಗ್ರ ಸಂಘಟನೆಗೆ ಸೇರುವ ಸಲುವಾಗಿ ಸಿರಿಯಾಗೆ ಪ್ರಯಾಣಿಸಲು ತಯಾರಿ ನಡೆಸಿದ್ದ ಮೂವರು ದೋಷಿಗಳಿಗೆ ಜಾಮೀನು ನೀಡಲು ಕೇರಳ ಹೈಕೋರ್ಟ್ ನಿರಾಕರಿಸಿದೆ. ಭಯೋತ್ಪಾದನೆಯು ಪಾಪಕೃತ್ಯವಾಗಿದ್ದು, ಜನ ಜೀವನ ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ತರುತ್ತದೆ ಮತ್ತು ದೇಶದ ಬೆಳವಣಿಗೆಗೆ ಕುಂದುಂಟು ಮಾಡುತ್ತದೆ ಎಂದು ಹೈಕೋರ್ಟ್ ಇದೇ ವೇಳೆ ಹೇಳಿದೆ.

ದೋಷಿಗಳಾದ ಮಿದ್ಲಾಜ್, ಅಬ್ದುಲ್ ರಝಾಕ್ ಮತ್ತು ಹಂಝ ಎಂಬುವವರು ಈಗಾಗಲೇ ಜೈಲು ಶಿಕ್ಷೆಗೆ ಒಳಗಾಗಿದ್ದು, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅಲೆಕ್ಸಾಂಡರ್ ಥಾಮಸ್ ಮತ್ತು ಸೋಫಿ ಥಾಮಸ್ ಅವರಿದ್ದ ಪೀಠವು ಶಿಕ್ಷೆ ವಜಾಗೊಳಿಸಿ, ಜಾಮೀನು ಮಂಜೂರು ಮಾಡಲು ನಿರಾಕರಿಸಿತು.

'ಅರ್ಜಿದಾರ ಎಸಗಿರುವ ಅಪರಾಧದ ತೀವ್ರತೆಯು ಮೇಲ್ನೋಟಕ್ಕೆ ಸಾಬೀತಾಗಿದೆ. ಅವರಿಗೆ ವಿಧಿಸಲಾಗಿದ್ದ ಶಿಕ್ಷೆ ಅವಧಿಯಲ್ಲಿ ಬಹುಪಾಲು ಅವಧಿ ಮುಗಿದಿದೆ. ಆದರೂ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಮಗೆ ಒಪ್ಪಿಗೆಯಿಲ್ಲ' ಎಂದು ಪೀಠವು ಫೆಬ್ರುವರಿ 10ರಂದು ಹೇಳಿದೆ. ದೋಷಿಗಳ ವಿರುದ್ಧ ದಾಖಲಾಗಿರುವ ಮೊಕದ್ದಮೆಯು 'ಗಂಭೀರ ಸ್ವರೂಪದ್ದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಯಾವ ಧರ್ಮವೂ ಭಯೋತ್ಪಾದನೆಯನ್ನು ಮತ್ತು ದ್ವೇಷವನ್ನು ಪ್ರಚುರಪಡಿಸುವುದಿಲ್ಲ. ಆದರೆ ಕೆಲ ಧರ್ಮಾಂಧರು ಮತ್ತು ಮೂಲಭೂತವಾದಿಗಳು ದ್ವೇಷವನ್ನು ಬಿತ್ತುವ ಸಲುವಾಗಿ ಧರ್ಮದ ಉದ್ದೇಶಗಳನ್ನು ನಾಶ ಮಾಡುತ್ತಿದ್ದಾರೆ ಎಂದು ಪೀಠ ಅಭಿಪ್ರಾಯಪಟ್ಟಿತು.

ಐಐಟಿ ಮದ್ರಾಸ್: ಮಹಾರಾಷ್ಟ್ರ ವಿದ್ಯಾರ್ಥಿ ಆತ್ಮಹತ್ಯೆ, ಕರ್ನಾಟಕದ ವಿದ್ಯಾರ್ಥಿ ಅಸ್ವಸ್ಥ

ಚೆನ್ನೈ (ಪಿಟಿಐ): ಇಲ್ಲಿನ ಐಐಟಿ– ಮದ್ರಾಸ್‌ನಲ್ಲಿ ಸ್ನಾತಕೋತ್ತರ ಎಂಜಿನಿಯರಿಂಗ್ ಪದವಿ (ಎಂ.ಎಸ್– ಎಲೆಕ್ಟ್ರಿಕಲ್) ವ್ಯಾಸಂಗ ಮಾಡುತ್ತಿದ್ದ ಮಹಾರಾಷ್ಟ್ರ ಮೂಲದ 22 ವರ್ಷದ ವಿದ್ಯಾರ್ಥಿಯೊಬ್ಬರು ಹಾಸ್ಟೆಲ್ ಕೊಠಡಿಯಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಇದೇ ಐಐಟಿಯಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ಮೂಲದ ವಿದ್ಯಾರ್ಥಿಯೊಬ್ಬರು ಕೆಲವು ಮಾತ್ರೆಗಳನ್ನು ಸೇವಿಸಿ ಜೀವಕ್ಕೆ ಅಪಾಯ ತಂದುಕೊಂಡಿರುವ ಘಟನೆಯೂ ನಡೆದಿದೆ. ಈ ವಿದ್ಯಾರ್ಥಿಯನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

'ಮಹಾರಾಷ್ಟ್ರ ಮೂಲದ ವಿದ್ಯಾರ್ಥಿ ಗೈರಾಗಿದ್ದನ್ನು ಗಮನಿಸಿದ ಸಹಪಾಠಿಯೊಬ್ಬರು ಈ ಕುರಿತು ವಾರ್ಡನ್‌ಗೆ ಮಾಹಿತಿ ನೀಡಿದ್ದಾರೆ. ಕೊಠಡಿಯ ಬಾಗಿಲು ತೆರೆದು ನೋಡಿದಾಗ, ವಿದ್ಯಾರ್ಥಿಯ ಶವ ನೇಣುಬಿಗಿದ ಸ್ಥಿತಿಯಲ್ಲಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಕೊಟ್ಟೂರುಪುರಂನ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಈ ಎರಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ಐಐಟಿ– ಮದ್ರಾಸ್‌ನಿಂದ ಸದ್ಯಕ್ಕೆ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಮುಂಬೈನ ಪೊವೈನಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ವಸತಿನಿಲಯದ ಸಂಕೀರ್ಣದಲ್ಲಿ ವಿದ್ಯಾರ್ಥಿಯೊಬ್ಬನ ಮೃತದೇಹ ಭಾನುವಾರ ಪತ್ತೆಯಾಗಿತ್ತು.

'ಷೇರು ಮಾರುಕಟ್ಟೆ ಅಸ್ಥಿರತೆ ನಿಭಾಯಿಸಲಿದೆ ಸದೃಢ ವ್ಯವಸ್ಥೆ'

ನವದೆಹಲಿ (ಪಿಟಿಐ): ಅದಾನಿ ಸಮೂಹದ ವಿರುದ್ಧ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಪ್ರಕಟಿಸಿದ ವರದಿಯಲ್ಲಿ ಮಾಡಿರುವ ವಂಚನೆ ಕುರಿತ ಆರೋಪಗಳ ಬಗ್ಗೆ ವಿಚಾರಣೆ ನಡೆಯುತ್ತಿದೆ. ಅಲ್ಲದೇ, ಷೇರು ಮಾರುಕಟ್ಟೆ ವಹಿವಾಟಿನಲ್ಲಿ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ ಎನ್ನುವುದನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲಾಗಿದೆ ಎಂದು ಷೇರು ಮಾರುಕಟ್ಟೆ ನಿಯಂತ್ರಕ 'ಸೆಬಿ' ಸುಪ್ರೀಂ ಕೋರ್ಟ್‌ಗೆ ಹೇಳಿದೆ.

ತಡೆರಹಿತ ವಹಿವಾಟು ಖಾತ್ರಿಪಡಿಸಿಕೊಳ್ಳಲು ಮತ್ತು ಸ್ಟಾಕ್ ಎಕ್ಸ್‌ಚೇಂಜ್‌ಗಳ ಅಸ್ಥಿರತೆ ಎದುರಿಸಲು ಸದೃಢವಾದ ಚೌಕಟ್ಟುಗಳು ಹಾಗೂ ಮಾರುಕಟ್ಟೆ ವ್ಯವಸ್ಥೆಗಳು ಇವೆ. ಷೇರು ಮಾರುಕಟ್ಟೆಯಲ್ಲಿ ಸೀಮಿತ ಅವಧಿಯ ಮಾರಾಟ ಬೆಳವಣಿಗೆಯನ್ನು ಜಗತ್ತಿನಾದ್ಯಂತ 'ಕಾನೂನುಬದ್ಧ ಹೂಡಿಕೆ ಚಟುವಟಿಕೆ' ಎಂದೇ ಗುರುತಿಸಲಾಗುತ್ತದೆ ಎಂದು ಸೆಬಿಯು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಪೀಠಕ್ಕೆ ಸೆಬಿಯು 23 ಪುಟಗಳ ಲಿಖಿತ ಹೇಳಿಕೆಯನ್ನು ಸೋಮವಾರ ಸಲ್ಲಿಸಿದೆ.

ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯ ಕುಸಿದು, ಹೂಡಿಕೆದಾರರಿಗೆ ಆದ ನಷ್ಟದ ಬಗ್ಗೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯ ಎರಡು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ.

'ಹಿಂಡನ್‌ಬರ್ಗ್ ವರದಿಯಲ್ಲಿರುವ ಆರೋಪಗಳು ಮತ್ತು ವರದಿಯ ಪ್ರಕಟಣೆಗೆ ಮೊದಲು ಮತ್ತು ನಂತರದಲ್ಲಿ ಷೇರು ಮಾರುಕಟ್ಟೆಯ ವ್ಯವಹಾರಗಳಲ್ಲಿ ಸೆಬಿಯ ನಿಯಮಗಳನ್ನು ಉಲ್ಲಂಘಿಸಲಾಗಿದೆಯೇ, ಹಾಗೆಯೇ ಯಾವುದಾದರೂ ಅಕ್ರಮಗಳು ನಡೆದಿದೆಯೇ ಎನ್ನುವುದರ ಪತ್ತೆಗೂ ವಿಚಾರಣೆ ನಡೆಯುತ್ತಿದೆ' ಎಂದು ಸೆಬಿಯು, ಪೀಠಕ್ಕೆ ತಿಳಿಸಿದೆ.

ಅದಾನಿ ಸಮೂಹದ ಷೇರುಗಳ ಇತ್ತೀಚಿನ ಕುಸಿತದಿಂದಾಗಿ ಷೇರು ಮಾರುಕಟ್ಟೆಯ ಮೇಲೆ ಗಮನಾರ್ಹ ಪರಿಣಾಮವನ್ನು ಉಂಟು ಮಾಡಿಲ್ಲ. ಭಾರತೀಯ ಷೇರು ಮಾರುಕಟ್ಟೆಗಳು ಈ ಹಿಂದೆಯೂ ಹೆಚ್ಚಿನ ಪ್ರಕ್ಷುಬ್ಧ ಸನ್ನಿವೇಶ ಎದುರಿಸಿವೆ. ವಿಶೇಷವಾಗಿ ಕೋವಿಡ್ ಸಾಂಕ್ರಾಮಿಕದಲ್ಲಿ 2020ರ ಮಾರ್ಚ್ 2ರಿಂದ ಮಾರ್ಚ್ 19ರವರೆಗಿನ (13 ವಹಿವಾಟು ದಿನಗಳು) ಅವಧಿಯಲ್ಲಿ ನಿಫ್ಟಿ ಶೇ 26 ರಷ್ಟು ಕುಸಿದಿತ್ತು ಎಂದು ಸೆಬಿಯು, ಪೀಠಕ್ಕೆ ತಿಳಿಸಿದೆ.

ಅರ್ಜಿ ಹಿಂಪಡೆಯಲು ಅವಕಾಶ ಇಲ್ಲ: ಯುಪಿಎಸ್‌ಸಿ

ನವದೆಹಲಿ (ಪಿಟಿಐ): ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಿದ ನಂತರ, ಅವುಗಳನ್ನು ಹಿಂಪಡೆಯಲು ಅಭ್ಯರ್ಥಿಗಳಿಗೆ ಅವಕಾಶ ನೀಡಲಾಗುವುದಿಲ್ಲ ಎಂದು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಹೇಳಿದೆ.

ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿ ಇತ್ತೀಚೆಗೆ ಹೊರಡಿಸಿರುವ ಅಧಿಸೂಚನೆಯಲ್ಲಿ ಆಯೋಗವು ಈ ಮಾಹಿತಿಯನ್ನು ನೀಡಿದೆ.

ಪ್ರಸಕ್ತ ಸಾಲಿನ ಪ್ರಿಲಿಮಿನರಿ ಪರೀಕ್ಷೆಗಳು ಮೇ 28ರಿಂದ ಆರಂಭವಾಗಲಿವೆ.

ಅಭ್ಯರ್ಥಿಗಳು ತಾವು ಸಲ್ಲಿಸಿದ ಅರ್ಜಿಗಳನ್ನು ಹಿಂಪಡೆಯಲು 2018ರಲ್ಲಿ ಯುಪಿಎಸ್‌ಸಿ ಅವಕಾಶ ನೀಡಿತ್ತು. ಆಗ, 10 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆ ಪೈಕಿ, ಶೇ 50ರಷ್ಟು ಅಭ್ಯರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಬಹುದು ಎಂದು ಅಂದಾಜಿಸಿದ್ದ ಯುಪಿಎಸ್‌ಸಿ, ಅರ್ಜಿ ಹಿಂಪಡೆಯಲು ಅವಕಾಶ ನೀಡಿತ್ತು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಮಾತು ಮನಸ್ಸುಗಳನ್ನು ಒಂದುಗೂಡಿಸಬೇಕೆ ವಿನಾ ಒಡೆಯಬಾರದು.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

ಭಾರತ ಮಹಿಳಾ ಕ್ರಿಕೆಟ್‌ಗೆ ಹೊಸ ರಂಗು ಡಬ್ಲ್ಯುಪಿಎಲ್

ಭಾರತದ ಮಹಿಳಾ ಕ್ರಿಕೆಟಿಗರೂ ಈಗ ಆರ್ಥಿಕವಾಗಿ ಸದೃಢರಾಗುತ್ತಿದ್ದಾರೆ. ಚೊಚ್ಚಲ ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಗಾಗಿ ನಡೆದ ಹರಾಜು ಪ್ರಕ್ರಿಯೆಯಲ್ಲಿ ಭಾರತ ತಂಡದ ಉಪನಾಯಕಿ ಸ್ಮೃತಿ ಮಂದಾನ ಸೇರಿದಂತೆ ಹಲವು ಆಟಗಾರ್ತಿಯರಿಗೆ ಹೆಚ್ಚು ಬೇಡಿಕೆ ಬಂದಿದೆ. ಇದರೊಂದಿಗೆ ಭಾರತೀಯ ಕ್ರಿಕೆಟ್ ಇತಿಹಾಸದ ಪುಸ್ತಕಕ್ಕೆ ಹೊಸ ಅಧ್ಯಾಯ ಸೇರ್ಪಡೆಯಾದಂತಾಗಿದೆ. ಕೆಲವು ವರ್ಷಗಳ ಹಿಂದೆ ಮಹಿಳಾ ಕ್ರಿಕೆಟ್ ಬಗ್ಗೆ ಇದ್ದ ಉಡಾಫೆಯ ಧೋರಣೆಯು ದೂರವಾಗುವ ಕಾಲ ಸನ್ನಿಹಿತವಾಗಿದೆ. ಮುಂದಿನ ತಿಂಗಳು ನಡೆಯುವ ಚೊಚ್ಚಲ ಟೂರ್ನಿಯಲ್ಲಿ ಒಟ್ಟು ಐದು ತಂಡಗಳು ಕಣಕ್ಕಿಳಿಯಲಿವೆ. ಹೊಸ ಬಣ್ಣಗಳ ಪೋಷಾಕು ಧರಿಸಿ ಬೇರೆ ಬೇರೆ ದೇಶಗಳ ಆಟಗಾರ್ತಿಯರೊಂದಿಗೆ ತಂಡಗಳು ಸ್ಪರ್ಧೆಗಿಳಿಯಲಿವೆ. ಆಟಗಾರ್ತಿಯರ ಬಿಡ್ ಪ್ರಕ್ರಿಯೆಯಲ್ಲಿ ಸ್ಮೃತಿ ಮಂದಾನ ಎಲ್ಲರಿಗಿಂತ ಹೆಚ್ಚು (₹ 3.40 ಕೋಟಿ) ಮೊತ್ತ ಗಳಿಸಿದ್ದಾರೆ. ಹರ್ಮನ್‌ಪ್ರೀತ್ ಕೌರ್, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಪೂಜಾ ವಸ್ತ್ರಕರ್ ಮತ್ತು ರಿಚಾ ಘೋಷ್ ಅವರೂ ಒಂದೂವರೆ ಕೋಟಿ ರೂಪಾಯಿಗಿಂತಲೂ ಹೆಚ್ಚು ಮೊತ್ತವನ್ನು ತಮ್ಮದಾಗಿಸಿಕೊಂಡಿದ್ದಾರೆ. ವನಿತೆಯರಿಗೂ ಐಪಿಎಲ್ ಆರಂಭಿಸಬೇಕು ಎಂದು ಕೆಲವು ವರ್ಷಗಳ ಹಿಂದೆ ಕೆಲವು ಮಾಜಿ ಆಟಗಾರ್ತಿಯರು ಮಾಡಿದ್ದ ಮನವಿ ಬಗ್ಗೆ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಆಸಕ್ತಿ ತೋರಿರಲಿಲ್ಲ. ಪುರುಷರ ಐಪಿಎಲ್‌ನಲ್ಲಿಯೇ ಮಹಿಳೆಯರಿಗಾಗಿ ಪ್ರದರ್ಶನ ಪಂದ್ಯಗಳನ್ನು ಏರ್ಪಡಿಸಲಾಗುತ್ತಿತ್ತು. ಪ್ರೇಕ್ಷಕರನ್ನು ನಿರೀಕ್ಷೆಗೆ ತಕ್ಕಂತೆ ಸೆಳೆಯುವಲ್ಲಿ ಅವು ಸಫಲವಾಗಲಿಲ್ಲ. ಆದರೆ ಡಬ್ಲ್ಯುಪಿಎಲ್ ಟೂರ್ನಿಯನ್ನು ಟಿ.ವಿ. ಹಾಗೂ ಸ್ಮಾರ್ಟ್‌ಫೋನ್‌ಗಳಲ್ಲೂ ಜನ ವೀಕ್ಷಿಸುತ್ತಾರೆ ಎಂಬ ಭರವಸೆ ಮೂಡಿದೆ. ಮಹಿಳಾ ಟೂರ್ನಿಯ ಮಾಧ್ಯಮ ಹಕ್ಕುಗಳು ಇತ್ತೀಚೆಗೆ ₹ 951 ಕೋಟಿಗೆ ವಿಕ್ರಯವಾಗಿದ್ದವು. ಪುರುಷರ ಐಪಿಎಲ್‌ಗೆ ಹೋಲಿಸಿದರೆ ಇದು ತುಂಬಾ ಚಿಕ್ಕ ಮೊತ್ತ. ಆದರೆ ಉತ್ತಮ ಆರಂಭ ಎನ್ನುವುದರಲ್ಲಿ ಸಂಶಯವಿಲ್ಲ. ಇದರಿಂದಾಗಿ ಮಹಿಳಾ ಲೀಗ್ ಟೂರ್ನಿಯೂ ಮಂಡಳಿಯ ಬೊಕ್ಕಸಕ್ಕೆ ಆದಾಯ ತರುವ ಸಾಮರ್ಥ್ಯ ಹೊಂದಿದೆ ಎಂಬುದು ಈಗ ಸಾಬೀತಾಗಿದೆ. ಐಪಿಎಲ್ ತಂಡಗಳ ಮಾಲೀಕರೇ ಮಹಿಳಾ ತಂಡಗಳನ್ನೂ ಸ್ಪರ್ಧಾತ್ಮಕ ಬೆಲೆ ಬಿಡ್ ಮಾಡಿರುವುದು ಕೂಡ ಮಹತ್ವದ ಸಂಗತಿ. ಡಯಾನಾ ಎಡುಲ್ಜಿ, ಶಾಂತಾ ರಂಗಸ್ವಾಮಿ, ಮಿಥಾಲಿ ರಾಜ್, ಜೂಲನ್ ಗೋಸ್ವಾಮಿ ಅವರಂತಹ ದಿಗ್ಗಜರು ಹಲವು ವರ್ಷಗಳಿಂದ ಮಾಡಿದ ನಿರಂತರ ಪ್ರಯತ್ನಕ್ಕೆ ಈಗ ಫಲ ಲಭಿಸಿದೆ.

ಭಾರತದ ಮಹಿಳಾ ಕ್ರಿಕೆಟ್ ಬಲಾಢ್ಯವಾಗಿ ಬೆಳೆಯಲು ಈ ಪ್ರೀಮಿಯರ್ ಲೀಗ್ ನೆರವಾಗುವ ನಿರೀಕ್ಷೆ ಇದೆ

ಮಹಿಳಾ ಕ್ರಿಕೆಟಿಗರಿಗೆ ಕಳೆದ ಕೆಲವು ತಿಂಗಳುಗಳಲ್ಲಿ ಬಹಳಷ್ಟು ಉತ್ತೇಜನಕಾರಿ ಯೋಜನೆಗಳು ಜಾರಿಗೆ ಬಂದಿರುವುದು ಸ್ವಾಗತಾರ್ಹ. ಕೇಂದ್ರ ಗುತ್ತಿಗೆಯಲ್ಲಿರುವ ಆಟಗಾರ್ತಿಯರಿಗೆ ಸಮಾನ ವೇತನ, 19 ವರ್ಷದೊಳಗಿನವರ ಮಹಿಳಾ ತಂಡವು ಇದೇ ಮೊದಲ ಬಾರಿ ವಿಶ್ವಕಪ್ ಜಯಿಸಿರುವುದು ಕೂಡ ಹೆಣ್ಣುಮಕ್ಕಳು ಕ್ರಿಕೆಟ್ ಆಯ್ಕೆ ಮಾಡಿಕೊಳ್ಳಲು ಉತ್ತೇಜನ ನೀಡಬಲ್ಲ ಎಂಬುದರಲ್ಲಿ ಎರಡು ಮಾತಿಲ್ಲ. ಪುರುಷರ ವಿಭಾಗದಲ್ಲಿರುವಂತೆ ಜೂನಿಯರ್ ಹಂತದಿಂದಲೇ ಆರ್ಥಿಕ ಸೌಲಭ್ಯಗಳು ಮಹಿಳಾ ವಿಭಾಗದಲ್ಲೂ ಜಾರಿಗೊಳ್ಳಲು ಇನ್ನೂ ಕೆಲವು ಕಾಲ ಬೇಕಾಗಬಹುದು. ಡಬ್ಲ್ಯುಪಿಎಲ್ ಜನಮನ ಗೆಲ್ಲುವಲ್ಲಿ ಯಶಸ್ವಿಯಾದರೆ ಹಣದ ಹರಿವು ಹೆಚ್ಚಬಹುದು. ಆ ಮೂಲಕ ಮಹಿಳಾ ಕ್ರಿಕೆಟ್‌ನ ಎಲ್ಲ ಹಂತಗಳ ಅಭಿವೃದ್ಧಿಗೂ ಸಹಕಾರಿಯಾಗುವ ನಿರೀಕ್ಷೆ ಇದೆ. ಮಹಿಳೆಯರ ದೇಶಿ ಟೂರ್ನಿಗಳೂ ಹೆಚ್ಚಬೇಕು. ಸಾಮಾಜಿಕ ಹಾಗೂ ಆರ್ಥಿಕ ಭದ್ರತೆಗಳು ಎಲ್ಲ ವಯೋಮಿತಿಗಳಲ್ಲಿಯೂ ದೊರೆಯುವಂತಾಗಬೇಕು. ಡಬ್ಲ್ಯುಪಿಎಲ್‌ನಿಂದ ಬರುವ ಸಂಪನ್ಮೂಲವು ಮಹಿಳಾ ಕ್ರಿಕೆಟ್ ಏಳ್ಗೆಗೆ ಬಳಕೆಯಾಗಬೇಕು. ಗ್ರಾಮಾಂತರ ಮಟ್ಟದಲ್ಲಿ ಇವತ್ತಿಗೂ ಬಡತನ ಹಾಗೂ ಗೊಡ್ಡು ಸಂಪ್ರದಾಯಗಳಿಂದ ಮುದುಡಿಹೋಗುತ್ತಿರುವ ಪ್ರತಿಭೆಗಳನ್ನು ಶೋಧ ಮಾಡಿ ಮುಖ್ಯವಾಹಿನಿಗೆ ತರುವ ಕಾರ್ಯವು ಫ್ರಾಂಚೈಸಿಗಳಿಂದ ಆಗಬೇಕು. ಆಗ ಈ ಟೂರ್ನಿಯು ಬೆಳೆಯುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಲೈಂಗಿಕ ದೌರ್ಜನ್ಯ, ಫಿಕ್ಸಿಂಗ್ ಮತ್ತು ಉದ್ದೀಪನ ಮದ್ದು ಬಳಕೆಯಂತಹ ಪಿಡುಗುಗಳು ಮಹಿಳಾ ಲೀಗ್‌ಗೆ ಸೋಕದಂತೆ ನೋಡಿಕೊಳ್ಳಬೇಕು. ಪುರುಷರ ಐಪಿಎಲ್‌ನಲ್ಲಿ ಈ ಹಿಂದೆ ನಡೆದಿದ್ದ ಸ್ಪಾಟ್ ಫಿಕ್ಸಿಂಗ್‌ನಂಥ ಕೆಟ್ಟ ಪ್ರಕರಣಗಳಿಂದ ಕಲಿತ ಪಾಠ ಇಲ್ಲಿ ಉಪಯುಕ್ತವಾಗಬಹುದು. ಭಾರತದ ಮಹಿಳಾ ಕ್ರಿಕೆಟ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಹಾಗೂ ಇಂಗ್ಲೆಂಡ್ ಮಾದರಿಯಲ್ಲಿ ಬಲಾಢ್ಯವಾಗಿ ಬೆಳೆಯಲು ಕೂಡ ಈ ಟೂರ್ನಿ ನೆರವಾಗುವ ನಿರೀಕ್ಷೆ ಇದೆ. ಆ ದೇಶಗಳ ಖ್ಯಾತನಾಮ ಆಟಗಾರ್ತಿಯರೂ ಇಲ್ಲಿ ಕಣಕ್ಕಿಳಿಯುತ್ತಿದ್ದಾರೆ. ಅದರಿಂದಾಗಿ ಟೂರ್ನಿಯು ಹೆಚ್ಚು ಆಕರ್ಷಕವಾಗುವ ನಿರೀಕ್ಷೆ ಇದೆ.

ದೇಶದಲ್ಲಿ ವಿಚಾರಕ್ರಾಂತಿಗೆ ಮರು ಆಹ್ವಾನ ನೀಡುವ ಕಾಲ ಸನ್ನಿಹಿತವಾಗಿದೆ

ಚುನಾವಣೆ: ಸಾತ್ವಿಕ ಮಾರ್ಗಕ್ಕೆ ಸೂತ್ರ

ವಿಶ್ಲೇಷಣೆ

ಡಾ. ಜ್ಯೋತಿ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳು ಪ್ರಭುಗಳ ಸ್ಥಾನ ಪಡೆಯುವುದು ಚುನಾವಣೆ ಸಮೀಪಿಸಿದಾಗ ಮಾತ್ರ. ಚುನಾವಣೆ ಮುಗಿದ ಮೇಲೆ ನಾವು ಆರಿಸಿದ 'ದೊರೆ'ಗಳು ನಮ್ಮ ಮುಖಕ್ಕೆ ದೂಳೆಬ್ಬಿಸಿ ಭದ್ರತೆಯೊಂದಿಗೆ ಕಣ್ಮರೆಯಾಗುತ್ತಾರೆ. ಮತ್ತೆ ಅವರನ್ನು ನಾವು ನೋಡುವುದು ಮುಂದಿನ ಚುನಾವಣಾಪೂರ್ವದಲ್ಲಿ ಮಾತ್ರ. ಈ ಮಧ್ಯೆ, ತಮ್ಮ ಮತಕ್ಷೇತ್ರದ ಸಭೆ- ಸಮಾರಂಭಗಳಲ್ಲಿ ಪೀಠ ಅಲಂಕರಿಸುವುದನ್ನು ದೂರದಿಂದ ಕಂಡರೂ, ಜನ ಸಾಮಾನ್ಯರ ಸಮಸ್ಯೆಗಳಿಗೆ ಅವರು ಪ್ರಾಮಾಣಿಕವಾಗಿ ಸ್ಪಂದಿಸುವುದು ವಿರಳ. ಅವರು ಕೈಕುಲುಕುವುದೇನಿದ್ದರೂ ಕೊಡು-ಕೊಳ್ಳುವ ವ್ಯವಹಾರಸ್ಥರೊಂದಿಗೆ.

ಇದನ್ನು ಷೇಕ್ಸ್‌ಪಿಯರ್ ತನ್ನ ನಾಟಕ 'ಜೂಲಿಯಸ್ ಸೀಸರ್'ನಲ್ಲಿ ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾನೆ. ಜೂಲಿಯಸ್ ಸೀಸರ್‌ನ ಕುರಿತು ಬ್ರೂಟಸ್ ಹೀಗೆ ಹೇಳುತ್ತಾನೆ- 'ನಮ್ಮನ್ನು ಆಳಲಿರುವ ದೊರೆಗಳನ್ನು ಏಣಿ ಹತ್ತಿಸಿ ಎತ್ತರದ ಪೀಠದಲ್ಲಿ ಕೂರಿಸುವವರು ನಾವೇ. ಆದರೆ, ಏಣಿ ಹತ್ತಿದ ಮೇಲೆ ಅವರಿಗೆ, ಕೆಳಗೆ ನಿಂತ ನಾವು ಹುಲುಮಾನವರಂತೆ ಕಂಡು, ಏಣಿಯನ್ನು ಜಾಡಿಸಿ ಒದ್ದು, ತೇಲಾಡುವ ಮೋಡಗಳೊಂದಿಗೆ (ಇಂದಿನ ಸಂದರ್ಭದಲ್ಲಿ ಉದ್ಯಮಿಗಳು, ಸೆಲೆಬ್ರಿಟಿಗಳು) ಮಾತ್ರ ಅವರು ಕೈಕುಲುಕುತ್ತಾರೆ. ಹಾಗಾಗಿ, ನಾವು ಈ ವಿಷದ ಮೊಟ್ಟೆಗಳಿಗೆ ಕಾವು ಕೊಟ್ಟು ಜೀವ ನೀಡುವ ಮೊದಲು ಚೆನ್ನಾಗಿ ಯೋಚಿಸಬೇಕು, ಅವು ಮುಂದೆ ನಮ್ಮನ್ನೇ ಕಡಿದು ಸಾಯಿಸದಂತೆ ಮುನ್ನೆಚ್ಚರಿಕೆ ವಹಿಸಬೇಕು'.

ನಮ್ಮ ದೇಶದಲ್ಲಿ ಚುನಾವಣೆಗಳು ಹತ್ತಿರವಾದಂತೆ, ಮತದಾರರು ವಿಐಪಿಗಳಾಗಿಬಿಡುತ್ತಾರೆ. ಈ ಅಲ್ಪಕಾಲಿಕ ಗೌರವ ಪಡೆಯುವ ಸಾಮಾನ್ಯ ಜನರನ್ನು ಭೇಟಿಯಾಗಲು, ಚುನಾವಣಾನಂತರ ಭದ್ರತೆಯೊಂದಿಗೆ ಬುಲೆಟ್‌ಪ್ರೂಫ್ ವಾಹನದಲ್ಲಿ ಓಡಾಡಲಿರುವವರು ಬರುತ್ತಾರೆ, ಕಾಲಿಗೆ ಬೀಳುತ್ತಾರೆ, ಕಾಣಿಕೆಗಳನ್ನು ನೀಡುತ್ತಾರೆ, ಸಭೆಗಳಿಗೆ ಕರೆಸಿಕೊಂಡು ಭಕ್ಷೀಸು, ಬಾಡೂಟ ಕೊಡುತ್ತಾರೆ. ಹಾಗಾಗಿ, ಚುನಾವಣೆಗಳೆಂದರೆ ಜನಸಾಮಾನ್ಯರಿಗೆ ಒಂದು ಹಬ್ಬದಂತೆ.

ಇಲ್ಲಿ ಪ್ರಜೆಗಳಿಗೆ ಅರಿವಾಗದ ವಿಷಯವೆಂದರೆ, ಇಲ್ಲಿ ವ್ಯಕ್ತಿ ಮುಖ್ಯವಲ್ಲ, ಮತ (ನಂಬರ್) ಮುಖ್ಯ. ಈ ಸಂದರ್ಭದಲ್ಲಿ, ವ್ಯಕ್ತಿ ನಂಬರ್ ಆಗಿ ಮಾರ್ಪಡುತ್ತಾನೆ. ಒಂದು ಮನೆಯಲ್ಲಿ ಎಷ್ಟು ವೋಟುಗಳಿವೆ ಅನ್ನುವುದರ ಮೇಲೆಯೇ ಆ ಮನೆಯವರೊಂದಿಗೆ ವ್ಯವಹಾರ ನಡೆಯುತ್ತದೆ. ಹೀಗೆ, ಮತದಾನದ ಹಕ್ಕು ಇರುವ ನಾಗರಿಕ, ಅದನ್ನು ಆಮಿಷಗಳಿಗೆ ಕುರುಡಾಗಿ ಮಾರಿಕೊಂಡು, ಆ ಮೂಲಕ ಭ್ರಷ್ಟರನ್ನು ಆಯ್ಕೆ ಮಾಡಿ, ಅವರಿಂದ ಇನ್ನಷ್ಟು ಆರ್ಥಿಕ ಅಸಮತೋಲನ ಮತ್ತು ಪರಿಸರ ಹಾನಿಗೆ ಕಾರಣನಾಗುತ್ತಾನೆ. ಪಾರದರ್ಶಕವಾಗಿ ಇರಬೇಕಾಗಿದ್ದ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ದುಃಸ್ಥಿತಿ ಹೇಗೆ ಸಾಧ್ಯವಾಯಿತು?

ಮತಗಳನ್ನು ಆಮಿಷಗಳಿಗೆ ಮಾರಿಕೊಳ್ಳುವ ಪ್ರವೃತ್ತಿ ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ ಎನ್ನುವುದಕ್ಕೆ 1974ರಲ್ಲಿ ಕುವೆಂಪು ಅವರು ಮಾಡಿದ 'ವಿಚಾರಕ್ರಾಂತಿಗೆ ಆಹ್ವಾನ' ಭಾಷಣವೇ ನಿದರ್ಶನ. ಅವರೇ ಹೇಳಿದಂತೆ- 'ನಿಜವಾದ ಪ್ರಜಾಸತ್ತೆಯೆಂದರೆ, ಪ್ರಜೆಗಳು ಅನಿರ್ಬಂಧಿತ ಇಚ್ಛಾ ಸ್ವಾತಂತ್ರ್ಯದಿಂದ ಸರ್ವರ ಅಭ್ಯುದಯಕ್ಕಾಗಿ ಪ್ರಾಮಾಣಿಕ ವ್ಯಕ್ತಿಗಳನ್ನು ಆಯ್ಕೆ ಮಾಡುವುದು. ಆದರೆ, ಇಂದಿನ ಚುನಾವಣಾ ವ್ಯವಸ್ಥೆಯಲ್ಲಿ ಯಾವುದೇ ಪ್ರಾಮಾಣಿಕ, ಸಂಭಾವಿತ ಮತ್ತು ಸುಸಂಸ್ಕೃತ ವ್ಯಕ್ತಿ ಅದರ ಹತ್ತಿರ ಸುಳಿಯಲಾರ. ಹಣದ ಹೊಳೆ ಹರಿಸಿ ಚುನಾವಣೆ ಗೆಲ್ಲುವ ಯಾವುದೇ ವ್ಯಕ್ತಿ ಅಥವಾ ಪಕ್ಷವು ಭ್ರಷ್ಟಾಚಾರಕ್ಕೆ ಬಲಿಯಾಗದೇ ಇರಲು ಸಾಧ್ಯವಿಲ್ಲ. ಹಾಗಾಗಿ, ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆಯಿದ್ದವರು ಇಂದಿನ ಧನಾಶ್ರಿತ ಚುನಾವಣಾ ಪದ್ಧತಿಯನ್ನು ಬದಲಾಯಿಸಿ ಗುಣಾಶ್ರಿತವನ್ನಾಗಿ ಪರಿವರ್ತಿಸುವ ಹೊಣೆಗಾರಿಕೆ ವಹಿಸಬೇಕಾಗಿದೆ. ಒಂದು ಉಗ್ರ ಕ್ರಾಂತಿಯಿಂದಲಾದರೂ ಚುನಾವಣೆಯನ್ನು ಸಾತ್ವಿಕಮಾರ್ಗಕ್ಕೆ ತಿರುಗಿಸದಿದ್ದರೆ ಸ್ವಾರ್ಥಿಗಳು, ಸಮಯಸಾಧಕರು, ಗೂಂಡಾಗಳು, ಖದೀಮರು, ಚಾರಿತ್ರ್ಯಹೀನರು ಸರ್ವಾಧಿಕಾರ ನಡೆಸಲು ಅವಕಾಶ ಪಡೆಯುತ್ತಾರೆ'.

ಸುಮಾರು ಅರ್ಧ ಶತಮಾನದ ಹಿಂದೆ ವಿಚಾರ ಕ್ರಾಂತಿಗೆ ಕುವೆಂಪು ನೀಡಿದ ಆಹ್ವಾನ ಇಂದಿಗೂ ಪ್ರಸ್ತುತವಾಗಿದೆ, ಮಾತ್ರವಲ್ಲ, ಪ್ರಜಾಪ್ರಭುತ್ವದ ಅಡಿಪಾಯವಾದ ಮತದಾನ ಇನ್ನಷ್ಟು ಕೆಳಮಟ್ಟದ ಹರಾಜಿಗೆ ತೆರೆದುಕೊಂಡಿದೆ. ಇಲ್ಲಿ ಸಾಂದರ್ಭಿಕ ಪ್ರಶ್ನೆಗಳೆಂದರೆ- ಇಂತಹ ಪರಿಸ್ಥಿತಿಯಲ್ಲಿ ಮತದಾನಕ್ಕೆ ಮೌಲ್ಯ ಪುನರ್ ಸ್ಥಾಪಿಸುವುದು ಹೇಗೆ? ಕ್ಷಣಿಕ ಆಮಿಷಗಳಿಗೆ ಬಲಿಯಾಗದೆ, ಜವಾಬ್ದಾರಿಯಿಂದ ಮತ ಚಲಾಯಿಸಿ ಎಂದು ಜನರಿಗೆ ತಿಳಿಹೇಳಲು ಸಾಧ್ಯವೇ? ನಮ್ಮನ್ನು ಆಳುವವರು ನಿಜಾರ್ಥದ ಪ್ರಜಾಚಿಂತಕರಾಗಿ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಮಾಡುವ ಸೂತ್ರವೆಲ್ಲಿದೆ? ಚುನಾವಣೆಗೆ ನಿಂತ ಅಭ್ಯರ್ಥಿಗಳಲ್ಲಿ ಯಾರೂ ಆಯ್ಕೆಗೆ ಅರ್ಹರಲ್ಲವೆನಿಸಿದರೆ ಮತದಾರ ಏನು ಮಾಡಬಹುದು?

ವರ್ತಮಾನದ ಮತದಾನ ವ್ಯವಸ್ಥೆಯಲ್ಲಿನ ಲೋಪದೋಷಗಳನ್ನು ಸರಿಪಡಿಸದೇ ಹೋದಲ್ಲಿ ಪ್ರಜಾಸತ್ತೆಗೆ ಉಳಿಗಾಲವಿಲ್ಲ. ಪಕ್ಷಗಳು ಅಭ್ಯರ್ಥಿಗಳನ್ನು ಮತದಾರರ ಮೇಲೆ ತಮ್ಮ ಇಚ್ಛೆಯನುಸಾರ ಹೇರುತ್ತವೆ ಮತ್ತು ಅವರನ್ನೇ ಆಯ್ಕೆ ಮಾಡಲು ಆಮಿಷಗಳನ್ನು ಒಡ್ಡುತ್ತವೆ. ಅಂದರೆ, ಅಭ್ಯರ್ಥಿಯಾಗುವವನು ಹಣದ ಪ್ರಭಾವದಿಂದ ಆಯ್ಕೆಯಾದಲ್ಲಿ, ಹಣ ಗಳಿಸುವುದನ್ನಷ್ಟೇ ಧ್ಯಾನಿಸುತ್ತಾನೆಯೇ ವಿನಾ ಪ್ರಜಾಕಲ್ಯಾಣವನ್ನಲ್ಲ. ಇಂತಹ ಶೋಚನೀಯ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಆಶಯಗಳನ್ನು ಹೊತ್ತ ಮತದಾರರ ಮುಂದಿರುವ ಆಯ್ಕೆಯೇನು?



ಸದ್ಯ, ಮತದಾರನ ನಿಯಂತ್ರಣದಲ್ಲಿರುವ ಆಶಾದಾಯಕ ಆಯ್ಕೆಯೆಂದರೆ ನೋಟಾ (NOTA), ಅಂದರೆ 'ಮೇಲಿನ ಯಾವುದೂ ನನ್ನ ಆಯ್ಕೆಯಲ್ಲ'. ಸದ್ಯಕ್ಕೆ ಇದೊಂದು ಸಾಂಕೇತಿಕ ಪ್ರತಿಭಟನೆಯಾಗಿದೆಯೇ ವಿನಾ ಯಾವುದೇ ಚುನಾವಣಾ ಮೌಲ್ಯ ಹೊಂದಿಲ್ಲ. ಯಾಕೆಂದರೆ, ಅಕಸ್ಮಾತ್ ನೋಟಾಕ್ಕೆ ಅತಿ ಹೆಚ್ಚಿನ ಮತ ಚಲಾವಣೆಯಾದರೂ ಅತಿ ಹೆಚ್ಚು ಮತ ಪಡೆದ ಅಭ್ಯರ್ಥಿಯನ್ನು ವಿಜೇತ ಎಂದು ಘೋಷಿಸಲಾಗುತ್ತದೆ. ಆದರೂ ಗಮನಾರ್ಹ ಅಂಶವೆಂದರೆ, ಪ್ರಜ್ಞಾವಂತ ಮತದಾರರು ನೋಟಾವನ್ನು ಹೆಚ್ಚೆಚ್ಚು ಆಯ್ಕೆ ಮಾಡಿಕೊಳ್ಳುವುದರ ಮೂಲಕ ಕಣದಲ್ಲಿರುವ ಅಭ್ಯರ್ಥಿಗಳಿಗೆ ಅಸಮ್ಮತಿ ಸೂಚಿಸುತ್ತಿದ್ದಾರೆ. ಸುಪ್ರೀಂ ಕೋರ್ಟ್ ಕೂಡ, 'ದೇಶದ ಆಡಳಿತ ಸೂತ್ರ ಹಿಡಿಯಲು ಮೌಲ್ಯಾಧಾರಿತ ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಅತ್ಯಗತ್ಯ ಮತ್ತು ಈ ದಿಸೆಯಲ್ಲಿ 'ನೋಟಾ' ಸಮರ್ಥ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ರಾಜಕೀಯ ಪಕ್ಷಗಳನ್ನು ಒತ್ತಾಯಿಸುತ್ತದೆ' ಎಂದು ಅಭಿಪ್ರಾಯಪಟ್ಟಿದೆ.

ಈಚಿನ ಚುನಾವಣೆಗಳಲ್ಲಿ ನೋಟಾಕ್ಕೆ ಗಣನೀಯ ಸಂಖ್ಯೆಯಲ್ಲಿ ಮತಗಳು ಬೀಳುತ್ತಿವೆ. ಇದು, ಜನರು ದೇಶದ ಪ್ರಜಾಸತ್ತೆಯಲ್ಲಿ ಸುಧಾರಣೆ ಬಯಸುತ್ತಿದ್ದಾರೆ ಎನ್ನುವುದಕ್ಕೆ ನಿದರ್ಶನ. ಆದರೆ, ಪ್ರಜಾಸತ್ತೆ ಬಲವರ್ಧನೆಗೆ, ಚುನಾವಣಾ ಆಯೋಗವು ನೋಟಾಕ್ಕೆ ಇನ್ನಷ್ಟು ಶಕ್ತಿ ತುಂಬಬೇಕಾಗಿದೆ. ಈ ದಿಸೆಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳೆಂದರೆ: ಒಂದು ವೇಳೆ ನೋಟಾ ಅತಿಹೆಚ್ಚು ಮತಗಳನ್ನು ಪಡೆದರೆ, ಆ ಕ್ಷೇತ್ರದಲ್ಲಿ ಹೊಸ ಅಭ್ಯರ್ಥಿಗಳೊಂದಿಗೆ ಮರುಚುನಾವಣೆಯನ್ನು ನಡೆಸಬೇಕು ಮತ್ತು ಸೋತ ರಾಜಕೀಯ ಪಕ್ಷಗಳೇ ಚುನಾವಣಾ ವೆಚ್ಚ ಭರಿಸಬೇಕು (ಸರಿಯಾದ ಅಭ್ಯರ್ಥಿಯನ್ನು ಕಣಕ್ಕೆ ಇಳಿಸದಿದ್ದಕ್ಕಾಗಿ) ಹಾಗೂ ಸೋತ ಅಭ್ಯರ್ಥಿಗಳು ಒಂದು ನಿರ್ದಿಷ್ಟ ಅವಧಿಯವರೆಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು.

ನೋಟಾವನ್ನು ನಾಗರಿಕರು ಸಮರ್ಪಕವಾಗಿ ಬಳಸಿದಲ್ಲಿ ಮರುಚುನಾವಣೆ ನಡೆಸಬೇಕಾಗುತ್ತದೆ ಮತ್ತು ಇದರಿಂದ ಚುನಾವಣಾ ವೆಚ್ಚ ಹೆಚ್ಚುತ್ತದೆ ನಿಜ. ಆದರೆ, ಕಳಂಕಿತ ಅಭ್ಯರ್ಥಿಗಳು ಆಯ್ಕೆಯಾಗಿ ದೇಶದ ಸಂಪತ್ತು ಲೂಟಿ ಹೊಡೆಯುವುದರ ಮುಂದೆ ಈ ಖರ್ಚು ನಗಣ್ಯ.

ಇದೊಂದು ದೇಶಸೇವೆಯೂ ಹೌದು. ಆದ್ದರಿಂದ, ಸದ್ಯಕ್ಕೆ ದೇಶದ ಕುರಿತು ಪ್ರಾಮಾಣಿಕವಾಗಿ ಚಿಂತಿಸುವವರಿಗೆ ಇರುವ ಆಶಾದಾಯಕ ಆಯ್ಕೆಯೆಂದರೆ, ನೋಟಾದ ಕುರಿತು ಜನಜಾಗೃತಿ ಮೂಡಿಸಿ, ಭ್ರಷ್ಟರು ನಮ್ಮನ್ನು ಆಳದಂತೆ ನೋಡಿಕೊಳ್ಳುವುದು. ಅಂದರೆ, ದೇಶದಲ್ಲಿ ವಿಚಾರಕ್ರಾಂತಿಗೆ ಮರು ಆಹ್ವಾನ ನೀಡುವ ಕಾಲ ಸನ್ನಿಹಿತವಾಗಿದೆ ಎನ್ನಬಹುದು. ಸ್ವಸ್ಥ ಸಮಾಜ ಮತ್ತು ಪಾರದರ್ಶಕ ವ್ಯವಸ್ಥೆ ರೂಪಿಸುವ ಪ್ರಯತ್ನಗಳನ್ನು, ನಾವೇ ನಮ್ಮ ಅಲ್ಪಕಾಲಿಕ ವೈಯಕ್ತಿಕ ಹಿತಾಸಕ್ತಿಗಳನ್ನು ಬಿಟ್ಟು ಪ್ರಾಮಾಣಿಕವಾಗಿ ಮಾಡಬೇಕು. ಯಾಕೆಂದರೆ, ಜಗತ್ತಿನಲ್ಲಿ ಆಗುತ್ತಿರುವ ಎಲ್ಲಾ ಮಾನವ ನಿರ್ಮಿತ ಅವಘಡಗಳಿಗೆ ನಮ್ಮ ಹದಗೆಟ್ಟಿರುವ ವ್ಯವಸ್ಥೆಯೇ ಕಾರಣ. ಅದನ್ನು ಸರಿ ಮಾಡುವುದರಲ್ಲಿಯೇ ನಮ್ಮ ಉಳಿವು ಅಡಗಿದೆ.

ಚುರುಮುರಿ

ಆಫರ್ ಮೇಳ

• ಮಣ್ಣೆರಾಜು

'ಡಿಸ್ಕೌಂಟ್ ಅಂದ್ರೆ ಜನ ಮುಗಿಬೀಳ್ತಾರೆ ಕಣ್ರೀ...' ನ್ಯೂಸ್ ಪೇಪರ್ ಓದುತ್ತಾ ಸುಮಿ ಹೇಳಿದಳು.

'ಹೌದು, ಹಬ್ಬದ ಸಂದರ್ಭದಲ್ಲಿ ಸೀರೆ ಸೇಲ್‌ನಲ್ಲಿ ಇಪ್ಪತ್ತು ಪರ್ಸೆಂಟ್ ಡಿಸ್ಕೌಂಟ್ ಇದೆ ಅಂತ ನೀನು ಆಫರ್‌ಗೆ ಆಸೆಪಟ್ಟು ಸೀರೆ ಅಂಗಡಿಯ ನೂಕುನುಗ್ಗಲಲ್ಲಿ ನುಗ್ಗಾಡಿ, ಉಟ್ಟ ಸೀರೆ ಹರಿದುಕೊಂಡು ಬಂದೆಯಲ್ಲಾ...' ಅಂದ ಶಂಕ್ರಿ.

'ನನ್ನದಿರಲಿ, ಟ್ರಾಫಿಕ್ ದಂಡ ಪಾವತಿಗೆ ಐವತ್ತು ಪರ್ಸೆಂಟ್ ಡಿಸ್ಕೌಂಟ್ ಸಿಕ್ಕಮೇಲೆ ಕೋಟ್ಯಂತರ ರೂಪಾಯಿ ಕಲೆಕ್ಷನ್ ಆಗಿದೆಯಂತೆ. ಹಬ್ಬದ ಸೀಸನ್‌ನಲ್ಲೂ ಸೀರೆ, ಒಡವೆ ಅಂಗಡಿಗಳಲ್ಲಿ ಇಷ್ಟೊಂದು ಬಿಸಿನೆಸ್ ಆಗಿರಲಾರದು'.

'ಸರ್ಕಾರ ಆಗಿಂದಾಗ್ಗೆ ಇಂತಹ ಆಫರ್ ಮೇಳ ಆಯೋಜಿಸಿ, ವಿದ್ಯುತ್ ಬಿಲ್ ಪಾವತಿಸಿದರೆ ವಾಟರ್ ಬಿಲ್ ಫ್ರೀ, ಪೆಟ್ರೋಲ್ ಖರೀದಿಸಿದರೆ ಅಡುಗೆ ಅನಿಲ ಉಚಿತ ಅನ್ನುವಂಥ ಆಫರ್ ನೀಡಬೇಕು. ದಿನಬಳಕೆ ಪದಾರ್ಥಗಳಿಗೆ ಐವತ್ತು ಪರ್ಸೆಂಟ್ ಡಿಸ್ಕೌಂಟ್ ಕೊಟ್ಟರೆ ನಾವು ಆನಂದವಾಗಿ ಖರೀದಿಸಬಹುದು'.

'ಪದಾರ್ಥಗಳ ಬೆಲೆಯನ್ನು ಎರಡು ಪಟ್ಟು ಏರಿಸಿ ಐವತ್ತು ಪರ್ಸೆಂಟ್ ಆಫರ್ ಕೊಟ್ಟರೆ ಪ್ರಯೋಜನವಿಲ್ಲ...'

'ಮೋದಿಯವರು ಧರಿಸಿದ್ದರಲ್ಲಾ... ನಿರುಪಯೋಗಿ ಪ್ಲಾಸ್ಟಿಕ್ ಬಾಟಲಿಗಳಿಂದ ತಯಾರಿಸಿದ ಜಾಕೆಟ್ ಚೆನ್ನಾಗಿತ್ತು ಅಲ್ವೇನ್ರೀ?'

'ಹೌದು, ಭೂಮಿಗೆ ಭಾರ, ಮಣ್ಣಿಗೆ ಮಾರಕವಾಗಿದ್ದ ಪ್ಲಾಸ್ಟಿಕ್ ಮರುಬಳಕೆಗೆ ಇನ್ನುಮುಂದೆ ಹೆಚ್ಚಿನ ಮಾನ್ಯತೆ ಸಿಗಬಹುದು, ತ್ಯಾಜ್ಯವೆಂದು ಕಡೆಗಣಿಸಿದ್ದ ಪ್ಲಾಸ್ಟಿಕ್ ಪೂಜ್ಯವಾಗಬಹುದು. ಪ್ಲಾಸ್ಟಿಕ್ ಜವಳಿ ಉದ್ಯಮಕ್ಕೆ ಉತ್ತೇಜನ ಸಿಗಬಹುದು'.

'ಪ್ಲಾಸ್ಟಿಕ್ ಜವಳಿ ಮಾರುಕಟ್ಟೆಗೆ ಬಂದರೆ ಹಬ್ಬಕ್ಕೆ ನಾನೂ ಹೊಸ ಡಿಸೈನಿನ ಸೀರೆ ಕೊಳ್ಳುತ್ತೇನೆ, ನೀವೂ ಪ್ಲಾಸ್ಟಿಕ್ ಶರ್ಟ್, ಪ್ಯಾಂಟ್ ಕೊಂಡುಕೊಳ್ಳಿ'.

'ಪ್ಲಾಸ್ಟಿಕ್ ನಿಷೇಧಿಸಿ ಅಂತ ರೇಷ್ಮೆ, ಹತ್ತಿ ಬೆಳೆಗಾರರು ಹೋರಾಟ ಶುರು ಮಾಡಬಹುದು'.

'ಪರ್ಯಾಯ ಬೆಳೆ ಬೆಳೆಯಲು ಸರ್ಕಾರ ಪರ್ಯಾಯ ಯೋಜನೆಗಳನ್ನ ರೂಪಿಸಿ ಬೆಳೆಗಾರರಿಗೆ ನೆರವಾಗುತ್ತದೆ ಬಿಡ್ರೀ...' ಅಂದಳು ಸುಮಿ.

ದಿನದ ಟ್ವೀಟ್

ಅಕ್ಷಮ್ಯ ಕೃತ್ಯ

ಎಂದಿಗೂ ಮರೆಯುವುದಿಲ್ಲ, ಎಂದಿಗೂ ಕ್ಷಮಿಸುವುದಿಲ್ಲ. ಪುಲ್ವಾಮಾದಲ್ಲಿ 2019ರ ಫೆಬ್ರುವರಿ 14ರಂದು ನಡೆದ ಹೇಡಿತನದ ಭಯೋತ್ಪಾದಕ ಕೃತ್ಯದಲ್ಲಿ ಹುತಾತ್ಮರಾದ ನಮ್ಮ ವೀರ ಸೈನಿಕರ ಅತ್ಯುನ್ನತ ತ್ಯಾಗಕ್ಕೆ ಹೃತ್ಪೂರ್ವಕ ನಮನ. #PulwamaAttack #BlackDay

ಮಹೇಶ್ ಜೇಠ್ಮಲಾನಿ, ರಾಜ್ಯಸಭಾ ಸದಸ್ಯ, ವಕೀಲ

ಕಿಡಿನುಡಿ

ಎಷ್ಟು ಆಶ್ಚರ್ಯಕರ! ಮೋದಿಯವರ ಕುರಿತು ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಿದ ಕೆಲವು ವಾರಗಳ ನಂತರ, ಬಿಬಿಸಿ ಇಂಡಿಯಾ ಮೇಲೆ ಈಗ ಆದಾಯ ತೆರಿಗೆ ಇಲಾಖೆಯಿಂದ (ಐ.ಟಿ) ದಾಳಿ ನಡೆದಿದೆ. ಐ.ಟಿ., ಸಿ.ಬಿ.ಐ ಮತ್ತು ಇ.ಡಿಯಂತಹ ಏಜೆನ್ಸಿಗಳು ಬಿಜೆಪಿಯ ಅತಿದೊಡ್ಡ ಕೈಗೊಂಬೆಗಳಾಗಿ ಬದಲಾಗುವ ಮೂಲಕ ನಗೆಪಾಟಲಿಗೀಡಾಗಿವೆ. ಮುಂದೆ? ಹಿಂಡನ್‌ಬರ್ಗ್ ಮೇಲೆ ಇ.ಡಿ ದಾಳಿ ಅಥವಾ ಪ್ರತೀಕಾರಕ್ಕಾಗಿ ಅದನ್ನೇ ಹಿಡಿತಕ್ಕೆ ತೆಗೆದುಕೊಳ್ಳುವ ಪ್ರಯತ್ನ?

ಕೆ.ಟಿ. ರಾಮ ರಾವ್, ತೆಲಂಗಾಣ ಸಚಿವ

25 ವರ್ಷಗಳ ಹಿಂದೆ

ಭಾನುವಾರ, 15-2-1998

• ಸರಣಿ ಬಾಂಬ್ ಸ್ಫೋಟ 36 ಸಾವು, ಅಡ್ವಾಣಿ ಪಾರು

ಚೆನ್ನೈ, ಫೆ. 14- ಭಾರತೀಯ ಜನತಾ ಪಕ್ಷದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ಕೊಯಮತ್ತೂರಿನಲ್ಲಿ ನಡೆದ ಹತ್ಯೆ ಯತ್ನದಿಂದ ಇಂದು ಪಾರಾದರು. ಅವರು ಭಾಗವಹಿಸಲಿದ್ದ ಚುನಾವಣಾ ಪ್ರಚಾರ ಸಭೆಯ ಸ್ಥಳ ಸೇರಿದಂತೆ ಅಲ್ಲಿನ 12 ಕಡೆ ಇಂದು ಸಂಜೆ ಸರಣಿ ಬಾಂಬ್ ಸ್ಫೋಟ ಸಂಭವಿಸಿ ಕನಿಷ್ಠ 36 ಮಂದಿ ಸತ್ತು ಸುಮಾರು ನೂರು ಮಂದಿ ಗಾಯಗೊಂಡರು.

ಕೊಯಮತ್ತೂರಿನ ಆರ್.ಎಸ್. ಪುರಂನಲ್ಲಿ ಅಡ್ವಾಣಿ ಅವರು ಮಾತನಾಡಬೇಕಿದ್ದ ಪ್ರಚಾರ ವೇದಿಕೆಯ ಸುತ್ತ ಮೂರು ಕಡೆ ಬಾಂಬ್ ಸ್ಫೋಟಗೊಂಡವು. ಅದರಿಂದ ಒಬ್ಬ ಮಹಿಳೆ ಸೇರಿದಂತೆ 9 ಮಂದಿ ಸ್ಥಳದಲ್ಲಿಯೇ ಮೃತರಾದರು.

• ಕಾರಟಗಿ: ನಾಲ್ವರ ಆತ್ಮಹತ್ಯೆ, ಗಲಭೆ- ಗಾಳಿಯಲ್ಲಿ ಗುಂಡು

ರಾಯಚೂರು, ಫೆ. 14- ವಿಷಪ್ರಾಶನ ಮಾಡಿದ ನಾಲ್ವರು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ದೊರೆಯದೆ ಸತ್ತ ಹಿನ್ನೆಲೆಯಲ್ಲಿ ಸಿಂಧನೂರು, ಗಂಗಾವತಿ ಮಧ್ಯದಲ್ಲಿರುವ ಕಾರಟಗಿಯಲ್ಲಿ ಇಂದು ಹಿಂಸಾಚಾರದಲ್ಲಿ ತೊಡಗಿದ್ದ ಉದ್ರಿಕ್ತ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ಮಾಡಿ ಗಾಳಿಯಲ್ಲಿ 20 ಸುತ್ತು ಗುಂಡು ಹಾರಿಸಿದರು.

ಬೆಳಿಗ್ಗೆ ನಡೆದ ಹಿಂಸಾಚಾರದ ಹಿನ್ನೆಲೆಯಲ್ಲಿ ಕಾರಟಗಿಯಲ್ಲಿ ಉದ್ರಿಕ್ತ ವಾತಾವರಣ ಇದ್ದು, ಕೊಪ್ಪಳ ಜಿಲ್ಲಾ ಎಸ್‌ಪಿ ಪಿ.ಕೆ. ಗರ್ಗ್ ಅವರು ಮೀಸಲು ಪಡೆಯೊಂದಿಗೆ ಕಾರಟಗಿಯಲ್ಲಿಯೇ ಬಿಡಾರ ಹೂಡಿದ್ದಾರೆ. ಮೂರು ದಿನಗಳವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 15-2-1973

• ವಾಯುಪಡೆಗೆ ಸ್ವದೇಶಿ ಮಿಗ್-21 ಯುದ್ಧ ವಿಮಾನ

ನಾಸಿಕ್, ಫೆ. 14- ಹಿಂದೂಸ್ತಾನ್ ಏರೊನಾಟಿಕ್ಸ್ ಸಂಸ್ಥೆಯ ನಾಸಿಕ್ ಘಟಕದಲ್ಲಿ ತಯಾರಿಸಲಾದ ಪ್ರಪ್ರಥಮ ಮಿಗ್-21 ವಿಮಾನವನ್ನು ಇಂದು ಔಪಚಾರಿಕವಾಗಿ ಭಾರತೀಯ ವಾಯುಪಡೆಗೆ ಒಪ್ಪಿಸಲಾಯಿತು.

ರಕ್ಷಣಾ ಉತ್ಪಾದನಾ ಸಚಿವ ಎ.ಸಿ. ಶುಕ್ಲಾ ಅವರು ಇಲ್ಲಿಂದ 16 ಮೈಲಿ ದೂರದ ಓಜರ್‌ನಲ್ಲಿ ನಡೆದ ಸಮಾರಂಭದಲ್ಲಿ ಏರ್‌ಚೀಫ್ ಮಾರ್ಷಲ್ ಓ.ಪಿ. ಮೆಹ್ರಾ ಅವರಿಗೆ ಒಪ್ಪಿಸಿದರು.

• ಬೆಂಗಳೂರು ವಿ.ವಿ. ಕ್ಯಾಂಪಸ್‌ಗೆ 'ನಗರ ಕಚೇರಿ' ಮುಂದುವರಿಕೆ

ಬೆಂಗಳೂರು, ಫೆ. 14- ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯನ್ನು ನಾಗರಬಾವಿಯ ಹೊಸ ಕ್ಯಾಂಪಸ್‌ಗೆ ನಾಳೆ ವರ್ಗಾಯಿಸಲಾಗುವುದು.

ಆದರೆ, ಆಡಳಿತ, ಪರೀಕ್ಷೆ, ಅಕೌಂಟ್ಸ್ ಶಾಖೆಗಳನ್ನೊಳಗೊಂಡ ವಿಶ್ವವಿದ್ಯಾಲಯದ 'ನಗರ ಕಚೇರಿ' ಒಂದು ಸೆಂಟ್ರಲ್ ಕಾಲೇಜಿನ ಗಣಿತಶಾಸ್ತ್ರ ವಿಭಾಗದ ಮಹಡಿಯಲ್ಲಿ ಕೆಲಸ ಮಾಡುವುದೆಂದು ವಿಶ್ವವಿದ್ಯಾಲಯದ ಪ್ರಕಟಣೆಯೊಂದು ತಿಳಿಸುತ್ತದೆ.

ಸಂಗತ

ಮಕ್ಕಳನ್ನು ವಿದುರನಂತೆ ಪೊರೆಯಬಲ್ಲೆವೇ?

ಕಾಲೇಜು ವಿದ್ಯಾರ್ಥಿಗಳಿಗೆ ತರಗತಿಯ ಕನಿಷ್ಠ ಶಿಸ್ತನ್ನು ಪದೇಪದೇ ಜ್ಞಾಪಿಸಬೇಕಾದ ಪರಿಸ್ಥಿತಿ ಬಂದಿದೆ. ಬೋಧನೆಯ ಮುಖ್ಯಾಂಶಗಳನ್ನು ಬರೆದುಕೊಳ್ಳುವ ಪ್ರವೃತ್ತಿ ಕ್ಷೀಣಿಸಿದೆ

• ಆರತಿ ಪಟ್ರಮೆ

ಕೆಲವು ದಿನಗಳ ಹಿಂದೆ ತರಗತಿಯಲ್ಲಿ ಪಠ್ಯವೊಂದನ್ನು ಬೋಧಿಸುತ್ತಿದ್ದೆ. ಆ ಪಾಠವನ್ನು ಮೊದಲೊಮ್ಮೆ ಮಾಡಿದ್ದರೂ ಕಾರಣಾಂತರಗಳಿಂದ ಅನೇಕ ಮಂದಿ ಗೈರುಹಾಜರಾಗಿದ್ದರಿಂದ ಮಗದೊಮ್ಮೆ ಮಾಡುವಂತೆ ನನ್ನನ್ನು ಕೇಳಿಕೊಂಡಿದ್ದರು. ಈಗಾಗಲೇ ಆ ಪಾಠವನ್ನು ಕೇಳಿದ್ದವರಿಗೆ ಅಸಹನೆ. 'ಮಿಸ್ ಬೇಡವೇ ಬೇಡ, ಆ ಕಥೆ ನಮಗರ್ಥವಾಗಿದೆ. ಪುನಃ ಕೇಳುವುದಕ್ಕೆ ನಮ್ಮಿಂದಾಗದು' ಎಂದರು. ಹೇಳಿಕೇಳಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು. ಅವರು ಗಮನಹರಿಸಬೇಕಾದ ಮುಖ್ಯ ವಿಷಯಗಳ ಕಡೆಗಷ್ಟೇ ಆಸ್ಥೆ ತೋರುವರೇ ವಿನಾ ಭಾಷೆಯ ಕುರಿತು ಅವರ ಆಸಕ್ತಿ ತೀರಾ ಕಡಿಮೆಯೇ. ಬೆರಳೆಣಿಕೆಯ ವಿದ್ಯಾರ್ಥಿಗಳು ಮಾತ್ರ ಭಾಷಾ ತರಗತಿಗಳನ್ನು ಹಂಬಲಿಸಿಕೊಂಡು ನಮ್ಮ ನಿರೀಕ್ಷೆಯಲ್ಲಿರುತ್ತಾರೆ. ಮಕ್ಕಳು ಔದಾಸೀನ್ಯದರಾಗ ಎಳೆದಾಗ ಅವರಿಗೆ ಸಹಜವಾಗಿಯೇ ಭಾಷೆಯ ಮಹತ್ವವನ್ನೂ ಪುನರಾವರ್ತಿತ ಓದಿನ ಮಹತ್ವವನ್ನೂ ಹೇಳುತ್ತಾ ಇದ್ದೆ.

ಎಂಟು-ಹತ್ತು ವರ್ಷಗಳಿಂದ ಇದೇ ಪಾಠವನ್ನು ವರ್ಷದಲ್ಲಿ ಐದಾರು ತರಗತಿಗಳಿಗೆಂಬಂತೆ ಬೋಧಿಸುತ್ತಿದ್ದರೂ ಉಪನ್ಯಾಸಕರಾದವರು ಪ್ರತಿಯೊಂದು ಸಲ ಬೋಧಿಸುವಾಗಲೂ ಅದೊಂದು ಹೊಸ ಪಠ್ಯ, ಹೊಸ ಓದು ಎಂಬಂತೆ ಲವಲವಿಕೆಯಿಂದ ಬೋಧಿಸುವುದರ ಕುರಿತು ಅವರ ಗಮನ ಸೆಳೆಯುವ ಪ್ರಯತ್ನ ಮಾಡಿದೆ. ಯಕ್ಷಗಾನ ತಾಳಮದ್ದಳೆಗಳಲ್ಲಿ ಅದೇ ಪ್ರಸಂಗದ ಅದೇ ಪಾತ್ರವನ್ನು ನೂರಾರು ಸಲ ಅಭಿವ್ಯಕ್ತಗೊಳಿಸುವ ಕಲಾವಿದರು ನೂರೊಂದನೆಯ ಬಾರಿ ಪ್ರಸಂಗ ಸಾಹಿತ್ಯವನ್ನು ಓದುವಾಗ, ಅಲ್ಲೊಂದು ಹೊಸ ಹೊಳಹು ಮೂಡುವ ವಿಸ್ಮಯದ ಕುರಿತು ಅವರಿಗೆ ಹೇಳುವ ಉತ್ಸಾಹದಲ್ಲೂ ಇದ್ದೆ. ಒಟ್ಟಿನಲ್ಲಿ, ಪುನರಾವರ್ತಿತ ಓದು ನಮಗೆಷ್ಟು ಅಗತ್ಯ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕೆಂಬುದು ನನ್ನ ಉದ್ದೇಶವಾಗಿತ್ತು.

ಅಷ್ಟರಲ್ಲಿ ವಿದ್ಯಾರ್ಥಿಯೊಬ್ಬ ಬಾಣ ಬಿಟ್ಟಂತೆ, 'ನಾವು ನಿಮಗೆ ಅದಕ್ಕಾಗಿಯೇ ಸಂಬಳ ಕೊಡುತ್ತಿದ್ದೇವಲ್ಲ!' ಎಂದ. ಅವಾಕ್ಕಾಗುವ ಸರದಿ ನನ್ನದಾಗಿತ್ತು. 'ನೀವು ಸಂಬಳ ತೆಗೆದುಕೊಳ್ಳುವುದೇ ಅದಕ್ಕಾಗಿ' ಎಂದು ಅವನು ಹೇಳಿದ್ದರೆ ಅರ್ಥ ಬೇರೆಯೇ ಇತ್ತು. ಆದರೆ ಅವನ ಪ್ರಕಾರ, ಉಪನ್ಯಾಸಕರಿಗೆ ಸಂಬಳ ಕೊಡುವುದು ವಿದ್ಯಾರ್ಥಿಗಳು ಕಟ್ಟಿದ ಫೀಸ್ ಮುಖೇನ ಆಗಿರುವುದರಿಂದ ವಿದ್ಯಾರ್ಥಿಗಳೇ ಸಂಬಳ ಕೊಟ್ಟಂತಾಯಿತು. ಎಂತಹ ತರ್ಕ?! ನನಗೆ ಆಸ್ಥಾನ ಕವಿಗಳು, ಆಸ್ಥಾನ ಕಲಾವಿದರ ನೆನಪಾಯಿತು. ಆದರೆ ಪಠ್ಯಬೋಧನೆಯನ್ನು ಬರೀ ಜೀವನೋಪಾಯವೆಂದು ಗ್ರಹಿಸದೆ ಅದನ್ನೊಂದು ಆತ್ಮಸಂತೃಪ್ತಿಯ ಸಂಗತಿಯಾಗಿ ಕಂಡ ನನಗೆ ಆ ವಿದ್ಯಾರ್ಥಿಯ ಮಾತು ಅತ್ಯಂತ ಖೇದವನ್ನು ತಂದೊಡ್ಡಿತು.

ಹಿಂದಿನ ತಲೆಮಾರಿನ ಕಥೆಗಳು ಅಂತಿರಲಿ, ನಮ್ಮ ತಲೆಮಾರಿನ ವಿದ್ಯಾರ್ಥಿಗಳಿಗೆ ಗುರುಹಿರಿಯರ ಮೇಲಿದ್ದ ಗೌರವಾದರಗಳನ್ನು ಮುಂದಿನವರಿಗೆ ದಾಟಿಸಲು ನಾವು ಸೋಲುತ್ತಿರುವುದರ ಸಂಕೇತವಲ್ಲವೇ ಇದು? ಇಂದಿನ ಬೋಧಕರ ಕೈಯಲ್ಲಿ ಬೆತ್ತಗಳಿಲ್ಲದೇ ಇರುವ ಸಲುಗೆಯಲ್ಲವೇ ಇದು? ಕಟುವಾದ ಮಾತುಗಳಿಂದ ವಿದ್ಯಾರ್ಥಿಗಳ ಮನನೋಯಿಸದೆ ಮೆಲುದನಿಯಲ್ಲಿಯೇ ಅವರನ್ನು ಸರಿದಾರಿಗೆ ತರಬೇಕೆಂಬ ಅನುಸರಿಸಬಾರದ ಆದರ್ಶದ ಪ್ರತಿಫಲವಲ್ಲವೇ ಇದು? ಸದಾಕಾಲ ವಿದ್ಯಾರ್ಥಿಗಳ ಆತ್ಮಗೌರವದ ಬಗ್ಗೆ, ಅವರ ವ್ಯಕ್ತಿತ್ವದ ಬಗ್ಗೆ ಚಿಂತಿಸುವ ನಾವು, ನಮ್ಮ ಆತ್ಮಗೌರವವನ್ನು ಕಳೆದುಕೊಂಡು ಅವರೆದುರು ನಿಲ್ಲುವ ಪರಿಸ್ಥಿತಿ ತಂದುಕೊಂಡುದು ಹೀನಾಯವಲ್ಲವೇ?

ನಾವು ಇಂದೂ ನಮ್ಮ ಗುರುಗಳನ್ನು ಭೇಟಿ ಮಾಡುವ ಅವಕಾಶಗಳು ಒದಗಿದಾಗ ಎದ್ದುನಿಂತು ಗೌರವಿಸಿ ಅವರು ಕುಳಿತ ಬಳಿಕವಷ್ಟೇ ಕುಳಿತುಕೊಳ್ಳುವುದು ನಮಗೆ ನಮ್ಮ ಹಿರಿಯರು ಕಲಿಸಿಕೊಟ್ಟ ಸಂಸ್ಕಾರ. ಇಂದು ಮಕ್ಕಳು ತರಗತಿಯಲ್ಲಿ ಗುರುಗಳ ಎದುರು ಕಾಲ ಮೇಲೆ ಕಾಲು ಹಾಕಿ ಕುಳಿತುಕೊಳ್ಳುವ ಹಂತದಲ್ಲಿದ್ದಾರೆ. ಲಾಕ್‌ಡೌನ್ ಅವಧಿಯ ಆನ್‌ಲೈನ್ ತರಗತಿಗಳಿಗೆ ಒಗ್ಗಿಕೊಂಡ ಬಳಿಕವಂತೂ ಮಕ್ಕಳಿಗೆ ತರಗತಿಯ ಕನಿಷ್ಠ ಶಿಸ್ತನ್ನೂ ಪದೇಪದೇ ಜ್ಞಾಪಿಸಬೇಕಾದ ಪರಿಸ್ಥಿತಿ ಬಂದಿದೆ. ನೇರವಾಗಿ ಕುಳಿತುಕೊಂಡು, ಬೋಧನೆಯ ಮುಖ್ಯ ಅಂಶಗಳನ್ನು ಬರೆದುಕೊಳ್ಳುವ ಪ್ರವೃತ್ತಿಯಂತೂ ಇಲ್ಲವೇ ಇಲ್ಲ ಎಂಬಷ್ಟು ಕಳೆದುಹೋಗಿದೆ. 'ನೋಟ್ಸ್ ಪಿಡಿಎಫ್ ಕಳಿಸ್ತೀರ ಅಲ್ವಾ' ಎಂದು ಮಕ್ಕಳು ನಿರ್ದಾಕ್ಷಿಣ್ಯವಾಗಿ ಕೇಳುತ್ತಾರೆ! 'ಪಿಡಿಎಫ್ ಕಳಿಸಿದರೆ ಮೊಬೈಲ್ ಒಳಗೆ ಕಳೆದುಹೋಗುತ್ತದೆ, ತಲೆಯೊಳಗೆ ಸೇರುತ್ತದಾ?' ಎಂದು ನಾನು ನಕ್ಕು ತರಗತಿಯಿಂದಾಚೆ ಬರುವುದಿದೆ.

ಮಹಾಭಾರತದಲ್ಲಿ ಸನ್ನಿವೇಶವೊಂದು ಹೀಗಿದೆ. ಹಸ್ತಿನಾಪುರದ ಆಸ್ಥಾನಕ್ಕೆ ಗುರುಗಳಾದ ಮೈತ್ರೇಯರು ಆಗಮಿಸುತ್ತಾರೆ. ಇಡೀ ಸಭೆ ಎದ್ದು ನಿಂತು ಗೌರವಿಸಿದರೂ ಸುಯೋಧನ ಮದೋನ್ಮುಖನಾಗಿ ಕಾಲ ಮೇಲೆ ಕಾಲು ಹಾಕಿ ಕುಳಿತಿರುತ್ತಾನೆ. ಇದರಿಂದ ಕ್ರುದ್ಧರಾದ ಮೈತ್ರೇಯರು 'ನಿನ್ನ ತೊಡೆ ಭೀಮನ ಗದಾದಂಡದಿಂದ ಮುರಿದು ನಿನಗೆ ಸಾವು ಬರಲಿ' ಎಂದು ಶಪಿಸುತ್ತಾರೆ. ವಿದುರನು ಮೈತ್ರೇಯರನ್ನು ಶಾಂತರಾಗುವಂತೆ ವಿನಂತಿಸಿದಾಗ, ವಿದುರ ಮನಸ್ಸು ಮಾಡಿದರೆ ಮಾತ್ರ ಸುಯೋಧನನನ್ನು ರಕ್ಷಿಸಿಕೊಳ್ಳಬಹುದು ಎಂದು ಪರಿಹಾರ ನುಡಿಯುತ್ತಾರೆ. ಸುಯೋಧನನ ಅಹಂಕಾರವೇ ಅವನಿಗೆ ಮುಳುವಾಯಿತು ಎಂಬುದು ಇತಿಹಾಸ.

ಸ್ವಾಭಿಮಾನದ ಹೆಸರಿನಲ್ಲಿ ಸ್ವಾರ್ಥವನ್ನು, ಅಹಂಕಾರವನ್ನು ಕಲಿಯುತ್ತಿರುವ ನಮ್ಮ ಮಕ್ಕಳನ್ನು ಬದುಕೆಂಬ ಗದಾದಂಡ ಶಿಕ್ಷಿಸುವ ಮೊದಲು, ಗುರುಗಳಾಗಿರುವ ನಾವು ವಿದುರನಂತೆ ಪೊರೆಯಬಲ್ಲೆವೇ? ನಿಜವಾದ ಶಿಕ್ಷಣವೆಂದರೆ ನಮ್ಮ ಮನೋಧರ್ಮ ಮತ್ತು ಇತರರೊಂದಿಗಿನ ವರ್ತನೆ. ಇವೆರಡೂ ನಮ್ಮ ವ್ಯಕ್ತಿತ್ವವನ್ನು ನಿರೂಪಿಸುತ್ತವೆ, ಅಂಕಗಳಲ್ಲ ಎಂಬುದನ್ನು ನಾವೇ ಅರಿಯದೆ ಹೋದರೆ ಶಿಕ್ಷಣದ ನಿಜ ಉದ್ದೇಶವೇ ಕಳೆದುಹೋದಂತೆ.

ವಾಚಕರ ವಾಣಿ

ಬೀದಿನಾಯಿ ಹಾವಳಿಗೆ ಕೊನೆಯಿಲ್ಲವೇ?

ಜಮಖಂಡಿಯಲ್ಲಿ ಬೀದಿ ನಾಯಿಗಳು 40 ದಿನಗಳಲ್ಲಿ 350 ಜನರನ್ನು ಕಚ್ಚಿರುವುದು ಮತ್ತು ಒಂಬತ್ತು ಆಡುಗಳನ್ನು ಕಚ್ಚಿ ಕೊಂದುಹಾಕಿರುವುದು ವರದಿಯಾಗಿದೆ. ಬೀದಿನಾಯಿಗಳ ಹಾವಳಿ ಎಲ್ಲ ಊರುಗಳಲ್ಲಿಯೂ ಅತಿಯಾಗಿದೆ. ನಾಯಿಗಳು ಗುಂಪುಗೂಡಿದಾಗ ಅವುಗಳಿಗೆ ಬೇಟೆಯಾಡುವ ಹುಕಿ ನೈಸರ್ಗಿಕವಾಗಿ ಬಂದುಬಿಡುತ್ತದೆ. ಆಗ ಅವು ಅಶಕ್ತರಾದ ವೃದ್ಧರು, ಮಕ್ಕಳು ಮತ್ತು ಆಡುಗಳಂತಹ ಪ್ರಾಣಿಗಳ ಮೇಲೆ ಎರಗುತ್ತವೆ. ಹತ್ತಿರದಲ್ಲಿ ಕಾಡಿದ್ದರೆ ನಾಯಿಗಳು ನುಗ್ಗಿ ಜಿಂಕೆಗಳನ್ನು ಬೇಟೆಯಾಡಿದ ವರದಿಗಳಿವೆ.

ನಮ್ಮ ಮನೆ ಪಕ್ಕದಲ್ಲಿ ಒಂದು ಹಂದಿ ಆರು ಮರಿಗಳನ್ನು ಹಾಕಿತ್ತು. ಸುತ್ತಮುತ್ತಲ ಮನೆಯ ನಾಯಿಗಳು ಹೊಂಚು ಹಾಕಿ ಒಂದೊಂದಾಗಿ ಎಲ್ಲ ಮರಿಗಳನ್ನೂ ತಿಂದುಹಾಕಿದವು. ಕೊನೆಯ ಮರಿಯನ್ನೂ ಕಳೆದುಕೊಂಡಾಗ ತಾಯಿ ಹಂದಿ ಗುರ್ ಗುರ್ ಎಂದು ಬಹಳ ಹೊತ್ತಿನವರೆಗೆ ಅತ್ತಿಂದಿತ್ತ ಓಡಾಡುತ್ತಿದ್ದುದು ಕರುಣಾಜನಕವಾಗಿತ್ತು. ನಾಯಿ ಪ್ರೀತಿಯೊಂದೇ ಪ್ರಾಣಿಪ್ರೀತಿಯಲ್ಲ. ನಾಯಿಗಳಿಗೆ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡುವುದನ್ನು ಸ್ಥಳೀಯ ಆಡಳಿತಗಳು ಗಂಭೀರವಾಗಿ ಪರಿಗಣಿಸಬೇಕು ಮತ್ತು ನಾಯಿಗಳು ಕ್ರೋಧದಿಂದ ವರ್ತಿಸುವುದಕ್ಕೆ ಕಾರಣವಾದ ಅಂಶಗಳನ್ನು ಪತ್ತೆಹಚ್ಚಿ ನಿಗ್ರಹಕ್ಕೆ ಕ್ರಮ ಜರುಗಿಸಬೇಕು.

ಪ್ರೊ. ಶಶಿಧರ ಪಾಟೀಲ್, ಬಾಗಲಕೋಟೆ

ನಂಬಿಕೆ ಉಳಿಯುವಂತಾಗಲಿ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರನ್ನು ಆಂಧ್ರಪ್ರದೇಶದ ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದಕ್ಕೆ ದೇಶದಾದ್ಯಂತ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತಿವೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳನ್ನು ರಾಜ್ಯಪಾಲರನ್ನಾಗಿ ನೇಮಕ ಮಾಡಿರುವುದು ಇದೇ ಮೊದಲಲ್ಲ. ಕೇಂದ್ರ ಸರ್ಕಾರ ಹಾಗೂ ನ್ಯಾಯಾಂಗದ ನಡುವೆ ಇತ್ತೀಚೆಗೆ ಹಗ್ಗಜಗ್ಗಾಟ ನಡೆಯುತ್ತಲೇ ಇದೆ. ಈ ಕಾರಣದಿಂದ, ನಜೀರ್ ಅವರ ನೇಮಕ ಮತ್ತೊಂದು ಆಯಾಮ ಪಡೆದುಕೊಂಡಿದೆ.

ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಿಗೆ ನಿವೃತ್ತಿ ನಂತರ ದೇಶದಲ್ಲಿ ವಕೀಲ ವೃತ್ತಿ ಕೈಗೊಳ್ಳಲು ಅವಕಾಶ ಇಲ್ಲ. ಇಂತಹ ನಿರ್ಬಂಧಗಳನ್ನು ಬೇರೆ ಬೇರೆ ವಿಚಾರಗಳಿಗೂ ಅನ್ವಯಿಸುವಂತೆ ಸಂವಿಧಾನಕ್ಕೆ ತಿದ್ದುಪಡಿ ತರಬೇಕಾಗಿರುವುದು ಇಂದಿನ ಅಗತ್ಯಗಳಲ್ಲಿ ಒಂದು. ನಿವೃತ್ತಿಯ ನಂತರ ನ್ಯಾಯಮೂರ್ತಿಗಳ ನೇಮಕದ ಬಗ್ಗೆ ಬಿಜೆಪಿ ಮುಖಂಡರಾದ ದಿವಂಗತ ಅರುಣ್ ಜೇಟ್ಲಿಯವರು, 'ನ್ಯಾಯಮೂರ್ತಿಗಳು ನ್ಯಾಯಮೂರ್ತಿಗಳನ್ನು ನೇಮಿಸುವ ವಿಶ್ವದ ಏಕೈಕ ದೇಶ ನಮ್ಮದು. ನಿವೃತ್ತಿಪೂರ್ವದ ತೀರ್ಪುಗಳು ನಿವೃತ್ತಿಯ ನಂತರದ ಸ್ಥಾನಮಾನಗಳಿಂದ ಪ್ರಭಾವಿತವಾಗಿವೆ' ಎಂದು ಬಹಳ ಕಠಿಣವಾಗಿ ಟೀಕಿಸಿದ್ದರು. ನಿವೃತ್ತಿಯ ನಂತರ ಸಾಂವಿಧಾನಿಕ ಹುದ್ದೆಗಳಿಗೆ ನ್ಯಾಯಮೂರ್ತಿಗಳ ನೇಮಕ ಕೊನೆಯಾಗಲಿ. ಶ್ರೀಸಾಮಾನ್ಯರಿಗೆ ನ್ಯಾಯಾಂಗ ಹಾಗೂ ನ್ಯಾಯಮೂರ್ತಿಗಳ ಮೇಲೆ ನಂಬಿಕೆ ಉಳಿಯುವಂತಾಗಲಿ.

ಪ್ರಸಾದ್ ಜಿ.ಎಂ., ಮೈಸೂರು

ಸ್ಥಳೀಯ ಭಾಷೆ ಬಾರದಿದ್ದರೆ...

ಅಂದು ಬ್ಯಾಂಕಿನ ಕೌಂಟರಿನಲ್ಲಿದ್ದ ನನ್ನ ಬಳಿ ಗ್ರಾಹಕರೊಬ್ಬರು ಸಿಡಿಮಿಡಿಯಿಂದ ಬಂದು ಏರುಧ್ವನಿಯಲ್ಲಿ 'ಮ್ಯಾನೇಜರ್ ಇದ್ದಾರಾ?' ಎಂದು ವಿಚಾರಿಸಿದರು. 'ಕ್ಯಾಬಿನ್‌ನಲ್ಲಿ ಇದ್ದಾರೆ, ವಿಷಯ ಏನೆಂದು ಹೇಳಿ' ಎಂದೆ. ಅದನ್ನು ಲೆಕ್ಕಿಸದೆ ಕ್ಯಾಬಿನ್‌ನತ್ತ ಸಾಗಿ ಒಳಗಿದ್ದ ಮ್ಯಾನೇಜರ್ ಬಳಿ ಏರುಧ್ವನಿಯಲ್ಲೇ ಕೆಲಹೊತ್ತು ಅದೇನೋ ಹೇಳಿದರು. ನಂತರ ಹೊರಬಂದು ನನ್ನ ಬಳಿ 'ನನ್ನ ಸಾಲ ಮಂಜೂರಿಗೆ ಸಂಬಂಧಿಸಿದಂತೆ ಮ್ಯಾನೇಜರ್‌ಗೆ ಸರಿಯಾಗಿ ಅಂದಿದೀನಿ. ಆದರೂ ನಗುತ್ತಲೇ ಇದ್ದಾರೆ' ಅಂದರು.

'ಈ ಹತ್ತು ದಿನಗಳಲ್ಲಿ ಬಂದ ಮೂರನೇ ಮ್ಯಾನೇಜರ್ ಇವರು. ನೀವು ಅವರ ಜೊತೆ ಯಾವ ಭಾಷೆಯಲ್ಲಿ ಮಾತಾಡಿದಿರಿ?' ಎಂದು ವಿಚಾರಿಸಿದೆ. 'ಕನ್ನಡದಲ್ಲಿ' ಅಂದರು. 'ಅವರು ಒಡಿಶಾದವರು, ಅವರಿಗೆ ಕನ್ನಡ ಬರುವುದಿಲ್ಲ' ಎಂದಾಗ ಗ್ರಾಹಕರ ಮುಖ ಪೆಚ್ಚಾಗಿತ್ತು! ಬ್ಯಾಂಕ್‌ಗಳಲ್ಲಿ ಸ್ಥಳೀಯ ಭಾಷೆ, ಕನ್ನಡಕ್ಕೆ ಆದ್ಯತೆ ಇಲ್ಲದ್ದಕ್ಕೆ ತಾಜಾ ಉದಾಹರಣೆ ಇದು. ಪತ್ರಿಕೆಯ ಸಂಪಾದಕೀಯ (ಪ್ರ.ವಾ., ಫೆ. 14) ಬ್ಯಾಂಕ್‌ನ ಉನ್ನತಾಧಿಕಾರಿಗಳ ಗಮನ ಸೆಳೆಯುವಂತಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ನಗರದಲ್ಲಿ ಟ್ರ್ಯಾಕ್ಟರ್ ನಿಷೇಧ ಲೇಸು

ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಟ್ರ್ಯಾಕ್ಟರ್ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸುವ ಅಗತ್ಯವಿದೆ ಎಂಬ ಚಿ. ಉಮಾಶಂಕರ್ ಅವರ ಅಭಿಪ್ರಾಯದಲ್ಲಿ (ವಾ.ವಾ., ಫೆ. 13) ಸತ್ಯಾಂಶವಿದೆ. ಒಬ್ಬ ನಿವೃತ್ತ ಸಂಚಾರ ಪೊಲೀಸ್ ಅಧಿಕಾರಿಯಾಗಿ ಈ ಹೇಳಿಕೆಯನ್ನು ಅನುಮೋದಿಸುತ್ತೇನೆ. ಟ್ರ್ಯಾಕ್ಟರ್ ನಿಷೇಧದಿಂದ ಅಪಘಾತಗಳ ಸಂಖ್ಯೆ ಕಡಿಮೆಯಾಗುತ್ತದೆ. ಏಕೆಂದರೆ ಹೆಚ್ಚಿನ ಟ್ರ್ಯಾಕ್ಟರ್ ಚಾಲಕರ ಬಳಿ ಡ್ರೈವಿಂಗ್ ಲೈಸೆನ್ಸ್ ಇರುವುದೇ ಇಲ್ಲ ಹಾಗೂ ಅವರು ಸಂಚಾರ ನಿಯಮಗಳ ಅರಿವಿಲ್ಲದ, ಸೂಚನಾ ಫಲಕಗಳನ್ನು ಓದಲು ಬಾರದ ಅನಕ್ಷರಸ್ಥರಾಗಿರುತ್ತಾರೆ. ಇವರಿಂದ ಉಂಟಾಗುವ ಅಪಘಾತದಿಂದ ನೊಂದ ಕುಟುಂಬದವರಿಗೆ ಪರಿಹಾರ ಸಿಗುವುದಿಲ್ಲ. ಟ್ರ್ಯಾಕ್ಟರ್‌ಗಳು ರಸ್ತೆಗಳಲ್ಲಿ ನಿಧಾನವಾಗಿ ಚಲಿಸುವುದರಿಂದ ಸಂಚಾರಕ್ಕೆ ಅಡಚಣೆಯಾಗುತ್ತದೆ. ಈ ಚಾಲಕರು ಅತಿ ಹೆಚ್ಚಿನ ಡೆಸಿಬಲ್ ಇರುವ ಸಂಗೀತ ಹಾಕುವುದರಿಂದ ಶಬ್ದ ಮಾಲಿನ್ಯದ ಜೊತೆಗೆ ಇತರ ವಾಹನ ಚಾಲಕರಿಗೆ ಬಹಳ ಇರುಸುಮುರುಸು ಉಂಟಾಗುತ್ತದೆ. ಈ ಕಾರಣದಿಂದ ರಸ್ತೆಯಲ್ಲಿ ಗಲಾಟೆಗಳಾಗಿ ನಾವು ರಾಜಿ ಮಾಡಿ ಕಳುಹಿಸಿದ ಉದಾಹರಣೆಗಳಿವೆ. ಟ್ರ್ಯಾಕ್ಟರ್‌ಗಳಲ್ಲಿ ಬ್ರೇಕ್ ವೈಫಲ್ಯ ಅತಿ ಹೆಚ್ಚೇ ಇರುವುದರಿಂದ ಅಪಘಾತಗಳು ಸಾಮಾನ್ಯ. ಹೀಗಾಗಿ ರಾಜಧಾನಿಯಲ್ಲಿ ಟ್ರ್ಯಾಕ್ಟರ್ ಓಡಾಟವನ್ನು ಸಂಪೂರ್ಣವಾಗಿ ನಿಷೇಧಿಸುವುದೇ ಲೇಸು.

ಎನ್.ಆರ್.ಮೂರ್ತಿ, ಬೆಂಗಳೂರು

ಚಿರತೆಯನ್ನು ಹೊತ್ತುತಂದ ಸಾಹಸಿ

ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿ ಗ್ರಾಮದಲ್ಲಿ ಪಶುವೈದ್ಯೆಯೊಬ್ಬರು ಬಾವಿಗಿಳಿದು ಚಿರತೆಯನ್ನು ರಕ್ಷಿಸಿದ ವರದಿ (ಪ್ರ.ವಾ., ಫೆ. 14) ಓದಿ ಖುಷಿಯಾಯಿತು. ಅವರು ಬರೀ ಅರಿವಳಿಕೆ ಮದ್ದು ನೀಡಿ ಮೇಲೆ ಬಾರದೆ, ತಾವಿದ್ದ ಬೋನಿಗೆ ಚಿರತೆಯನ್ನು ಹಾಕಿಕೊಂಡು ಬಂದದ್ದು ಸಾಹಸವೇ ಸರಿ. ಅವಕಾಶ ನೀಡಿದರೆ ಪುರುಷರಿಗಿಂತ ತಾವೇನೂ ಕಡಿಮೆ ಇಲ್ಲ ಎಂಬುದನ್ನು ಈಚಿನ ದಿನಮಾನಗಳಲ್ಲಿ ಹೆಣ್ಣುಮಕ್ಕಳು ಸಾಬೀತು ಮಾಡಿ ತೋರಿಸುತ್ತಿದ್ದಾರೆ. ಸ್ತ್ರೀ ಸ್ವಾತಂತ್ರ್ಯ, ಸಬಲೀಕರಣ ಇಂದು ಸಶಕ್ತಗೊಳ್ಳುತ್ತಿರುವುದು ಉತ್ತಮ ಸಮಾಜ ನಿರ್ಮಾಣವಾಗುತ್ತಿರುವುದರ ಲಕ್ಷಣ.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇ.ಡಿ, ಐ.ಟಿ, ಸಿಬಿಐ ಸದಾ 'ಸಕ್ರಿಯ'

ಗುಜರಾತ್‌ನಲ್ಲಿ 2002ರಲ್ಲಿ ನಡೆದ ಕೋಮು ಗಲಭೆಯಲ್ಲಿ ಆಗ ಅಲ್ಲಿನ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರ ಪಾತ್ರದ ಕುರಿತು ಬಿಬಿಸಿ ಸಾಕ್ಷ್ಯಚಿತ್ರವನ್ನು ಪ್ರಸಾರ ಮಾಡಿತ್ತು. ಅದಾಗಿ ಕೆಲವೇ ವಾರಗಳಲ್ಲಿ ಬಿಬಿಸಿಯ ದೆಹಲಿ ಮತ್ತು ಮುಂಬೈನ ಕಚೇರಿಗಳಲ್ಲಿ ಆದಾಯ ತೆರಿಗೆ ಇಲಾಖೆಯು 'ಪರಿಶೀಲನೆ' ನಡೆಸಿದೆ. ತನಿಖಾ ಸಂಸ್ಥೆಗಳನ್ನು ಕೇಂದ್ರ ಸರ್ಕಾರವು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಬಿಜೆಪಿವಿರೋಧಿ ಪಕ್ಷಗಳ ಮುಖಂಡರು ಹಲವು ಬಾರಿ ಆರೋಪಿಸಿದ್ದಾರೆ. ಈ ಪಕ್ಷಗಳ ಹಲವು ಮುಖಂಡರಿಗೆ ಸೇರಿದ ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ, ಸಿಬಿಐಯಿಂದ ಶೋಧನೆ ನಡೆದ ಹಲವು ಉದಾಹರಣೆಗಳು ಇವೆ. ಸಚಿವ ಸ್ಥಾನದಲ್ಲಿದ್ದವರೂ ಸೇರಿದಂತೆ ಹಲವರ ಬಂಧನವೂ ಆಗಿದೆ. ಮಾಧ್ಯಮ ಸಂಸ್ಥೆಗಳೂ ಈ ಶೋಧನೆಯಿಂದ ಹೊರತಾಗಿಲ್ಲ. ಅಂತಹ ಇತ್ತೀಚಿನ ಕೆಲವು ಪ್ರಕರಣಗಳು ಇಲ್ಲಿವೆ:

ದೈನಿಕ್ ಭಾಸ್ಕರ್‌ಗೆ ಐಟಿ ಬಿಸಿ

ಉತ್ತರ ಭಾರತದ ಪ್ರಮುಖ ವೃತ್ತ ಪತ್ರಿಕೆಗಳಲ್ಲಿ ದೈನಿಕ್ ಭಾಸ್ಕರ್ ಸಹ ಒಂದು. 12 ರಾಜ್ಯಗಳಲ್ಲಿ ಆವೃತ್ತಿ ತರುತ್ತಿರುವ ಈ ಪತ್ರಿಕೆ 65 ವರ್ಷಕ್ಕಿಂತ ಹೆಚ್ಚು ಕಾಲದಿಂದ ಅಸ್ತಿತ್ವದಲ್ಲಿದೆ. ಸರ್ಕಾರದ ನೀತಿಗಳ ವಿರುದ್ಧದ ವರದಿಗಾರಿಕೆಗೆ ಈ ಪತ್ರಿಕೆ ಹೆಸರಾಗಿದೆ.

ಪರಿಶೀಲನೆ: ಆದಾಯ ತೆರಿಗೆ ಪಾವತಿಯಲ್ಲಿ ಅಕ್ರಮ ಎಸಗಲಾಗಿದೆ ಎಂಬ ಆರೋಪದಲ್ಲಿ 'ದೈನಿಕ್ ಭಾಸ್ಕರ್' ಪ್ರಧಾನ ಕಚೇರಿ ಮತ್ತು ಪ್ರಾದೇಶಿಕ ಕಚೇರಿಗಳ ಮೇಲೆ 2021ರ ಜುಲೈ 12ರಂದು ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು. ದೇಶದ ಒಟ್ಟು ಆರು ರಾಜ್ಯಗಳಲ್ಲಿ ಏಕಕಾಲದಲ್ಲಿ ಪರಿಶೀಲನೆ ನಡೆದಿತ್ತು.

ಪರಿಶೀಲನೆಗೂ ಮುನ್ನ: 'ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಉತ್ತರ ಪ್ರದೇಶದ ಗಂಗಾ ತಟದಲ್ಲಿ ಹೆಣಗಳನ್ನು ಮನಬಂದಂತೆ ವಿಲೇವಾರಿ ಮಾಡಲಾಗಿದೆ. ಸರ್ಕಾರವು ಸಾವಿನ ಸಂಖ್ಯೆಯನ್ನು ಮುಚ್ಚಿಡಲು ಯತ್ನಿಸುತ್ತಿದೆ. ಆದರೆ, ಗಂಗೆ ತನ್ನ ಒಡಲಲ್ಲಿ ಇರುವ ಹೆಣಗಳನ್ನು ಹೊರಹಾಕುತ್ತಿದ್ದಾಳೆ' ಎಂದು ದೈನಿಕ್ ಭಾಸ್ಕರ್ ಪತ್ರಿಕೆಯು 2021ರ ಜೂನ್ ಕೊನೆಯ ವಾರದಲ್ಲಿ ವಿಸ್ತೃತ ವರದಿ ಪ್ರಕಟಿಸಿತ್ತು.

ಸರ್ಕಾರದ ಕೋವಿಡ್ ನೀತಿ ವಿಫಲವಾಗಿದೆ ಎಂದು ವರದಿ ಪ್ರಕಟಿಸಿದ ಕಾರಣದಿಂದಲೇ ದೈನಿಕ್ ಭಾಸ್ಕರ್ ಮೇಲೆ ಐ.ಟಿ ಪರಿಶೀಲನೆ ನಡೆಸಲಾಗಿದೆ. ಈ ಮೂಲಕ ಪತ್ರಕರ್ತರನ್ನು ಸರ್ಕಾರವು ಬೆದರಿಸುತ್ತಿದೆ ಎಂದು ವಿರೋಧ ಪಕ್ಷಗಳ ನಾಯಕರು ಮತ್ತು ಹಲವು ಪತ್ರಕರ್ತರು ಆರೋಪಿಸಿದ್ದರು.

ನ್ಯೂಸ್‌ಕ್ಲಿಕ್, ನ್ಯೂಸ್‌ಲಾಂಡ್ರಿ

ನ್ಯೂಸ್‌ಕ್ಲಿಕ್ ಮತ್ತು ನ್ಯೂಸ್‌ಲಾಂಡ್ರಿ ಎರಡೂ ಪ್ರತ್ಯೇಕ ಆನ್‌ಲೈನ್ ಸುದ್ದಿ ಪೋರ್ಟಲ್‌ಗಳು.

ಶೋಧನೆ: 2021ರ ಫೆಬ್ರುವರಿಯಲ್ಲಿ ಎರಡೂ ಸಂಸ್ಥೆಗಳ ಕಚೇರಿಗಳು, ಸಂಸ್ಥಾಪಕರ ಮನೆ ಮತ್ತು ಸಂಪಾದಕರ ಮನೆಗಳಲ್ಲಿ ಆದಾಯ ತೆರಿಗೆ ಇಲಾಖೆ ಮತ್ತು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಶೋಧನೆ ನಡೆಸಿದ್ದರು. ವಿದೇಶಿ ದೇಣಿಗೆಯನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ, ತೆರಿಗೆ ವಂಚಿಸಲಾಗಿದೆ ಎಂಬ ಆರೋಪದ ಅಡಿಯಲ್ಲಿ ಶೋಧನೆ ನಡೆಸಲಾಗಿತ್ತು.

ಶೋಧನೆಗೂ ಮುನ್ನ: ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದ ನೂತನ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಗಳಲ್ಲಿ ರೈತರು ನಡೆಸುತ್ತಿದ್ದ ಪ್ರತಿಭಟನೆಯ ಸುದ್ದಿಗಳನ್ನು ಈ ಎರಡೂ ಪೋರ್ಟಲ್‌ಗಳು ನಿರಂತರವಾಗಿ ಪ್ರಕಟಿಸಿದ್ದವು.

ಸರ್ಕಾರದ ಕಾಯ್ದೆಗಳ ವಿರುದ್ಧ ನಡೆದ, ನಡೆಯುತ್ತಿರುವ ಪ್ರತಿಭಟನೆಯನ್ನು ವರದಿ ಮಾಡಿದ ಕಾರಣದಿಂದಲೇ ಈ ಸುದ್ದಿ ಪೋರ್ಟಲ್‌ಗಳ ಮೇಲೆ ಐ.ಟಿ ಶೋಧನೆ ನಡೆಸಲಾಗಿದೆ ಎಂದು ರೈತ ಸಂಘಟನೆಗಳು ಆರೋಪಿಸಿದ್ದವು.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರನ್ನು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯ ತನಿಖೆಗೆ ಒಳಪಡಿಸಿದ್ದನ್ನು ಖಂಡಿಸಿ 2022ರ ಜೂನ್‌ನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದರು ಪಿಟಿಐ ಚಿತ್ರ

ಭಾರತ್ ಸಮಾಚಾರ್ ಕಚೇರಿಯಲ್ಲಿ ಪರಿಶೀಲನೆ

ಉತ್ತರ ಪ್ರದೇಶದ ಪ್ರಮುಖ ಸುದ್ದಿವಾಹಿನಿಗಳಲ್ಲಿ ಭಾರತ್ ಸಮಾಚಾರ್ ಸಹ ಒಂದು. ಸರ್ಕಾರದ ನೀತಿಗಳ ಕಟುವಿಮರ್ಶೆಗೆ ಈ ವಾಹಿನಿಯ ಕೆಲವು ಕಾರ್ಯಕ್ರಮಗಳು ಹೆಸರುವಾಸಿ.

ಪರಿಶೀಲನೆ: ಆದಾಯ ತೆರಿಗೆ ಪಾವತಿಯಲ್ಲಿ ಮತ್ತು ಕಂಪನಿಗೆ ಸಂಬಂಧಿಸಿದ ಖರೀದಿಯಲ್ಲಿ ಅಕ್ರಮ ಎಸಗಲಾಗಿದೆ ಎಂದು ಆರೋಪಿಸಿ 2021ರ ಜುಲೈ 12ರಂದು ಭಾರತ್ ಸಮಾಚಾರ್ ವಾಹಿನಿಯ ಕೇಂದ್ರ ಕಚೇರಿಯಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಪರಿಶೀಲನೆ ನಡೆಸಿದ್ದರು.

ಪರಿಶೀಲನೆಗೂ ಮುನ್ನ: 'ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಕೋವಿಡ್ ಕಾರಣಕ್ಕೆ ಸಂಭವಿಸಿದ ಸಾವುಗಳ ಸಂಖ್ಯೆಯನ್ನು ಉತ್ತರ ಪ್ರದೇಶ ಸರ್ಕಾರ ಮುಚ್ಚಿಡುತ್ತಿದೆ. ಜತೆಗೆ ಆಮ್ಲಜನಕ ಪೂರೈಕೆಯಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಈ ಕಾರಣದಿಂದಲೇ ಹೆಚ್ಚಿನ ಸಾವುಗಳು ಸಂಭವಿಸಿವೆ' ಎಂದು 2021ರ ಜೂನ್ ಮತ್ತು ಜುಲೈನಲ್ಲಿ ಭಾರತ್ ಸಮಾಚಾರ್ ಸರಣಿ ವರದಿಗಳನ್ನು ಪ್ರಸಾರ ಮಾಡಿತ್ತು.

ಉತ್ತರ ಪ್ರದೇಶ ಸರ್ಕಾರವು ಕೋವಿಡ್ ನಿರ್ವಹಣೆಯಲ್ಲಿ ವಿಫಲವಾಗಿದೆ ಎಂದು ವರದಿ ಮಾಡಿದ್ದರಿಂದಲೇ ಭಾರತ್ ಸಮಾಚಾರ್ ಮೇಲೆ ಐ.ಟಿ ಪರಿಶೀಲನೆ ನಡೆಸಲಾಗಿದೆ ಎಂದು ಎಸ್‌ಪಿ, ಬಿಎಸ್‌ಪಿ ಮತ್ತು ಕಾಂಗ್ರೆಸ್ ಆರೋಪಿಸಿದ್ದವು.

'ನೀವು ಎಷ್ಟು ಬೇಕಾದರೂ ದನಿ ಅಡಗಿಸಲು ಯತ್ನಿಸಿ, ನಾವೂ ಅಷ್ಟೇ ದೊಡ್ಡ ದನಿಯಲ್ಲಿ ಸತ್ಯ ಹೇಳುತ್ತೇವೆ. ನಾವು ಮೊದಲೂ ಹೆದರುತ್ತಿರಲಿಲ್ಲ, ಈಗಲೂ ಹೆದರುವುದಿಲ್ಲ. ಸತ್ಯದರೊಟ್ಟಿಗೆ ಮೊದಲೂ ನಿಂತಿದ್ದೆವು, ಮುಂದೆಯೂ ನಿಲ್ಲುತ್ತೇವೆ. ನೀವು ಏನುಬೇಕಾದರೂ ಮಾಡಿ, ನಾವು ಸತ್ಯವನ್ನೇ ಹೇಳುತ್ತೇವೆ' ಎಂದು ಭಾರತ್ ಸಮಾಚಾರ್ ಟ್ವೀಟ್ ಮಾಡಿತ್ತು.

ಚುನಾವಣೆಗೂ ಮುನ್ನ ಬಂಗಾಳಕ್ಕೆ ಬಂದಿದ್ದ ಇ.ಡಿ., ಸಿಬಿಐ

ಅಕ್ರಮದ ಆರೋಪ: ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಈ ಹಿಂದಿನ ಟಿಎಂಸಿ ಸರ್ಕಾರದಲ್ಲಿದ್ದ ಹಲವರ ಮೇಲೆ ಅಕ್ರಮ ಗಣಿಗಾರಿಕೆಯ ಆರೋಪವಿದೆ. ನಾಲ್ಕು ಜಿಲ್ಲೆಗಳಲ್ಲಿ ಕಲ್ಲಿದ್ದಲು ಅಕ್ರಮ ಗಣಿಗಾರಿಕೆ ನಡೆದಿದ್ದು, ರಾಜಕಾರಣಿಗಳು ಹಾಗೂ ಅಧಿಕಾರಿಗಳ ನೆರವಿನಿಂದ ಕಲ್ಲಿದ್ದಲನ್ನು ಅಕ್ರಮವಾಗಿ ಸಾಗಣೆ ಮಾಡಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹಾಗೂ ಸಿಬಿಐ ಆರೋಪಿಸಿದ್ದವು. ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಪ್ರಕರಣ ದಾಖಲಿಸಿಕೊಂಡ ಇ.ಡಿ, ರಾಜ್ಯದ 45 ಕಡೆ ಶೋಧನೆ ನಡೆಸಿತ್ತು.

'ರಾಜಕೀಯ ಪ್ರೇರಿತ': ಟಿಎಂಸಿ ಪ್ರಮುಖ ನಾಯಕ ಹಾಗೂ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ, ಅಭಿಷೇಕ್ ಪತ್ನಿ ರುಜಿರಾ ಬ್ಯಾನರ್ಜಿ ಹಾಗೂ ಅವರ ತಂಗಿ ಮೇನಕಾ ಗಂಭೀರ್ ಅವರನ್ನು ತನಿಖಾ ಸಂಸ್ಥೆಗಳು ವಿಚಾರಣೆಗೆ ಒಳಪಡಿಸಿದವು. 2021ರಲ್ಲಿ ಪಶ್ಚಿಮ ಬಂಗಾಳ ಚುನಾವಣೆ ಘೋಷಣೆಗೂ ಮುನ್ನ ನಡೆದ ಈ ಘಟನೆಗಳು ರಾಜಕೀಯ ಪ್ರೇರಿತ ಎಂದು ಟಿಎಂಸಿ ಆರೋಪಿಸಿತು. ವಿಚಾರಣೆ ಬಳಿಕ ಪ್ರತಿಕ್ರಿಯಿಸಿದ್ದ ಅಭಿಷೇಕ್, 'ಬಿಜೆಪಿಗೆ ಅಧಿಕಾರ ಹಿಡಿಯಲು ಸಾಧ್ಯವಾಗದ ರಾಜ್ಯಗಳಲ್ಲಿ ಇಂತಹ ದಾಳಿಗಳನ್ನು ನಡೆಸುತ್ತಿದೆ. ರಾಜಕೀಯವಾಗಿ ನನ್ನನ್ನು ಎದುರಿಸಲಾಗದ ಬಿಜೆಪಿ, ತನಿಖಾ ಸಂಸ್ಥೆಗಳನ್ನು ಕಳುಹಿಸಿದೆ' ಎಂದು ಆರೋಪಿಸಿದ್ದರು.

'ಬಿಜೆಪಿ ರಾಜ್ಯಗಳಲ್ಲಿ ಸತ್ಯ ಹರಿಶ್ಚಂದ್ರನ ವಂಶಸ್ಥರು ಇದ್ದಾರೆಯೇ?'

₹100 ಕೋಟಿ ಲಂಚದ ಆರೋಪ: ದೆಹಲಿ ಸರ್ಕಾರದಲ್ಲಿ ನಡೆದಿದೆ ಎನ್ನಲಾದ ಅಬಕಾರಿ ನೀತಿ ಹಗರಣವು ಬಿಜೆಪಿ ಹಾಗೂ ಎಎಪಿ ನಡುವಿನ ತಿಕ್ಕಾಟಕ್ಕೆ ಮತ್ತೊಂದು ಅಸ್ತ್ರವಾಗಿದೆ. ಇದರಲ್ಲಿ ಬಿಆರ್‌ಎಸ್ ಹೆಸರೂ ತಳಕು ಹಾಕಿಕೊಂಡಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಮಗಳು ಕವಿತಾ ಅವರು ಪ್ರಕರಣದ ಆರೋಪಿಗಳಾಗಿದ್ದಾರೆ. ಕೇಜ್ರಿವಾಲ್ ಹಾಗೂ ಸಿಸೋಡಿಯಾ ಅವರು ಲಂಚ ಪಡೆದಿದ್ದಾರೆ ಎಂಬುದು ಸಿಬಿಐ ಆರೋಪ. 'ಕವಿತಾ ಹಾಗೂ ಅವರ ಪತಿ ಶರತ್ ನಿಯಂತ್ರಣದಲ್ಲಿರುವ ಸೌತ್ ಗ್ರೂಪ್ ಕಂಪನಿಯು ಎಎಪಿ ನಾಯಕರಿಗೆ ₹100 ಕೋಟಿ ನೀಡಿದೆ' ಎಂದೂ ಅದು ಆರೋಪಿಸಿದೆ.

ಎಎಪಿ ಜೊತೆಗೆ ಬಿಆರ್‌ಎಸ್: ತನಿಖೆಯ ಭಾಗವಾಗಿ, ಸಿಸೋಡಿಯಾ ಹಾಗೂ ಕವಿತಾ ಅವರನ್ನು ಸಿಬಿಐ ಕಳೆದ ವರ್ಷ ವಿಚಾರಣೆಗೆ ಒಳಪಡಿಸಿತ್ತು. ಕವಿತಾ ಅವರ ಲೆಕ್ಕಪರಿಶೋಧಕನನ್ನು ಬಂಧಿಸಿತ್ತು. ಸಿಸೋಡಿಯಾ ಅವರನ್ನು ಗುರಿಯಾಗಿಸಿ ಶೋಧನೆ ನಡೆಸಿತ್ತು. 'ಲಾಕರ್‌ನಲ್ಲಿ ಪತ್ನಿ ಹಾಗೂ ಮಕ್ಕಳಿಗೆ ಸೇರಿದ ₹70,000 ಮೌಲ್ಯದ ಚಿನ್ನಾಭರಣ ಹೊರತು ಸಿಬಿಐಗೆ ಏನೂ ಸಿಗಲಿಲ್ಲ. ನನಗೆ ಕ್ಲೀನ್‌ಚಿಟ್ ಸಿಕ್ಕಿದೆ' ಎಂದು ಸಿಸೋಡಿಯಾ ಹೇಳಿಕೊಂಡಿದ್ದರು. ಸಿಸೋಡಿಯಾ ಯಾವಾಗ ಬೇಕಾದರೂ ಬಂಧನಕ್ಕೆ ಒಳಗಾಗಬಹುದು ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದರು. 'ಪ್ರಧಾನಿ ಮೋದಿ ಅವರ ಒತ್ತಡದಲ್ಲಿ ಸಿಬಿಐ ಕೆಲಸ ಮಾಡುತ್ತಿದ್ದು, ಕೇಂದ್ರ ಸರ್ಕಾರವು ಕೀಳುಮಟ್ಟದ ರಾಜಕೀಯಕ್ಕೆ ಇಳಿದಿದೆ' ಎಂದು ಆರೋಪಿಸಿದ್ದರು. ಕೇಂದ್ರ ಸರ್ಕಾರವು, ತನಿಖಾ ಸಂಸ್ಥೆಗಳನ್ನು ಬಿಜೆಪಿಯೇತರ ಪಕ್ಷಗಳನ್ನು ಗುರಿಯಾಗಿಸಲು ಬಳಸಿಕೊಳ್ಳುತ್ತಿದೆ ಎಂದು ಬಿಆರ್‌ಎಸ್ ಸಹ ಆರೋಪಿಸಿತ್ತು. 'ಬಿಜೆಪಿ ಆಡಳಿತ ಇರುವ ರಾಜ್ಯಗಳಲ್ಲಿ ಸತ್ಯ ಹರಿಶ್ಚಂದ್ರನ ವಂಶಸ್ಥರು ಇದ್ದಾರೆಯೇ' ಎಂದು ಕಿಡಿಕಾರಿತ್ತು.

'ಮತ್ತೆ ಬರುವರು ಮೂವರು ಅಳಿಯಂದಿರು'

ಹೂಡಿಕೆಯ ಆರೋಪ: ಆರ್‌ಜೆಡಿ ನಾಯಕ ಲಾಲು ಪ್ರಸಾದ್ ರೈಲ್ವೆ ಸಚಿವರಾಗಿದ್ದಾಗ ನೇಮಕಾತಿಯಲ್ಲಿ ಹಗರಣ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಲಾಲು ಅವರ ಮಗ ತೇಜಸ್ವಿ ಯಾದವ್ ಅವರು ಗುರುಗ್ರಾಮದಲ್ಲಿ ನಿರ್ಮಾಣ ಹಂತದ ಮಾಲ್‌ನಲ್ಲಿ ಹೂಡಿಕೆ ಮಾಡಿದ್ದಾರೆ ಎಂಬ ಆರೋಪವೂ ಇತ್ತು. ಈ ಆರೋಪಗಳ ತನಿಖೆಗೆ ಮುಂದಾದ ಸಿಬಿಐ, ಬಿಹಾರದ ಪಟ್ನಾ ಸೇರಿದಂತೆ 24 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧನೆ ನಡೆಸಿತು.

ವಿಶ್ವಾಸಮತದ ಸಂದರ್ಭದಲ್ಲಿ ಶೋಧನೆ: ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಜೆಪಿ ಸಖ್ಯ ತೊರೆದು ಆರ್‌ಜೆಡಿ ಬೆಂಬಲದೊಂದಿಗೆ ಕಳೆದ ವರ್ಷ ಸರ್ಕಾರ ರಚಿಸಿದ್ದರು. ಅವರು ಸದನದಲ್ಲಿ ವಿಶ್ವಾಸಮತ ಯಾಚಿಸುವ ಸಂದರ್ಭದಲ್ಲಿ ಈ ಶೋಧನೆ ನಡೆದಿದ್ದು ವಿಶೇಷ. ಈ ದಾಳಿ ರಾಜಕೀಯ ಪ್ರೇರಿತವಾಗಿದ್ದು, ಸಿಬಿಐ, ಇ.ಡಿ, ಹಾಗೂ ಐಟಿ ಸಂಸ್ಥೆಗಳನ್ನು 'ಮೂವರು ಅಳಿಯಂದಿರು' ಎಂದು ಆರ್‌ಜೆಡಿಯ ತೇಜಸ್ವಿ ಯಾದವ್ ಕರೆದಿದ್ದರು. '2024ರ ಸಾರ್ವತ್ರಿಕ ಚುನಾವಣೆಗೆ ಮುನ್ನ 'ಮೂವರು ಅಳಿಯಂದಿರು' ಮತ್ತೆ ಬಿಹಾರಕ್ಕೆ ಬರಲಿದ್ದಾರೆ. ಆದರೆ ಮಹಾಮೈತ್ರಿಕೂಟವನ್ನು ಒಡೆಯಲು ಬಿಜೆಪಿಯಿಂದ ಆಗುವುದಿಲ್ಲ' ಎಂದು ಅವರು ಹೇಳಿದ್ದರು.

ಚುನಾವಣೆಗೂ ಮುನ್ನ...

- ತಮಿಳುನಾಡು ವಿಧಾನಸಭೆಗೆ ಮತದಾನ ನಡೆಯುವ ಕೆಲವು ದಿನಗಳ ಮುನ್ನ, ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರ ಪುತ್ರಿ ಸೆಂತಾಮರೈ ಅವರ ನಿವಾಸದಲ್ಲಿ ಇ.ಡಿ ಶೋಧನೆ ನಡೆಸಿತ್ತು
- ಉತ್ತರ ಪ್ರದೇಶದಲ್ಲಿ ವಿಧಾನಸಭಾ ಚುನಾವಣೆ ನಡೆಯುವ ಮುನ್ನ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರ ಆಪ್ತರ ಮೇಲೆ ಆದಾಯ ತೆರಿಗೆ ಇಲಾಖೆ ಶೋಧನೆ ನಡೆಸಿತ್ತು. 'ಚುನಾವಣಾ ಹೋರಾಟಕ್ಕೆ ಆದಾಯ ತೆರಿಗೆ ಇಲಾಖೆಯೂ ಕೈಜೋಡಿಸಿದೆ' ಎಂದು ಅಖಿಲೇಶ್ ಆರೋಪಿಸಿದ್ದರು.
- ಛತ್ತೀಸಗಡದಲ್ಲಿ ನಡೆದಿದೆ ಎನ್ನಲಾದ ಅಕ್ರಮ ಕಲ್ಲಿದ್ದಲು ಗಣಿಗಾರಿಕೆ ಪ್ರಕರಣದಲ್ಲಿ ಆಡಳಿತಾರೂಢ ಪಕ್ಷದ ರಾಜಕಾರಣಿಗಳು, ಉದ್ಯಮಿಗಳು ಹಾಗೂ ಅಧಿಕಾರಿಗಳ ನಿವಾಸಗಳಲ್ಲಿ ಇ.ಡಿ. ಶೋಧನೆ ನಡೆಸಿತ್ತು. ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಇ.ಡಿ ದಾಳಿಯನ್ನು ಖಂಡಿಸಿದ್ದರು
- ಗುಜರಾತ್‌ನ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿನ ರೆಸಾರ್ಟ್‌ನಲ್ಲಿ ಉಳಿಸಿಕೊಂಡ ಬಳಿಕ, ಕರ್ನಾಟಕದ ಕಾಂಗ್ರೆಸ್ ಮುಖಂಡ ಡಿ.ಕೆ. ಶಿವಕುಮಾರ್ ಅವರನ್ನು ಗುರಿಯಾಗಿಸಿ ಶೋಧನೆ ನಡೆಸಲಾಗಿತ್ತು

ನೂರು ದಿನ ಜೈಲಿನಲ್ಲಿ ಕಳೆದ ಸಂಜಯ ರಾವುತ್

ಪಾತ್ರಾ ಚಾಳ್ ಮರು ಅಭಿವೃದ್ಧಿ ಪ್ರಕರಣ: ಪಾತ್ರಾ ಚಾಳ್ (ವಸತಿ ಸಂಕೀರ್ಣ) ಯೋಜನೆಯಲ್ಲಿ ಅಕ್ರಮ ನಡೆದಿದೆ. ಹೌಸಿಂಗ್ ಡೆವಲಪ್‌ಮೆಂಟ್ ಇನ್‌ಫ್ರಾಸ್ಟ್ರಕ್ಚರ್ ಲಿ.ನ ಅಂಗಸಂಸ್ಥೆ ಗುರು ಅಶೀಶ್ ಕನ್‌ಸ್ಟ್ರಕ್ಷನ್ಸ್ ₹1,039 ಕೋಟಿ ಅಕ್ರಮವಾಗಿ ಸಂಗ್ರಹಿಸಿದೆ. ಈ ಹಣದಲ್ಲಿ ₹100 ಕೋಟಿಯನ್ನು ಪ್ರವೀಣ್ ರಾವುತ್ ಅವರು ಸಂಜಯ ರಾವುತ್ ಅವರಿಗೆ ನೀಡಿದ್ದಾರೆ ಎಂಬುದು ಇ.ಡಿಯ ಆರೋಪ.

ಬಂಧನ: ಸಂಜಯ ರಾವುತ್, ಅವರ ಹೆಂಡತಿ ವರ್ಷಾ ರಾವುತ್ ಮತ್ತು ನಿಕಟವರ್ತಿಗಳನ್ನು ಇ.ಡಿ ಸುದೀರ್ಘ ತನಿಖೆಗೆ ಒಳಪಡಿಸಿತು. ಸಂಜಯ ರಾವುತ್ ಅವರ ಮನೆಯಲ್ಲಿ 2022ರ ಆಗಸ್ಟ್ 1ರಂದು ಸುಮಾರು 10 ತಾಸು ಶೋಧನೆ ನಡೆಸಲಾಯಿತು. ಬಳಿಕ ಅವರನ್ನು ಬಂಧಿಸಲಾಯಿತು.



ಸಂಜಯ್ ವಾದವೇನು: ಶಿವಸೇನಾದ ಉದ್ಧವ್ ಠಾಕ್ರೆ ಬಣದಿಂದ ಹೊರಗೆ ಬರಬೇಕು ಎಂದು ಹಲವು ಬಾರಿ ತಮಗೆ ಹೇಳಲಾಗಿದೆ. ಆದರೆ, ಉದ್ಧವ್ ಬಣವನ್ನು ತೊರೆಯುವ ಪ್ರಶ್ನೆಯೇ ಇಲ್ಲ, ಶರಣಾಗುವುದಿಲ್ಲ ಎಂದು ಸಂಜಯ್ ಹೇಳಿದ್ದರು. 'ಸಂಜಯ ರಾವುತ್ ಅವರನ್ನು ಬೆದರಿಸಲು ಬಿಜೆಪಿ ಯತ್ನಿಸುತ್ತಿದೆ. ಉದ್ಧವ್ ಅವರನ್ನೂ ಬೆದರಿಸುವುದನ್ನು ಮುಂದುವರಿಸಲಿದೆ. ಸಂಜಯ್ ಅವರನ್ನು ಸುಮ್ಮನಿರಿಸುವುದಕ್ಕಾಗಿ ಈ ಬಂಧನ ನಡೆದಿದೆ' ಎಂದು ಸಂಜಯ ಅವರ ತಮ್ಮ ಸುನಿಲ್ ರಾವುತ್ ಹೇಳಿದ್ದರು.

ದ್ವೇಷ ಸಾಧನೆ ಎಂದ ಕೋರ್ಟ್: ಹಣ ಅಕ್ರಮ ವರ್ಗಾವಣೆ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಂ.ಜಿ. ದೇಶಪಾಂಡೆ ಅವರು ಇ.ಡಿ. ಕ್ರಮದ ವಿರುದ್ಧ ಹರಿಹಾಯ್ದಿದ್ದರು. ಪ್ರಕರಣದ ಮುಖ್ಯ ಆರೋಪಿಯನ್ನೇ ಬಂಧಿಸದೆ ಪ್ರವೀಣ್ ಮತ್ತು ಸಂಜಯ್ ಅವರನ್ನು ಏಕೆ ಬಂಧಿಸಲಾಗಿದೆ ಎಂದು ಪ್ರಶ್ನಿಸಿದ್ದರು. ಇದು ದ್ವೇಷ ಸಾಧನೆಯ ಕೃತ್ಯ, ಬಂಧನವೇ ಅಕ್ರಮ ಎಂದು ಹೇಳಿ ಸಂಜಯ್ ಅವರಿಗೆ ಜಾಮೀನು ನೀಡಿದ್ದರು. ಜಾಮೀನನ್ನು ತಡೆ ಹಿಡಿಯಬೇಕು ಎಂಬ ಇ.ಡಿ. ಕೋರಿಕೆಯನ್ನು ತಿರಸ್ಕರಿಸಿದ್ದರು. ಬಾಂಬೆ ಹೈಕೋರ್ಟ್ ಕೂಡ ಜಾಮೀನಿಗೆ ತಡೆ ನೀಡಲು ನಿರಾಕರಿಸಿತ್ತು. 2022ರ ನವೆಂಬರ್ 9ರಂದು ಜಾಮೀನು ಸಿಕ್ಕಿತು. ಅಲ್ಲಿಗೆ 100 ದಿನಗಳನ್ನು ಸಂಜಯ ಜೈಲಿನಲ್ಲಿ ಕಳೆದಿದ್ದರು.

ಆಧಾರ: ಪಿಟಿಐ, ಆದಾಯ ತೆರಿಗೆ ಇಲಾಖೆ ಟ್ವೀಟ್‌ಗಳು ಮತ್ತು ಪತ್ರಿಕಾ ಪ್ರಕಟಣೆಗಳು

ಅಶ್ವಿನಿ 'ಭೀಮ'ನ ಜೊತೆಗಾತಿ

'ಸಲಗ' ಸಿನಿಮಾದ ಯಶಸ್ಸಿನ ಬಳಿಕ ಮತ್ತೊಮ್ಮೆ ನಿರ್ದೇಶನಕ್ಕೆ ಇಳಿದಿರುವ ಸ್ಯಾಂಡಲ್‌ವುಡ್ ಸಲಗ 'ದುನಿಯಾ' ವಿಜಯ್, 'ಭೀಮ'ನಾಗಿ ತೆರೆಗೆ ಬರಲಿದ್ದಾರೆ. ಪ್ರೇಮಿಗಳ ದಿನವೇ 'ಭೀಮ'ನ ಜೊತೆಗಾತಿಯನ್ನು ಚಿತ್ರತಂಡ ಪರಿಚಯಿಸಿದ್ದು, ರಂಗಭೂಮಿ ಹಿನ್ನೆಲೆಯ ಎಂಬಿಎ ಪದವೀಧರೆ ಅಶ್ವಿನಿ 'ನಾಟಿಸ್ಟೈಲ್'ನಲ್ಲಿ ಈ ಸಿನಿಮಾ ಮೂಲಕ ಬೆಳ್ಳಿತೆರೆ ಪ್ರವೇಶಿಸುತ್ತಿದ್ದಾರೆ.

ಬ್ಲ್ಯಾಕ್ ಡ್ರಾಗನ್ ಮಂಜು, ಶುಂಠಿ ಅಲಿಯಾಸ್ ಜಿಂಜರ್, ಗಿಲಿ ಗಿಲಿ ಚಂದ್ರು ಹೀಗೆ ಹೊಸ ಪಾತ್ರಗಳನ್ನು 'ಭೀಮ'ನ ಮೂಲಕ ವಿಜಯ್ ತೆರೆಗೆ ಪರಿಚಯಿಸುತ್ತಿದ್ದಾರೆ. ಬಹುತೇಕ ತಾರಾಗಣ ಹೊಸ ಮುಖಗಳೇ ಆಗಿವೆ.

'ಥಿಯೇಟರ್ ತತ್ಕಾಲ್' ತಂಡದ 'ವಿಗಡ ವಿಕ್ರಮರಾಯ' ನಾಟಕದ ಮೂಲಕ ರಂಗಭೂಮಿಯಲ್ಲಿ ಅಶ್ವಿನಿ ಪಯಣ ಆರಂಭಿಸಿದ್ದರು. 'ಭೀಮ'ನಿಗೆ ಜೋಡಿಯಾಗಿ ಫ್ರೆಶ್ ಫೇಸ್ ಬೇಕಿತ್ತು. ಜೊತೆಗೆ ಅಶ್ವಿನಿ ಕಥೆಗೂ ಸೂಕ್ತ ಹಾಗೂ ಆ ಪಾತ್ರ ಇದೇ ರೀತಿ ಇರಬೇಕು ಎಂಬ ಕಲ್ಪನೆಯನ್ನು ವಿಜಯ್ ಮಾಡಿಕೊಂಡಿದ್ದ ಕಾರಣ ಅವರ ಆಯ್ಕೆಯಾಗಿದೆ. ಚಿತ್ರದ ಚಿತ್ರೀಕರಣ ಈಗಾಗಲೇ ಶೇ 50ರಷ್ಟು ಪೂರ್ಣಗೊಂಡಿದ್ದು, ತೆಲುಗಿನ 'ವೀರ ಸಿಂಹ ರೆಡ್ಡಿ' ರಿಲೀಸ್ ಬಳಿಕ ವಿಜಯ್ ಪೂರ್ಣ ಪ್ರಮಾಣದಲ್ಲಿ 'ಭೀಮ' ಪ್ರಾಜೆಕ್ಟ್‌ನಲ್ಲೇ ತೊಡಗಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ವಿಜಯ್ ಅವರೇ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಕೃಷ್ಣ ಸಾರ್ಥಕ್ ಹಾಗೂ ಜಗದೀಶ್ ಗೌಡ ಈ ಚಿತ್ರದ ನಿರ್ಮಾಪಕರು.

ತೆರೆಗೆ ಬರ್ತಿದ್ದಾನೆ 'ಬೋರೇಗೌಡ'

ಗ್ರಾಮೀಣ ಸೊಗಡಿನ ಕಥೆಗಳಿಗೆ ಬೆಳ್ಳಿತೆರೆ ಮೇಲೆ ಭರ್ಜರಿ ಬೇಡಿಕೆ ಇದೆ. ಅಂಥದ್ದೇ ಒಂದು ಕಥೆ ಹೊತ್ತು ಬಂದಿದ್ದಾರೆ ನಿರ್ದೇಶಕ ಕೆ.ಎಂ. ರಘು. ಅವರ ನಿರ್ದೇಶನದಲ್ಲಿ ನಿರ್ಮಾಣವಾದ 'ದೊಡ್ಡಹಟ್ಟಿ ಬೋರೇಗೌಡ' ಚಿತ್ರ ಫೆ. 17ರಂದು ಬಿಡುಗಡೆಯಾಗಲಿದೆ.

ಅಂದಹಾಗೆ ಇದೇ ಮಾದರಿಯ ಚಿತ್ರಗಳನ್ನು ರಘು ನಿರ್ದೇಶಿಸಿದ್ದಾರೆ. 'ತರ್ಲೆ ವಿಲೇಜ್', 'ಪರಸಂಗ' ಅವರ ಪ್ರಮುಖ ಚಿತ್ರಗಳು. ಇದೀಗ ಬಿಡುಗಡೆಯಾಗಲಿರುವ 'ದೊಡ್ಡಹಟ್ಟಿ ಬೋರೇಗೌಡ' ಕಳೆದ ವರ್ಷದ ಬೆಂಗಳೂರು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರಗಳ ಸಾಲಿನಲ್ಲಿ ಮೊದಲ ಬಹುಮಾನ ಬಾಚಿತ್ತು. ರಘು ನಿರ್ದೇಶನದ ಎಲ್ಲ ಚಿತ್ರಗಳು ಗ್ರಾಮೀಣ ಪ್ರದೇಶದ ಪ್ರತಿಭೆಗಳನ್ನಿಟ್ಟುಕೊಂಡು ಸಹಜ ಸನ್ನಿವೇಶಗಳಲ್ಲಿ ಚಿತ್ರೀಕರಣಗೊಂಡಿವೆ. 'ತರ್ಲೆ ವಿಲೇಜ್' ಸಿನಿಮಾ ಬಾಕ್ಸ್ ಆಫೀಸ್‌ನಲ್ಲೂ ಗೆದ್ದಿತ್ತು.

ರಾಜರಾಜೇಶ್ವರಿ ಕಂಬೈನ್ಸ್ ಲಾಂಛನದಲ್ಲಿ ಬಿ.ಸಿ.ಶಶಿಕುಮಾರ್ ಹಾಗೂ ಕೆ.ಎಂ.ಲೋಕೇಶ್ ಈ ಚಿತ್ರ ನಿರ್ಮಿಸಿದ್ದಾರೆ. ಸಂಪತ್, ಶಿವಣ್ಣ ಬೀರಹುಂಡಿ, ಗೀತಾ, ಲಾವಣ್ಯ, ಕಲಾರತಿ ಮಹದೇವ್, ಕಾತ್ಯಾಯಿನಿ, ಯೋಗೇಶ್ ಮುಂತಾದ ಗ್ರಾಮೀಣ ಪ್ರತಿಭೆಗಳು ಈ ಚಿತ್ರದಲ್ಲಿ ನಟಿಸಿದ್ದಾರೆ.

ಸಂಪತ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net/

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ದೈವ ಒಪ್ಪದ ಆತುರ

ಆತುರತೆಯಿರದ ಸತತೋದ್ಯೋಗ ಸರ್ವಹಿತ |
ಭೂತದಾವೇಶವಾತುರತೆಯಾತ್ಮಕ್ಕೆ ||
ಕಾತರನು ನಿನಗೆ ಮೂರನೆಯ ಸಹಭಾಗಿ |
ಪ್ರೀತಿನಾಗುವನೇನೋ ? – ಮಂಕುತಿಮ್ಮ || 822

ಪದ-ಅರ್ಥ: ಆತುರತೆಯಿರದ = ಆತುರತೆ + ಇರದ, ಸತತೋದ್ಯೋಗ = ಸತತ + ಉದ್ಯೋಗ, ಭೂತದಾವೇಶವಾತುರತೆಯಾತ್ಮಕ್ಕೆ = ಭೂತದ + ಆವೇಶವು + ಆತುರತೆ + ಆತ್ಮಕ್ಕೆ, ಕಾತುರನು = ಆತುರಕಾರನು.

ವಾಚ್ಯಾರ್ಥ: ಸಮಾಧಾನದ, ಆತುರತೆಯಿಲ್ಲದ ಸತತ ಉದ್ಯೋಗ ಯಾವಾಗಲೂ ಸರ್ವಹಿತವಾಗುತ್ತದೆ. ಆತುರತೆ ಎಂಬುದು ಆತ್ಮಕ್ಕೆ ಭೂತದ ಆವೇಶವಿದ್ದಂತೆ. ಪ್ರತಿಯೊಂದರಲ್ಲೂಆತುರತೆಯನ್ನು ತೋರಿದರೆ ನಿನ್ನ ಜೀವನದ ಮೂರನೆಯ ಸಹಭಾಗಿಯಾದ ದೈವ ಪ್ರೀತನಾಗುವನೇ?

ವಿವರಣೆ: ಇದು ಆತುರದ ಜಗತ್ತು ಎನ್ನಿಸುವುದಿಲ್ಲವೆ? ಎಲ್ಲವೂ ಇನ್‌ಸ್ಟಂಟ್ ಆಗಬೇಕು. ಫಾಸ್ಟ್ ಫುಡ್, ಫಾಸ್ಟಾಟ್ರ್ಯಾಕ್ ಕೈ ಗಡಿಯಾರಗಳು, ಸ್ಪೀಡಿಬೈಕ್‌ಗಳು, ಒನ್ ಮಿನಿಟ್ ನೂಡಲ್ಸ್, ಹೈ ಸ್ಪೀಡ್ ಇಂಟರನೆಟ್. ಇವೆಲ್ಲ ಏನು ಹೇಳುತ್ತವೆ? ಯಾರಿಗೂ ನಿಧಾನವಾಗಿ ಬದುಕುವ ಆಸೆ ಇಲ್ಲ. ಎಲ್ಲವೂ ಬೇಗದಲ್ಲೇ ಮುಗಿಯಬೇಕು. ಇಂದಿನ ಜಗತ್ತಿನಲ್ಲಿ ನೀವು ನಿಂತಲ್ಲೇ ಇರಬೇಕಾದರೂ ಓಡಬೇಕಾಗುತ್ತದೆ ಎನ್ನುತ್ತದೆ ಒಂದು ಇಂಗ್ಲೀಷ್ ಸುಭಾಷಿತ. ಆತುರದಿಂದ ತೆಗೆದುಕೊಂಡ ಪ್ರತಿಯೊಂದು ತೀರ್ಮಾನ ಅನಾಹುತಕ್ಕೇ ದಾರಿಯಾಗುತ್ತದೆ. ಭಸ್ಮಾಸುರನ ಆತುರದ ಬೇಡಿಕೆ, ದ್ರೌಪದಿಯ ಮಕ್ಕಳನ್ನು ಕೊಲ್ಲುವ ಅಶ್ವತ್ಥಾಮನ ಆತುರದ ತೀರ್ಮಾನ, ಅರ್ಜುನನ ಆತುರದ ಪ್ರತಿಜ್ಞೆ ಇವು ಯಾವವೂ ಒಳ್ಳೆಯದನ್ನು ಮಾಡಲಿಲ್ಲ. ಇದನ್ನೇ ಕಗ್ಗ ಆತ್ಮಕ್ಕೆ ಬಂದ ಭೂತದ ಆವೇಶ ಎನ್ನುತ್ತದೆ. ಅದಕ್ಕೆ ಹಿರಿಯರು, ಯಾರಾದರೂ ತುಂಬ ಅವಸರದಿಂದ ಕೆಲಸ ಮಾಡುತ್ತಿದ್ದರೆ. "ಅವನು ಮೈಯಲ್ಲಿ ಭೂತವನ್ನು (ದೆವ್ವವನ್ನು) ಅವತರಿಸಿಕೊಂಡಂತೆ ಕೆಲಸ ಮಾಡುತ್ತಾನೆ" ಎನ್ನುತ್ತಾರಲ್ಲವೆ? ಸರ್ವರಿಗೂ ಹಿತವಾಗುವ ಕೆಲಸವನ್ನು ನಿಧಾನವಾಗಿ, ಸತತವಾಗಿ ಮಾಡಬೇಕಾಗುತ್ತದೆ. ಕೊನೆಯ ಎರಡು ಸಾಲುಗಳಲ್ಲಿ ಕಗ್ಗ ಮತ್ತೊಬ್ಬನನ್ನು ತಂದು, ಆತ ಸಂತೋಷಪಡುತ್ತಾನೆಯೇ ಎಂದು ಕೇಳುತ್ತದೆ. ಯಾರು ಈ ಮೂರನೆಯ ಸಹಭಾಗಿ? ಈಗಾಗಲೇ ಹಿಂದೆ ಕಗ್ಗದಲ್ಲಿ ಒಂದು ವಿವರಣೆ ಬಂದಿದೆ. ನಮ್ಮ ಬದುಕಿನ ವ್ಯವಹಾರದಲ್ಲಿ ಮೂರು ಪಾಲುದಾರರಿದ್ದಾರೆ. ಒಂದನೆಯ ಪಾಲುದಾರ ಜೀವ. ಎರಡನೆಯ ಪಾಲುದಾರ, ಜೀವದ ಜೊತೆಗೇ ಸದಾ ಸಂಪರ್ಕದಲ್ಲಿರುವ ಜಗತ್ತು. ಮೂರನೆಯ ಭಾಗಸ್ಥ ದೈವ. ಅವನು ಕಣ್ಣಿಗೆ ಕಾಣಲಾರ. ಆದರೆ ಎಲ್ಲದರಲ್ಲೂ ಅವನ ಪ್ರಭಾವವೇ ಹೆಚ್ಚು. ಕೊನೆಗೆ ಅವನು ಹೇಳಿದಂತೆಯೇ ನಡೆಯುವುದು. ವ್ಯವಹಾರದಲ್ಲೂ ಅವನೇ ಅತ್ಯಂತ ಪ್ರಭಾವಶಾಲಿ ಸಹಭಾಗಿ. ಆತುರದಲ್ಲಿ ಮಾಡಿದ ಕಾರ್ಯ ಕೆಡುತ್ತದೆಂಬುದು ಲೋಕಕ್ಕೇ ವಿದಿತವಾದ ವಿಷಯ. ಹೀಗೆ ಒಬ್ಬ ಸಹಭಾಗಿ ತಿಳಿದೂ ತಪ್ಪು ಮಾಡುವುದನ್ನು ಪ್ರಧಾನ ಸಹಭಾಗಿ ತಾಳಿಕೊಳ್ಳುತ್ತಾನೆಯೇ? ಇದರರ್ಥವೆಂದರೆ ಅವಸರದ ಕಾರ್ಯವನ್ನು ದೈವವೂ ಒಪ್ಪುವುದಿಲ್ಲ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಫೆಬ್ರುವರಿ 15, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣನವಮಿ ಗಂ. 07-40, ದಶಮಿ ಗಂ. 29-33 ನಕ್ಷತ್ರ: ಜ್ಯೇಷ್ಠ ಗಂ. 24-46 ಯೋಗ: ವ್ಯಾಘಾತ ಗಂ. 10-00, ಕರಣ: ಗರಜೆ ಗಂ. 07-40, ಕುಂಭ ಮಾಸದ 02ನೇ ದಿನ. ರಾಹುಕಾಲ : ಮಧ್ಯಾಹ್ನ 12-00 -01-30 ಸೂರ್ಯೋದಯ : 06-57 ಸೂರ್ಯಾಸ್ತ : 06-32

ಮುಸ್ಲಿಂ ದಿನಾಂಕ : 23 ರಜಬ್, ದಿನ ವಿಶೇಷ : ಸ್ವಾಮಿ ದಯಾನಂದಸರಸ್ವತಿಯವರ ಜನ್ಮದಿನ (ಆರ್ಯಸಮಾಜ ಸ್ಥಾಪಕ)

ಅದೃಷ್ಟ ಸಂಖ್ಯೆ : 3, 5

ಮೇಷ: ಮಂಗಳ ಕಾರ್ಯಗಳು ಸುಗಮವಾಗಿ ನಡೆಯಲೆಂದು ಮನೆ ದೇವರಿಗೆ ಪೂಜೆ ಸಲ್ಲಿಸುವ ಬಗ್ಗೆ ವಿಚಾರ ಮಾಡಿ. ಕೃಷಿಗೆ ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ. ಬುದ್ಧಿವಂತಿಕೆಯಿಂದ ಬದುಕಬೇಕಾದ ದಿನ.

ವೃಷಭ: ಚಲನಚಿತ್ರ ಯಶಸ್ವಿಗೊಂಡು ನಿರೀಕ್ಷೆಗೂ ಮೀರಿದ ಲಾಭ ಗಳಿಸುವಿರಿ. ಸ್ನೇಹಿತರೊಬ್ಬರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಹೋಗುವ ಸಂಭವ ಬರಬಹುದು. ವಿದ್ಯಾರ್ಥಿಗಳ ಹತ್ತಾರು ದಿನಗಳ ಪರಿಶ್ರಮ ಸಾರ್ಥಕವಾಗಲಿದೆ.

ಮಿಥುನ: ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸುವವರು ಜಾಗ್ರತರಾಗಿರಿ. ಕಾರ್ಯನಿರ್ವಹಣೆಯಲ್ಲಿ ದೋಷಗಳು ಸಂಭವಿಸಬಹುದು. ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ.

ಕರ್ಕಾಟಕ: ಯಾವುದೇ ಕಾರಣಕ್ಕೂ ಈ ದಿನ ಸಾಲದ ರೂಪದಲ್ಲಿ ಹಣ ತೆಗೆದುಕೊಳ್ಳುವುದು ಸರಿಯಲ್ಲ. ಮಕ್ಕಳ ಬೆಳವಣಿಗೆಯ ಬಗ್ಗೆ ವೈದ್ಯರ ದರ್ಶನ ಅಥವಾ ಚಿಕಿತ್ಸೆ ಬೇಕಾಗಬಹುದು. ಜೀರ್ಣಾಂಗ ಸಮಸ್ಯೆ ಕಾಡಬಹುದು.

ಸಿಂಹ: ಆತ್ಮವಿಶ್ವಾಸದಿಂದಾಗಿ ಕೆಲಸಕಾರ್ಯಗಳಲ್ಲಿ ಈ ದಿನ ಅತಿಯಾದ ಯಶಸ್ಸು ಹೊಂದುವಿರಿ. ಸುಂದರ ವಸ್ತು, ಚಿತ್ರ ಅಥವಾ ಸಮಾಜದ ಅತಿ ಗಣ್ಯವ್ಯಕ್ತಿಗಳನ್ನು ನೋಡುವ ಭಾಗ್ಯ ಸಿಗುವುದು.

ಕನ್ಯಾ: ಸತತ ಪ್ರಯತ್ನದಿಂದ ಪರಸ್ಥಳದಲ್ಲಿ ವೃತ್ತಿಪರವಾಗಿ ಹೆಸರು, ಕೀರ್ತಿ ಸಂಪಾದಿಸಬಹುದು. ನಿಯಮ ಪಾಲನೆ ಮಾಡುವುದನ್ನು ಅಭ್ಯಾಸಿಸಿಕೊಳ್ಳಿರಿ. ಇಲ್ಲವಾದಲ್ಲಿ ದಂಡ ಕಟ್ಟುವಂಥ ತಪ್ಪುಗಳು ನಡೆದಾವು.

ತುಲಾ: ಆರ್ಥಿಕ ಸ್ಥಿತಿಯಲ್ಲಿ ಮತ್ತು ಉದ್ಯೋಗದಲ್ಲಿ ಏರಿಳಿತದ ನಡುವೆ, ಹಾಗೆಯೇ ನೀವಾಡಿದ ಮಾತುಗಳಲ್ಲಿ ನೀವೇ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ ಇದೆ. ವಾಹನ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ ಇರಲಿದೆ.

ವೃಶ್ಚಿಕ: ಸ್ವಯಂ ಸಾಮರ್ಥ್ಯದ ಬಗ್ಗೆ ಹೆಚ್ಚಿನ ವಿಶ್ವಾಸವಿರಲಿ. ಅದರಿಂದಾಗಿ ಮಾನಸಿಕ ವ್ಯಥೆಗಳು ನಿವಾರಣೆಯಾಗುತ್ತದೆ. ನ್ಯಾಯಾಂಗ ವಿಷಯದ ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ವಿದೇಶಕ್ಕೆ ತೆರಳುವ ಅವಕಾಶ ಒದಗಲಿದೆ.

ಧನು: ಕೆಲವೊಂದು ಜವಾಬ್ದಾರಿಯುತವಾದ ಊರಿನ ಕಾರ್ಯಗಳು ಮುಂದಾಳತ್ವದಲ್ಲಿ ನಡೆಯಲಿದೆ. ಸೃಜನಶೀಲತೆಗೆ ಉತ್ತಮ ವೇದಿಕೆ ಪ್ರಾಪ್ತಿಯಾಗುವುದು. ಉದ್ಯೋಗದಲ್ಲಿ ಬದಲಾವಣೆ ಸಂಭವವಿದೆ.

ಮಕರ: ವ್ಯಾಪಾರ ವ್ಯವಹಾರಗಳ ಬಗೆಗೆ ಮಕ್ಕಳಿಗೆ ತಿಳಿಸಿ ಕೊಡುವಿರಿ. ಈ ದಿನ ಸಾಂಸಾರಿಕ ವಿಷಯದಲ್ಲಿ ನೀವು ಆರಿಸಿಕೊಳ್ಳುವ ನಿರ್ಧಾರಗಳು ಹಿರಿಯರ ಕೋಪಕ್ಕೆ ಕಾರಣವಾಗುತ್ತದೆ. ಬ್ಯಾಂಕ್ ಉದ್ಯೋಗಿಗಳಿಗೆ ಬಿಡುವಿಲ್ಲದ ಕೆಲಸ.

ಕುಂಭ: ಆಡಳಿತ ಕೆಲಸಗಳಿಗಾಗಿ ಸೂಕ್ತ ವ್ಯಕ್ತಿಯನ್ನು ತಿಳಿಸುವಂತೆ ಪರಿಚಿತರಲ್ಲಿ ಕೇಳಿಕೊಳ್ಳುವುದರಿಂದ ಸುಲಭವಾಗಿ ಫಲ ಸಿಗುವುದು. ವಿದ್ಯಾರ್ಥಿಗಳು ಓದಿನಲ್ಲಿ ಏಕಾಗ್ರತೆಯನ್ನು ಸಾಧಿಸುವುದರಿಂದ ಗುರಿ ತಲುಪಬಹುದು.

ಮೀನ: ಈ ದಿನದ ಕೆಲವು ಮಾತುಗಳಿಂದ ಇತರರು ಪ್ರಭಾವಿತರಾಗುತ್ತಾರೆ. ಕಳೆದುಹೋಗಿದ್ದ ಹಾಗೂ ಹಳೆಯ ನೆನಪುಗಳನ್ನು ಹೊಂದಿರುವ ವಸ್ತು ಪುನಃ ಕೈ ಸೇರುತ್ತದೆ. ಅದರಿಂದಾಗಿ ಸಂತೋಷ ಇಮ್ಮಡಿಗೊಳ್ಳುವುದು.

ಪದಬಂಧ 5231

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ತಡವಾಗಿ ನೋಡುತ್ತಿರುವ ಅಬ್ಬಿ (4)
5.ಕರಿಯ ಹತ್ತಿರ ಹಾರುತ್ತಿರುವ ಹೆಣ್ಣು ದುಂಬಿ (4)
6.ಶುನಕದ ಹತ್ತಿರವಿರುವ ಗಿಳಿ (2)
7.ಗಿರಿಯ ಕೊನೆಗೆ ಸೆರೆ ಹಿಡಿಯುವುದು (4)
10.ಬಿರುಸಾದ ಮಾತಿದು (4)
12.ಕಟ್ಟಿಗೆ ಇಲ್ಲಿದೆ (2)
14.ಯಾವ ವಿವಾದಕ್ಕೂ ಸೇರದವನು (4)
15.ಕೆಲಸ ಮಾಡುವ ಸ್ಥಳ (4)

ಮೇಲಿಂದ ಕೆಳಕ್ಕೆ

1.ರಾಗಬದ್ಧವಾಗಿ ಕಾವ್ಯವನ್ನು ಓದುವುದು (3)
2.ಹೂವಿನಲ್ಲಿರುವ ಸಿಹಿ ರಸ (4)
3.ತರಿಯನ್ನು ತರಲು ತೋರಿದ ಅವಸರ (4)
4.ಈತ ಬಲು ಜಿಪುಣ (3)
6.ಕಪ್ಪೆಚಿಪ್ಪು ಇಲ್ಲಿದೆ (2)
8.ಗೀಟು ಕಾಣದಂತೆ ಮಾಡಿದ ಹೊಳಪಿನ ಲೇಪನ (3)
ಆಸಕ್ತಿಯುಳ್ಳ ಮತ್ತು ಅರ್ಹ ಟೆಂಡರುದಾರರು ಟೆಂಡರ ಪ್ರಕ್ರಿಯೆ ಶುಲ್ಕ (ಮರುಪಾವತಿಯಾಗದ) & ಇಎಂಡಿ ಮೊತ್ತ ರೂ. 2,00,000/- ವನ್ನು ಟೆಂಡರನಲ್ಲಿ ತಿಳಿಸಿದಂತೆ ಇ-ಪೋರ್ಟಲ್‌ನ ಯಾವುದಾದರೂ ಮೂಲದಿಂದ ಪಾವತಿಸಿ ಭಾಗವಹಿಸಬಹುದಾಗಿದೆ. ಭದ್ರತಾ ಠೇವಣಿ, ಟೆಂಡರನ ಕರಾರು ಮತ್ತು ಷರತ್ತುಗಳ ಟೆಂಡರ ದಾಖಲಾತಿಗಳನ್ನು ಪಡೆಯಲು ವೆಬ್‌ಸೈಟ್ http://eproc.karnataka.gov.in ನಲ್ಲಿ ಲಾಗ್‌ಇನ್ ಆಗಿ ಅಥವಾ ಸಹಾಯವಾಣಿ ಸಂಖ್ಯೆ:-080-46010000 / 68948777, Email: support@ihelpdsk.com ರ ಮೂಲಕ ಸಂಪರ್ಕಿಸಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ವೆಬ್‌ಸೈಟ್‌ನ ಯಾವುದೇ ತಾಂತ್ರಿಕ ಅಡಚಣೆಯಿಂದ, ಕೊನೆ ಘಳಿಗೆಯಲ್ಲಿ ಟೆಂಡರ ಸಲ್ಲಿಸುವಿಕೆಯಲ್ಲಿ ಅಥವಾ ಸ್ವೀಕರಿಸುವಲ್ಲಿ ಏನಾದರೂ ತೊಂದರೆ ಆದಲ್ಲಿ ಧಾಮುಲ್ ಯಾವುದೇ ರೀತಿ ಜವಾಬ್ದಾರರಲ್ಲ.
ಸಹಿ/-ಕಾರ್ಯನಿರ್ವಾಹಕ ನಿರ್ದೇಶಕರು

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಡೆತನದ್ದು)
ಕಾರ್ಯಪಾಲಕ ಅಭಿಯಂತರರ ಕಛೇರಿ, ಕೃಭಾಜನಿನಿ ಮುಏನೀ ವಿಭಾಗ ನಂ-4 ದೇವರಹಿಪ್ಪರಗಿ. ತಾ॥ ದೇವರಹಿಪ್ಪರಗಿ ಜಿಲ್ಲೆ॥ ವಿಜಯಪುರ
ಸಂ:ಕೃಭಾಜನಿನಿ/ಮುಏನೀ/ವಿ-4/ಟೆಂಡರ್/ರಸ್ತೆ ಅಭಿವೃದ್ಧಿ/2022-23/998 ದಿನಾಂಕ:13.02.2023
ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ-ಪ್ರೋಕ್ಯುರಮೆಂಟ್‌ನಲ್ಲಿ ಮಾತ್ರ)
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಶೇಕಡಾವಾರು ಆಧಾರದ ಮೇಲೆ ನೋಂದಾಯಿತ KPWD class-I ಗುತ್ತಿಗೆದಾರರಿಂದ ಕಾಮಗಾರಿ ಇಂಡೆಂಟ್ ಸಂಖ್ಯೆ: KBJNL/2022-23/RD/WORK_INDENT23541, KBJNL/2022-23/RD/WORK_INDENT23584, KBJNL/2022-23/RD/WORK_INDENT23585 ಕಾಮಗಾರಿಗಳಿಗೆ ಎರಡು ಕವರ್‌ಗಳಲ್ಲಿ (ತಾಂತ್ರಿಕ ಬಿಡ್ ಮತ್ತುಆರ್ಥಿಕ ಬಿಡ್)ಟೆಂಡರ್ ಕರೆಯಲಾಗಿರುತ್ತದೆ. **ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.109.70 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ. 211.84 ಲಕ್ಷಗಳು.** ಪೂರ್ಣಗೊಳಿಸಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 22.02.2023** ಸಾಯಂಕಾಲ 5.00 ಗಂಟೆಯಾಗಿರುತ್ತದೆ. ಸದರಿ ಕಾಮಗಾರಿಗಳ ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ **17.02.2023 ರಂದು ಪೂರ್ವಾಹ್ನ 11.00 ಗಂಟೆಗೆ** ಮುಖ್ಯ ಇಂಜಿನಿಯರರ ಕಚೇರಿ, ಕೃ.ಭಾ.ಜ.ನಿ.ನಿ. ಅಣೆಕಟ್ಟು ವಲಯ ಆಲಮಟ್ಟಿಯಲ್ಲಿ ನಡೆಸಲಾಗುವುದು. ಕಾಮಗಾರಿ ಕುರಿತು ಪ್ರಶ್ನಾವಳಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **17.02.2023** ಬೆಳಿಗ್ಗೆ 10.00 ಗಂಟೆಯಾಗಿರುತ್ತದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ:**24.02.2023** ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಜಾಲತಾಣ (ವೆಬ್ ಸೈಟ್) https://eproc.karnataka.gov.in/eportal/index.seam ದಲ್ಲಿ ಹಾಗೂ ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ಅವಧಿಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ,ಮುಏನೀ ವಿಭಾಗ-04, ದೇವರ ಹಿಪ್ಪರಗಿ
ವಾಸಾಸಂಇ/ವಿಜಯಪುರ/867/ಕೆಎಸ್‌ಎಂಸಿಎ/2022-23

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಚಿಕ್ಕೋಡಿ.
ನಂ.ಲೋ.ಇ./ಚಿ.ವಿ./ಸ.ಇಂ.-3/ಟೆಂಡರ/2022-23/7228 ದಿನಾಂಕ: 09/02/2023
ಅಲ್ಪಾವಧಿ ಇ-ಟೆಂಡರ ಪ್ರಕಟಣೆ
ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ ಲೆಕ್ಕ ಶೀರ್ಷಿಕೆ 5054-ಪರಿಶಿಷ್ಟ ಜಾತಿ ಉಪಯೋಜನೆ (ಎಸ್.ಸಿ.ಪಿ) ಅಡಿ 2 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಮೊತ್ತ ಕ್ರಮವಾಗಿ ರೂ. 84.69 ಲಕ್ಷ ಹಾಗೂ ರೂ. 84.58 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು.
1)ಆಕ್ಷೇಪಣೆ - ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:24-02-2023 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:27-02-2023 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 01-03-2023 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"
ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-1742/KSMCA/2022-23

ಷೇರುಪೇಟೆ ವಹಿವಾಟು

▲ 600



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17770
ಇಂದಿನ ಅಂತ್ಯ	17929
▲	158
ದಿನದ ಗರಿಷ್ಠ	17954

ವಿನಿಮಯ ದರ

£ ಪೌಂಡ್	100.62
€ ಯುರೊ	88.87
¥ ಯೆನ್ (100ಕ್ಕೆ)	62.51

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಕೊಬ್ಬರಿ ಧಾರಣೆ

ಅರಸೀಕೆರೆ	₹10500-10750
ತುರುವೇಕೆರೆ	₹10500-10500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹436-666
ದ್ವಿತಳಿ (ಬಿ.ವಿ)	₹223-791

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹142
ಆರ್‌ಎಸ್‌ಎಸ್-5	₹136
ಗುಡ್ ಲಾಟ್	₹131

(ಪ್ರತಿ ಕೆ.ಜಿಗೆ)

ಮುಂಬೈ ಧಾರಣೆ

ಶೇಂಗಾ

14-2-2023

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	11000-11050
ದಪ್ಪ ಮಧ್ಯಪ್ರದೇಶ(ಹೊಸ)	11050-11150
ದಪ್ಪ ಗುಜರಾತ್(ಹೊಸ)	11850-11950

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690(1690)
ಒಂದು ವಾರದ ಡೆಲಿವರಿ	1685(1685)
ಸೋಯಾ ಕಚ್ಚಾ	1075(1080)
ಪಾಮ್ ವಾರದ ಡೆಲಿವರಿ	958(963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1070(1070)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56750(56750)
ಬೆಳ್ಳಿ ಕೆ.ಜಿ 65900(66350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ
₹16000-20000
2ನೇ ದರ್ಜೆ
₹12000-15000

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1,200-1,400
ಮಧ್ಯಮ	₹1,000-1,200
ಸಣ್ಣ	₹700-1,000

ಖಾದ್ಯ ತೈಲ ಮುಂಬೈ

ಶೇಂಗಾ (ರಿಫೈನ್ಡ್)	₹1680(1680)
ಸೋಯಾ (ರಿಫೈನ್ಡ್)	₹1170(1170)
ಸೂರ್ಯಕಾಂತಿ (ರಿಫೈನ್ಡ್)	₹1175(1175)
ಪಾಮೋಲಿನ್	₹960(965)

ಸತತ ಎಂಟು ತಿಂಗಳಿನಿಂದ ಇಳಿಕೆ ಹಾದಿಯಲ್ಲಿ ಹಣದುಬ್ಬರ ಪ್ರಮಾಣ

ಜನವರಿಯಲ್ಲಿ ತಗ್ಗಿದ ಸಗಟು ಹಣದುಬ್ಬರ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ಪ್ರಮಾಣವು ಜನವರಿಯಲ್ಲಿ ಶೇಕಡ 4.73ಕ್ಕೆ ಇಳಿಕೆಯಾಗಿದೆ. ಇದು ಎರಡು ವರ್ಷಗಳ ಕನಿಷ್ಠ ಮಟ್ಟ. ಸತತ ಎಂಟು ತಿಂಗಳುಗಳಿಂದ ಸಗಟು ಹಣದುಬ್ಬರ ಪ್ರಮಾಣವು ಕಡಿಮೆ ಆಗುತ್ತಿದೆ. ತಯಾರಿಸಿದ ವಸ್ತುಗಳು, ಇಂಧನ ಹಾಗೂ ವಿದ್ಯುತ್ ಬೆಲೆ ಏರಿಕೆ ತಗ್ಗಿರುವುದು ಈ ಇಳಿಕೆಗೆ ಕಾರಣ.

ಡಿಸೆಂಬರ್ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 4.95ರಷ್ಟು ಇತ್ತು. ಹಿಂದಿನ ವರ್ಷದ ಜನವರಿಯಲ್ಲಿ ಇದು ಶೇ 13.68 ಆಗಿತ್ತು. ಜನವರಿಯಲ್ಲಿ ಆಹಾರ ವಸ್ತುಗಳ ಬೆಲೆ ಏರಿಕೆ ಪ್ರಮಾಣವು ಶೇ 2.38ಕ್ಕೆ ಹೆಚ್ಚಾಗಿದೆ. ಡಿಸೆಂಬರ್‌ನಲ್ಲಿ ಇದು ಶೇ (–) 1.25ರಷ್ಟು ಇತ್ತು.

> ಸಗಟು ಹಣದುಬ್ಬರ ಪ್ರಮಾಣವು ಮುಂದೆ ಇನ್ನಷ್ಟು ಕಡಿಮೆಯಾಗಬಹುದು. ಅದು ಮಾರ್ಚ್ ವೇಳೆಗೆ ಶೇಕಡ 4ಕ್ಕೆ ಇಳಿಕೆ ಆಗಬಹುದು.
>
> **ಮದನ್ ಸಬ್ನವೀಸ್,** ಮುಖ್ಯ ಅರ್ಥಶಾಸ್ತ್ರಜ್ಞ, ಬ್ಯಾಂಕ್ ಆಫ್ ಬರೋಡ

‘ಖನಿಜ ತೈಲಗಳು, ರಾಸಾಯನಿಕಗಳು ಹಾಗೂ ರಾಸಾಯಿಕ ಉತ್ಪನ್ನಗಳು, ಜವಳಿ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಆಹಾರ ವಸ್ತುಗಳು ಜನವರಿಯಲ್ಲಿ ಸಗಟು ಹಣದುಬ್ಬರ ದರವು ಇಳಿಕೆ ಕಾಣಲು ನೆರವಾಗಿವೆ’ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯವು ಹೇಳಿದೆ.



ಕೇಂದ್ರ ಸರ್ಕಾರವು ಚಿಲ್ಲರೆ ಹಣದುಬ್ಬರ ಪ್ರಮಾಣಕ್ಕೆ ಸಂಬಂಧಿಸಿದ ಅಂಕಿ-ಅಂಶಗಳನ್ನು ಸೋಮವಾರ ಬಿಡುಗಡೆ ಮಾಡಿದೆ. ಜನವರಿಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 6.52ಕ್ಕೆ ಏರಿಕೆ ಕಂಡಿದೆ. ಆದರೆ, ಇದೇ ಅವಧಿಯಲ್ಲಿ ಸಗಟು ಹಣದುಬ್ಬರ ಇಳಿಕೆಯಾಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರ ನಿಗದಿ ಮಾಡುವ ಸಂದರ್ಭದಲ್ಲಿ ಚಿಲ್ಲರೆ ಹಣದುಬ್ಬರದ ಪ್ರಮಾಣವನ್ನು ಪರಿಗಣಿಸುತ್ತದೆ.

ಬಿಜೆಪಿ ಹಿಡಿತಕ್ಕೆ ಅಮುಲ್ ಡೇರಿ

ಅಹಮದಾಬಾದ್: ಕೈರಾ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘ ನಿಯಮಿತದ (ಅಮುಲ್ ಡೇರಿ) ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸುವ ಮೂಲಕ ಬಿಜೆಪಿಯು ಸಂಘದ ಮೇಲೆ ಸಂಪೂರ್ಣವಾಗಿ ಹಿಡಿತ ಸಾಧಿಸಿದೆ.

ಈ ಮೊದಲು ಸಂ ಘವು ಕಾಂಗ್ರೆಸ್ ಹಿಡಿತದಲ್ಲಿತ್ತು.

470 ವಿಮಾನ ಖರೀದಿ ಮಾಡಲಿರುವ ಏರ್ ಇಂಡಿಯಾ

ನವದೆಹಲಿ (ಪಿಟಿಐ/ಎಎಫ್‌ಪಿ): ಟಾಟಾ ಸಮೂಹದ ಒಡೆತನದಲ್ಲಿರುವ ಏರ್ ಇಂಡಿಯಾ ಕಂಪನಿಯು, ವಿಮಾನ ತಯಾರಿಕಾ ಕಂಪನಿಗಳಾದ ಏರ್‌ಬಸ್ ಹಾಗೂ ಬೋಯಿಂಗ್‌ನಿಂದ ಒಟ್ಟು 470 ವಿಮಾನಗಳನ್ನು ಖರೀದಿಸಲಿದೆ. ಇವುಗಳಲ್ಲಿ ಅಗಲ ದೇಹದ ವಿಮಾನಗಳು ಕೂಡ ಸೇರಿವೆ.

ವಿಮಾನಗಳ ಖರೀದಿಗೆ ಏರ್ ಇಂಡಿಯಾ ಅಂದಾಜು ₹ 6.80 ಲಕ್ಷ ಕೋಟಿ ವೆಚ್ಚ ಮಾಡಬೇಕಿದೆ. ಏರ್ ಇಂಡಿಯಾ ಕಂಪನಿಯು ತನ್ನ ಕಾರ್ಯಾಚರಣೆ ಸಾಮರ್ಥ್ಯ ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಈ ಖರೀದಿಗೆ ಮುಂದಾಗಿದೆ.

‘ಇದು ಭಾರತೀಯ ವಿಮಾನಯಾನ ಕಂಪನಿಯೊಂದು ಮಾಡಿರುವ ಅತಿ ದೊಡ್ಡ ಖರೀದಿ ಮಾತ್ರವೇ ಅಲ್ಲ, ಇದು ಪ್ರಪಂಚದಲ್ಲಿ ನಡೆದಿರುವ ಅತಿದೊಡ್ಡ ವಿಮಾನ ಖರೀದಿಗಳ ಪೈಕಿ ಇದು ಕೂಡ ಒಂದು’ ಎಂದು ಏರ್ ಇಂಡಿಯಾ ಸಿಇಒ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ.

ಫ್ರಾನ್ಸ್‌ನ ಏರ್‌ಬಸ್ ಕಂಪನಿಯಿಂದ 250 ವಿಮಾನಗಳನ್ನು, ಅಮೆರಿಕದ ಬೋಯಿಂಗ್ ಕಂಪನಿಯಿಂದ 220 ವಿಮಾನಗಳನ್ನು ಏರ್ ಇಂಡಿಯಾ ಖರೀದಿ ಮಾಡಲಿದೆ.

ಹೊಸದಾಗಿ ಖರೀದಿಸುತ್ತಿರುವ ವಿಮಾನಗಳ ಪೈಕಿ ಕೆಲವು ಈ ವರ್ಷದ ಕೊನೆಯಲ್ಲಿ ಸೇವೆಗೆ ಲಭ್ಯವಾಗಲಿವೆ. 2025ರ ಮಧ್ಯಭಾಗದ ನಂತರದಲ್ಲಿ ಹೆಚ್ಚಿನ ಸಂಖ್ಯೆಯ ವಿಮಾನಗಳು ಕಾರ್ಯಾಚರಣೆಯಲ್ಲಿ ತೊಡಗಲಿವೆ.

‘ಈ ಖರೀದಿಯು ಏರ್ ಇಂಡಿಯಾದ ಮಹತ್ವಾಕಾಂಕ್ಷೆಯನ್ನು ಸಾಕಾರ ಮಾಡಿಕೊಳ್ಳುವ ದಿಸೆಯಲ್ಲಿ ಮುಖ್ಯ ಹೆಜ್ಜೆ. ಹೊಸ ವಿಮಾನಗಳು ಕಂಪನಿಯ ಜಾಲವನ್ನು ಹೆಚ್ಚಿಸಲಿವೆ’ ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800 - 900
ಹೆರಕಿದ್ದು	1,250-1,300
ಹಸಿರು ಸಾಧಾರಣ	900-1000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1,550
ಕಾಳು ಮೆಣಸು	490

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಭದ್ರಾವತಿ	
ರಾಶಿ	40199-45299
ಚನ್ನಗಿರಿ	
ರಾಶಿ	44219-46379
ಚಿತ್ರದುರ್ಗ	
ಆಪಿ	44629-45079
ಬೆಟ್ಟೆ	35019-35449
ಕೆಂಪುಗೋಟು	29909-30310
ರಾಶಿ	44139-44569
ಕಾರ್ಕಳ	
ಹೊಸತು	30000-40000
ಹಳತು	40000-54500
ಕುಂದಾಪುರ	
ಹಳೆಚಾಲಿ	40000-49500
ಹೊಸಚಾಲಿ	35000-40000
ಪುತ್ತೂರು	
ಹೊಸತು	32000-37500
ಶಿವಮೊಗ್ಗ	
ಬೆಟ್ಟೆ	46569-52400
ಗೊರಬಲು	17000-33489
ರಾಶಿ	36009-45699
ಸರಕು	46569-81510
ಸಿದ್ದಾಪುರ	
ಬಿಳಿಗೋಟು	27699-33299
ಚಾಲಿ	36839-38809
ಕೋಕ	26299-31899
ಹೊಸಚಾಲಿ	32119-35559
ಕೆಂಪುಗೋಟು	30819-33399
ರಾಶಿ	42319-45599
ತಟ್ಟಿಬೆಟ್ಟೆ	36609-40059
ಶಿರಸಿ	
ಬೆಟ್ಟೆ	20699-42781
ಬಿಳಿಗೋಟು	21799-35199
ಚಾಲಿ	30999-41039
ಕೆಂಪುಗೋಟು	26009-36501
ರಾಶಿ	39249-46189

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15,200	15150	14950	177.05 ಸೆಂಟ್ಸ್
ಎಸಿ	7,280	7250	6800	
ಆರ್‌ಪಿ	10,250	10250	9950	ಲಂಡನ್
ಆರ್‌ಸಿ	5,100	190	4950	2044 ಡಾಲರ್ಸ್

ಅದಾನಿ ಸಮೂಹದಿಂದ ಲೆಕ್ಕಪತ್ರ ಪರಿಶೀಲನೆ

ನವದೆಹಲಿ (ಪಿಟಿಐ): ಅದಾನಿ ಸಮೂಹವು ತನ್ನ ಕೆಲವು ಕಂಪನಿಗಳ ಲೆಕ್ಕಪತ್ರಗಳ ಸ್ವತಂತ್ರ ಪರಿಶೀಲನೆಗೆ ಗ್ರ್ಯಾಂಟ್ ಥಾರ್ನ್‌ಟನ್ ಸಂಸ್ಥೆಯನ್ನು ನೇಮಿಸಿದೆ. ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಮಾಡಿರುವ ಆರೋಪಗಳಿಂದ ಮುಕ್ತವಾಗಿ, ತನ್ನ ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸುವ ಕ್ರಮವಾಗಿ ಸಮೂಹ ಈ ಹೆಜ್ಜೆ ಇರಿಸಿದೆ.

ಅಗತ್ಯ ಕಾನೂನುಗಳನ್ನೆಲ್ಲ ತಾನು ಪಾಲಿಸಿದ್ದೇನೆ ಎಂಬ ಸಂದೇಶವನ್ನು ಆರ್‌ಬಿಐನಂತಹ ನಿಯಂತ್ರಣ ಸಂಸ್ಥೆಗಳಿಗೆ ರವಾನಿಸುವ ಉದ್ದೇಶಸಮೂಹಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಸಾವಂತ್, ಊರು ತಿಳಿಸಿಲ್ಲ

ಪ್ರಶ್ನೆ: ಖಾಸಗಿ ಸಂಸ್ಥೆಯೊಂದರಲ್ಲಿ ಉದ್ಯೋಗ ಮಾಡುತ್ತಿದ್ದ ನಾನು ಈಗ ನಿವೃತ್ತಿ ಹೊಂದಿದ್ದೇನೆ. ನನ್ನ ವಯಸ್ಸು 64 ವರ್ಷ. ಹೊಸ ಮನೆ ಕಟ್ಟುವ ಸಲುವಾಗಿ ಒಂದು ನಿವೇಶನ ಮಾರಿರುತ್ತೇನೆ, ಬಂದ ಹಣವನ್ನು ಉಳಿತಾಯ ಖಾತೆಗೆ ಜಮಾ ಮಾಡಿರುತ್ತೇನೆ. ಕಾರಣಾಂತರದಿಂದ ಮಹಾನಗರ ಪಾಲಿಕೆಯಿಂದ ಮನೆಯ ಯೋಜನೆಗೆ ಅನುಮತಿ ಸಿಗದೆ, ಒಂದು ವರ್ಷದಿಂದ ಮನೆ ಕಟ್ಟಲು ಸಾಧ್ಯವಾಗುತ್ತಿಲ್ಲ. ಬಂಡವಾಳ ವೃದ್ಧಿ ತೆರಿಗೆ ವಿನಾಯಿತಿ ಎಷ್ಟು ವರ್ಷ ಸಿಗಬಹುದು?

ಉತ್ತರ: ವ್ಯಕ್ತಿಯೊಬ್ಬ ಮನೆಯ ಹೊರತಾಗಿ ಇತರ ಯಾವುದೇ ಆಸ್ತಿಯನ್ನು ಮಾರಾಟ ಮಾಡುವ ಸಂದರ್ಭದಲ್ಲಿ ದೀರ್ಘಾವಧಿ ಬಂಡವಾಳ ಆಸ್ತಿಯಿಂದ ಲಾಭ ಗಳಿಸಿದ್ದರೆ, ಅಂತಹ ಲಾಭಕ್ಕೆ ತೆರಿಗೆ ವಿನಾಯಿತಿ ನೀಡುವ ಸೌಲಭ್ಯವನ್ನು ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54 ಎಫ್ ಅಡಿ ಕಲ್ಪಿಸಲಾಗಿದೆ. ಇದರಂತೆ, ತೆರಿಗೆ ವಿನಾಯಿತಿ ಪಡೆಯಲು ಹೊಸ ಮನೆಯನ್ನು ಮಾರಾಟದ ಒಂದು ವರ್ಷ ಮೊದಲು ಕೊಂಡುಕೊಂಡಿರಬೇಕು ಅಥವಾ ಮಾರಾಟದ ನಂತರ ಎರಡು ವರ್ಷದೊಳಗೆ ಹೊಸ ಮನೆ ಖರೀದಿಸಬೇಕು. ಇವೆರಡೂ ಆಗಿರದ ಪಕ್ಷದಲ್ಲಿ, ಹೊಸ ಮನೆಯನ್ನು ಮೂರು ವರ್ಷದೊಳಗೆ ಕಟ್ಟಿಸಬೇಕು.

‘ಬಂಡವಾಳ ವೃದ್ಧಿ ಖಾತೆ ಯೋಜನೆ 1988’ ಅಡಿ ಮಾನ್ಯ ಮಾಡಲಾದ ಠೇವಣಿ ‘ಎ’ ಅಥವಾ ‘ಬಿ’ ಖಾತೆಗಳಲ್ಲಷ್ಟೇ ಹೂಡಿಕೆ ಮಾಡಿದರೆ ತೆರಿಗೆ ವಿನಾಯಿತಿ ಸಿಗುತ್ತದೆ. ನಿಮ್ಮ ಆ ವರ್ಷಕ್ಕೆ ಸಂಬಂಧಿಸಿದ ತೆರಿಗೆ ವಿವರ ಸಲ್ಲಿಸುವ ಮೊದಲು ಇಂತಹ ಖಾತೆಯಲ್ಲಿ ಹೂಡಿಕೆ ಮಾಡಿರಬೇಕು. ಒಂದು ವೇಳೆ ಬಂದ ಮೊತ್ತವನ್ನು ಇಂತಹ ಯೋಜನೆಯಲ್ಲಿ ಹೂಡಿಕೆ ಮಾಡಲಿಲ್ಲ ಎಂದಾದರೆ, ಲಾಭಾಂಶದ ಮೇಲೆ ಸಹಜವಾಗಿ ಶೇ 20.8ರಷ್ಟು (ಸೆಸ್ ಸೇರಿಸಿ) ತೆರಿಗೆ ಇರುತ್ತದೆ. ಅದೇ ರೀತಿ, ಸಂಪೂರ್ಣ ಹಣ ಉಪಯೋಗಿಸದೆ, ಉಳಿದ ಮೊತ್ತವನ್ನು ಹಿಂಪಡೆದಿದ್ದಲ್ಲಿ ಅಥವಾ ಯೋಜನೆಯ ನಿಯಮಗಳಂತೆ ನಿಗದಿತ ಅವಧಿಯೊಳಗೆ ಹೂಡಿಕೆ ಮಾಡದಿದ್ದಲ್ಲಿ, ಅಂತಹ ಮೊತ್ತಕ್ಕೆ ತೆರಿಗೆ ಅನ್ವಯವಾಗುತ್ತದೆ. ಆಗ ಹೆಚ್ಚುವರಿಯಾಗಿ ಪಡೆದ ವಿನಾಯಿತಿಗೆ ತೆರಿಗೆ ಕಟ್ಟಬೇಕಾಗುತ್ತದೆ.

ನೀವು ಮಾರಾಟದಿಂದ ಬಂದ ಮೊತ್ತವನ್ನು ಉಳಿತಾಯ ಖಾತೆಯಲ್ಲಿ ಜಮಾ ಮಾಡಿರುವುದಾಗಿ ತಿಳಿಸಿದ್ದೀರಿ. ಇದು ಸಾದಾ ಉಳಿತಾಯ ಖಾತೆಯಾಗಿದ್ದಲ್ಲಿ ವಿನಾಯಿತಿ ಸಿಗಲಾರದು. ಮೇಲೆ ಉಲ್ಲೇಖಿಸಿರುವ ನಿರ್ದಿಷ್ಟ ಖಾತೆಯಲ್ಲಿ ಹೂಡಿಕೆ ಮಾಡಿದ್ದರಷ್ಟೇ ವಿನಾಯಿತಿ ಸಿಗುತ್ತದೆ. ಮನೆ ಕಟ್ಟಲು ಪರವಾನಗಿ ಪಡೆಯುವಲ್ಲಿ ಈಗಾಗಲೇ ಒಂದು ವರ್ಷ ವಿಳಂಬವಾಗಿದ್ದರೂ, ಮನೆಯ ನಿರ್ಮಾಣ ಮೂರು ವರ್ಷದೊಳಗೆ ಪೂರೈಸುವ ಅವಕಾಶವಿದೆ. ಅಷ್ಟರಲ್ಲಿ ಮನೆ ಕಟ್ಟಿಸಿ. ನಿಮ್ಮದಲ್ಲದ ಕಾರಣಕ್ಕೆ ಮನೆ ನಿರ್ಮಾಣ ತಡವಾದರೆ, ಅದಕ್ಕೆ ಅಗತ್ಯ ದಾಖಲೆಗಳಿರಲಿ. ಇದು ಮುಂದೆ ನೆರವಾದೀತು.

ಪ್ರದ್ಯುಮ್ನ, ಬೆಂಗಳೂರು

ಪ್ರಶ್ನೆ: ನನ್ನ ಅಣ್ಣನವರು ಮೃತರಾದ ಬಳಿಕ, ಅವರು ಸಹಕಾರಿ ಬ್ಯಾಂಕಿನಲ್ಲಿ ಇಟ್ಟಿದ್ದ ಸುಮಾರು ₹ 10 ಲಕ್ಷ ಠೇವಣಿ ಅತ್ತಿಗೆಯ ಹೆಸರಿಗಾಯಿತು. ಅವರು ಯಾರನ್ನೂ ನಾಮನಿರ್ದೇಶನ ಮಾಡದೆ ಮೃತರಾದರು. ಮಕ್ಕಳಿಲ್ಲದ ಅವರ ಈ ಹಣ ಪಡೆಯಲು ನಾನು ನ್ಯಾಯಾಲಯದ ಮೂಲಕ ವಾರಸುದಾರಿಕೆ ಆದೇಶ ಪಡೆದೆನು. ಆದರೆ ಬ್ಯಾಂಕಿನವರು ಕೋವಿಡ್ ಕಾರಣ ಹೇಳಿ ಇಂದು–ನಾಳೆ ಎಂದು ಸತಾಯಿಸಿದರು. ವಕೀಲರು ನೀಡಿದ ನೋಟಿಸ್ ಪಡೆದರೇ ಹೊರತು ಅದಕ್ಕೆ ಉತ್ತರವನ್ನಾಗಲೀ ಹಣವನ್ನಾಗಲೀ ನೀಡಲಿಲ್ಲ. ಈಗ ಮತ್ತೆ ರಿಕವರಿ ಸೂಟ್ ಹಾಕಬೇಕೆಂದರೆ ಸುಮಾರು ₹ 1 ಲಕ್ಷದವರೆಗೆ ಖರ್ಚು ಬರುವುದೆಂದು ತಿಳಿದಿರುವೆ. ಬ್ಯಾಂಕಿನವರಿಂದ ಹಣ ಪಡೆಯಲು ನಾನೇನು ಮಾಡಬೇಕೆಂದು ತಿಳಿಸಿ.

ಉತ್ತರ: ನೀವು ಉಲ್ಲೇಖಿಸಿರುವ ಪ್ರಶ್ನೆ ಎರಡು ಮೂರು ಗಂಭೀರ ವಿಚಾರಗಳೊಂದಿಗೆ ಸಿಲುಕಿಕೊಂಡಿದೆ. ಮೊದಲನೆಯದಾಗಿ, ನೀವು ಹಣ ಇರಿಸಿದ ಬ್ಯಾಂಕ್ ನಿಜವಾಗಿಯೂ ಆಡಳಿತಾತ್ಮಕವಾಗಿ ಕ್ರಿಯಾಶೀಲವಾಗಿದೆಯೇ ಹಾಗೂ ಆರ್ಥಿಕವಾಗಿ ಸಬಲವಾಗಿದೆಯೇ ಎನ್ನುವುದು. ಎರಡನೆಯದು, ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ಎಚ್ಚರಿಸಿದಾಗಲೂ ಸಂಭವನೀಯ ಪರಿಣಾಮಗಳ ಬಗ್ಗೆ ತೋರಿರುವ ಅಸಡ್ಡೆ. ಮೂರನೆಯದು, ಗ್ರಾಹಕರ ಅಥವಾ ಅವರ ವಾರಸುದಾರರ ಅಹವಾಲುಗಳನ್ನು ಬ್ಯಾಂಕ್ ಗಂಭೀರವಾಗಿ ಪರಿಗಣಿಸದೆ ಅದಕ್ಷತೆ ತೋರಿದ್ದು. ಇವೆಲ್ಲ ನಿಮ್ಮ ಸಮಸ್ಯೆಗೆ ಕಾರಣವಾಗಿವೆ.

ನಿಮ್ಮ ಪ್ರಶ್ನೆಯನ್ನು ಅವಲೋಕಿಸಿದ್ದೇನೆ. ಕಾನೂನಿನ ಪ್ರಕಾರ, ಎದುರು ಪಕ್ಷದವರ ನೋಟಿಸ್ ಸಿಕ್ಕೊಡನೆ ಉತ್ತರಿಸಲೇಬೇಕೆಂಬ ಯಾವ ನಿಯಮವೂ ಇಲ್ಲ. ಕಾರಣ, ಇದು ಅನ್ಯಾಯಕ್ಕೊಳಪಟ್ಟ ವ್ಯಕ್ತಿ ತನ್ನ ಸಮಸ್ಯೆಯನ್ನು ಅನ್ಯಾಯ ಮಾಡಿದ ವ್ಯಕ್ತಿಗೆ ತನ್ನ ವಕೀಲರ ಮೂಲಕ ಲಿಖಿತ ರೂಪದಲ್ಲಿ ತಿಳಿಸುವ ಒಂದು ಕಾನೂನಾತ್ಮಕ ಪ್ರಕ್ರಿಯೆ. ನಿಜವಾದ ಹಂತ ನ್ಯಾಯಾಲಯದಲ್ಲಿ ದಾವೆ ಹೂಡಿದಾಗಲೇ ಆರಂಭವಾಗುತ್ತದೆ. ನಿಮಗೆ ಬ್ಯಾಂಕಿನ ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಸಿ, ಸಮಸ್ಯೆ ತಿಳಿಸಿ ಬಗೆಹರಿಸಿಕೊಳ್ಳಲಾಗದಿದ್ದರೆ, ಪರಿಹಾರಕ್ಕೆ ಅವರೂ ಉತ್ಸುಕರಲ್ಲದಿದ್ದರೆ ಕಾನೂನು ಕ್ರಮವೇ ಸೂಕ್ತ. ಆದರೆ, ನಿಮಗೆ ಸಿಗಬೇಕಾದ ಮೊತ್ತ ಸಿಗಲು ಕೆಲವೊಮ್ಮೆ ದೀರ್ಘಕಾಲ ದಾವೆ ಮುಂದುವರಿಸಬೇಕಾಗಬಹುದು. ವ್ಯಾಜ್ಯ ನಿಮ್ಮ ಪರವಾಗಿ ಬಂದರೆ ಕೋರ್ಟ್ ಖರ್ಚು ನಿಮಗೆ ಸಿಗಬಹುದಾದರೂ ಹೆಚ್ಚಿನ ಶ್ರಮ-ಸಮಯ ವ್ಯರ್ಥ.

ಇದಕ್ಕೂ ಮೊದಲು ನೀವು ಆರ್‌ಬಿಐ ರೂಪಿಸಿರುವ ‘ಇಂಟಿಗ್ರೇಟೆಡ್ ಒಂಬುಡ್ಸ್‌ಮನ್ ಸ್ಕೀಮ್, 2021’ ಅಡಿ ಸಮಸ್ಯೆ ಪರಿಹರಿಸಿಕೊಳ್ಳುವ ಬಗ್ಗೆ ಯೋಚಿಸಿ. ಅಗತ್ಯವಿರುವ ಮಾಹಿತಿ ಹೊಂದಿ ನಿಮ್ಮ ಅರ್ಜಿಯನ್ನು ಸೂಕ್ತ ಅಧಿಕಾರಿಗಳಿಗೆ ಕೊಡಿ. ಪ್ರಸ್ತುತ ಇರುವ ಸುತ್ತೋಲೆಗಳ ಪ್ರಕಾರ, ಇದು ಸಹಕಾರಿ ಬ್ಯಾಂಕ್‌ಗಳಲ್ಲಿ ಮರುಪಾವತಿ ಮಾಡದೆ ಬಾಕಿ ಉಳಿಸಿರುವ ಠೇವಣಿಗಳಿಗೂ ಅನ್ವಯಿಸುತ್ತದೆ. ನೀವು ಬ್ಯಾಂಕಿಗೆ ಈಗಾಗಲೇ ಕೋರಿಕೆ ರೂಪದಲ್ಲಿ ಸಲ್ಲಿಸಿದ್ದ ಪತ್ರಕ್ಕೆ ಅವರು ಸ್ಪಂದಿಸಿಲ್ಲ ಎನ್ನುವ ದಾಖಲೆಯನ್ನು ಸಮರ್ಪಕವಾಗಿ ಇಟ್ಟುಕೊಳ್ಳಿ. ಅನಂತರ ನಿಮ್ಮ ಅಹವಾಲನ್ನು ಅಲ್ಲಿ ದಾಖಲಿಸಲು ಸಾಧ್ಯ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:**businessdesk@prajavani.co.in**

ಜಾಹೀರಾತು ವೆಚ್ಚ ಹೆಚ್ಚಳ: ಗ್ರೂಪ್‌ಎಂ ಅಂದಾಜು

ಬೆಂಗಳೂರು: ಜಾಹೀರಾತು ವೆಚ್ಚಗಳಿಗೆ ಸಂಬಂಧಿಸಿದ ವರದಿಯನ್ನು ಮಾರಾಟ ಸೇವಾ ಕಂಪನಿ ‘ಗ್ರೂಪ್‌ಎಂ’ ಮಂಗಳವಾರ ಬಿಡುಗಡೆ ಮಾಡಿದ್ದು, 2023ರಲ್ಲಿ ದೇಶದಲ್ಲಿ ಕಂಪನಿಗಳು ಜಾಹೀರಾತುಗಳ ಮೇಲೆ ಮಾಡುವ ವೆಚ್ಚ ಹೆಚ್ಚಾಗಲಿದೆ ಎಂದು ಅಂದಾಜಿಸಿದೆ.

2022ಕ್ಕೆ ಹೋಲಿಸಿದರೆ 2023ರಲ್ಲಿ ₹ 20 ಸಾವಿರ ಕೋಟಿಯಷ್ಟು ಹೆಚ್ಚು ವೆಚ್ಚ ಆಗಲಿದೆ. ಜಾಹೀರಾತುಗಳ ಮೇಲಿನ ವೆಚ್ಚವು ಶೇ 15.5ರಷ್ಟು ಹೆಚ್ಚಾಗಿ, ₹ 1.46 ಲಕ್ಷ ಕೋಟಿಗೆ ತಲುಪಲಿದೆ ಎಂದು ಹೇಳಿದೆ.

‘ಗ್ರಾಹಕರು, ಬ್ರ್ಯಾಂಡ್‌ಗಳು ಹಾಗೂ ಉದ್ದಿಮೆಗಳು ಪರಸ್ಪರ ಸಂವಹನ ನಡೆಸುವ ಬಗೆಯನ್ನು ತಂತ್ರಜ್ಞಾನವು ಬದಲಾಯಿಸುತ್ತಿದೆ. ಜಾಹೀರಾತು ಉದ್ಯಮವು ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಂಡು ಸಾಗಬೇಕು’ ಎಂದು ‘ಗ್ರೂಪ್‌ಎಂ’ನ ದಕ್ಷಿಣ ಏಷ್ಯಾ ಸಿಇಒ ಪ್ರಶಾಂತ್ ಕುಮಾರ್ ಹೇಳಿದ್ದಾಗಿ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್ : ಒತ್ತಡ ಮುಕ್ತ ಚಾಲನೆ ಸಂಬಳ: 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 08047106868

Teachers/ Professors

Multiple Vacancy

WANTED ELECTRICIANS/ Electrical supervisors to work at Electrical vehicle charging stations (shift duties) in Bangalore Qualification: ITI /Diploma electrical 8884107575 Contact no: Mail: smts.rr@gmail.com

Wanted

ಬೆಂಗಳೂರಿನ ನಾಗಸಂದ್ರ, ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ.ವಸತಿ ಉಚಿತ. ಸಂಪರ್ಕಿಸಿ: 9845026475

WANTED TEACHING FACULTY
T. JOHN GROUP OF INSTITUTIONS
Campus: Gottigere, Bannerghatta Road, Bangalore - 560 053

T. JOHN PRE-UNIVERSITY COLLEGE

POSITION:	REQUIREMENT:
Principal	Masters with Minimum 5 yrs experience as Principal in PUC College

T. JOHN COLLEGE

POSITION:	REQUIREMENT:
Director in MBA	Ph.D. in Management Studies
Asso. Professor in MBA	Ph.D. in Management Studies
Director in MCA	Ph.D. in Computer Science
Asso. Professor in MCA	Ph.D. in Computer Science
Assistant Professor for MBA Finance / Marketing / Human Resource/ Hotel Management /Aviation Management /Cloud Computing	

T. JOHN INSTITUTE OF TECHNOLOGY

POSITION:	REQUIREMENT:
VTU Research Professor / Asso. Professor	Ph.D. in Computer Science
Professor/ Asso. Professor / Asst. Professor in ISE	Ph.D. in Computer Science/ ISE
Assistant Professor in Artificial Intelligence/ Big Data Analytics/ Mobile Application Development	

T. JOHN COLLEGE OF PHARMACY
POSITION:
Professor /Associate Professor/Assistant Professor in M. Pharm/ Ph.D / Pharm D

T. JOHN COLLEGE OF NURSING
POSITION:
Associate Professor / Assistant Professor / Lecturers for B.Sc. Nursing & GNM

For All Positions Minimum of 5 Years Teaching Experience is a Must

Apply Online within 3 days to: https://www.tjohncollege.com/career/job-postings

DREAM. BELIEVE. ACHIEVE. www.tjohncollege.com

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕೊಯಂಬತ್ತೂರ್ ನಲ್ಲಿರುವ ಒಂದು ಪ್ರತಿಷ್ಠಿತ ಕಾಮಗಾರಿ ಉಡುಪು ತಯಾರಿಕಾ ಕಂಪನಿಗೆ 'ಸೂಟ್ ಮೇಕರ್ಸ್' ಬೇಕಾಗಿದ್ದಾರೆ. ಕೆಲಸದ ಸ್ಥಳ: ಕೊಯಂಬತ್ತೂರ್. ತಮಿಳು ಮತ್ತು ಹಿಂದಿ ಭಾಷೆ ಕಡ್ಡಾಯವಾಗಿ ತಿಳಿದಿರಬೇಕು. ಸಂಪರ್ಕಿಸಿ: 9940193575 ಮೇಲ್: hr1@advancedclothingconcepts.com

ರಾವ್ ಸಂಸ್ಥೆಗೆ ವಯಸ್ಸಾದವರನ್ನು ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ . ಊಟವಸತಿಯಿದೆ. 10,000 - 15,000. 8951315839, 9880120052

ಟೆಲಿಕಾಲರ್‌ಗಳು ಬೇಕಾಗಿದ್ದಾರೆ
ಡೇಟಾ ಸೆಂಟರ್‌ನಲ್ಲಿ 100+ ಕನ್ನಡ ಟೆಲಿಕಾಲರ್‌ಗಳು ಅಗತ್ಯವಿದೆ (ಫ್ರೆಶರ್‌ಗಳಿಗೆ ಅನುಮತಿಸಲಾಗಿದೆ) ವೇತನ: 15,000/– ಯಾವುದೇ ಮಾರಾಟವಿಲ್ಲ, ಯಾವುದೇ ಗುರಿಯಿಲ್ಲ, ತಿಳಿಸಲು ಯಾವುದೇ ಉತ್ಪನ್ನವಿಲ್ಲ. ಮತ್ತು ಯಾವುದೇ ಒತ್ತಡವಿಲ್ಲ. ನಮ್ಮ ಕಾರ್ಯನಿರ್ವಾಹಕ ಸದಸ್ಯರನ್ನು ಅವರ ವಿವರಗಳೊಂದಿಗೆ ಪರಿಶೀಲನೆ ಮಾಡಲಾಗುತ್ತದೆ. ವಿಳಾಸ: 4 ನೇ ಮಹಡಿ, ಹೈಪರ್ ಸೂಪರ್‌ಮಾರ್ಕೆಟ್ ಮೇಲೆ, ಮಲ್ಲೇಶ್ವರಂ, ಬೆಂಗಳೂರು, ಕರ್ನಾಟಕ
+91 84020 50989
+91 6378 702 038

✓ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 17,800-68,000/-. 9035022290/ 9844503222

ತನ್ಮಯಿ ಜಾಯಿಂಟ್ ಕೇರ್ ಮ್ಯಾಗ್ನೆಟಿಕ್ ಆಯಿಲ್ & ಕ್ರೀಮ್ ಪ್ರಾಡಕ್ಟ್ ಗೆ ರಾಜ್ಯದಾದ್ಯಂತ ಸೇಲ್ಸ್ ಎಕ್ಸಿಕ್ಯುಟಿವ್, ಡಿಸ್ಟ್ರಿಬ್ಯೂಟರ್ಸ್ ಮತ್ತು ಡೀಲರ್ಸ್ ಬೇಕಾಗಿದ್ದಾರೆ.ಬೆಂಗಳೂರು Mob 9019626612

Hospital & Medical Jobs

ಬೇಕಾಗಿದ್ದಾರೆ ಅನುಭವವಿರುವ /ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೆದಿತಿಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ: 9035113222, 7483960098

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

✓ ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9611225388/ 9611225266

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ

Business Offers

Finance

ನಾವು ಎಲ್ಲಾರೀತಿಯ ವೈಯಕ್ತಿಕ, ಆಸ್ತಿ, ವ್ಯಾಪಾರ, ಕೃಷಿ ಮತ್ತು ಅಡಮಾನ ಸಾಲಗಳನ್ನು ಒದಗಿಸುತ್ತೇವೆ. ಏಜೆಂಟ್ ಸ್ವಾಗತ. Ph: 7992783372, 8901923173

Franchise

BUSINESS OFFER ಅತ್ಯುತ್ತಮ ಕೆಲಸದ ಸದಾವಕಾಶ!ನೋಂದಾಯಿತ ಕಂಪನಿಯ ಫ್ರಾಂಚೈಸ್/ಡಿಎಂಎ ಅಥವಾ ಏಜೆಂಟ್‌ಶಿಪ್ ಪಡೆದುಕೊಳ್ಳಿ!! ಉತ್ತಮ ವೇತನ ಮತ್ತು ಕಮಿಷನ್ ಕಾಲ್: 9779977427

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

★॥ಶ್ರೀಕ್ಷೇತ್ರ, ಧರ್ಮಸ್ಥಳದಿಂದ॥★ ನೇರಪರಿಹಾರ ಉಚಿತ_ಸಲಹೆ ಖಚಿತ ಪರಿಹಾರ ನಿಮ್ಮಸಮಸ್ಯೆ ಏನೇಯಿರಲಿ ಎಷ್ಟೇಕಠಿಣವಾಗಿರಲಿ 3ದಿನದಲ್ಲಿ ಪರಿಹಾರ ಶತಸಿದ್ಧ. ಸಂಪರ್ಕಿಸಿ: ಮಂಜುನಾಥ್‌ಭಟ್ 9880522577

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 7795544894.

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ, ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9844174018

ರೆಂಟಲ್ ಪ್ರಾಪರ್ಟೀಸ್

Accommodation Wanted

Commercial

WE Are Pharmaceutical Company, Looking For Rentals Commercial Shops In Bangalore Areas Like (JP Nagar/ Jaynagar 4th Block, Koramangala, Electronics City, Mahadevapura , Banaswadi, Yelhanka Nes) Minimum 900 SQFT To 2000 SQFT, Ten Or Twenty Years Agreement Will Be There, Agents Not Allowed, Contact: 7338133755/ 7829689303.

ಶಿಕ್ಷಣ

Coaching Classes

ACE INDIA IAS Rajarajeshwarinagar Banglore coaching for IAS/KAS/ Banking started admissions. Contact: 9019308383 9845655761

ಪ್ರವಾಸ

Travel

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್ಸು AC ರೂಮ್‌ನಲ್ಲಿ 26.02.2023 15.03.2023 8 ದಿನಗಳ ಕಾಶಿ,ಅಲಹಾಬಾದ್ ಬುದ್ಧಗಯಾ. 23.04.2023 05.05.2023 ಚಾರ್‌ಧಾಮ್ ಸಮೇತ. 24.04.2023 ಸಿಮ್ಲಾ,ಕುಲುಮನಾಲಿ ವೈಷ್ಣೋದೇವಿ 14.04.2023 ಪೂರಿಜಗನ್ನಾಥ್ ಕಲ್ಕತ್ತಾ ಗ್ಯಾಂಗ್ ಟಾಕ್ ಡಾರ್ಜಿಲಿಂಗ್. 26.04.2023 31/27 ದಿನಗಳ ದೆಹಲಿ,ಜೈಪುರ್,ಅಯೋಧ್ಯ, ನೇಪಾಳ ಚಾರ್‌ಧಾಮ್ ದಕ್ಷಿಣ ಮಧ್ಯಭಾರತ ಪ್ರವಾಸಗಳಿಗೆ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 9448508708 9686708171

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 25.04.2023 16.05.2023 28.05.2023 ರಿಂದ 10/13/16 ದಿನಗಳ ಯುರೋಪ್ ಪ್ರವಾಸಗಳು. 29.03.2023 09.04.2023 27.04.2023 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 27.03.2023 11.04.2023 ರಿಂದ 6 ದಿನಗಳ ದುಬೈ,ಅಬುಧಾಬಿ. 24.03.2023 23.04.2023 ರಿಂದ 8 ದಿನಗಳ ಕಾಶಿ,ಗಯಾ. 09.04.2023 22.04.2023 ರಿಂದ 11 ದಿನಗಳ ಕಾಶಿ,ನೇಪಾಳ ಮುಕ್ತಿನಾಥ. 12.04.2023 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ 22.04.2023 13.05.2023 ರಿಂದ 12 ದಿನಗಳ ಶಿಮ್ಲಾ,ಮನಾಲಿ. ಅಮೃತ್‌ಸರ್ 27.04.2023 03.05.2023 ರಿಂದ 15 ದಿನಗಳ ಚಾರ್‌ಧಾಮ್ ಪ್ರವಾಸಗಳಿಗೆ ಇಂದೇ ವಿಚಾರಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

15.03.2023 6ದಿನಗಳು ವಿಮಾನದಲ್ಲಿ,A/c Busನಲ್ಲಿ ಕಾಶಿ,ಗಯಾ, ಬೋಧಗಯಾ ಅಯೋಧ್ಯ ಅಲಹಾಬದ್,(ಕೆಲವೇ ಸೀಟುಗಳಿವೆ)28000/ ಪ್ರತಿತಿಂಗಳು ಅಂಡಮಾನ್ ಹವಳದ್ವೀಪ ಹಡಗು/ವಿಮಾನದಲ್ಲಿ. Royal_Package "ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್" 9845560219/ 9739847429.

23.04.2023 10.05.2023 ರಿಂದ 14/21/19 ದಿನಗಳ ಬದರಿನಾಥ್ ಕೇದಾರನಾಥ್ ಗಂಗೋತ್ರಿ ಯುಮುನೋತ್ರಿ ಅಮೃತ್‌ಸರ್ ವೈಷ್ಣೋದೇವಿ ದೆಹಲಿ,ಕಾಶಿ,ಗಯಾ,ಪ್ರಯಾಗ ಅಯೋಧ್ಯ. 05.03.2023 ರಿಂದ 15 ದಿನಗಳ ಓಂಕಾರೇಶ್ವರ ಉಜ್ಜಯಿನಿ,ದ್ವಾರಕ ಮಾತೃಗಯಾ ಸಂಪರ್ಕಿಸಿ: 'ಶ್ರೀಸುಧಾ ಟ್ರಾವಲ್ಸ್' 22429289 9019301300 9448119290

ನಮ್ಮ ಕಾಶಿಯಾತ್ರೆಗೆ ಅಥವಾ ಮುಕ್ತಿನಾಥ ನೇಪಾಳ ಯಾತ್ರೆಗೆ ನಿಮ್ಮ ಹೆತ್ತವರನ್ನು ಕಳಿಸಿಕೊಡಿ. ಕಾಳಜಿಯಿಂದ ಪ್ರವಾಸ ಮಾಡಿಸುತ್ತೇವೆ. ನಾಲಂದಾ, ಕುಂದಾಪುರ 8310028157.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 23/02/23 ವೈಷ್ಣೋದೇವಿ, ದೆಹಲಿ, ಅಮೃತಸರ, ಇತ್ಯಾದಿ. 27/03/23ಕಾಶಿ, ಅಯೋಧ್ಯ. 09/03/23 ನೇಪಾಳ, ಮುಕ್ತಿನಾಥ 9591017782/9964527782

ಸಾರ್ವಜನಿಕ ಪ್ರಕಟಣೆ

ಪ್ರಕಟಣೆ
ಶ್ರೀ ಪ್ರದೀಪ್ ಹೆಚ್ ಕೆ S/o ಹನುಮಂತರಾಯ ಕೇರಾಫ್ ಗೋಪಾಲರೆಡ್ಡಿ ಬಿಲ್ಡಿಂಗ್ ನಂ. 245, ಸಿಂಗಸಂದ್ರ ಹೊಸೂರ್ ರೋಡ್, ಬೆಂಗಳೂರು 68
ಮೆ. ಹೈಕಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ನೀವು ದಿನಾಂಕ:18.10.2021 ರಿಂದ ಕೆಲಸಕ್ಕೆ ಗೈರುಹಾಜರಾಗಿದ್ದೀರಿ. ನಿಮ್ಮ ಇತ್ತೀಚಿನ ವಿಳಾಸಕ್ಕೆ ಆಡಳಿತ ಮಂಡಳಿಯು ನೋಟಿಸ್‌ಗಳನ್ನು ಕೂಡ ಜಾರಿಗೊಳಿಸಿರುತ್ತದೆ. ಆದರೆ, ಅಂಚೆ ಪ್ರಾಧಿಕಾರದಿಂದ "ಸದರಿ ವಿಳಾಸದಲ್ಲಿ ಉಲ್ಲೇಖಿತ ವ್ಯಕ್ತಿಯು ಇರುವುದಿಲ್ಲ" ಎಂಬ ಷರಾದೊಂದಿಗೆ ಅಂಚೆ ಲಕೋಟೆಯು ಹಿಂದಿರುಗಿ ಬಂದಿರುತ್ತದೆ. ಹೀಗಾಗಿ ಸದರಿ ನೋಟಿಸ್‌ನ್ನು ದಿನಾಂಕ: 28.01.2023 ರಂದು ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಪತ್ರಿಕೆಯಲ್ಲಿ ಪ್ರಕಟಣೆ ಪ್ರಕಟಗೊಂಡ ನಂತರವೂ ನಿಮ್ಮಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಹೀಗಾಗಿ, ನೀವು ಸದರಿ ಉದ್ಯೋಗದಲ್ಲಿ ಆಸಕ್ತಿ ಹೊಂದಿರುವುದಿಲ್ಲ ಎಂಬುದು ಸ್ಪಷ್ಟವಾಗಿ ದೆ ಮತ್ತು ನೀವೇ ಸ್ವತಃ ಉದ್ಯೋಗವನ್ನು ಕೈಬಿಟ್ಟಿರುವುದು ಖಾತರಿಯಾಗಿದೆ ಹಾಗೂ ಕಂಪನಿಯ ಸೇವೆಗಳಿಂದ ನಿಮ್ಮನ್ನು ವಜಾಗೊಳಿಸಲಾಗಿದೆ. ಒಟ್ಟಾರೆ ನೀವು, ನಿಮ್ಮ ಸ್ವಇಚ್ಛೆಯ ಮೇರೆಗೆ ಸದರಿ ಉದ್ಯೋಗವನ್ನು ಕೈಬಿಟ್ಟಿದ್ದೀರಿ ಎಂದು ಪರಿಗಣಿಸಲ್ಪಟ್ಟಿದೆ.
ಹೈಕಾಲ್ ಟೆಕ್ನಾಲಜೀಸ್ ಪ್ರೈ. ಲಿ., ಪರವಾಗಿ ಸರ್ವೆ ನಂ. 46 & 47, ಇಲೆಕ್ಟ್ರಾನಿಕ್ ಸಿಟಿ ಫೇಸ್ 2, ಬೆಂಗಳೂರು 560100.
ದಿನಾಂಕ: 14.02.2023

ಪ್ರಕಟಣೆ
ಶ್ರೀ ಕೆ ಎಲ್ ಶ್ರೀನಿವಾಸ್ S/o ಲಕ್ಕಯ್ಯ, ಕುರುಬರ ಪಾಳ್ಯ ಕುರುಡಿ, ಗೌರಿಬಿದನೂರು, ಚಿಕ್ಕಬಳ್ಳಾಪುರ
ಮೆ. ಹೈಕಾಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ನೀವು ದಿನಾಂಕ: 18.11.2021 ರಿಂದ ಕೆಲಸಕ್ಕೆ ಗೈರುಹಾಜರಾಗಿದ್ದೀರಿ. ನಿಮ್ಮ ಇತ್ತೀಚಿನ ವಿಳಾಸಕ್ಕೆ ಆಡಳಿತ ಮಂಡಳಿಯು ನೋಟಿಸ್‌ಗಳನ್ನು ಕೂಡ ಜಾರಿಗೊಳಿಸಿರುತ್ತದೆ. ಆದರೆ, ಅಂಚೆ ಪ್ರಾಧಿಕಾರದಿಂದ "ಡೋರ್ ಲಾಕ್" ಎಂಬ ಷರಾದೊಂದಿಗೆ ಅಂಚೆ ಲಕೋಟೆ ಹಿಂದಿರುಗಿ ಬಂದಿರುತ್ತದೆ. ಹೀಗಾಗಿ ಸದರಿ ನೋಟಿಸ್‌ನ್ನು ದಿನಾಂಕ: 28.01.2023 ರಂದು ಪ್ರಜಾವಾಣಿ ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಪತ್ರಿಕೆಯಲ್ಲಿ ಪ್ರಕಟಣೆ ಪ್ರಕಟಗೊಂಡ ನಂತರವೂ ನಿಮ್ಮಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಹೀಗಾಗಿ, ನೀವು ಸದರಿ ಉದ್ಯೋಗದಲ್ಲಿ ಆಸಕ್ತಿ ಹೊಂದಿರುವುದಿಲ್ಲ ಎಂಬುದು ಸ್ಪಷ್ಟವಾಗಿ ದೆ ಮತ್ತು ನೀವೇ ಸ್ವತಃ ಉದ್ಯೋಗವನ್ನು ಕೈಬಿಟ್ಟಿರುವುದು ಖಾತರಿಯಾಗಿದೆ ಹಾಗೂ ಕಂಪನಿಯ ಸೇವೆಗಳಿಂದ ನಿಮ್ಮನ್ನು ವಜಾಗೊಳಿಸಲಾಗಿದೆ. ಒಟ್ಟಾರೆ ನೀವು, ನಿಮ್ಮ ಸ್ವಇಚ್ಛೆಯ ಮೇರೆಗೆ ಸದರಿ ಉದ್ಯೋಗವನ್ನು ಕೈಬಿಟ್ಟಿದ್ದೀರಿ ಎಂದು ಪರಿಗಣಿಸಲ್ಪಟ್ಟಿದೆ.
ಹೈಕಾಲ್ ಟೆಕ್ನಾಲಜೀಸ್ ಪ್ರೈ. ಲಿ., ಪರವಾಗಿ ಸರ್ವೆ ನಂ. 46 & 47, ಇಲೆಕ್ಟ್ರಾನಿಕ್ ಸಿಟಿ ಫೇಸ್ 2, ಬೆಂಗಳೂರು 560100.
ದಿನಾಂಕ: 14.02.2023

ಪ್ರಜಾವಾಣಿ
ರಿಯಲ್ ಎಸ್ಟೇಟ್
ಪ್ರತಿ ಶುಕ್ರವಾರ + ಶನಿವಾರ + ಭಾನುವಾರ ಪ್ರಜಾವಾಣಿ ಆಲ್ ಕರ್ನಾಟಕ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2100/-*
FOR 15 WORDS
*ಷರತ್ತುಗಳು ಅನ್ವಯ
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9886213331 | 9731810277
9901641752 | 9845114560 |
080- 45557163 | 45557164

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಸೌಲಭ್ಯದ ಪ್ರಯೋಜನ ಪಡೆಯಿರಿ.

20 ಕಿ.ಮೀ. ರೇಸ್‌ವಾಕ್: ಪ್ರಿಯಾಂಕಾ ಗೋಸ್ವಾಮಿಗೂ ಅರ್ಹತೆ

ಅಕ್ಷದೀಪ್‌ಗೆ ಒಲಿಂಪಿಕ್ಸ್ ಟಿಕೆಟ್

ರಾಂಚಿ (ಪಿಟಿಐ): ಅಕ್ಷದೀಪ್ ಸಿಂಗ್ ಹಾಗೂ ಪ್ರಿಯಾಂಕಾ ಗೋಸ್ವಾಮಿ ಅವರು ರಾಷ್ಟ್ರೀಯ ಓಪನ್ ರೇಸ್ ವಾಕಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಕ್ರಮವಾಗಿ ಪುರುಷ ಹಾಗೂ ಮಹಿಳೆಯರ ವಿಭಾಗಗಳಲ್ಲಿ ಚಿನ್ನ ಜಯಿಸಿದರು. ಅದರೊಂದಿಗೆ ಈ ವರ್ಷದ ವಿಶ್ವ ಚಾಂಪಿಯನ್‌ಶಿಪ್ ಮತ್ತು 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಶಿಪ್‌ನಲ್ಲಿ ಮಂಗಳವಾರ 20 ಕಿ.ಮೀ ವಿಭಾಗದ ಸ್ಪರ್ಧೆಯನ್ನು ಅಕ್ಷದೀಪ್ 1 ತಾಸು 19 ನಿಮಿಷ 55 ಸೆಕೆಂಡುಗಳಲ್ಲಿ ಕೊನೆಗೊಳಿಸಿದರು. ಇದರೊಂದಿಗೆ 22 ವರ್ಷದ ಅಥ್ಲೀಟ್, ರಾಷ್ಟ್ರೀಯ ದಾಖಲೆ ನಿರ್ಮಿಸಿದರು. ಈ ಹಿಂದೆ ಸಂದೀಪ್ ಕುಮಾರ್ (1 ತಾಸು 20 ನಿ. 16 ಸೆ.) ಸ್ಥಾಪಿಸಿದ್ದ ದಾಖಲೆಯನ್ನು ಅಳಿಸಿಹಾಕಿದರು. ಸಂದೀಪ್ ಈ ಬಾರಿ ಏಳನೇ ಸ್ಥಾನ (1 ತಾಸು 23 ನಿ. 28 ಸೆ.) ಗಳಿಸಿದರು.

ಪ್ರಿಯಾಂಕಾ ಗೋಸ್ವಾಮಿ

ಅಕ್ಷದೀಪ್ ಸಿಂಗ್

ವಿಶ್ವ ಚಾಂಪಿಯನ್‌ಶಿಪ್ ಬುಡಾಪೆಸ್ಟ್‌ನಲ್ಲಿ ಆಗಸ್ಟ್‌ನಲ್ಲಿ ನಡೆಯಲಿದೆ. ಒಲಿಂಪಿಕ್ಸ್ ಹಾಗೂ ವಿಶ್ವಚಾಂಪಿಯನ್‌ಶಿಪ್‌ಗೆ 1 ತಾಸು 20 ನಿ. 10 ಸೆ. ಸಮಯ ಅರ್ಹತಾ ಮಾನದಂಡವಾಗಿದೆ. ಅಕ್ಷದೀಪ್ ಅವರು ಕಳೆದ ವರ್ಷ ಕರ್ನಾಟಕದ ಮೂಡಬಿದಿರೆಯಲ್ಲಿ ನಡೆದ ಅಂತರ ವಿಶ್ವವಿದ್ಯಾಲಯ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ಸ್ಥಾನ ಗಳಿಸಿದ್ದರು.

ಮಹಿಳೆಯರ 20 ಕಿ.ಮೀ. ವಿಭಾಗದ ಸ್ಪರ್ಧೆಯಲ್ಲಿ ಪ್ರಿಯಾಂಕಾ ನಿರೀಕ್ಷೆಯಂತೆ ಚಿನ್ನ ಜಯಿಸಿದರು. ಅವರು 1 ತಾಸು 28 ನಿ. 50 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ರಾಷ್ಟ್ರೀಯ ದಾಖಲೆ ಅವರದೇ ಹೆಸರಿನಲ್ಲಿದೆ. 2021ರಲ್ಲಿ 1 ತಾಸು 28 ನಿ. 45 ಸೆಕೆಂಡುಗಳ ಸಾಧನೆ ಮಾಡಿ ಅವರು ದಾಖಲೆ ಸ್ಥಾಪಿಸಿದ್ದರು.

ಮಹಿಳೆಯರಿಗಾಗಿ, ವಿಶ್ವ ಚಾಂಪಿಯನ್‌ಶಿಪ್ ಮತ್ತು ಒಲಿಂಪಿಕ್ಸ್ ಅರ್ಹತಾ ಮಾನದಂಡದ ಸಮಯ 1 ತಾಸು 29 ನಿ. 20 ಸೆಕೆಂಡು ಆಗಿದೆ.

ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್: ಗೋವಿಂದರಾಜ್ ನಾಮನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಅಧ್ಯಕ್ಷ, ಕರ್ನಾಟಕದ ಕೆ. ಗೋವಿಂದರಾಜ್ ಅವರು ಫಿಬಾ ಏಷ್ಯಾ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷ ಹುದ್ದೆಗೆ ನಾಮನಿರ್ದೇಶನಗೊಂಡಿದ್ದಾರೆ.

‘44 ಸದಸ್ಯ ರಾಷ್ಟ್ರಗಳನ್ನು ಹೊಂದಿರುವ ಏಷ್ಯಾ ಸಂಸ್ಥೆಯ ಪ್ರಮುಖ ಹುದ್ದೆಗೆ ನೇಮಕವಾಗಲಿರುವ ಭಾರತದ ಮೊದಲ ವ್ಯಕ್ತಿ ಅವರಾಗಿದ್ದಾರೆ. ಕೆಲವೇ ವಾರಗಳ ಬಳಿಕ ನಡೆಯಲಿರುವ ಫಿಬಾ ಏಷ್ಯಾ ಸಂಸ್ಥೆಯ ಸಭೆಯಲ್ಲಿ ಗೋವಿಂದರಾಜ್ ಅವರ ನೇಮಕವನ್ನು ಅನುಮೋದಿಸಲಾಗುತ್ತದೆ’ ಎಂದು ಬಿಎಫ್‌ಐ ಪ್ರಧಾನ ಕಾರ್ಯದರ್ಶಿ ಚಂದ್ರಮುಖಿ ಶರ್ಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗೋವಿಂದರಾಜ್

ಈ ಕುರಿತು ಪ್ರತಿಕ್ರಿಯಿಸಿರುವ ಗೋವಿಂದರಾಜ್ ‘ಏಷ್ಯಾದಲ್ಲಿ ಬ್ಯಾಸ್ಕೆಟ್‌ಬಾಲ್ ಬೆಳಣಿಗೆಗೆ ಶ್ರಮಿಸಲು ಅಧ್ಯಕ್ಷ ಹುದ್ದೆಯ ಜವಾಬ್ದಾರಿ ವಹಿಸಿಕೊಳ್ಳುವೆ. ಇದು ಭಾರತದ ಕ್ರೀಡಾಕ್ಷೇತ್ರಕ್ಕೆ ಸಂದ ಗೌರವ. ಈ ಸ್ಥಾನಕ್ಕೇರಿದ ಮೊದಲ ಕನ್ನಡಿಗ ಎಂಬುದು ಹೆಮ್ಮೆಯ ವಿಷಯ‘ ಎಂದಿದ್ದಾರೆ.

ಸುಧಾ, ಮಯೂರ ಓದಿರಿ

ಉದ್ಯೋಗ ವಾಣಿ

WANTED
Location : MANDYA

* **Hostel / Mess Supervisor** (Male)
* **Warden** (Female)
Any degree with good communication Skills (Age must be above 35 years)
* **Physical Education Teacher**
B.P.Ed./ M.P.Ed.
* **Hostel Tutors** B.Sc., B.Ed., or B.A.,B.Ed., (Free food and accommodation will be provided)

Interested Candidates can send their Resume to
mandyajobs2023@gmail.com

STELLA MARIS SCHOOL AND PU COLLEGE
ಸ್ಟೆಲ್ಲಾ ಮೇರಿಸ್ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು
ಪ್ರೀತಿಯು ಎಲ್ಲವನ್ನು ಗೆಲ್ಲುತ್ತದೆ ‘ LOVE CONQUERS EVERYTHING’
Estd. 1990
Residential and Day Scholars (State Board syllabus)
(limited seats for residential students)
Admissions are Open for the academic year 2023-2024
From 18th January 2023. Onward from PKG to 2nd PUC.
Science: PCMB & PCMC, Commerce: EBACs

REQUIREMENT OF TEACHING FACULTY:
DEDICATED, DISCIPLINED, DYNAMIC, STUDIOUS and PASSIONATE Professionals with good oral and written Communication skills can apply and walk in.

WALK IN INTERVIEW ON 26-02-2023 (Sunday) between 10.00 am to 4-00 PM

- Nursery / Primary Teachers. *NTT, Montessori Trained, B.Ed With Graduation*
- Middle school Teachers *(Grade V to Grade VIII).Graduation / PG With Bed*
- PE Teachers *(Both Male and Female).CPEd, BPEd, MPEd*
- *Office assistants .MCOM With perfect knowledge of comp with Ps&Coral draw*
- Senior Secondary Teachers. (Grade IX to Grade XII)

01. MSc B.Ed - Physics
02. MSc B.Ed - Chemistry
03. MSc B.Ed - Biology
04. MSc B.Ed - Mathematics
05. MA B.Ed - Economics
06. MA B.Ed - English
07. MCA / MSc Cs with B.Ed
08. MSW / MBA - HR with SATS work
09. MA B.Ed, HIST.

Attractive Salary
Free Accommodation
Peaceful Atmosphere and
A Wonderful Place to Learn

Experienced / Fresher who have passion towards teaching profession with desired qualification, are asked to apply for *ALL THE SUBJECTS.*
Send your resume with recent passport size photograph to Stellamaris9977@gmail.com with your correct reachable mobile number with in **7 days .**
Contact: Front Off: 9141824023, 08132220477, Principal-9972744616, 9972744619, ACEO-9901741177, Mgr-9141407655, HM- 9141407660,
Website : www.stellaeducationalacademy.in

ಐಎಸ್‌ಎಲ್: ಚೆಟ್ರಿ ಬಳಗಕ್ಕೆ ಜಯದ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲೇ ಆಫ್ ಅರ್ಹತೆಯ ಅಂಚಿನಲ್ಲಿರುವ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಬುಧವಾರ ಮುಂಬೈ ಸಿಟಿ ಎಫ್‌ಸಿ ಸವಾಲು ಎದುರಿಸಲಿದೆ.

ಸತತ ಆರು ಪಂದ್ಯಗಳಲ್ಲಿ ಗೆಲುವಿನ ಸಿಹಿ ಉಂಡಿರುವ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿರುವ ಈ ಪಂದ್ಯವನ್ನೂ ತನ್ನದಾಗಿಸಿಕೊಳ್ಳುವ ವಿಶ್ವಾಸದಲ್ಲಿದೆ. ಮುಂಬೈ ಕೂಡ ಪೈಪೋಟಿ ನೀಡಲು ಸಜ್ಜಾಗಿದೆ.

ಶನಿವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿ 1–0ಯಿಂದ ಬಲಿಷ್ಠ ಕೇರಳ ಬ್ಲಾಸ್ಟರ್ಸ್ ಎದುರು ಗೆದ್ದಿತ್ತು. ಆ ಹಣಾಹಣಿಯಲ್ಲಿ ಹಳದಿ ಕಾರ್ಡ್ ಪಡೆದಿದ್ದ ಬೆಂಗಳೂರು ತಂಡದ ರಾಯ್‌ಕೃಷ್ಣ ಮತ್ತು ಪರಾಗ್ ಶ್ರೀವಾಸ್ ಮುಂಬೈ ವಿರುದ್ಧ ಆಡುತ್ತಿಲ್ಲ. ಹೀಗಾಗಿ ಸುನಿಲ್ ಚೆಟ್ರಿ ಅವರಿಗೆ ಅವಕಾಶ ಸಿಗುವ ಸಾಧ್ಯತೆಯಿದೆ. ಟೂರ್ನಿಯ ಎಲ್ಲ ಆವೃತ್ತಿಗಳೂ ಸೇರಿ ಮುಂಬೈ ವಿರುದ್ಧ ಏಳು ಗೋಲು ದಾಖಲಿಸಿರುವ ಚೆಟ್ರಿ, ಇಲ್ಲಿಯೂ ಮಿಂಚುವ ನಿರೀಕ್ಷೆಯಿದೆ.

ಸುನಿಲ್ ಚೆಟ್ರಿ ಅಭ್ಯಾಸ
– ಬಿಎಫ್‌ಸಿ ಮೀಡಿಯಾ ಚಿತ್ರ

ಈ ಹಿಂದೆ ತಾನಾಡಿದ ಪಂದ್ಯದಲ್ಲಿ ಮುಂಬೈ 5–3ರಿಂದ ಎಫ್‌ಸಿ ಗೋವಾ ತಂಡವನ್ನು ಮಣಿಸಿತ್ತು. ಜೊರ್ಗ್ ಪೆರೇರ ಡಿಯಾಜ್ (ಈ ಆವೃತ್ತಿಯಲ್ಲಿ 11 ಗೋಲು), ಮತ್ತು ಲಲ್ಲಿಂಜುವಾಲಾ ಚಾಂಗ್ಟೆ (10) ಹಾಗೂ ಬಿಪಿನ್ ಸಿಂಗ್ (6) ಉತ್ತಮ ಆಟ ಮುಂದುವರಿಸುವ ಕಾತರದಲ್ಲಿದ್ದಾರೆ. ಉಭಯ ತಂಡಗಳ ನಡುವೆ ಜಿದ್ದಾಜಿದ್ದಿ ನಿರೀಕ್ಷಿಸಬಹುದು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ವಿಶ್ವಕಪ್: ಭಾರತಕ್ಕೆ ಇಂದು ವೆಸ್ಟ್ ಇಂಡೀಸ್ ಸವಾಲು

ಜಯದತ್ತ ಹರ್ಮನ್ ಪಡೆ ಚಿತ್ತ

ಕೇಪ್‌ಟೌನ್ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಗಳಿಸಿದ ಜಯದಿಂದ ಅಪಾರ ಆತ್ಮವಿಶ್ವಾಸದಲ್ಲಿದೆ.

ಬುಧವಾರ ನಡೆಯಲಿರುವ ವೆಸ್ಟ್ ಇಂಡೀಸ್ ಎದುರಿನ ಪಂದ್ಯದಲ್ಲಿಯೂ ಜಯದ ಓಟ ಮುಂದುವರಿಸುವ ಹುರುಪಿನಲ್ಲಿದೆ. ಮೊದಲ ಪಂದ್ಯದಲ್ಲಿ ಭಾರತದ ಬ್ಯಾಟರ್‌ಗಳು ಉತ್ತಮವಾಗಿ ಆಡಿದ್ದರು. ಶಫಾಲಿ ವರ್ಮಾ, ಹರ್ಮನ್, ಅರ್ಧಶತಕ ಗಳಿಸಿದ್ದ ಜೆಮಿಮಾ ರಾಡ್ರಿಗ್ಸ್ ಹಾಗೂ ಕೊನೆಯ ಹಂತದಲ್ಲಿ ಮಿಂಚಿದ್ದ 18 ವರ್ಷದ ವಿಕೆಟ್‌ಕೀಪರ್–ಬ್ಯಾಟರ್ ರಿಚಾ ಘೋಷ್ ತಂಡಕ್ಕೆ ಜಯದ ಕಾಣಿಕೆ ನೀಡಿದ್ದರು.

ಆದರೆ ಬೌಲರ್‌ಗಳ ಪ್ರದರ್ಶನ ಸಾಧಾರಣವಾಗಿತ್ತು. ಈ ವಿಭಾಗದಲ್ಲಿ ಸುಧಾರಣೆಗಳೊಂದಿಗೆ ಕಣಕ್ಕಿಳಿಯುವತ್ತ ಹರ್ಮನ್ ಬಳಗ ಚಿತ್ತ ನೆಟ್ಟಿದೆ. ಪಾಕ್ ವಿರುದ್ಧ ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಭಾರತ ಬೌಲರ್‌ಗಳು 91 ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ಜೊತೆಯಾಟಗಳನ್ನು ಮುರಿಯುವ ಮತ್ತು ರನ್‌ಗಳಿಗೆ ಕಡಿವಾಣ ಹಾಕಿದರೆ ಯಶಸ್ಸು ಖಚಿತ.

ಭಾರತ ತಂಡದ ವಿಕೆಟ್‌ಕೀಪರ್ ರಿಚಾ ಘೋಷ್ –ಪಿಟಿಐ ಚಿತ್ರ

ಫೀಲ್ಡಿಂಗ್‌ನಲ್ಲಿಯೂ ಇನ್ನಷ್ಟು ಚುರುಕುತನ ತೋರಿದರೆ ಮತ್ತಷ್ಟು ರನ್‌ಗಳನ್ನು ತಡೆಯಬಹುದು. ಕ್ಯಾಚ್‌ಗಳನ್ನು ಕೈಚೆಲ್ಲದಿದ್ದರೆ ಎದುರಾಳಿಗಳನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಬಹುದು.

ಪಂದ್ಯ ಆರಂಭ: ಸಂಜೆ 6.30.
ಇನ್ನೊಂದು ಪಂದ್ಯ: ಪಾಕಿಸ್ತಾನ–ಐರ್ಲೆಂಡ್. ಆರಂಭ: ರಾತ್ರಿ 10.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ನೆಟ್‌ಬಾಲ್: ಬೆಂಗಳೂರು ನಗರ ವಿವಿಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಅಂತರ ಕಾನೂನು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ನೆಟ್‌ಬಾಲ್ ಚಾಂಪಿಯನ್‌ಶಿಪ್‌ನ ಮೊದಲ ದಿನ ಬೆಂಗಳೂರು ನಗರ ವಿವಿ ಹಾಗೂ ಬೆಂಗಳೂರು ವಿವಿ ತಂಡಗಳು ಜಯ ಗಳಿಸಿದವು

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಬೆಂಗಳೂರು ಸೌಂದರ್ಯ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಾಗಸಂದ್ರ ಸೌಂದರ್ಯ ಕಾನೂನು ಮಹಾವಿದ್ಯಾಲಯದ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಶಿಪ್‌ನಲ್ಲಿ ಮಂಗಳವಾರ ಬೆಂಗಳೂರು ನಗರ ವಿವಿ 65–21ರಿಂದ ಆಚಾರ್ಯ ನಾಗಾರ್ಜುನ ವಿವಿ ಎದುರು ಗೆದ್ದಿತು.

ಮತ್ತೊಂದು ಪಂದ್ಯದಲ್ಲಿ ಬೆಂಗಳೂರು ವಿವಿ 36–18ರಿಂದ ಆದಿಕವಿ ನಾಣಯ್ಯ ವಿವಿ ಎದುರು ಜಯಿಸಿತು. ದಾವಣಗೆರೆ ವಿವಿ 25–38ರಿಂದ ಸೌರಾಷ್ಟ್ರ ವಿವಿ ವಿರುದ್ಧ, ಕರ್ನಾಟಕ ಕಾನೂನು ವಿವಿ 39–27ರಿಂದ ರಾಮಮನೋಹರ್ ಲೋಹಿಯಾ ವಿವಿ ಅವಧ್ ವಿರುದ್ಧ ಜಯ ಗಳಿಸಿದವು.

ಕರ್ನಾಟಕ ಲೋಕಸೇವಾ ಆಯೋಗ

‘‘ಉದ್ಯೋಗ ಸೌಧ’’, ಬೆಂಗಳೂರು - 560 001

ಸಂಖ್ಯೆ: ಪಿಎಸ್‌ಸಿ 550 ಇಪ/2022–23/525 ದಿನಾಂಕ: 14.02.2023

ಸಂಕ್ಷಿಪ್ತ ಸೇರ್ಪಡೆ ಅಧಿಸೂಚನೆ

ಆಯೋಗವು ನಡೆಸಲಿರುವ 2021ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಸಂಖ್ಯೆ: ಪಿಎಸ್‌ಸಿ 550 ಇಪ/22–23/438 ದಿನಾಂಕ: 06.01.2023ರ ಅಧಿಸೂಚನೆಯಲ್ಲಿ ಅರ್ಹ ಸರ್ಕಾರಿ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಅಧಿಕಾರಿ/ನೌಕರರುಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಕಾರಣಾಂತರದಿಂದಾಗಿ ಹಾಗೂ ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಮತ್ತು ಶುಲ್ಕ ಪಾವತಿಸಲು ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಲಾಗಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: **14.02.2023**. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ: **16.02.2023**. ಅರ್ಹ ಅಭ್ಯರ್ಥಿಗಳು ಮೇಲ್ಕಂಡ ದಿನಾಂಕದೊಳಗಾಗಿ ಕೆ.ಪಿ.ಎಸ್.ಸಿ ಅಧಿಕೃತ ಅಂತರ್ಜಾಲ **https://kpsc.kar.nic.in** ನಲ್ಲಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಸಲ್ಲಿಸುವುದು ಮತ್ತು ಆನ್‌ಲೈನ್ ಮೂಲಕವೇ ಶುಲ್ಕವನ್ನು ಪಾವತಿಸತಕ್ಕದ್ದು. ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಆಯೋಗದ ಮೇಲ್ಕಂಡ ಅಧಿಕೃತ ವೆಬ್‌ಸೈಟ್ ನಲ್ಲಿ ಪ್ರಕಟಿಸಿರುವ ದಿನಾಂಕ: **06.01.2023**ರ ಅಧಿಸೂಚನೆಯನ್ನು ಮತ್ತು ದಿನಾಂಕ: **13.02.2023**ರ ಸೇರ್ಪಡೆ ಅಧಿಸೂಚನೆಯನ್ನು ನೋಡಬಹುದಾಗಿದೆ ಹಾಗೂ ಅರ್ಜಿಗಳನ್ನು ಸಲ್ಲಿಸುವ ಹಂತದಲ್ಲಿ ತಾಂತ್ರಿಕ ಸಮಸ್ಯೆಗಳುಂಟಾದಲ್ಲಿ ಸೇವಾ ಸಿಂಧುವಿನ ಸಹಾಯವಾಣಿ ಸಂಖ್ಯೆ: 8088304855, 9380206704 ಮತ್ತು 080–22279954 ಗಳನ್ನು ಸಂಪರ್ಕಿಸಿ ಮಾಹಿತಿ ಪಡೆಯಲು ಸೂಚಿಸಿದೆ.

ಸಹಿ/–
(ಆನಂದ್ ಹೆಚ್ ತಳವಾರ್)
ಉಪ ಕಾರ್ಯದರ್ಶಿ, ಇಲಾಖಾ ಪರೀಕ್ಷೆಗಳು,
ಕರ್ನಾಟಕ ಲೋಕಸೇವಾ ಆಯೋಗ.

ಟೆನಿಸ್: ನಗಾಲ್‌ಗೆ ಜಯದ ಆರಂಭ

ಚೆನ್ನೈ(ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಗೆಲುವಿನ ಆರಂಭ ಮಾಡಿದ್ದಾರೆ.

ಮಂಗಳವಾರ ಇಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಸುಮಿತ್ 6-4, 6–4ರಿಂದ ಗ್ರೇಟ್ ಬ್ರಿಟನ್‌ನ, ನಾಲ್ಕನೇ ಶ್ರೇಯಾಂಕದ ರ್‍ಯಾನ್ ಪೆನಿಸ್ಟನ್ ಅವರನ್ನು ಪರಾಭವಗೊಳಿಸಿದರು.

ಭಾರತದ ಪ್ರಜ್ಞೇಶ್ ಗುಣೇಶ್ವರನ್, ಮುಕುಂದ್ ಶಶಿಕುಮಾರ್ ಮತ್ತು ರಾಮಕುಮಾರ್ ರಾಮ್‌ನಾಥನ್ ಅವರು ಮೊದಲ ಸುತ್ತುಗಳಲ್ಲೇ ನಿರಾಸೆ ಅನುಭವಿಸಿದರು.

ಪ್ರಜ್ಞೇಶ್ 6–4, 3–6, 6–7ರಿಂದ ಬ್ರಿಟನ್‌ನ ಜಾಯ್ ಕ್ಲಾರ್ಕ್ ಎದುರು ಹೋರಾಟ ನೀಡಿ ಸೋತರು. ಮುಕುಂದ್ 2-6, 2-6ರಿಂದ ಆಸ್ಟ್ರೇಲಿಯಾದ ಮ್ಯಾಕ್ಸ್ ಪುರ್ಸೆಲ್ ಸುಲಭವಾಗಿ ಶರಣಾದರು. ರಾಮ್‌ಕುಮಾರ್ 3–6, 6–7ರಿಂದ ಬಲ್ಗೇರಿಯಾದ ಡಿಮಿತಾರ್ ಕುಜಮನೊವ್ ಎದುರು ಮಣಿದರು.

ಸುಮಿತ್‌ಗೆ ವೈಲ್ಡ್‌ಕಾರ್ಡ್

ಬೆಂಗಳೂರು: ಭಾರತದ ಸುಮಿತ್ ನಗಾಲ್ ಅವರು ಬೆಂಗಳೂರು ಓಪನ್ ಟೆನಿಸ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಅಂಗಣದಲ್ಲಿ ಫೆ. 20ರಿಂದ ನಡೆಯಲಿರುವ ಟೂರ್ನಿಗೆ ಸುಮಿತ್ ವೈಲ್ಡ್ ಕಾರ್ಡ್ ಪಡೆದ ಮೊದಲ ಆಟಗಾರ ಆಗಿದ್ದಾರೆ.

‘ಕುಟುಕು’ ವಿವಾದದಲ್ಲಿ ಚೇತನ್ ಶರ್ಮಾ

ನವದೆಹಲಿ (ಪಿಟಿಐ): ಭಾರತ ತಂಡದ ಆಯ್ಕೆ ಪ್ರಕ್ರಿಯೆಯ ರಹಸ್ಯ ಮಾಹಿತಿಗಳನ್ನು ಬಿಸಿಸಿಐ ಆಯ್ಕೆ ಸಮಿತಿಯ ಮುಖ್ಯಸ್ಥ ಚೇತನ್ ಶರ್ಮಾ ಅವರು ಟಿವಿ ವಾಹಿನಿಯೊಂದರ ಕುಟುಕು ಕಾರ್ಯಾಚರಣೆಯಲ್ಲಿ ಬಹಿರಂಗಪಡಿಸಿದ ಆರೋಪಕ್ಕೆ ಸಿಲುಕಿದ್ದಾರೆ.

ಅವರು ತಂಡದ ಆಯ್ಕೆಯ ಕುರಿತು ಹಾಗೂ ಆಟಗಾರರ ಬಗ್ಗೆ ಮಾತನಾಡಿದ್ದನ್ನು ಝೀ ನ್ಯೂಸ್ ವಾಹಿನಿಯು ನಡೆಸಿದ ಕುಟುಕು ಕಾರ್ಯಾಚರಣೆಯಲ್ಲಿ ಬಹಿರಂಗಪಡಿಸಿದೆ.

ಕೆಲವು ತಿಂಗಳುಗಳ ಹಿಂದೆ ಶರ್ಮಾ ನೇತೃತ್ವದ ಆಯ್ಕೆ ಸಮಿತಿಯನ್ನು ವಜಾಗೊಳಿಸಲಾಗಿತ್ತು. ನಂತರ ಹೊಸ ಸಮಿತಿ ರಚಿಸಿ ಮತ್ತೆ ಶರ್ಮಾ ಅವರನ್ನೇ ಮುಖ್ಯಸ್ಥರನ್ನಾಗಿ ಮಾಡಲಾಗಿತ್ತು.

ಚೇತನ್ ಅವರು ತಂಡದ ಆಯ್ಕೆ ಸಭೆಯಲ್ಲಿ ಭಾರತದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಹಾಗೂ ವಿರಾಟ್ ಕೊಹ್ಲಿ ಅವರೊಂದಿಗೆ ನಡೆಸಿದ ಮಾತುಕತೆಯ ಅಂಶಗಳನ್ನು ಬಹಿರಂಗ ಮಾಡಿದ್ದು ವಿಡಿಯೊಗಳಲ್ಲಿದೆ.

ಚೇತನ್ ಶರ್ಮಾ

ವಿರಾಟ್ ಮತ್ತು ಜಸ್‌ಪ್ರೀತ್ ಬೂಮ್ರಾ ಅವರ ಆಯ್ಕೆಯ ಕುರಿತ ರಹಸ್ಯ ಅಂಶಗಳೂ ಕ್ಯಾಮೆರಾ ಮುಂದೆ ಬಹಿರಂಗಗೊಂಡಿವೆಯೆನ್ನಲಾಗಿದೆ.

ಶೇಕಡ 80ರಿಂದ 85ರಷ್ಟು ಫಿಟ್ ಆಗಿರುವ ಕ್ರಿಕೆಟಿಗರು ಸಾಮರ್ಥ್ಯವೃದ್ಧಿಯ ಚುಚ್ಚುಮದ್ದುಗಳನ್ನು ಪಡೆದು ತಂಡಕ್ಕೆ ಬರುತ್ತಾರೆ ಎಂದೂ ಚೇತನ್ ನೀಡಿರುವ ಹೇಳಿಕೆ ಈ ವಿಡಿಯೊದಲ್ಲಿದೆ ಎನ್ನಲಾಗಿದೆ. ಹೋದ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಗೆ ಮರಳಿದ್ದ ಬೂಮ್ರಾ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಅಲ್ಲದೇ ಭಾರತದ ತಂಡದ ಮಾಜಿ ನಾಯಕ ವಿರಾಟ್ ಕೊಹ್ಲಿ ಹಾಗೂ ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರ ನಡುವೆ ಭಿನ್ನಾಭಿಪ್ರಾಯವಿತ್ತು ಎಂಬುದನ್ನೂ ಚೇತನ್ ಕುಟುಕು ಕಾರ್ಯಾಚರಣೆಯಲ್ಲಿ ಹೇಳಿದ್ದಾರೆನ್ನಲಾಗಿದೆ.

ಈ ಕುರಿತು ಪ್ರತಿಕ್ರಿಯೆಗಾಗಿ ಶರ್ಮಾ ಅವರನ್ನು ಸಂಪರ್ಕಿಸಲು ಸುದ್ದಿಸಂಸ್ಥೆಯು ಪ್ರಯತ್ನಿಸಿತು. ಆದರೆ ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

‘ಪ್ರಕರಣದ ಕುರಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರೇ ಪರಿಶೀಲಿಸುವರು. ಚೇತನ್ ಭವಿಷ್ಯ ಜಯ್ ಕೈಯಲ್ಲಿದೆ. ಆದರೆ ಟಿ20 ತಂಡದ ನಾಯಕ ಹಾರ್ದಿಕ್ ಪಾಂಡ್ಯ ಅಥವಾ ಏಕದಿನ–ಟೆಸ್ಟ್ ನಾಯಕ ರೋಹಿತ್ ಶರ್ಮಾ ಅವರು ಮುಂಬರುವ ಸಭೆಗಳಲ್ಲಿ ಶರ್ಮಾ ಅವರೊಂದಿಗೆ ಭಾಗವಹಿಸಲು ಒಪ್ಪುವರೇ ಎಂಬುದನ್ನು ಕಾದುನೋಡಬೇಕು’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮರಣಕ್ಕೆ ಮುನ್ನ ಪೆನಾಲ್ಟಿ ತಡೆದ ಗೋಲ್‌ಕೀಪರ್

ಬೆಲ್ಜಿಯಂ (ರಾಯಿಟರ್ಸ್): ಬೆಲ್ಜಿಯಂ ಮೂಲದ ಗೋಲ್‌ಕೀಪರ್ ಆರ್ನೆ ಎಸ್ಪೀಲ್ (25) ಟೂರ್ನಿಯೊಂದರಲ್ಲಿ ವಿಂಕಲ್ ಸ್ಪೋರ್ಟ್ಸ್ ಬಿ ತಂಡದ ಪರವಾಗಿ ಆಡುವಾಗಲೇ ಸಾವನ್ನಪ್ಪಿದರು. ಕೊನೆಯುಸಿರೆಳೆಯುವ ಮುನ್ನ ಅವರು ಎದುರಾಳಿ ತಂಡವು ಪೆನಾಲ್ಟಿಯಲ್ಲಿ ಗೋಲು ಗಳಿಸುವ ಅವಕಾಶವನ್ನು ವಿಫಲಗೊಳಿಸಿದರು.

ಬೆಲ್ಜಿಯಂ ಪಶ್ಚಿಮ ಬ್ರಬಾಂಟ್ ಎರಡನೇ ಪ್ರಾಂತ ವಿಭಾಗದಲ್ಲಿರುವ ಕ್ಲಬ್ ತವರಿನಂಗಳದಲ್ಲಿ ನಡೆದ ಪಂದ್ಯದಲ್ಲಿ ವಿಂಕೆಲ್ 2–1ರಿಂದ ವೆಸ್ಟ್ರೊಜೆಬೆಕೆ ವಿರುದ್ಧ ಮುನ್ನಡೆಯಲ್ಲಿತ್ತು. ದ್ವಿತೀಯಾರ್ಧದಲ್ಲಿ ವೆಸ್ಟ್ರೊಜೆಬೆಕೆಗೆ ಪೆನಾಲ್ಟಿ ದೊರೆಯಿತು.

‘ಎದುರಾಳಿ ತಂಡದ ಆಟಗಾರ ಮಾಡಿದ ಕಿಕ್ ಅನ್ನು ತಡೆಯುವಲ್ಲಿ ಯಶಸ್ವಿಯಾದ ಎಸ್ಪೀಲ್ ನೆಲಕ್ಕೆ ಕುಸಿದರು. ತುರ್ತು ವೈದ್ಯಕೀಯ ತಂಡದ ಸಿಬ್ಬಂದಿಯು ಧಾವಿಸಿತು. ಅವರನ್ನು ಕೂಡಲೇ ಆಸ್ಪತ್ರೆಗೆ ರವಾನಿಸಲಾಯಿತು. ಆದರೆ ಅವರು ಅಷ್ಟರಲ್ಲೇ ಕೊನೆಯುಸಿರೆಳೆದಿದ್ದರು’ ಎಂದು ಬೆಲ್ಜಿಯಂ ಮಾಧ್ಯಮಗಳು ವರದಿ ಮಾಡಿವೆ.

ಮರಣೋತ್ತರ ಪರೀಕ್ಷೆಯ ವರದಿ ಬಂದ ನಂತರವಷ್ಟೇ ಅವರ ಸಾವಿನ ಕಾರಣ ತಿಳಿಯಲಿದೆ ಎಂದು ಮೂಲಗಳು ಹೇಳಿವೆ.

‘ಆರ್ನೆ ಎಸ್ಪೀಲ್ ಹಠಾತ್ ಅಗಲಿಕೆಯು ಆಘಾತ ತಂದಿದೆ’ ಎಂದು ಕ್ಲಬ್ ಪ್ರಕಟಣೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಗಿದೆ.

ಬ್ಯಾಡ್ಮಿಂಟನ್: ಭಾರತಕ್ಕೆ ಗೆಲುವು

ದುಬೈ (ಪಿಟಿಐ): ಭಾರತ ತಂಡದವರು ಇಲ್ಲಿ ನಡೆಯುತ್ತಿರುವ ಏಷ್ಯಾ ಮಿಶ್ರ ತಂಡ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಗೆಲುವಿನ ಆರಂಭ ಮಾಡಿದರು.

ಮಂಗಳವಾರ ನಡೆದ ಪಂದ್ಯದಲ್ಲಿ 5–0ಯಿಂದ ಕಜಕಸ್ತಾನ ತಂಡವನ್ನು ಸೋಲಿಸಿದರು. ಮಿಶ್ರ ಡಬಲ್ಸ್‌ನಲ್ಲಿ ಭಾರತದ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ 21-5, 21-11ರಿಂದ ಮಕ್ಸುತ್ ತಾಡ್‌ಜಿಬುಲ್ಲಾವ್– ನಾರ್ಗಿಜಾ ರಖಮೆತ್ ವುಲ್ಲಾಯೆವ್ ಎದುರು ಗೆದ್ದು ಮುನ್ನಡೆ ತಂದುಕೊಟ್ಟರು. ಪುರುಷರ ಸಿಂಗಲ್ಸ್‌ನಲ್ಲಿ ಎಚ್.ಎಸ್. ಪ್ರಣಯ್ 21-9, 21-11ರಿಂದ ಡಿಮಿಟ್ರಿಯ್ ಪನರಿನ್ ವಿರುದ್ಧ, ಮಹಿಳೆಯರ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು 21-4, 21-12ರಿಂದ ಕ್ಯಾಮಿಲಾ ಸ್ಮಗುಲೊವಾ ಎದುರು ಜಯ ಗಳಿಸಿ ಮುನ್ನಡೆಯನ್ನು 3–0ಗೆ ಹೆಚ್ಚಿಸಿದರು.

ಮಿಶ್ರ ಡಬಲ್ಸ್ ಎರಡನೇ ಪಂದ್ಯದಲ್ಲಿ ಕೃಷ್ಣಪ್ರಸಾದ್ ಗರಗ– ವಿಷ್ಣುವರ್ಧನ್ ಗೌಡ್ ಮತ್ತು ಮಹಿಳಾ ಡಬಲ್ಸ್‌ನಲ್ಲಿ ಗಾಯತ್ರಿ ಗೋಪಿಚಂದ್–ತ್ರಿಶಾ ಜೋಲಿ ಕೂಡ ಗೆಲುವು ಸಾಧಿಸಿದರು.

ಗುಜರಾತ್ ಜೈಂಟ್ಸ್–ಮುಂಬೈ ಸೆಣಸು

ಮುಂಬೈ (ಪಿಟಿಐ): ಮಹಿಳಾ ಪ್ರೀಮಿಯರ್ ಲೀಗ್ (ಡಬ್ಲ್ಯುಪಿಎಲ್) ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್–ಗುಜರಾತ್ ಜೈಂಟ್ಸ್ ಮುಖಾಮುಖಿಯಾಗಲಿವೆ.

ಮಾರ್ಚ್ 4ರಂದು ನವೀ ಮುಂಬೈನ ಡಿ.ವೈ. ಪಾಟೀಲ್ ಕ್ರೀಡಾಂಗಣದಲ್ಲಿ ಈ ಪಂದ್ಯ ನಡೆಯಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಮಂಗಳವಾರ ತಿಳಿಸಿದೆ.

ಆಸ್ಟ್ರೇಲಿಯಾ ಎದುರಿನ ಎರಡನೇ ಟೆಸ್ಟ್ ಚೇತೇಶ್ವರ್‌ಗೆ 100ನೇ ಪಂದ್ಯ

‘ಶತಕ’ದ ಹೊಸ್ತಿಲಲ್ಲಿ ಪೂಜಾರ

ನವದೆಹಲಿ (ಪಿಟಿಐ): ಹದಿನೇಳು ವರ್ಷಗಳ ಹಿಂದಿನ ಮಾತು. ಚೇತೇಶ್ವರ್ ಪೂಜಾರ ತಮ್ಮ ತಾಯಿ ರೀನಾ ಅವರಿಗೆ ಕರೆ ಮಾಡಿದ್ದರು. ತಾವು ರಾಜ್‌ಕೋಟ್ ಬಸ್ ನಿಲ್ದಾಣಕ್ಕೆ ಬರುತ್ತಿದ್ದು ಮನೆಗೆ ಕರೆದೊಯ್ಯಲು ಅಪ್ಪನಿಗೆ ತಿಳಿಸಿ ಎಂದಿದ್ದರು. ಆದರೆ ಚೇತೇಶ್ವರ್ ಬಸ್‌ನಿಲ್ದಾಣ ತಲುಪಿದಾಗ ಅಪ್ಪ ಬಂದಿರಲಿಲ್ಲ. ಆದರೆ ತಮ್ಮ ತಾಯಿಯ ನಿಧನದ ಸುದ್ದಿಯನ್ನು ಬಸ್‌ನಿಲ್ದಾಣಕ್ಕೆ ಬಂದ ಸಂಬಂಧಿಯೊಬ್ಬರು ತಿಳಿಸಿದ್ದರು.

ಅಂದು ತಾಯಿಯ ನಿಧನದ ಆಘಾತದ ಸುದ್ದಿ ಕೇಳಿ ಕುಸಿದುಹೋಗಿದ್ದ ಪೂಜಾರ ನಂತರ ಅಪ್ಪನ ಆರೈಕೆ ಹಾಗೂ ಕ್ರಿಕೆಟ್ ಪ್ರೀತಿಯಲ್ಲಿ ಬೆಳೆದರು. ಇದೇ 17ರಿಂದ ನವದೆಹಲಿಯಲ್ಲಿ ಆಸ್ಟ್ರೇಲಿಯಾ ಎದುರಿನ ಎರಡನೇ ಟೆಸ್ಟ್ ಪೂಜಾರಗೆ 100ನೇ ಪಂದ್ಯವಾಗಲಿದೆ. ಬಾರ್ಡರ್–ಗಾವಸ್ಕರ್ ಟ್ರೋಫಿ ಹಾಗೂ ಪೂಜಾರ ಅವರಿಗೆ ವಿಶೇಷ ನಂಟು ಇದೆ. ಈ ಸಂದರ್ಭದಲ್ಲಿ ಚೇತೇಶ್ವರ್ ತಂದೆ ಹಾಗೂ ಕೋಚ್ ಅರವಿಂದ್ ಮಾತನಾಡಿದ್ದಾರೆ.

‘ಯಾವುದೇ ಕ್ರೀಡೆಯಲ್ಲಿ 100 ಪಂದ್ಯಗಳನ್ನು ಆಡುವುದೆಂದರೆ ಸಾಮಾನ್ಯ ಸಂಗತಿ ಅಲ್ಲ. ಅದಕ್ಕಾಗಿ ಬಹಳಷ್ಟು ತ್ಯಾಗ ಮತ್ತು ಪರಿಶ್ರಮ ಬೇಕು. ಸಮರ್ಪಣೆ, ಶಿಸ್ತು, ಫಿಟ್‌ನೆಸ್ ಮತ್ತು ಉತ್ತಮ ಆಹಾರ ಸೇವನೆಯಿಂದ ಪೂಜಾರ ಈ ಘಟ್ಟ ತಲುಪಿದ್ದಾರೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರು ಬೆಳೆದು ನಿಲ್ಲಲು ಅದೃಷ್ಟದ ಪಾಲು ಸ್ವಲ್ಪ ಮಾತ್ರ’ ಎಂದು ಚೇತೇಶ್ವರ್ ತಂದೆ ಅರವಿಂದ್ ಪೂಜಾರ ತಿಳಿಸಿದರು.



ಚೇತೇಶ್ವರ್ ಪೂಜಾರ

ಚೇತೇಶ್ವರ್‌ಗೆ ಬಾಲ್ಯದಿಂದ ಇದುವರೆಗೆ ಅಪ್ಪನೇ ಕೋಚ್. ಅರವಿಂದ್ ಅವರು ಸೌರಾಷ್ಟ್ರ ತಂಡವನ್ನು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿದ್ದರು.

‘ಚೇತೇಶ್ವರ್‌ಗೆ ತರಬೇತಿ ಕೊಡಲು ಆರಂಭಿಸಿದಾಗ ಯಾವುದೇ ಸ್ಪಷ್ಟ ಗುರಿ ಇರಲಿಲ್ಲ. ಆದರೆ ಅಪಾರ ಪರಿಶ್ರಮ ಮತ್ತು ಶ್ರದ್ಧೆಯಿಂದ ಕ್ರಿಕೆಟ್ ಕಲಿತರು. ಅಭ್ಯಾಸ ಮಾಡಿದರು. ಇದರಿಂದಾಗಿ ಯಶಸ್ವಿಯಾದರು’ ಎಂದು ಅರವಿಂದ್ ನೆನಪಿಸಿಕೊಂಡರು.

‘ನನ್ನ ಪತ್ನಿ ತೀರಿಹೋದಾಗ ಚೇತೇಶ್ವರ್ ಅಳಲಿಲ್ಲ. ಆದರೆ ಮೌನವಾಗುಳಿದ ಹುಡುಗ, ಮುಂಬೈನಲ್ಲಿ ನಡೆಯುತ್ತಿದ್ದ ವಯೋ ಮಿತಿ ಗುಂಪಿನ ಟೂರ್ನಿಯಲ್ಲಿ ಆಡಲು ಪ್ರಯಾಣಿಸಿದ್ದು ನೆನಪಿದೆ. ಆ ಸಂದರ್ಭದಲ್ಲಿ ನಾನು ಚೇತೇಶ್ವರ್ ಮೇಲೆ ನಿಗಾ ಇಡಲು ತಂಡದ ಕೋಚಿಂಗ್ ಸಿಬ್ಬಂದಿಗೆ ಮನವಿ ಮಾಡಿದ್ದೆ’ ಎಂದು ಅರವಿಂದ್ ಹೇಳಿದರು.

‘ಚೇತೇಶ್ವರ್ ಆಧ್ಯಾತ್ಮದಲ್ಲಿ ಆಸಕ್ತಿ ಇರುವುದರಿಂದ ದೊಡ್ಡ ಸವಾಲುಗಳನ್ನು ಎದುರಿಸುವ ಶಕ್ತಿ ಇದೆ. ನನ್ನ ಪತ್ನಿ ಅಪಾರವಾಗಿ ಆರಾಧಿಸುತ್ತಿದ್ದ ಹರಚರಣ್ ದಾಸ್ ಜಿ ಮಹಾರಾಜ್ ಮತ್ತು ಅವರ ಚಿಕ್ಕಮ್ಮ ಚೇತೇಶ್ವರ್ ಅವರನ್ನು ಬಾಲ್ಯದಲ್ಲಿ ಸಲುಹಿದ್ದಾರೆ. ಬಹಳಷ್ಟು ಜನರು ಚೇತೇಶ್ವರ್ ಬೆಳವಣಿಗೆಗೆ ಸಹಕರಿಸಿದ್ದಾರೆ’ ಎಂದರು.

ಸಂತೋಷ್ ಟ್ರೋಫಿ ಫುಟ್‌ಬಾಲ್: ಗೋವಾಗೆ ನಿರಾಸೆ

ಕರ್ನಾಟಕ ತಂಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂತೋಷ್ ಟ್ರೋಫಿ ರಾಷ್ಟ್ರೀಯ ಫುಟ್‌ಬಾಲ್ ಟೂರ್ನಿಯಲ್ಲಿ ಕರ್ನಾಟಕ ತಂಡದ ಗೆಲುವಿನ ಓಟ ಮುಂದುವರಿದಿದೆ.

ಒಡಿಶಾದಲ್ಲಿ ನಡೆದ ಅಂತಿಮ ಸುತ್ತಿನ ಎ ಗುಂಪಿನ ಪಂದ್ಯದಲ್ಲಿ ಮಂಗಳವಾರ ಕರ್ನಾಟಕ ತಂಡವು 2–0ಯಿಂದ ಗೋವಾ ತಂಡಕ್ಕೆ ಸೋಲುಣಿಸಿತು. ವಿಜೇತ ತಂಡದ ಪರ ಜೇಕಬ್ ಜಾನ್ ಕಟ್ಟೂಕರೆನ್ (33ನೇ ನಿ.) ಮತ್ತು ಅಭಿಷೇಕ್ ಶಂಕರ್ ಪವಾರ್ (50ನೇ ನಿ.) ಚೆಂಡನ್ನು ಗುರಿ ಸೇರಿಸಿದರು. ಭಾನುವಾರ ಕರ್ನಾಟಕ ತಂಡವು 1–0ಯಿಂದ ಕಳೆದ ಬಾರಿಯ ಚಾಂಪಿಯನ್ ಕೇರಳ ತಂಡಕ್ಕೆ ಆಘಾತ ನೀಡಿತ್ತು.

ಶುಕ್ರವಾರ (ಫೆ.17) ನಡೆಯುವ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ಮಹಾರಾಷ್ಟ್ರ ಸವಾಲು ಎದುರಾಗಲಿದೆ.

‘ಮಂಗಳೂರು ಟ್ರಯಾಥ್ಲಾನ್’ ಏ.9ರಂದು

ಮಂಗಳೂರು: ಲಯನ್ಸ್ ಇಂಟರ್‌ನ್ಯಾಷನಲ್ ಜಿಲ್ಲೆ 317ಡಿ ಮತ್ತು ತಪಸ್ಯಾ ಫೌಂಡೇಷನ್ ಆಶ್ರಯದಲ್ಲಿ ಏಪ್ರಿಲ್ 9ರಂದು ನಗರದಲ್ಲಿ ‘ಮಂಗಳೂರು ಟ್ರಯಾಥ್ಲಾನ್’ ಏರ್ಪಡಿಸಲಾಗಿದೆ.

ಈ ಕಾರ್ಯಕ್ರಮದ ಸಲುವಾಗಿ ಆರಂಭಿಸಲಾದ ವೆಬ್‌ಸೈಟ್‌ಗೆ (https://mangalurutriathlon.com) ಮಂಗಳವಾರ ಚಾಲನೆ ನೀಡಲಾಯಿತು. ಕ್ಯಾನ್ಸರ್‌ನಿಂದ ವಾಸಿಯಾಗಿರುವ ನಾರಾಯಣ ಬಿ.ಶೆಟ್ಟಿ ಮೊದಲ ವ್ಯಕ್ತಿಯಾಗಿ ಈ ಕೂಟಕ್ಕೆ ಹೆಸರು ನೋಂದಾಯಿಸಿದರು.

‘ತಣ್ಣೀರುಬಾವಿಯ ಮಂಗಳೂರು ಸರ್ಫಿಂಗ್ ಕ್ಲಬ್ ಪ್ರದೇಶದಿಂದ 1.5 ಕಿ.ಮೀ ದೂರದವರೆಗೆ ಸಮುದ್ರದಲ್ಲಿ ಈಜು, ತಣ್ಣೀರುಬಾವಿಯಿಂದ ಮುಡಿಪುವರೆಗೆ 40 ಕಿ.ಮೀ.ಸೈಕ್ಲಿಂಗ್, ಅಲ್ಲಿಂದ 10 ಕಿ.ಮೀ ಓಟದ ಸ್ಪರ್ಧೆ ಇರಲಿದೆ’ ಎಂದು ಆಯೋಜಕರಲ್ಲಿ ಒಬ್ಬರಾದ ಈಜುಪಟು ಮನೀಶ್ ಮಾಹಿತಿ ನೀಡಿದರು. ‘ದಕ್ಷಿಣ ಕನ್ನಡ ಜಿಲ್ಲೆಯ ಮುಡಿಪುವಿನಲ್ಲಿ ಕ್ಯಾನ್ಸರ್ ಪೀಡಿತ ಮಕ್ಕಳಿಗೆ ಉಪಶಮನಕಾರಿ ಆರೈಕೆ ಒದಗಿಸುವ ಕೇಂದ್ರವನ್ನು ಆರಂಭಿಸುವ ಉದ್ದೇಶದಿಂದ ಈ ಟ್ರಯಾಥ್ಲಾನ್ ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲ ಸ್ಪರ್ಧೆಗಳೂ ಒಲಿಂಪಿಕ್ಸ್ ಗುಣಮಟ್ಟದಲ್ಲಿ ಇರಲಿವೆ. ಆಸಕ್ತರು ಹೆಸರು ನೋಂದಾಯಿಸಬಹುದು’ ಎಂದು ತಪಸ್ಯಾ ಫೌಂಡೇಷನ್‌ನ ವ್ಯವಸ್ಥಾಪಕ ಟ್ರಸ್ಟಿ ಸಬಿತಾ ಆರ್.ಶೆಟ್ಟಿ ತಿಳಿಸಿದರು.

ಸುಫಿಯಾನ್ ಹ್ಯಾಟ್ರಿಕ್

ಬೆಂಗಳೂರು: ಸುಫಿಯಾನ್ ಅಕ್ಬರ್ ಸಯ್ಯದ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಮೊಹಮ್ಮಡನ್ ಸ್ಪೋರ್ಟಿಂಗ್ ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಮಂಗಳವಾರ ಮೊಹಮ್ಮಡನ್ 6–1ರಿಂದ ಸಿಐಎಲ್ ಎಫ್‌ಸಿ ಎದುರು ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಎಸ್ 2–1ರಿಂದ ಬೆಂಗಳೂರು ಸಿಟಿ ಎಫ್‌ಸಿಯನ್ನು ಮಣಿಸಿತು.